ಜೂನ್
೨೦೧೦
ರೂ. ೨೦

ಸಂವಾದ

ಬೆಂಗಳೂರು ವಿವಿ ಎಂಬ
ಗುಜರಿ ಅಂಗಡಿ

ರಂಗದ ಮೇಲೆ
'ಮದುಮಗಳು'

ದಲಿತ ಚಳವಳಿ

ಐಕ್ಯತೆಯ ಸವಾಲುಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೮
ಜೂನ್ ೨೦೧೦

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

- ❑ ಪತ್ರಗಳು ೦೩
- ❑ ಸಂಪಾದಕರೊಂದಿಗೆ ಸಂವಾದ:
  - ○ ಅಪೂರ್ವ ಡಿ.ಸಿಲ್ವ ೦೪
  - ○ ವಿ.ಆರ್. ಮೌರ್ಯ ೦೫
- ❑ ಡಾಲರ್ ಮಾರುಕಟ್ಟೆಯಲ್ಲಿ ನಾಡನ್ನು ಮಾರುತ್ತಿರುವ ದಲ್ಲಾಳಿ ಸರ್ಕಾರ !
  - ○ ಶಿವಸುಂದರ್ ೦೬
- ❑ ಮಾಯಾವತಿಯವರ ರಾಜಕೀಯ ಮತ್ತು ನಮ್ಮ ಬುದ್ಧಿ ಜೀವಿಗಳು
  - ○ ಎಸ್. ಮರಿಸ್ವಾಮಿ ೦೮
- ❑ ಬೆಂಗಳೂರು ವಿಶ್ವವಿದ್ಯಾಲಯವೆಂಬ ಗುಜರಿ ಅಂಗಡಿ
  - ○ ಕೆ.ಎಲ್.ಚಂದ್ರಶೇಖರ್ ಐಜೂರ್ ೧೦
- ❑ ಲೋಹಿಯಾ ವಾದಿಗಳಿಗೊಂದು ಪತ್ರ:
  - ○ ಶಿವಸುಂದರ್ ೧೨
- ❑ ದಲಿತ ಚಳವಳಿ: ಐಕ್ಯತೆಯ ಸವಾಲುಗಳು
  - ○ ನಾ. ದಿವಾಕರ ೧೬

- ❑ ಅಡ್ಡಹಾದಿ ಹಿಡಿದಿರುವ ಅರುಂಧತಿ ರಾಯ್...
  - ○ ಡಿ.ಎಸ್ ನಾಗಭೂಷಣ ೨೨
- ❑ ರಾಜ್ಯದಲ್ಲಿ ಖಾಸಗಿ ವಿ.ವಿಗಳ ಸ್ಥಾಪನೆ ಶಿಕ್ಷಣಮಾರಾಟದ ಹುನ್ನಾರ
  - ○ ಹೆಚ್.ಆರ್. ನವೀನ್ ಕುಮಾರ್ ೩೦
- ❑ ಕನ್ನಡ ಶಾಸ್ತ್ರ ಭಾಷೆಯೋ? ಶಾಸ್ತ್ರೀಯ ಭಾಷೆಯೋ? ೩೨
  - ○ ಮೇಟಿ ಮಲ್ಲಿಕಾರ್ಜುನ
- ❑ ರಂಗದ ಮೇಲೆ 'ಮದುಮಗಳು'
  - ○ ಡಿ.ಎಸ್ ನಾಗಭೂಷಣ ೩೪
- ❑ ಪುಸ್ತಕ ಅವಲೋಕನ
  - ○ ಭರತ್ ರಾಜ್ ೩೬
- ❑ ಕಾಲಮಾನ... ೭
  - ○ ಡಾ. ಮುಜಾಫ್ಫರ್ ಅಸ್ಸಾದಿ ೩೮
- ❑ ಧರೆ ಹತ್ತಿ ಉರಿದರೆ... ೨೨
  - ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ
  - ○ ಸಿ. ಎಚ್. ರಾಜಶೇಖರ್ ೫೦

ಕವನಗಳು : ❑ ಕೃಷ್ಣ ಮೂರ್ತಿ ಬಿಳಿಗೆರೆ ೧೯





ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪರಿಸ್ಥಿತಿಯನ್ನು ಭಿನ್ನದೃಷ್ಟಿಯಿಂದಲೇ ನೋಡಿ

ಮಾನ್ಯರೆ,

ಸಂವಾದ ಏಪ್ರಿಲ್ 2010ರ ಸಂಚಿಕೆಯ ಮಾನ್ಯ ಹೆಚ್.ಎಸ್. ದೊರೆಸ್ವಾಮಿಯವರ 'ನೋಡಬೇಕಾದ ದೃಷ್ಟಿ ಬೇರೆಯಾದಾಗಿರಬೇಕು' ಪತ್ರಕ್ಕೆ ನನ್ನ ಉತ್ತರ.

ಮಾನ್ಯ ಹೆಚ್.ಎಸ್. ದೊರೆಸ್ವಾಮಿಯವರು ಸ್ವಾತಂತ್ರ್ಯ ಹೋರಾಟಗಾರರು, ಸತ್ಯಸಂದರು, ವಿಚಾರವಂತರು, ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ, ಅವರ ಪತ್ರಕ್ಕೆ ಅವರದೇ ವಾಕ್ಯದಲ್ಲಿ ತಿರುಗಿಸಿ ಉತ್ತರ ಕೊಡಬೇಕಾಗಿದೆ.

ಮಾಂಸಹಾರ ಬೇಕೊ?ಬೇಡವೊ? ಒಳ್ಳೆಯದೊ? ಕೆಟ್ಟದ್ದೊ? ಸಾತ್ವಿಕವೊ? ತಾಮಸವೊ? ಹಿಂಸೆಯದೊ? ಅಹಿಂಸೆಯದೊ? ಎಂಬುದರ ಬಗ್ಗೆ ವಿಚಾರಮಾಡುವುದೆಂದರೆ ಪರವಾಗಿ ಮತ್ತು ವಿರುದ್ಧವಾಗಿ ಒಂದೊಂದು ಪುಸ್ತಕ ಬರೆಯಬಹುದು. ಪ್ರಾಣಿ ಜೀವಿಯಾದ ಮೇಲೆ ಸಸ್ಯವೂ ಜೀವಿಯೆ! ಈ ಜೀವ ಜಗತ್ತೆಲ್ಲಾ ಸಣ್ಣ ಸಣ್ಣ ಜೀವಕೋಶದಿಂದ ರೂಪಕವಾಗಿ ಅವುಗಳ ಜೈವಿಕ ಗುಣಕ್ಕನುಗುಣವಾಗಿ ದೊಡ್ಡದಾಗಿ ಬೆಳೆಯುತ್ತವೆ. ಇದು ಬೇರೆಯದೇ ವಿಚಾರ.

ಅವರು ಹೇಳುತ್ತಾರೆ, 'ಅಮೆರಿಕದಲ್ಲಿ ಇಂಗ್ಲೇಂಡಿನಲ್ಲಿ ಗೋವುಗಳನ್ನು ತಿನ್ನುವುದಕ್ಕಾಗಿಯೇ ಸಾಕುತ್ತಾರೆ' ಎಂದು. ಅಲ್ಲಿವರೆಗೆ ಯಾಕೆ ಹೋಗಬೇಕು. ನಮ್ಮಲ್ಲಿಯೇ ಕೋಳಿ ಕುರಿ ಮೇಕೆಗಳನ್ನು ತಿನ್ನುವುದಕ್ಕಾಗಿಯೇ ಸಾಕುವುದಿಲ್ಲವೆ. ಹಸು ಪವಿತ್ರ ಉಳಿದವು ಹೇಗೆ ಅಪ ವಿತ್ರವಾದವು?(ಸಧ್ಯ ಅವುಗಳ ಮೇಲೆ ಈ ಬಿ.ಜೆ.ಪಿ. ಸರ್ಕಾರದ ಕಣ್ಣು ಬಿದ್ದಿಲ್ಲ. ಮುಂದೆ ಬೀಳುವುದಿಲ್ಲ ಎಂಬ ಭರವಸೆ ಇಲ್ಲ).ಇದು ವಕ್ತಟ್ಟಿಗಿರಲಿ.

ನಾವಿಲ್ಲಿ ವಿಚಾರ ಮಾಡಬೇಕಾದ್ದು, ಸರ್ಕಾರ ನಡೆಸುವವರ ದೃಷ್ಟಿಕೋನವನ್ನ.

ಪತ್ರಗಳು

ಪಶುವೆಂಬ ನಾಲ್ಕು ಕಾಲಿನ ಪ್ರಾಣಿ ಈ ಮನುಷ್ಯನೆಂಬ ಬುದ್ಧಿಜೀವಿಗಿಂತ ಯಾವಾಗ ಮೇಲಕ್ಕಾಯಿತು? ಹೇಗೆ ಮೇಲಕ್ಕಾಯಿತು? ಯಾಕೆ ಮೇಲಕ್ಕಾಯಿತು? ಎಂಬುದನ್ನ ಈ ಬಿ.ಜೆ.ಪಿ ಎಂಬ ಪಕ್ಷ ತನ್ನ ಅಧಿಕಾರಲಾಲಸೆಗಾಗಿ ಕುಳಿತಲ್ಲಿಂದಲೇ ಜನರ ಭಾವನಾತ್ಮಕ ವಿಚಾರಗಳಾದ ಜಾತಿ ಧರ್ಮಗಳನ್ನು ಎತ್ತಿಕಟ್ಟಿ ಮೂಢ ಜನರನ್ನು ಪರಸ್ಪರ ಕಚ್ಚಾಡಿಸಿ ತನ್ನ ಬೇಳೆ ಬೇಯಿಸಿಕೊಳ್ಳಲು ದೇಶವನ್ನು ನಾಶ ಮಾಡುತ್ತಿದೆಯಲ್ಲ ಎಂಬುದನ್ನು ಒಂದು ಜನಾಂಗದವ ಪವಿತ್ರ ಸ್ಥಳವನ್ನು ಕೆಡವಿ ಹುಡಿಮಾಡುತ್ತಾರೆ. ಅವರ ಅಂಗಡಿ ಮುಗ್ಗಟ್ಟುಗಳಿಗೆ ಬೆಂಕಿಇಡುತ್ತಾರೆ. ಚುನಾವಣೆಯ



ಸಮಯದಲ್ಲಿ ನಿಮ್ಮ ಓಟುಗಳೇ ನಮಗೆ ಬೇಡ ಎಂದು ಅವರಿಗೆ ಸವಾಲೆಸೆದು ಹಂಗಿಸಿ ಹಿಂಸಿಸಿ ಮೆರೆಯುತ್ತಾರೆ. ಈಗ 'ಗೋಹತ್ಯೆ' ಕಾನೂನು ತಂದು ಅವರ ಮತ್ತು ಇತರೆ ಬಡ ಜನರ ಆಹಾರವನ್ನು ಕಿತ್ತುಕೊಳ್ಳುತ್ತಾರೆ. ಇದೆಲ್ಲಾ ಸಾತ್ವಿಕ ಆಹಾರ ತಿಂದವರು ಮಾಡುವ ಕೆಲಸವೆ?

ಆಹಾರದಲ್ಲಿ ಸಾತ್ವಿಕ, ತಾಮಸ ಎಂಬುದಿಲ್ಲ. ಆಹಾರದಿಂದ ಉತ್ಪನ್ನವಾಗುವುದು ಶಕ್ತಿ. ಬೆಳಗಿಂದ ಸಂಜೆವರೆಗೆ 'ಲಠಲಠ' ದುಡಿಯುತ್ತಾ ದೈಹಿಕ ಶ್ರಮವ ಹಿಸುವ ರೈತ, ಕಾರ್ಮಿಕ ಮುಂತಾದ ಶ್ರಮ ಜೀವಿ ಜನಗಳಿಗೆ ಅವರ ಸವೆದು ಹೋದ ಶರೀರವನ್ನು ಪುನರ್ ನಿರ್ಮಿಸಲು ಸಮತೂಕದ ಹೆಚ್ಚು ಕ್ಯಾಲರಿಯ ಆಹಾರ ಬೇಕು. ಅದಕ್ಕಾಗಿ ನಮಗೆ ಮಾಂಸಹಾರ ಬೇಕು. ಹೆಚ್ಚು ಕ್ಯಾಲರಿ ಒದಗಿಸುವ ಕಡಿಮೆ ಬೆಲೆಯ ಆಹಾರ ಭಾರತದಲ್ಲಿ ಗೋಮಾಂಸ ಮತ್ತು ಹಂದಿಮಾಂಸ. ಈ ನಮ್ಮ ಆಹಾರವನ್ನು ಕಿತ್ತುಕೊಂಡು ನಮ್ಮನ್ನು ಹಂಗಿಸಿ ಹಿಂಸಿಸಿ ತಾವು ಅಧಿಕಾರದಲ್ಲಿದ್ದೇವೆಂದು ಅಟ್ಟಾಹಾಸದಿಂದಮೆರೆಯುತ್ತಿದಾರಲ್ಲ ಅದು ನಮಗೆ ಹೊಟ್ಟೆ ಉರಿಸುತ್ತಿದೆ ನಾವು 'ಗೋಹತ್ಯೆ' ಕಾನೂನು ತಂದ ಬಿ.ಜೆ.ಪಿ ಸರ್ಕಾರವನ್ನು ಈ ದೃಷ್ಟಿಯಿಂದ ನೋಡುತ್ತಿದ್ದೇವೆ. ಈಗ ನಮ್ಮ ಎದೆಯ ಬೆಂಕಿ ಹೆಚ್ಚಾಗುತ್ತಿದೆ. ತಾವು ಸಾತ್ವಿಕರೆಂದು ಹೇಳಿಕೊಂಡು ಒಂದು ಜನಾಂಗವನ್ನು ಹಿಂಸಿಸುವ ಈ ಗೋಮುಖ ವ್ಯಾಘ್ರಗಳು ಮುಂದೆ ಮತ್ತೇನೇನು ಮಾಡಬಹುದೆಂದು ಆತಂಕವಾಗುತ್ತಿದೆ.

ಜನರ ಬೇಕು, ಬೇಡ, ಹಿತ, ಅಹಿತಗಳನ್ನು ಗಣಿಸದೆ ವಿವೇಚನೆ ಇಲ್ಲದೆ ಆಡಳಿತ ನಡೆಸಿದರೆ ಮುಂದೊಂದುದಿನ ದೇಶ ಏನಾಗ ಬಹುದು? ಜನರ ಎದೆಯಲ್ಲಿದ್ದ ಕಿಚ್ಚು ಜ್ವಾಲೆಯಾಗಿ ಆ ಬೆಂಕಿಯ ಕೆನ್ನಲಿಗೆಗೆ ದೇಶ ಆಹುತಿಯಾಗುವುದಿಲ್ಲವೆ? ಮೊದಲೆ ದೇಶಭ್ರಷ್ಟಾ ದುರ್ಬಿಲ ಮುಖಂಡರಿಂದ ನಲುಗುತ್ತಿದೆ. ಈ ವೇಳೆಯಲ್ಲಿ ಚಿಂತಕರು ಬುದ್ಧ ಜೀವಿಗಳು ವಿವೇಕ ಕಳೆದುಕೊಂಡರೆ ಜನರಿಗೆ ದಾರಿ ತೋರುವವರ್ಯಾರು?

ಜೋಗನಹಳ್ಳಿ ಗುರುಮೂರ್ತಿ,

ಪಿರಿಯಾಪಟ್ಟಣ

ಬಿಸಿಯೂಟ ಜೊತೆ ಮೊಟ್ಟೆ ಅಥವಾ ಹಾಲು, ಹಣ್ಣು ವಿತರಿಸಲಿ

ಮಾನ್ಯರೆ,

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಬಗ್ಗೆ ಅವರ ನಿಲುವು ಅಂದರೆ ಬಿಸಿಯೂಟ ಜೊತೆ ಹಾಲು ಹಣ್ಣು ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಯುನಿಸಿಫ್ ಮಕ್ಕಳ ಪೌಷ್ಟಿಕ ಆಹಾರದಲ್ಲಿ ಮೊಟ್ಟೆ ಸೇರ್ಪಡೆ ಮಾಡಿದೆ.

ಸಚಿವರು ಮಾಂಸಹಾರಿ ಮಕ್ಕಳ ಆಹಾರದಲ್ಲಿ ಸಸ್ಯಹಾರಿ ಮಕ್ಕಳಿಗೆ ವಿತರಿಸುವ ಕೇವಲ ಹಾಲು ಹಣ್ಣು ನೀಡುವುದಾಗಿ ತಿಳಿಸಿರುವುದು ಸೂಕ್ತವಲ್ಲ.

ಪೌಷ್ಟಿಕ ಆಹಾರ ಮಕ್ಕಳಿಗೆ ನೀಡುವಾಗ ಇಚ್ಛಾನುಸಾರ ಅಭಿಪ್ರಾಯ ಪಡೆದು ಬಿಸಿಯೂಟ ಜೊತೆ ಹಾಲು ಹಣ್ಣು ಬಯಸುವ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡಬೇಕು.

ಅಂತೆಯೇ ಬಿಸಿಯೂಟ ಜೊತೆ ಮೊಟ್ಟೆ ಹಣ್ಣು ಬಯಸುವ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡುವ ವ್ಯವಸ್ಥೆ ಮಾಡಬೇಕು. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವಾಗ ಕೇವಲ ಸಸ್ಯಹಾರಿಗಳ ಮನಸ್ಸಿನಲ್ಲಿ ಇರುವುದನ್ನು ಮಾತ್ರ ಚಿಂತನೆ ಮಾಡುವುದು ಸರಿಯಲ್ಲ ಪೌಷ್ಟಿಕ ಆಹಾರ ವಿತರಣೆ ಮಾಡುವಾಗ ಸಮಗ್ರ ಪೌಷ್ಟಿಕ ಆಹಾರ ಪದ್ಧತಿ ಅನುಸರಿಸುವುದು ಮಾತ್ರ ಸೂಕ್ತವಾಗಬಲ್ಲದು.

ಮಕ್ಕಳ ತಜ್ಞರು (ವೈದ್ಯರು) ಯುನಿಸೆಫ್ ಆಹಾರ ಪದ್ಧತಿಯಲ್ಲಿ ಪೌಷ್ಟಿಕ ಆಹಾರ ನೀಡುವಾಗ ಮೊಟ್ಟೆ ವಿತರಿಸಲು ಸಲಹೆಕೊಟ್ಟಿರುವುದನ್ನು ಸಚಿವರು ಮನಗಾಣಬೇಕು ಮತ್ತು ಪೌಷ್ಟಿಕ ಆಹಾರ ವಿತರಣೆ ಎಲ್ಲಾ ಮಕ್ಕಳ ಹಿತ ಕಾಪಾಡಬೇಕು.

ಬಿಜೆಪಿ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಳ್ಳುವಾಗ ಒಂದು ಗೊತ್ತಾದ ಧರ್ಮ, ಜಾತಿ-ಜನಾಂಗ ಆಧಾರವಾಗಿ ಪರಿಗಣಿಸದೆ ಜಾತ್ಯತೀತ ರಾಷ್ಟ್ರದ ಹಿನ್ನೆಲೆಯ ಆಧಾರದ ಮೇಲೆ ಪೌಷ್ಟಿಕ ಆಹಾರ ವಿತರಣೆ ಮಾಡುವಾಗ ಎಲ್ಲಾ ಮಕ್ಕಳ ಹಿತ ಹಾಗೂ ಆರೋಗ್ಯ ದೃಷ್ಟಿಕೋನವಾಗಿರಬೇಕು.

ಅಂದಹಾಗೆ ಬಿಸಿಯೂಟ ಜೊತೆ ಸಸ್ಯಹಾರಿ ಮಕ್ಕಳಿಗೆ ಹಾಲು ಹಣ್ಣು, ಮಾಂಸಹಾರಿ ಮಕ್ಕಳಿಗೆ ಮೊಟ್ಟೆ ಹಣ್ಣು, ಮಕ್ಕಳ ಇಚ್ಛೆಯಂತೆ ಪೌಷ್ಟಿಕ ಆಹಾರ ವಿತರಣೆ ಮಾಡಬೇಕು. ಇದು ಸರ್ಕಾರದ ಜವಾಬ್ದಾರಿ.

ಎ.ಮಾದಯ್ಯ

ಮೈಸೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೫೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಗೌರವ ಬದುಕು ಬೇಕೆನ್ನುವವರು ಬೌದ್ಧರಾದರೆ ತಪ್ಪೇನು?

ಸಂಪಾದಕರೊಡನೆ ಸಂವಾದ

ಅಪೂರ್ವ ಡಿ.ಸಿಲ್ವ

ಬಂಜಗೆರೆ ಜಯಪ್ರಕಾಶರವರ ಪುಸ್ತಕ ಅವಲೋಕನ ಬಗ್ಗೆ ಡಿ.ಎಸ್ ನಾಗಭೂಷಣ್‌ರವರು ಕೆಲವು ವಿಚಾರಗಳನ್ನು ಸ್ಪಷ್ಟಪಡಿಸಿದ್ದಾರೆ, ಈಗಾಗಲೇ ಬೌದ್ಧಧರ್ಮಕ್ಕೆ ದಲಿತರು ಮತಾಂತರಗೊಳ್ಳುವ ಬಗ್ಗೆ ವ್ಯಾಪಕ ಚರ್ಚೆಯಾಗಿವೆ. ನಾಗಭೂಷಣ್‌ರವ1ರು ವೈದಿಕವಲ್ಲದ ಹಿಂದೂ ಬುದ್ಧ ಪೂರ್ವದಲ್ಲಿ ಬೌದ್ಧವೇ ಆಗಿದೆ, ಬೌದ್ಧನಗಿರುವ ಮೂಲಕ ಪುರೋಹಿತ ಶಾಹಿ ಸ್ವರೂಪವನ್ನು ತೊಡೆಯಲು ಸಾಧ್ಯ ಎಂದು ಹೇಳಿದ್ದಾರೆ. ಈ ಬಗ್ಗೆ ಅಂಬೇಡ್ಕರ್‌ರವರಲ್ಲಿ ಯಾವ ನಿಲುವಿತ್ತು. ಯಾಕೆ ಅವರು ಮತಾಂತರಗೊಂಡರು ಎಂಬುದು ನನಗೆ ಕಾಡಿದೆ. 1936 ರಲ್ಲಿ ಜಾತ್-ಪತ್-ತೊಡಕ್ ಮಂಡಲ ಲಾಹೋರಿನ ವಾರ್ಷಿಕ ಸಮ್ಮೇಳನದಲ್ಲಿ ಅಂಬೇಡ್ಕರ್‌ವರಿಗೆ ಅಧ್ಯಕ್ಷೀಯ ಭಾಷಣಕ್ಕೆ ಆಹ್ವಾನ ನೀಡುತ್ತದೆ. ಅವರು ಭಾಷಣಕ್ಕೆ ಬರುವ ಮುಂಚೆ ಅವರ ಭಾಷಣ ಪ್ರತಿಯನ್ನು ಓದುವ ಉತ್ಸಾಹದಲ್ಲಿ ಸಮ್ಮೇಳದ ಸಂಘಟಕರು ಕಾತುರರಾಗಿರುತ್ತಾರೆ.

ಸಮ್ಮೇಳನದ ಸಂಘಟಕರು ಅಂಬೇಡ್ಕರವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡುವ ಉದ್ದೇಶವೂ ಹಿಂದೂ ಧರ್ಮದ ಕೊಳೆಯನ್ನು ತೊಡೆಯುವ, ಜಾತಿಪದ್ಧತಿ ವಿಶ್ಲೇಷಿಸುವ ಹಾಗೂ ಅವನ್ನು ತೊಡೆದು ಹಾಕುವ ವಿಚಾರಗಳ ಬಗ್ಗೆ ಅಂಬೇಡ್ಕರ್‌ರವರ ನಿಲುವೇನು ಎಂಬುದನ್ನು ಭಾಷಣದ ಮೂಲಕ ವ್ಯಕ್ತಗೊಂಡು ಹಿಂದೂ ಧರ್ಮ ಸುಧಾರಣೆಯಾಗಲಿ ಎಂಬುದಾಗಿ ಸಂಘಟಕರ ಉದ್ದೇಶವಾಗಿರುತ್ತದೆ, ಭಾಷಣಕ್ಕೆ ಮುನ್ನ ಪ್ರತಿತರಿಸಿಕೊಂಡ ಸಂಘ ಟಕರು ಗಾಬರಿ ಬೀಳುತ್ತಾರೆ. ಚರ್ಚೆ ವಾಗ್ವಾದಗಳು ನಡೆಯುತ್ತವೆ, ಸಂಘಟಕರಲ್ಲಿ ಒಬ್ಬರಾದ ಹರಭಗವಾನ್‌ರವರು ಅಂಬೇಡ್ಕರ್‌ರವರಿಗೆ ಪತ್ರ ಬರೆದು 'ಹಿಂದೂ ಸಮುದಾಯವನ್ನು ತೊರೆದು ಹೋಗುತ್ತೇನೆ ಎಂದೂ' "ಹಿಂದೂವಾಗಿ ನಾನು ಮಾಡುತ್ತಿರುವ ಕೊನೆಯ ಭಾಷಣ ವಿದು" ಎಂದು ಹೇಳಿದ್ದಿರಿ, ವೇದಗಳ ಮತ್ತು ಹಿಂದೂಗಳ ಇತರ ಧಾರ್ಮಿಕ ಗ್ರಂಥಗಳ ನೀತಿ ಹಾಗೂ ಯುಕ್ತಾಯುಕ್ತ ಪರಿಜ್ಞಾನವನ್ನು ಅನಗತ್ಯವಾಗಿ ಟೀಕಿಸಿದ್ದೀರಿ, ಹಿಂದೂ ಧರ್ಮದ ತಾಂತ್ರಿಕ ವಿಷಯವನ್ನು ವಿವರವಾಗಿ ವಿವೇಚಿಸಿರುವಿರಿ ಇದು ನೀವು ಪ್ರತಿಪಾದಿಸುವ ವಿಷಯಕ್ಕೆ ಏನೇನೂ ಸಂಬಂಧವಿಲ್ಲ. ಹೀಗಾಗಿ ಭಾಷಣದ ಕೆಲವು ಭಾಗಗಳು ಅಸಂಬದ್ಧವೂ, ಅನವಶ್ಯಕವೂ ಆಗಿದೆ.

> **ಒಬ್ಬ ಸಿಖ್ಖನು ಅಪಾಯಕ್ಕೆ ಸಿಲುಕಿದರೆ ಎಲ್ಲ ಸಿಖ್ಖರೂ ತನ್ನ ಬೆಂಬಲಕ್ಕೆ ಬರುವರೆಂಬ ನಂಬಿಕೆ ಅವನಿ ಗಿದೆ. ಒಬ್ಬ ಮಹ ಮ್ಮದೀಯನು ದಾಳಿಗೆ ಒಳಗಾದಗ ಎಲ್ಲ ಮಹಮ್ಮದೀಯರು ತಮ್ಮನ್ನು ಪಾರುಮಾಡಲು ಬರು ವರೆಂಬ ವಿಶ್ವಾಸ ಅವನಿಗಿದೆ, ಹಿಂದೂವಿಗೆ ಇಂತಹ ಯಾವ ಬಲವೂ ಇಲ್ಲ ತನ್ನವರು ನೆರ ವಿಗೆ ಬಂದಾರೆಂಬ ನಂಬಿಕೆ ಹಿಂದೂವಿಗೆ ಎಲ್ಲಿದೆ? ಹಿಗೆ ಹಿಂದೂವು ಏಕಾಂಗಿ ತನ ದಿಂದ ಶಕ್ತಿಹೀನನಾಗಿ ಅಂಜುಬುರುಕನಾ ಗುತ್ತಾನೆ, ಹೊಡೆದಾಟವಾದರೆ ಎದುರಾಳಿಗೆ ಶರಣಾಗುತ್ತಾನೆ.**

ಎಂದು ಹೇಳುತ್ತಾ ಭಾಷಣವನ್ನು ಸಂಕ್ಷಿಪ್ತಗೊಳಿಸಿ ಬದಲಾವಣೆ ಮಾಡಲು ಸೂಚಿಸುತ್ತಾರೆ. ಇದಕ್ಕೆ ಡಾ॥ ಅಂಬೇಡ್ಕರ್‌ರವರು ಉತ್ತರಿಸುತ್ತಾ "ಹೀನಾ ಜಾತಿಯವರು ಧರ್ಮಾಂತರ ಮಾಡಬೆಕೆಂಬ ನನ್ನ ಅಭಿಪ್ರಾಯಗಳನ್ನು ತಡೆಹಿಡಿಯಲು ಅಥವಾ ಬಿಡ್ಡುಕೊಡಲು ನಾನು ಅಭಿಪ್ರಾಯಗಳನ್ನು ತಡೆಹಿಡಿಯಲು ಅಥವಾ ಬಿಟ್ಟುಕೊಡಲು ನಾನು ಒಪ್ಪಿಕೊಂಡನೆಂದು ತಿಳಿದಿರಾ? ಹಾಗೆ ನೀವು ತಿಳಿದುಕೊಂಡಿದ್ದರೆ ನಿಮ್ಮ ತಪ್ಪಿಗೆ ನಾನು ಯಾವರೀತಿಯಿಂದಲೂ ಹೊಣೆಗಾರನಲ್ಲ, ನನಗೆ ಅಧ್ಯಕ್ಷ ಪದವಿಯ ಗೌರವವನ್ನು ಕೊಟ್ಟಿದ್ದಕ್ಕೆ ಪ್ರತಿಯಾಗಿ ನಾನು ಮತಾಂತರದಲ್ಲಿನ ನನ್ನ ಶ್ರದ್ಧೆಯನ್ನು ತೊರೆದು ಬಿಡಬೇಕೆಂದು ನೀವು ಸ್ವಲ್ಪ ಸೂಚನೆ ಕೊಟ್ಟಿದ್ದರೂ ಸಾಕಾಗಿತ್ತು, ನೀವು ಕೊಡುವ ಗೌರವಕ್ಕಿಂತ ನನ್ನ ಶ್ರದ್ಧೆ ನನಗೆ ಹೆಚ್ಚಿನದೆಂದು ನಾನು ನಿಮಗೆ ನಿಸಂದಿಗ್ಧವಾದ ಶಬ್ಧಗಳಲ್ಲಿ ತಿಳಿಸಿಬಿಡುತ್ತಿದ್ದೆ" ಎಂದು ಭಾಷಣಾದಲ್ಲಿ ಬದಲಾವಣೆ ಸಾಧ್ಯವಿಲ್ಲವೆಂದು ಹೇಳುತ್ತಾರೆ, ಕೊನೆಗೆ ಸಮ್ಮೇಳನವೇರದ್ದಾಗುತ್ತದೆ, ಅಂಬೇಡ್ಕರ್‌ರವರು ಭಾಷಣಾದಲ್ಲಿ (ಸಿದ್ಧಪಡಿಸಿದ ಪ್ರತಿ) ಪ್ರತಿಪಾದಿಸಿದ ಕೆಲವು ಮುಖ್ಯ ವಿಚಾರಗಳನ್ನು ಗಮನಿಸೋಣ.

1. ಜಾತಿಯಿಂದ ಉಂಟಾದ ಶ್ರಮವಿಭಾಗ ಶ್ರಮಿಕರ ಆಯ್ಕೆಯಿಂದ ಆದುದಲ್ಲ ವೈಯಕ್ತಿಕ ಭಾವನೆಗಾಗಲಿ ಅಥವಾ ವೈಯಕ್ತಿಕವಾಗಿ ಈ ಕೆಲಸಕ್ಕೆ ಯಾರು ಹೆಚ್ಚು ಯೋಗ್ಯರೆಂಬ ವಿವೇಚನೆಗಾಗಲಿ ಅಲ್ಲಿ ಅಸ್ಪದವೇ ಇಲ್ಲ, ಪೂರ್ವ ಜಾತಿಯಿಂದ ಉಂಟಾದ ಶ್ರಮವಿಭಾಗ ಶ್ರಮಿಕರ ಆಯ್ಕೆಯಿಂದ ಆದುದ್ಧಲ್ಲ ಪೂರ್ವಕರ್ಮದ ಫಲವೆಂಬ ತತ್ವವೇ ಮುಖ್ಯ ಆಧಾರವಾಗುತ್ತದೆ.

2. ವಂಶಸಂಕರವನ್ನು ತಡೆಯುವ ಅಥವಾ ರಕ್ತ ಶುದ್ಧಿಯನ್ನು ರಕ್ಷಿಸಿಕೊಳ್ಳುವ ಮಾರ್ಗವಾಗಿಯೇ ಜಾತಿ ಪದ್ಧತಿ ಬೆಳೆಯಿತೆಂದು ಹೇಳಲಾಗದು ವಾಸ್ತವವಾಗಿ ನೋಡಿದರೆ ಭಾರತದ ವಿವಿಧ ಜನಾಂಗಗಳಲ್ಲಿ ಪರಸ್ಪರ ರಕ್ತಸಂಬಂಧ ಹಾಗೂ ಸಂಸ್ಕೃತಿ ಸಮನ್ವಯ ನಡೆದು ಹೋಗಿ ಎಷ್ಟೂಕಾಲದ ನಂತರ ಜಾತಿಪದ್ಧತಿ ಹುಟ್ಟಿಕೊಂಡಿತು.

3. ಹಿಂದೂ ಸಮಾಜವೆಂಬುದು ಮಿಥ್ಯಪದ ಇದು ಎಲ್ಲಕ್ಕಿಂತ ಮುಂಚೆ ಒಪ್ಪಿಕೊಳ್ಳಬೇಕಾದ ಮಾತು, ಹಿಂದೂ ಎಂಬ ಹೆಸರೇ ವಿದೇಶಿಯವಾಗಿದೆ. ಹೊರಗಿನಿಂದ ಬಂದ ಮಹಮ್ಮದೀಯರು ತಮ್ಮಿಂದ ಬೇರೆಯಾದ ಇಲ್ಲಿಯ ನಿವಾಸಿಗಳನ್ನು ಈ ಹೆಸರಿನಿಂದ ಗುರುತಿಸಿದ್ದರು, ಮಹಮ್ಮದೀಯ ದಾಳಿಗಳಿಗೆ ಮುಂಚಿನ ಯಾವ ಸಂಸ್ಕೃತ ಗ್ರಂಥದಲ್ಲಿಯೂ ಈ ಪದದ ಉಲ್ಲೇಖವಿಲ್ಲ:

4.ಒಬ್ಬ ಸಿಖ್ಖನು ಅಪಾಯಕ್ಕೆ ಸಿಲುಕಿದರೆ ಎಲ್ಲ ಸಿಖ್ಖರೂ ತನ್ನ ಬೆಂಬಲಕ್ಕೆ ಬರುವರೆಂಬ ನಂಬಿಕೆ ಅವನಿಗಿದೆ. ಒಬ್ಬ ಮಹ ಮ್ಮದೀಯನು ದಾಳಿಗೆ ಒಳಗಾದಗ ಎಲ್ಲ ಮಹಮ್ಮದೀಯರು ತಮ್ಮನ್ನು ಪಾರುಮಾಡಲು ಬರುವರೆಂಬ ವಿಶ್ವಾಸ ಅವನಿಗಿದೆ, ಹಿಂದೂವಿಗೆ ಇಂತಹ ಯಾವ ಬಲವೂ ಇಲ್ಲ ತನ್ನವರು ನೆರವಿಗೆ ಬಂದಾರೆಂಬ ನಂಬಿಕೆ ಹಿಂದೂವಿಗೆ ಎಲ್ಲಿದೆ? ಹಿಗೆ ಹಿಂದೂವು ಏಕಾಂಗಿತನದಿಂದ ಶಕ್ತಿಹೀನನಾಗಿ ಅಂಜುಬುರುಕನಾಗುತ್ತಾನೆ, ಹೊಡೆದಾಟವಾದರೆ ಎದುರಾಳಿಗೆ ಶರಣಾಗುತ್ತಾನೆ.

5. ಶಂಬೂತನು ತನ್ನ ಶೂದ್ರವರ್ಣವನ್ನು ತೊರೆದು ಬ್ರಾಹ್ಮಣನಾಗಲು ಹೊರಟನು, ಆದುದರಿಂದ ಅವನನ್ನು ಕೊಲ್ಲುವುದು ರಾಮನ ಕರ್ತವ್ಯವೇ ಆಗಿತ್ತು, ಇದರಿಂದ ಶಿಕ್ಷಾವಿಧಾನ ಅವಶ್ಯಕವೆಂದು ಸಿದ್ಧವಾಗುತ್ತದೆ. ಇಷ್ಟೆ ಅಲ್ಲ ವರ್ಣವನ್ನು ಅತಿಕ್ರಮಿ ಸುವವರಿಗೆ ಶಿಕ್ಷೆ ಅಗತ್ಯವೆಂದು ಸಿದ್ಧವಾಗುತ್ತದೆ, ವೇದವನ್ನು ಕೇಳುವ ಓದುವ ಶೂದ್ರನಿಗೆ ನಾಲಿಗೆ ಕತ್ತರಿಸುವ ಅಥವಾ ಕಿವಿಗಳಲ್ಲಿ ಕರಗಿದ ಸೀಸವನ್ನು ಹೊಯ್ಯುವ ಶಿಕ್ಷೆ ಕೊಡಬೇಕೆಂದು ಮನುಸ್ಮೃತಿ ವಿಧಿಸುವುದು ಇದೇಕಾರಣಕ್ಕೆ.

6.ಸ್ವಾತಂತ್ರ್ಯ, ಗೌರವ – ಕೀರ್ತಿಗೆ ಆಸ್ಪದವಾಗಿದ್ದ ಒಂದೇ ಒಂದು ಕಲಾವಧಿ ಭಾರತೀಯ ಚರಿತ್ರೆಯಲ್ಲಿದೆ. ಅದು ಮೌರ್ಯ ಸಾಮ್ರಾಜ್ಯದ ಕಾಲಾವಧಿ ಮಿಕ್ಕೆಲ್ಲ ಕಾಲಗಳಲ್ಲಿ ಭಾರತ ಅಪಜಯ ಅಂಧಕಾರಗಳಲ್ಲಿಯೇ ನರಳಿತು. ಆದರೆ ಮೌರ್ಯರ ಕಾಲದಲ್ಲಿ ಚಾತುರ್ವರ್ಣ್ಯರ ಸಂಪೂರ್ಣವಾಗಿ ನಾಶವಾಗಿತ್ತು. ಬಹುಜನ ಸಮಾಜವಾಗಿದ್ದ ಶೂದ್ರರು ವಿಕಾಸವಾಗಿ ದೇಶದ ಪ್ರಭುಗಳಾದರು.

7.ಜಾತಿ ಪರಿಪಾಲನೆ ಜನರ ತಪ್ಪಲ್ಲ. ನಿಜವಾಗಿ ತಪ್ಪಿರುವುದು ಜಾತಿಯ ಬಗೆಗೆ ಧರ್ಮವುಂಟು ಮಾಡಿದ ಕಲ್ಪನೆಯಲ್ಲಿ ಈ ಮಾತು ಸರಿಯಾದರೆ, ನೀವು ಎದುರಿಸ

(28ನೇ ಪೆಟಕ್ಕೆ)

ಸಂಪಾದಕರೊಡನೆ ಸಂವಾದ

ದಲಿತ ಪದ ವಿಶಾಲವಾದರೆ...

ವಿ.ಆರ್. ಮೌರ್ಯ

ಸುಮಾರು ಒಂದು ದಶಕ ಕಾಲ ದಲಿತರಿಗೆ ಧನಿಯಾಗಿ ಬೆನ್ನೆಲುಬಾಗಿ ನಿಂತಿದ್ದ ದಲಿತ ಸಂಘರ್ಷ ಸಮಿತಿ ಕಳೆದ ಎರಡು ದಶಕಗಳಿಂದ ಅದರ ದನಿ ಕುಗ್ಗಿಸಿಕೊಂಡಿತ್ತು, ಬೆನ್ನೆಲುಬನ್ನು ಮುರಿದುಕೊಂಡಿತ್ತು, ಮನುವಾದಿಗಳ ಮೇಲಾಟಕೆ ಬಲಿಯಾಗಿತ್ತು. ಇದರ ಪರಿಣಾಮ ದಲಿತರ ದೌರ್ಜನ್ಯದ ವಿರುದ್ಧ ಮಾತನಾಡುವವರೆ ಮುಳುಗಿಹೋಗಿದ್ದರು. ಆಗಾಗ ಮಾತನಾಡಿದರು ಅದರ ಹಿಂದೆ ಸ್ವಾರ್ಥದ ಉದ್ದೇಶವಿರುತ್ತಿತ್ತು ಇಲ್ಲವೆ ಚುನಾವಣೆ ಹತ್ತಿರವಿರುತಿತ್ತು. ಅದೇನೆ ಇರಲಿ ಈಗ ಮತ್ತೆ ದಸಂಸ ಒಂದಾಗುವ ಆಶಯವನ್ನು ಮೈಸೂರಿನ ಕಾರ್ಯಕ್ರಮ ದಲಿತರಲ್ಲಿ ಮೂಡಿಸಿದೆ.

ಆದರೆ ಮನುವಾದಿಗಳು ಅವರ ಬಾಲಂಗೋಚಿಗಳು ಮಾತ್ರ "ಏ ಇವು ಮತ್ತೆ ಒಂದಾದವಾ? ಸುಮ್ನೆ ಕಾರ್ಯಕ್ರಮಮಾಡ್ತವೆ ಅಷ್ಟೆಯಾ. ಒಂದಾಗಕ್ಕೆ ನಾವು ಬುಟ್ಟೇವಾ?" ಎನ್ನುತಿದ್ದರೆ ದಲಿತರಲ್ಲಿಯೂ ಕೂಡ ಅನುಮಾನ ಮನೆಮಾಡಿರುವುದು ಸುಳ್ಳಲ್ಲ. ಜೊತೆಗೆ ಕಾರ್ಯಕ್ರಮದಲ್ಲಿ ಗೈರುಹಾಜರಾಗಿದ್ದ ಕೆಲವು ಮುಖಂಡರೆನಿಸಿಕೊಂಡವರು ನಮ್ಮಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಸೂಚನೆಯನ್ನು ನೀಡಿದ್ದಾರೆ. ಏನಾದರು ಆಗಲಿ ಚಾಲನಾ ಸಮಿತಿ ಮಾತ್ರ ಪ್ರಯತ್ನ ಮುಂದುವರಿಸಲಿ. ಕೊನೆಪಕ್ಷ ಆಸಕ್ತಿ ಬಣಗಳಾದರೂ ಒಂದಾಗಿ ರಾಜ್ಯ, ಜಿಲ್ಲಾ, ತಾಲ್ಲೂಕು ಹಂತಗಳಲ್ಲಿ ದಸಂಸವನ್ನು ಅಧಿಕೃತವಾಗಿ ನೇಮಿಸಿದರೆ ಸಾಕಾಗಿದೆ. ದಲಿತರು ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲಾದರು ಒಂದು ಸಂಘವಿದೆ ಎಂದು ಅಲ್ಪತೃಪ್ತಿ ಪಡೆಯುತ್ತಾರೆ. ನಂತರದ ದಿನಗಳಲ್ಲಿ ಸುಧಾರಣೆ ಆಗುವುದರಲ್ಲಿ ಸಂಶಯವಿಲ್ಲ.

ಈಗ ನನ್ನಲ್ಲಿರುವ ಕೆಲವು ಆಲೋಚನೆಗಳನ್ನು ನಿಮಗೆ ತಿಳಿಸುವ ಮುನ್ನ ದಲಿತ ಪದದ ಅರ್ಥವನ್ನು ಸ್ವಲ್ಪ ಮಟ್ಟಿಗೆ ಸ್ಮರಿಸುತ್ತೇನೆ. ದಲಿತ ಪದ ದಲ ಎಂಬ ಸಂಸ್ಕೃತ ಪದದ ಉತ್ಪತ್ತಿ. ದಲ ಎಂದರೆ ಶೋಷಣೆ. ದಲಿತ ಎಂದರೆ ಶೋಷಣೆಗೆ ಒಳಗಾಗುವವ ಎಂದರ್ಥ. ಈ ಪದದ ಮೂಲ ಬಳಕೆ ಕೀರ್ತಿ ಮರಾಠಿಗೆ ಸಲ್ಲುತ್ತದೆ. ಪ್ರಸ್ತುತ ನಮ್ಮೆಲ್ಲರಿಗೂ ತಿಳಿದಿರುವಂತೆ ಪರಿಶಿಷ್ಟ ಜಾತಿಗಳಿಗೆ ಮಾತ್ರ ಬಳಸಲಾಗುತ್ತಿದೆ.

ನನಗನ್ನಿಸುವ ಪ್ರಕಾರ ಕೇವಲ ಪರಿಶಿಷ್ಟ ಜಾತಿಗೆ ದಲಿತ ಪದ ಸೀಮಿತಗೊಳಿಸುವುದು ನಮ್ಮ ಸಂಘಟನೆಗೆ ನಾವೇ ಬೇಲಿ ಹಾಕಿಕೊಂಡಂತೆ ಅನಿಸುತ್ತದೆ. ಈ ದಲಿತ ಪದವು ಅನಾದಿ ಕಾಲದಿಂದಲೂ ಶೋಷಣೆಗೆ ಒಳಗಾಗಿರುವ ಮಹಿಳೆಯರಿಗೂ ಅನ್ವಯಿಸುತ್ತದೆ. ಆದರೆ ವಾಸ್ತವದಲ್ಲಿ ಪರಿಶಿಷ್ಟ ಜಾತಿಯ ಮಹಿಳೆ ಮಾತ್ರ ದಲಿತಳಾಗಿದ್ದಾಳೆ. ಸವರ್ಣೀಯರಲ್ಲು ಸಹ ಹಲವು ಮಹಿಳೆಯರು ಅಸ್ಪೃಶ್ಯತೆ ಶೋಷಣೆಯನ್ನು ಬಿಟ್ಟರೆ ಬೇರೆಲ್ಲ ರೀತಿಯ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಆದ ಕಾರಣ ಬಹುತೇಕವಾಗಿ ಮಹಿಳೆಯೂ ಸಹ ದಲಿತಳೇ ಅಲ್ಲವೇ?

ಇನ್ನೂ ಸ್ವಲ್ಪ ವಿಶಾಲವಾಗಿ ಯೋಚಿಸಿದರೆ ಮುಂದುವರಿದ-ಹಿಂದುಳಿದ ವರ್ಗಗಳ ಕೆಲವು ಕುಟುಂಬಗಳು ಸಹ ಬಡತನದ ಬೇಗೆಯಲ್ಲಿಯೇ ಬೇಯುತ್ತಿದ್ದಾರೆ. ಇವರುಗಳ ಹಸಿವು ಪರಿಶಿಷ್ಟರಷ್ಟು ಇಲ್ಲದಿದ್ದರು ಅವರದೇ ಜನಾಂಗದಿಂದಲೇ ಶೋಷಣೆಗೆ ಒಳಪಟ್ಟಿದ್ದಾರೆ. ಆದ್ದರಿಂದ ಬಡವರಾಗಿಯೇ ಉಳಿದಿದ್ದಾರೆ. ಇವರುಗಳೂ ಸಹ ಅಸ್ಪೃಶ್ಯತೆಯ ನೋವನ್ನು ಅನುಭವಿಸಿಲ್ಲ. ಬಹಳಷ್ಟು ಸವರ್ಣೀಯರು ಹತ್ತು ತಲೆಮಾರಿಗಾಗುವಷ್ಟು ಆಸ್ತಿ ಮಾಡಿರುವುದು ಆರ್ಯಸತ್ಯ. ಆದರಿಲ್ಲಿ ನಾವು ಶೋಷಿತರು ಎಂದು ಹೇಳುತ್ತಿರುವುದು ಹಲವರನ್ನಲ್ಲ ಕೆಲವರನ್ನ. ಈ ಕೆಲವರ ಏಳ್ಗೆಯೂ ಆಗಬೇಕಾಗಿದೆ ಎಂದಾದರೆ ಇವರು ಕೂಡ ದಲಿತರಲ್ಲವೇ?. ಆದರೆ ಇಲ್ಲೊಂದು ಷರತ್ತಿದೆ ಅದೇ ನೆಂದರೆ ಈ ಶೋಷಿತರು ಉದಾರವಾದಿಗಳಾಗಿರಲೇ ಬೇಕು, ಸಮನತಾವಾದಿಗಳಾಗಿರಲೇಬೇಕು.

ಹಾಗಿದ್ದಾಗ ಮಾತ್ರ ಉದಾರವಾದಿ ಸವರ್ಣೀಯರು ದಲಿತರಾಗಬಹುದು. ಇದರ ಜೊತೆಗೆ ಸಂಘಟನೆಯಲ್ಲಿ ಉದಾರವಾದಿಮುಖ ಸನಾತನವಾದಿಗಳನ್ನು ಪತ್ತೆ ಹಚ್ಚಲು ಒಂದು ತಂಡವನ್ನೇ ರಚಿಸಬೇಕೆಂಬುದನ್ನು ತಳ್ಳಿ ಹಾಕುವಂತಿಲ್ಲ. ಈ ಮಲಿ ದೃಷ್ಟಿಯಿಂದ ದಲಿತ ಪರಿಕಲ್ಪನೆ ವಿಶಾಲವಾಗುವುದರ ಜೊತೆಗೆ ಶೋಷಣೆಯ ವಿರುದ್ಧ ಸಮಗ್ರ ಹೋರಾಟ ನಡೆಸಬಹುದಲ್ಲವೇ? ಈ ಪರಿಕಲ್ಪನೆ ಹೊಸದೇನು ಅಲ್ಲ ಬಾಬಾ ಸಾಹೇಬರು ಬಹಿಷ್ಕೃತ ಹಿತಕಾರಣಿ ಸಭಾದಲ್ಲಿ ನೇಮಕ ಮಾಡಿದ್ದು ಉದಾರವಾದಿ ಸವರ್ಣೀಯರನ್ನೇ ಅಲ್ಲವೇ? ಕಾಳಾರಾಮ ದೇವಾಲಯದ ಪ್ರವೇಶ ಮತ್ತು ಚೌಡಾರ್ ಕೆರೆ ಪ್ರಸಂಗಗಳಲ್ಲಿಯೂ ಸಹ ಉದಾರವಾದಿ ಸವರ್ಣಿಯರು ನಿಮ್ಮ ವರ್ಗಗಳಿಗೆ ತಮ್ಮದೇ ಆದ ಕೊಡುಗೆ ನೀಡಿರುವುದನ್ನು ಮರೆಯುವಂತಿಲ್ಲ.

ಈ ವಿಷಯಗಳನ್ನು ಪರಿಶೀಲಿಸಿ ನೋಡಿದಾಗ ದಲಿತ ಸಂಘಟನೆಗಳಲ್ಲಿ ಎಲ್ಲಾ ವರ್ಗದ ಮಹಿಳೆಯರಿಗೆ ಮತ್ತು ಸವರ್ಣೀಯ ಉದಾರವಾದಿಗಳಿಗೆ ಸ್ಥಾನ ಕೊಡುವುದು ಇಂದು ಅನಿವಾರ್ಯ. ಆದ ಕಾರಣ ನಿಮ್ಮ ವರ್ಗದವರಾದ ನಾವುಗಳು ಸಹ ಉದಾರವಾಗಬೇಕಾಗಿದೆ. ಆಗ ಮಾತ್ರ ಬಾಬಾ ಸಾಹೇಬರನ್ನು ಕೇವಲ ನಿಮ್ಮ ವರ್ಗಗಳ ನಾಯಕ ಎಂಬುದನ್ನು ತೊಲಗಿಸಿ ಸಮಸ್ತ ಶೋಷಿತರ ನಾಯಕರನ್ನಾಗಿ ಮಾಡಬಹುದು. ಆಗ ದಲಿತರ ವ್ಯಾಪ್ತಿ ವಿಶಾಲವಾಗುವುದರಲ್ಲಿ ಅನುಮಾನವಿಲ್ಲ. ಮುಂದೊಂದು ದಿನ ರಾಜಕೀಯದ ನಡೆಯೂ ಸುಲಭವಾಗಬಹುದು. ಆಗಲೂ ಸಹ ಉದಾರವಾದಿ ಮುಖ ಸನಾತನವಾದಿಗಳು ದಲಿತ ಬಾಲಂಗೋಚಿಗಳನ್ನು ಹುಡುಕುವುದು ಶತಸಿದ್ಧ, ಎಚ್ಚರ!.

ಒಡೆದು ಹಲವು ಬಣವಾಗಿದ್ದ ದಸಂಸ ಇಂದು ಒಂದಾಗುವ ಕೂಗು ಕೇಳಿಬರುತ್ತಿರುವ ಸಂದರ್ಭದಲ್ಲಿ ದಲಿತ ಎಂಬ ಪದದ ಅರ್ಥದಂತೆ ಸಂಘಟನೆಯನ್ನು ಸಹ ವಿಶಾಲವಾಗಿಸಬೇಕಿದೆ. ಕಾಲಕ್ಕೆ ತಕ್ಕಂತೆ ಅದರ ಸಿದ್ಧಾಂತಗಳು ವಿಮರ್ಶೆಗೊಳಪಡಬೇಕಾಗಿದೆ. ಎರಡು ದಶಕಗಳ ಕಾಲ ನಿರಂತರವಾಗಿ ಮಣ್ಣಿನಲ್ಲಿ ಹೂತುಹೋಗಿದ್ದ ದಸಂಸ ಮೈಕೊಡವಿ ಮತ್ತದೇ ಹುಮ್ಮಸ್ಸಿನಿಂದ ಮೇಲೆದ್ದು ಬರಬೇಕಿದೆ. ಆದರೆ ರಾಜಕೀಯ ನಡೆಯಲ್ಲಿ ಸಂಘಟನೆ ಕೆಲವು ಕಾಲ ತಟಸ್ಥವಾಗಿರುವುದು ಉತ್ತಮ. ಅದಕ್ಕಾಗಿ ಹೊಸ ರಾಜಕೀಯ ನೀತಿಯನ್ನೆ ಸಂಘಟನೆಯಲ್ಲಿ ಅಳವಡಿಸಬೇಕಾಗಿರುವುದು ಇಂದು ಅತ್ಯವಶ್ಯಕ. ಏಕೆಂದರೆ ಇತಿಹಾಸ ನಮಗಾಗಲೆ ಬುದ್ಧಿ ಕಲಿಸಿದೆ.

ಎಲ್ಲ ಉಪಜಾತಿಯ ಸ್ವ ಘೋಷಿತ ನಾಯಕರುಗಳು ಆಯಾ ಉಪ ಜಾತಿಗಳ ಸಂಘಟನೆಗಳನ್ನು ಮಾಡಿಕೊಂಡು ಅವರವರಿಗೆ ಅನ್ಯಾಯವಾದಾಗ ಹೋರಾಟ ನಡೆಸುತ್ತ ಇನ್ನಿತರ ದಲಿತರು ಅಳುವಾಗ ಸುಮ್ಮನಿದ್ದು, ಈಗಾಗಲೆ ಜಾತಿಗಳಿಂದ ಒಡೆದು ಹೋಗಿರುವ ಸಮಾಜವನ್ನು ಉಪ ಜಾತಿಗಳಿಂದ ಇನ್ನೂ ಚೂರುಗಳನ್ನಾಗಿ ಮಾಡಲು ಹೊರಟಿದ್ದಾರೆ. ಈ ಕೃತ್ಯದಿಂದ ದಲಿತರೂ ಹೊರತಾಗಿಲ್ಲ. ಆದ್ದರಿಂದ ದಸಂಸದ ಎದುರು ಇಂದು ಎಲ್ಲ ದಲಿತರ ದೌರ್ಜನ್ಯದ ವಿರುದ್ಧ ಹೋರಾಡುವ ಸವಾಲು ಎದುರಾಗಿದೆ. ದಲಿ ತರೆಲ್ಲರನ್ನು ತನ್ನ ಉದರದಲ್ಲಿ ಅವುಚಿಕೊಂಡು, ಶಿಕ್ಷಣ ಸಂಘಟನೆ ಮತ್ತು ಹೋರಾಟದ ಪಾಠ ಹೇಳಿಕೊಡುತ್ತ ದೊಡ್ಡ ಕ್ರಾಂತಿಯನ್ನೆ ಮಾಡಬೇಕಾಗಿದೆ. ಕ್ರಾಂತಿ ಕೊರಡಿಯಲ್ಲಿ ಹುಟ್ಟಲಾರದು ಅದು ಒಂದು ಯುಕ್ತಿಯ ಜೊತೆಗೆ ನೂರು ಶಕ್ತಿಯನ್ನು ಬಯಸುಯತ್ತದೆ. ಬಾಬಾ ಸಾಹೇಬರು, ಬುದ್ಧ, ಬಸವಣ್ಣ ಮುಂತಾದವರು ಯುಕ್ತಿಯನ್ನು ನೀಡಿದ್ದಾರೆ, ಪ್ರಸ್ತುತ ನಮಗೆ ಬೇಕಾಗಿರುವುದು ಶಕ್ತಿ. ಈ ಕೆಲಸವನ್ನೆ ದಸಂಸ ಮಾಡಬೇಕಾಗಿರುವುದು.

“ನಿಮ್ಮವರ್ಗಗಳೇ ಒಂದಾಗೋದು ಕಷ್ಟವಿದೆ ಇನ್ನೂ ವಿಶಾಲ ದಲಿತರ ಕಲ್ಪನೆ ಅಸಾಧ್ಯ” ಎನ್ನುವ ನಾಯಕರು ಬಹಳ ಇದ್ದಾರೆ. ಅದು ಅವರ ತಪ್ಪಲ್ಲ ಬಿಡಿ. ಆದರೆ ಸಮಸ್ತ ದಲಿತ ನಾಯಕರಲ್ಲಿ-ದಲಿತ ವಿದ್ಯವಂತ ನೌಕರರಲ್ಲಿ ನನ್ನದೊಂದು ಪ್ರಾರ್ಥನೆ. ಈ ವಿಷಯವನ್ನು ಚರ್ಚೆಗೆ ಬಿಡಿ, ಎಲ್ಲಾ ಶೋಷಿತರನ್ನು ದಲಿತ ಎಂಬ ಒಂದೇ ಆಯಕಟ್ಟಿನಲ್ಲಿ ತರಲು ಇರುವ ಸಾಧ್ಯತೆಗಳನ್ನು ಹುಡುಕಿರಿ. ಇದರಿಂದಾಗುವ ಅನುಕೂಲತೆ - ಅನಾನುಕೂಲತೆ ಬಗ್ಗೆ ಮಂಥನಮಾಡಿ. ಕೊನೆಗೊಂದು ತೀರ್ಮಾನಕ್ಕೆ ಬನ್ನಿ ಏಕೆಂದರೆ ದಸಂಸವನ್ನು ಉಳಿಸ ಬೇಕಿದೆ, ಬೆಳೆಸಬೇಕಿದೆ ಅದರ ಬಲ ಹೆಚ್ಚಿಸಬೇಕಿದೆ. ಎಲ್ಲಾ ಶೋಷಿತರ ದನಿಯಾಗಿ ಮಾರ್ಪಡಿಸಬೇಕಿದೆ. ಉದಾರ ವಾದಿಮುಖ ಸನಾತನವಾದಿಗಳಿಂದ ಕಾಪಾಡಬೇಕಿದೆ. □

ಕರ್ನಾಟಕವನ್ನು ಎಲ್ಲಾ ರೀತಿಯಲ್ಲೂ ಮೋದಿಯ ಗುಜರಾತ್ ಮಾಡಲು ಹೊರಟಿರುವ ಯಡಿಯೂರಪ್ಪನ ಬಿಜೆಪಿ ಸರ್ಕಾರ ಇಡೀ ಕನ್ನಡ ನಾಡನ್ನೇ ದುಗ್ಗಾಣಿ ಬೆಲೆಗೆ ಹರಾಜು ಮಾಡಲು ಇದೇ ಜೂನ್ ೩ ಮತ್ತು ೪ರಂದು ಬೆಂಗಳೂರಿನಲ್ಲಿ ಎರಡನೇ ಜಾಗತಿಕ ಹೂಡಿಕೆದಾರರ ಸಮಾವೇಶ- Global Investors Meet-GIM ಅನ್ನು ನಡೆಸುತ್ತಿದೆ. ಕಳೆದ ಕೆಲ ವಾರಗಳಿಂದ ಕರ್ನಾಟಕದ ಎಲ್ಲಾ ದಿನಪತ್ರಿಕೆಗಳಲ್ಲು ಸರ್ಕಾರ ಮತ್ತು ವಿವಿಧ ಇಲಾಖೆಗಳು ಇದರ ಬಗ್ಗೆ ಪೂರ್ಣ ಪುಟದ ಜಾಹೀರಾತನ್ನು ನೀಡುತ್ತಿವೆ. ಈ ಜಾಹಿರಾತು ವೆಚ್ಚಕ್ಕೆಂದು ಸರ್ಕಾರ ನಿಗದಿ ಮಾಡಿರುವ ಮೊತ್ತವೆಷ್ಟು ಗೊತ್ತೆ? ೨೨ ಕೋಟಿ ರೂಪಾಯಿಗಳು! ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ಪುನರ್ವಸತಿಗಾಗಿ ಕಳೆದ ಒಂದು ವರ್ಷದಿಂದ ಸರ್ಕಾರ ವೆಚ್ಚ ಮಾಡಿರುವ ಹಣಕ್ಕಿಂತ ಇದು ಹೆಚ್ಚು! ಗುಲ್ಬರ್ಗದಲ್ಲಿ ೩೪ ತಿಂಗಳಿಂದ ಸಂಬಳವಿಲ್ಲದೆ ಉಪವಾಸ ಸತ್ಯಾಗ್ರಹ ಮಾಡುತ್ತಾ ಸಾಯುತ್ತಿದ್ದಾರಲ್ಲ.

ಶಿವಸುಂದರ್

ಇತ್ತಿಚೆಗೆ ನಡೆದ ಐಎಎಸ್ ಪರೀಕ್ಷೆಗಳ ಭಾಗವಾಗಿ ಅಭ್ಯರ್ಥಿಗಳ ನಡೆಸಿದ ಸಂದರ್ಶನದಲ್ಲಿ ಕರ್ನಾಟಕದ ಹಿರಿಯ ಅಧಿಕಾರಿಯೊಬ್ಬರು ಕರ್ನಾಟಕದ ಅಭ್ಯರ್ಥಿಗಳನ್ನು ಹೀಗೊಂದು ಪ್ರಶ್ನೆ ಕೇಳಿದರಂತೆ "ನೀವು ನೋಡಲ್ ಅಧಿಕಾರಿಯಾಗಿ ನೇಮಿಸಲ್ಪಟ್ಟರೆ ಕರ್ನಾಟಕವನ್ನು ಹೇಗೆ ಮಾರುತ್ತೀರಿ?". ಪ್ರಶ್ನೆ ಎಷ್ಟು ಸಹಜವಾಗಿ ತ್ತೆಂದರೆ ಅಭ್ಯರ್ಥಿಗಳು ಈ ಪ್ರಶ್ನೆಯನ್ನು ಅಸಹಜವೆಂದು ಭಾವಿಸಿದರೆ ಅವರು ಐಎಎಸ್ ಅಧಿಕಾರಿಯಾಗಲು ಅನರ್ಹ ಎಂಬಂತೆ! ಇದೇ ರೀತಿಯ ಅನುಭವ ನನಗೂ ಹದಿನೈದು ವರ್ಷದ ಕೆಳಗೆ ದೆಹಲಿಯ ಪ್ರಗತಿ ಮೈದಾನದಲ್ಲಿ ಆಗಿತ್ತು. ಅಲ್ಲಿ, ವಿಶ್ವದ ಹಲವೆಡೆಗಳಿಂದ ಬರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಪುಸಲಾಯಿಸಲು ಎಲ್ಲಾ ರಾಜ್ಯದವರೂ "ಅಂಗಡಿ"ಗಳನ್ನು ತೆರೆದಿಟ್ಟುಕೊಂಡಿದ್ದಾರೆ. ಅಲ್ಲಿ ಇನ್ಚಾರ್ಜ್ಆಗಿ ಕರ್ನಾಟಕದ "ಉದ್ಯೋಗ ಮಿತ್ರ" ಇಲಾಖೆಯಿಂದ ನೇಮಕವಾಗಿದ್ದ ಅಧಿಕಾರಿಯೊಬ್ಬರು ತಮ್ಮ ಕೆಲಸವನ್ನು ವಿವರಿಸಿದ್ದೂ ಹೀಗೆಯೇ! "well, I am here to sell Karnataka and I am doing my duty sincerely" – ನನಗಿಲ್ಲಿ ಕರ್ನಾಟಕವನ್ನು ಮಾರುವ ಕೆಲಸ ಕೊಟ್ಟಿದ್ದಾರೆ ಮತ್ತು ನಾನದನ್ನು ನಿಷ್ಠೆಯಿಂದಲೇ ಮಾಡುತ್ತಿದ್ದೇನೆ!

ಆಗಿನ್ನು ಜಾಗತೀಕರಣದ ಪ್ರಾರಂಭದ ಕಾಲ. ಮಾರುಕಟ್ಟೆ ಆರ್ಥಿಕತೆ – ಬಹುರಾಷ್ಟ್ರೀಯ ಕಂಪನಿಗಳಿಗೆ ರಾಜ್ಯವನ್ನು ಮಾರುವ ಕೈಂಕರ್ಯ ಇನ್ನೂ ಅಷ್ಟೊಂದು ಜನಮಾನ್ಯವಾಗಿರಲಿಲ್ಲ. ಆಗಲೇ ನಮ್ಮ ಸರ್ಕಾರ ನಿರ್ಲಜ್ಜೆಯಿಂದ ಕರ್ನಾಟಕವನ್ನು ಅತಿ ಲಾಭದ ದರಕ್ಕೆ ಮಾರಿಕೊಳ್ಳುವುದೇ ಯಶಸ್ವಿ ಆಡಳಿತವೆಂದು ಭಾವಿಸಿಬಿಟ್ಟಿತ್ತು. ಇದರ ಭಾಗವಾಗಿಯೇ 2000ದ ಜೂನ್‌ನಲ್ಲೂ ಆಗಿನ ಕಾಂಗ್ರೆಸ್ಸಿನ ಎಸ್. ಎಂ. ಕೃಷ್ಣರ ಸರ್ಕಾರ ಜಾಗತಿಕ ಹೂಡಿಕೆದಾರರ ಸಮಾವೇಶ '– Global Investors Meet-GIM ಅನ್ನು ನಡೆಸಿತ್ತು. ಅದರ ವಿರುದ್ಧ ಪ್ರತಿಭಟನೆ ನಡೆಸಿದ ರೈತರನ್ನೂ ಮತ್ತು ಸಾಮ್ರಾಜ್ಯಶಾಹಿ ವಿರೋಧೀ ದೇಶಭಕ್ತರನ್ನು ಜೈಲಿಗೆ ಅಟ್ಟಿ ಸಮಾವೇಶವನ್ನು ಯಶಸ್ವಿಗೊಳಿಸಿಕೊಂಡಿತ್ತು. ಕರ್ನಾಟಕದ ಜನ ವಿಧಾನಸೌಧದ ಒಂದು ಕಿಮಿ ಸುತ್ತಲೂ ಪ್ರತಿಭಟನೆಯನ್ನು ಮಾಡುವುದನ್ನು ನಿಷೇಧಿಸಿದ ಸರ್ಕಾರ ಕರ್ನಾಟಕವನ್ನೇ ಲೂಟಿ ಹೊಡೆಯಲು ಬಂದಿದ್ದ ವಿದೇಶಿ ಲೂಟಿಕೋರರನ್ನು ಮಾತ್ರ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲಿನೊಳಗೆ ಕೆಂಪು ಹಾಸು ಹಾಕಿ ಸ್ವಾಗತಿಸಿತ್ತು. ಅಂದು ನಾಡಿನ ಲೂಟಿಕೋರರನ್ನೇ ಸನ್ಮಾನಿಸುತ್ತಿದ್ದ ನವವಸಾಹತುಶಾಹಿ ಧೋರಣೆಯ. ವಿರುದ್ಧ ಹೋರಾಡಿದ ದೇಶಭಕ್ತರಲ್ಲಿ ತಮ್ಮದು ದೇಶಭಕ್ತ ಭಿನ್ನ ರಾಜಕೀಯ ಪಕ್ಷ ಎಂದು ಹೇಳಿಕೊಳ್ಳುವ ಯಾವೊಬ್ಬ ಬಿಜೆಪಿಯವನಾಗಲೀ, ಸಂಘಪರಿವಾರದವರಾಗಲೀ ಇರಲಿಲ್ಲ.

ಜಾಗತಿಕ ಹೂಡಿಕೆದಾರರ ಸಮಾವೇಶ– GIM

ಡಾಲರ್ ಮಾರುಕಟ್ಟೆಯಲ್ಲಿ ನಾಡನ್ನು ಮಾರುತ್ತಿರುವ ದಲ್ಲಾಳಿ ಸರ್ಕಾರ!

ಈಗ ಜಾಗತೀಕರಣ ಪ್ರಾರಂಭವಾಗಿ ಇಪ್ಪತ್ತು ವರ್ಷಗಳಾಗಿವೆ. ಅದರಲ್ಲೂ ಕಳೆದ ಒಂದು ದಶಕದಲ್ಲಿ ನಾಡಿನ ಸಂಪತ್ತೆಲ್ಲಾ ಅತಿವೇಗವಾಗಿ ವಿದೇಶಿ ಕಂಪನಿಗಳ ಪಾಲಾಗುತ್ತಿದೆ. ಹೀಗಾಗಿ ನಾಡನ್ನು ಮಾರಿ ಕೊಳ್ಳುವುದು ಮತ್ತು ಅದನ್ನು ನಿರ್ಲಜ್ಜೆಯಿಂದ ಮತ್ತು ಯಶಸ್ವಿಯಾಗಿ ಮಾಡುವುದೇ ಒಂದು ಸರ್ಕಾರದ ಆಧುನಿಕತೆ ಮತ್ತು ಪ್ರಗತಿಪರತೆಯ ಸಂಕೇತವಾಗುತ್ತಿದೆ. ನಾಡನ್ನು ಮಾರಿಕೊಳ್ಳುವಲ್ಲಿ ಎಲ್ಲಾ ಬ್ರಾಂಡಿನ ಪಕ್ಷಗಳಲ್ಲೂ ಒಂದು ಬಗೆಯ ಪೈಪೋಟಿಯೇ ಏರ್ಪಟ್ಟಿದೆ. ವಾಸ್ತವವಾಗಿ ನಾಡನ್ನು ಹರಾಜು ಮಾಡುವ ಪೈಪೋಟಿಯಲ್ಲಿ ಕಾಂಗ್ರೆಸ್‌ಗೆ ಅತ್ಯಂತ ಸಮೀಪದ ಪ್ರತಿಸ್ಪರ್ಧಿ "ದೇಶಭಕ್ತ ಬಿಜೆಪಿ" ಪಕ್ಷವೇ! ಮೋದಿಯ ಗುಜರಾತ್ ಅದಕ್ಕೆ ಅತಿದೊಡ್ಡ ಸಾಕ್ಷಿ.

ಕರ್ನಾಟಕವನ್ನು ಎಲ್ಲಾ ರೀತಿಯಲ್ಲೂ ಮೋದಿಯ ಗುಜರಾತ್ ಮಾಡಲು ಹೊರಟಿರುವ ಯಡಿಯೂರಪ್ಪನ ಬಿಜೆಪಿ ಸರ್ಕಾರ ಇಡೀ ಕನ್ನಡ ನಾಡನ್ನೇ ದುಗ್ಗಾಣಿ ಬೆಲೆಗೆ ಹರಾಜು ಮಾಡಲು ಇದೇ ಜೂನ್ 3 ಮತ್ತು 4ರಂದು ಬೆಂಗಳೂರಿನಲ್ಲಿ ಎರಡನೇ ಜಾಗತಿಕ ಹೂಡಿಕೆದಾರರ ಸಮಾವೇಶ– Global Investors Meet-GIM ಅನ್ನು ನಡೆಸುತ್ತಿದೆ. ಕಳೆದ ಕೆಲ ವಾರಗಳಿಂದ ಕರ್ನಾಟಕದ ಎಲ್ಲಾ ದಿನಪತ್ರಿಕೆಗಳಲ್ಲು ಸರ್ಕಾರ ಮತ್ತು ವಿವಿಧ ಇಲಾಖೆಗಳು ಇದರ ಬಗ್ಗೆ ಪೂರ್ಣ ಪುಟದ ಜಾಹೀರಾತನ್ನು ನೀಡುತ್ತಿವೆ. ಈ ಜಾಹಿರಾತು ವೆಚ್ಚಕ್ಕೆಂದು ಸರ್ಕಾರ ನಿಗದಿ ಮಾಡಿರುವ ಮೊತ್ತವೆಷ್ಟು ಗೊತ್ತೆ? 22 ಕೋಟಿ ರೂಪಾಯಿಗಳು! ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ಪುನರ್ವಸತಿಗಾಗಿ ಕಳೆದ ಒಂದು ವರ್ಷದಿಂದ ಸರ್ಕಾರ ವೆಚ್ಚಮಾಡಿರುವ ಹಣಕ್ಕಿಂತ ಇದು ಹೆಚ್ಚು! ಗುಲ್ಬರ್ಗದಲ್ಲಿ 34 ತಿಂಗಳಿಂದ ಸಂಬಳವಿಲ್ಲದೆ ಉಪವಾಸ ಸತ್ಯಾಗ್ರಹ ಮಾಡುತ್ತಾ ಸಾಯುತ್ತಿದ್ದಾರಲ್ಲ ಅವರ ಸಂಬಳವನೆಲ್ಲಾ ಒಂದೇ ಬಾರಿ ಪಾವತಿ ಮಾಡಲು ಇದರ ಅರ್ಧಕ್ಕಿಂತಲೂ ಕಡಿಮೆ ಹಣ ಸಾಕು! ಇದರಿಂದಲೇ ಈ ದೇಶಭಕ್ತರ ಭಕ್ತಿ ಯಾರ ಕಡೆಗಿದೆ ಎಂಬುದೂ ಮತ್ತು ಇವರು ಯಾವ ದೇವರ ವಿಭೂತಿಯನ್ನು ನೆಚ್ಚಿಕೊಳ್ಳುವವರು ಎಂಬುದೂ ಗೊತ್ತಾಗುತ್ತದೆ.

ಸರ್ಕಾರ ಈ ಸಮಾವೇಶ ನಡೆಯುವ ಮುನ್ನವೇ ಇದರಿಂದಾಗಿ ರಾಜ್ಯಕ್ಕೆ ಏನಿಲ್ಲವೆಂದರೂ 3 ಲಕ್ಷ ಕೋಟಿ ರೂಪಾಯಿಗಳಷ್ಟು ಬಂಡವಾಳ ಹರಿದು ಬಂದು 3 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತವೆ ಎಂದು ಬೊಗಳೆ ಬಿಡುತ್ತಿದೆ. ಅಲ್ಲದೆ ಈಗಾಗಲೇ 50 ಕೋಟಿಗೂ ಹೆಚ್ಚಿನ ಬಂಡವಾಳ ಹೂಡುವ 108 ಯೋಜನೆಗಳಿಗೂ ಹಾಗೂ 3–50 ಕೋಟಿ ಬಂಡವಾಳ ಹೂಡಿಕೆಯಾಗುವ 228 ಯೋಜನೆಗಳಿಗೂ ಅನುಮತಿ ನೀಡಲಾಗಿದೆ ಎಂದು ಸಹ ಹೇಳುತ್ತಿದೆ. ಇದರಲ್ಲಿ 1.66 ಲಕ್ಷ ಕೋಟಿ ರೂಪಾಯಿಯಷ್ಟು ಬಂಡವಾಳ ಬಳ್ಳಾರಿ ವಲಯಕ್ಕೂ ಹಾಗೂ ಬಾಗಲಕೋಟೆ ವಲಯಕ್ಕೆ 32, 900 ಕೋಟಿ ರೂಪಾಯಿ ಬಂಡವಾಳ ಹರಿದು ಬರುವುದರಿಂದ ಉತ್ತರ ಕರ್ನಾಟಕ ಈ ಸಮಾವೇಶದ ಬೃಹತ ಫಲಾನುಭವಿಯಾಗಲಿದೆ ಯೆಂದು ಬೃಹತ್ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ ಹೇಳುತ್ತಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಇದರ ಬಗ್ಗೆ ಕೊರಿಯಾ, ಸಿಂಗಪೂರ್, ಯೂರೋಪುಗಳಲ್ಲೂ, ಭಾರತದ ಚೆನ್ನೈ



ಬಂಡವಾಳ ಹೂಡಲು ಒಪ್ಪಿಕೊಂಡ ಕಂಪನಿಗಳು ಅಡ್ವಾನ್ಸ್ ದುಡ್ಡುಕೊಟ್ಟಿವೆ ಎಂದು ಹೇಳುತ್ತಾ ಸರ್ಕಾರ ಕರ್ನಾಟಕದ ಜನತೆಯ ಕಿವಿಗೆ ಹೂವನ್ನಲ್ಲ, ಲಾಲ್ ಬಾಗನ್ನೇ ಮುಡಿಸಲು ಹೊರಟಿದೆ! ಏಕೆಂದರೆ ಬಂಡವಾಳ ಹೂಡಿ ಎಂದು ಭಿಕ್ಷಾಟನೆ ಮಾಡುತ್ತಿರುವುದು ಕರ್ನಾಟಕ ಸರ್ಕಾರ. ಕರ್ನಾಟಕದ ತರಹವೇ ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ ಸರ್ಕಾರಗಳೂ ಭಿಕ್ಷಾ ಪಾತ್ರೆ ಎತ್ತಿಕೊಂಡು ಪ್ರಪಂಚ ಪರ್ಯಟನೆ ಮಾಡುತ್ತಿವೆ. ಯಾವ ರಾಜ್ಯದಲ್ಲಿ ಹೆಚ್ಚು ರಿಯಾಯತಿ, ಲಾಭ, ವಿನಾಯತಿ ಸಿಗುತ್ತದೋ ಅಲ್ಲಿ ಮಾತ್ರ ಆ ರಾಜ್ಯವನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಏಕೆಂದರೆ ಅವರು ನಮ್ಮನ್ನು ಕೇಳಿಕೊಂಡು ಬಂದಿಲ್ಲ. ನಾವು ಕೇಳಿಕೊಂಡು ಹೋಗುತ್ತಿದ್ದೇವೆ. ಹೀಗಾಗಿ ಅಡ್ವಾನ್ಸ್ ಕೊಟ್ಟರೆ ಮಾತ್ರ ನಮ್ಮ ರಾಜ್ಯ ಪ್ರವೇಶ ಎಂದರೆ ಯಾವ ಬಂಡವಾಳಿಗನೂ ಕರ್ನಾಟಕದಲ್ಲಿ ಕಾಲಿಡುವುದಿಲ್ಲ.

ಇತ್ಯಾದಿ ಬೃಹತ್ ನಗರಗಳಲ್ಲೂ ರೋಡ್ ಶೋಗಳನ್ನು ನಡೆಸಲಾಗಿದೆ. ಎಂದರೆ ಕರ್ನಾಟಕದಲ್ಲೆ ಏನೆಲ್ಲಾ ಆಕರ್ಷಕ ಲಾಭದ ದಾರಿಗಳಿವೆ ಎಂದು ದೇಶದ ಮತ್ತು ಜಗತ್ತಿನ ಬಂಡವಾಳಿಗರ ಮುಂದೆಲ್ಲಾ ಪ್ರದರ್ಶನ ನಡೆಸಿ ಆಹ್ವಾನಿಸಲಾಗಿದೆ. ಇವಕ್ಕೆಲ್ಲಾ ಎಷ್ಟು ಕೋಟಿ ರೂ ಖರ್ಚಾಗಿರಬಹುದು? ಅಲ್ಲದೆ ಜೂನ್ 3–4ರಂದು ನಡೆಯುವ ಸಮಾವೇಶಕ್ಕೆ ಎಷ್ಟು ಕೋಟಿ ವೆಚ್ಚವಾಗಬಹುದು?

ಯಡಿಯೂರಪ್ಪನವರ ನೆಚ್ಚಿನ ಅಧಿಕಾರಿಯಾದ ಮೇಲೆ ತಮ್ಮ ನಾಲಿಗೆಯನ್ನು ಬಿಜೆಪಿಗೆ ಗುತ್ತಿಗೆಗೆ ಕೊಟ್ಟಿರುವ ಬಳಿಗಾರ್‌ರವರ ಪ್ರಕಾರ ಇದಕ್ಕೆ ಬೊಕ್ಕಸದಿಂದ ಒಂದು ಪೈಸೆಯೂ ವೆಚ್ಚವಾಗುತ್ತಿಲ್ಲ. ಈಗಾಗಲೇ ಬಂಡವಾಳ ಹೂಡಲು ಬಯಸುವ ಕಂಪನಿಗಳು 600 ಕೋಟಿಯಷ್ಟು ಅಡ್ವಾನ್ಸ್ ದುಡ್ಡು ಕೊಟ್ಟಿವೆ. ಅದರ ಬಡ್ಡಿಯಲ್ಲಿ 20 ಕೋಟಿ ಬರಲಿದ್ದು, ಆ ಹಣದಲ್ಲಿ ಈ ಜಾಹಿರಾತು, ರೋಡ್ ಶೋ ಮತ್ತು ಸಮಾವೇಶದ ವೆಚ್ಚಗಳನ್ನೆಲ್ಲಾ ಭರಿಸಲಾಗುತ್ತಿದೆ ಎಂದು ಬೊಗಳೆ ಬಿಟ್ಟಿದ್ದಾರೆ.

ಬಂಡವಾಳ ಹೂಡಲು ಒಪ್ಪಿಕೊಂಡ ಕಂಪನಿಗಳು ಅಡ್ವಾನ್ಸ್ ದುಡ್ಡುಕೊಟ್ಟಿವೆ ಎಂದು ಹೇಳುತ್ತಾ ಸರ್ಕಾರ ಕರ್ನಾಟಕದ ಜನತೆಯ ಕಿವಿಗೆ ಹೂವನ್ನಲ್ಲ, ಲಾಲ್ ಬಾಗನ್ನೇ ಮುಡಿಸಲು ಹೊರಟಿದೆ! ಏಕೆಂದರೆ ಬಂಡವಾಳ ಹೂಡಿ ಎಂದು ಭಿಕ್ಷಾಟನೆ ಮಾಡುತ್ತಿರುವುದು ಕರ್ನಾಟಕ ಸರ್ಕಾರ. ಕರ್ನಾಟಕದ ತರಹವೇ ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ ಸರ್ಕಾರಗಳೂ ಭಿಕ್ಷಾ ಪಾತ್ರೆ ಎತ್ತಿಕೊಂಡು ಪ್ರಪಂಚ ಪರ್ಯಟನೆ ಮಾಡುತ್ತಿವೆ. ಯಾವ ರಾಜ್ಯದಲ್ಲಿ ಹೆಚ್ಚು ರಿಯಾಯತಿ, ಲಾಭ, ವಿನಾಯತಿ ಸಿಗುತ್ತದೋ ಅಲ್ಲಿ ಮಾತ್ರ ಆ ರಾಜ್ಯವನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಏಕೆಂದರೆ ಅವರು ನಮ್ಮನ್ನು ಕೇಳಿಕೊಂಡು ಬಂದಿಲ್ಲ. ನಾವು ಕೇಳಿಕೊಂಡು ಹೋಗುತ್ತಿದ್ದೇವೆ. ಹೀಗಾಗಿ ಅಡ್ವಾನ್ಸ್ ಕೊಟ್ಟರೆ ಮಾತ್ರ ನಮ್ಮ ರಾಜ್ಯ ಪ್ರವೇಶ ಎಂದರೆ ಯಾವ ಬಂಡವಾಳಿಗನೂ ಕರ್ನಾಟಕದಲ್ಲಿ ಕಾಲಿಡುವುದಿಲ್ಲ. ಕಂಪನಿಗಳು ಸರ್ಕಾರಕ್ಕೆ ಅಡ್ವಾನಾಗಿ ಹಣ ಕೊಡುವುದಿರಲಿ, ರಾಜ್ಯ ಸರ್ಕಾರವೇ ಈ ಕಂಪನಿಗಳಿಗೆ ತನ್ನ ಬೊಕ್ಕಸದಿಂದ ಹೇಗೆ ಬಂಡವಾಳವನ್ನು ಒದಗಿಸುತ್ತದೆ ಎಂಬುದನ್ನು ನಂತರ ನೋಡೋಣ! ಹೀಗಾಗಿ ಅಡ್ವಾನ್ಸಾಗಿ ಸಿಕ್ಕ ಹಣದಿಂದ ಈ ಸಮಾವೇಶ ನಡೆಯುತ್ತಿದೆ ಎಂಬುದು ಹಸಿಹಸಿ ಸುಳ್ಳು!

ಇದರಷ್ಟೇ ಹಸಿ ಸುಳ್ಳು ಈ ಸಮಾವೇಶದಲ್ಲಿ ಮೂರು ಲಕ್ಷ ಕೋಟಿ ರೂ ಬಂಡವಾಳ ಹರಿದುಬಂದು ಮೂರು ಲಕ್ಷ ಉದ್ಯೋಗಗಳು ದೊರೆಯುತ್ತವೆ ಎಂಬುದು. ಏಕೆಂದರೆ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರ ಕೈಗಾರಿಕಾ ಅಂಕಿಅಂಶ ಇಲಾಖೆಯು 2010ರ ಮಾರ್ಚ್‌ನಲ್ಲಿ ನೀಡಿರುವ ವರದಿಯ ಪ್ರಕಾರ 2000–2010ರ ನಡುವಿನ ಹತ್ತು ವರ್ಷಗಳಲ್ಲಿ ಒಟ್ಟಾರೆ ಭಾರತಕ್ಕೆ ಹರಿದು ಬಂದ ವಿದೇಶಿ ಬಂಡವಾಳದ ಮೊತ್ತವೇ ಕೇವಲ 4,68,000 ಕೋಟಿ ರೂಪಾಯಿಗಳು. ಅದರಲ್ಲಿ ಸಿಂಹಪಾಲು ಪಡೆದದ್ದು ಮುಂಬೈ ಪ್ರಾಂತ್ಯ. ಮೂಲಭೂತ ಸೌಕರ್ಯ, ರಸ್ತೆ, ಸಂಪರ್ಕ, ಮಾನವ ಸಂಪನ್ಮೂಲ ಇನ್ನಿತ್ಯಾದಿಗಳಲ್ಲಿ ಬಂಡವಾಳಿಗರ ಸ್ವರ್ಗವಾಗಿರುವ ಮುಂಬೈ ವಲಯಕ್ಕೆ ಕಳೆದ ಹತ್ತು ವರ್ಷಗಳಲ್ಲಿ ಹರಿದುಬಂದಿರುವ ವಿದೇಶಿ ಬಂಡ

(20ನೇ ಪುಟಕ್ಕೆ)

ಮಾಯಾವತಿಯವರ ರಾಜಕೀಯ ಮತ್ತು ನಮ್ಮ ಬುದ್ಧಿ ಜೀವಿಗಳು

ಎಸ್. ಮರಿಸ್ವಾಮಿ.

ಕುಮಾರಿ ಮಾಯಾವತಿಯವರು ಮತ್ತೆ ಸುದ್ದಿಯಲ್ಲಿದ್ದಾರೆ. ಬಹುಜನ ಸಮಾಜ ಪಕ್ಷದ 25ನೇ ಸಂಸ್ಥಾಪನಾ ದಿನಾಚರಣೆಯಲ್ಲಿ 5-15ಕೋಟಿ ರೂಪಾಯಿ ಬೆಲೆಬಾಳಬಹುದೆಂದು ಅಂದಾಜಿಸಿದ ನೋಟಿನ ಹಾರವನ್ನು ತಮ್ಮ ಕೊರಳಸುತ್ತ ಧರಿಸಿ ತಮ್ಮ ಅನನ್ಯತೆಯನ್ನು ಅವರು ಮೆರೆದಿದ್ದಾರೆ. ಅನೇಕ ನಾಯಕರು ಈ ರೀತಿಯ ಪ್ರದರ್ಶನವನ್ನು ಖಂಡಿಸಿದ್ದಾರೆ. ಮಾಧ್ಯಮಗಳು ಅವರ ಈ ನಡವಳಿಕೆಯನ್ನು ಕಟುವಾಗಿ ಟೀಕಿಸಿವೆ. ಮಾಯಾವತಿ ಮಾತ್ರ ಇದೆಲ್ಲಾ ಸಾಮಾನ್ಯ ಎಂಬಂತೆ, ಮಾಧ್ಯಮಗಳನ್ನು ಸರಿಯಾಗಿ ನೋಡಿಕೊಳ್ಳದ್ದರಿಂದ ಪ್ರತಿಕೂಲಕರ ಪ್ರಚಾರ ಉಂಟಾಯಿತೆಂದು ಕೆಲ ಅಧಿಕಾರಿಗಳನ್ನು ಸ್ಥಾನಪಲ್ಲಟ ಮಾಡಿದ್ದಾರೆ. ಅವರ ಹಿಂಬಾಲಕರು ಮುಂದೆ ಅವರಿಗೆ ನೋಟಿನ ಹಾರವನ್ನೇ ಅರ್ಪಿಸುವುದಾಗಿ ಶಪಥ ಮಾಡಿದ್ದಾರೆ. ಜೀವನ ಎಂದಿ ನಂತೆ ಮುಂದುವರೆದಿದೆ.

ವಿವಾದ ಮಾಯಾವತಿಯವರಿಗೇನು ಹೊಸತಲ್ಲ. ಒಂದು ರೀತಿಯಲ್ಲಿ ವಿವಾದ ಮತ್ತು ಮಾಯಾವತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇತ್ತೀಚೆಗಷ್ಟೆ ಕಾನ್ಷಿರಾಮ್ ಮತ್ತು ತಮ್ಮ ಪ್ರತಿಮೆಗಳ ನಿರ್ಮಾಣ, ಅಂಬೇಡ್ಕರ್ ಪಾರ್ಕಿನ ವಿಸ್ತರಣೆ ಇವುಗಳಿಗಾಗಿ 2600 ಕೋಟಿ ರೂಪಾಯಿ ಖರ್ಚುಮಾಡಿ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡು ಕೆಲಸನಿಲ್ಲಿಸಿದ್ದೂ ಆಗಿದೆ. ಇದಾವುದೂ ಅವರ ಸ್ಟೈಲ್‌ನಲ್ಲಿ ಕಿಂಚಿತ್ತೂ ಬದಲಾವಣೆ ಮಾಡಿಲ್ಲ. ವಿವಾದಗಳ ಮೂಲಕ ವಷ್ಟೆ ತಾನು ಜನಮನದಲ್ಲಿ ನಿಲ್ಲಬಹುದು ಎಂಬ ನಂಬಿಕೆ ಇದ್ದರೂ ಇರಬಹುದು.

ಮಾಯಾವತಿ ನಾಲ್ಕನೆ ಬಾರಿಗೆ ಉತ್ತರಪ್ರದೇಶದ ಮುಖ್ಯ



ಮಂತ್ರಿಯಾಗಿದ್ದಾರೆ. ಮೊದಲ ಮೂರು ಬಾರಿ ಅವರ ಆಳ್ವಿಕೆ ಸೀಮಿತ ಸಮಯದ್ದಾಗಿದ್ದರೂ, ಈ ಬಾರಿ ಐದು ವರ್ಷ ಪೂರೈಸುವುದರಲ್ಲಿ ಯಾವುದೇ ಸಂಶಯಗಳಿಲ್ಲ. ಅವರು ಗಟ್ಟಿಯಾಗೇ ಮುಖ್ಯಮಂತ್ರಿಯ ಕುರ್ಚಿಯಲ್ಲಿ ಕುಳಿತಿದ್ದಾರೆ. ಯಾವುದೇ ನೀತಿ ನಿಯಮ, ಕಾನೂನು ಕಟ್ಟಳೆ ಅವರಿಗೆ ಹಿಂದೆಯೂ ಅಡ್ಡ ಬಂದಿಲ್ಲ, ಈಗಲೂ ಇಲ್ಲ. ಹಾಗೆಯೇ ಯಾವ ಸಹೋದ್ಯೋಗಿಯೂ ಅವರ ಯಾವ ಕೆಲಸಕ್ಕೂ ಅಡ್ಡ ಬರುವ ಸಾಧ್ಯತೆಯೂ ಇಲ್ಲ. ಒಂದು ಅರ್ಥದಲ್ಲಿ ಅವರು ನಿರಂಕುಶಪ್ರಭು, ಕಿರೀಟಧಾರಿಯಲ್ಲದ ಸಾಮ್ರಾಜ್ಞೆ!

ಉತ್ತರಪ್ರದೇಶ ದೇಶ ಅತ್ಯಂತ ಹಿಂದುಳಿದ ರಾಜ್ಯಗಳಲ್ಲೊಂದು. ಅದರಲ್ಲೂ ದಲಿತರ ಸ್ಥಿತಿಗತಿ ಅಲ್ಲಿ ಅತ್ಯಂತ ಶೋಚನೀಯ. ಅಲ್ಲಿ ಸುಮಾರು 5.6 ಕೋಟಿ ಜನ ಬಡತನದ ರೇಖೆಗಿಂತ ಕೆಳಗಿದ್ದಾರೆ. ಇವರ ಶೇಕಡ 60ರಷ್ಟು ಜನ ದಲಿತರು. ಮಾನವ ಅಭಿವೃದ್ಧಿ ಸೂಚ್ಯಂಕದ ಎಲ್ಲಾ ಅಂಶಗಳಡಿಯಲ್ಲಿಯೂ ಉತ್ತರಪ್ರದೇಶ ಅತಿ ಹಿಂದುಳಿದ ರಾಜ್ಯಗಳ ಜತೆಯಲ್ಲಿದೆ ಅಥವಾ ಅತ್ಯಂತ ಹಿಂದುಳಿದುದಾಗಿದೆ. ವಿವಿಧ ಸೇನೆಗಳು ಜನರ ಬದುಕನ್ನು ನುಚ್ಚು ನೂರಾಗಿಸಿವೆ. ಮುಂದುವರೆದವರ ದಬ್ಬಾಳಿಕೆಗೆ ಸಿಕ್ಕಿ ದಲಿತರು ನಲುಗಿ ಹೋಗುತ್ತಿರುವ ರಾಜ್ಯಗಳಲ್ಲಿ ಅದೂ ಒಂದು. ಇಂತಹ ಸಂದರ್ಭದಲ್ಲಿ ದಲಿತರ ರಕ್ಷಣೆ ಮತ್ತು ಏಳಿಗೆಯ ಘೋಷಣೆಯೊಂದಿಗೆ, ಅವರ ಓಟನ್ನೇ ಅಡಿಪಾಯವಾಗಿಟ್ಟುಕೊಂಡು ಆರಿಸಿ ಬಂದ ಒಬ್ಬ ಮುಖ್ಯಮಂತ್ರಿ ಮಾಡಬಹುದಾದ್ದು ಮತ್ತು ಮಾಡಬೇಕಾದದ್ದು ಅಪಾರ. ಆದರೆ ಮಾಡಿದ್ದೆಷ್ಟು?

ತಮ್ಮ ವಿಶಿಷ್ಠ ರಾಜಕೀಯ ಪಟ್ಟುಗಳ ಮೂಲಕ ಚುನಾವಣೆಯಲ್ಲಿ ಜಯಿಸಿ ಇಡೀ ರಾಷ್ಟ್ರವನ್ನೇ ಬೆಕ್ಕಸಬೆರಗಾಗುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲಲೇಬೇಕು. ಆದರೆ ಇದರಿಂದ ತಳಸಮುದಾಯದವರಿಗೆ ಆದ ಉಪಯೋಗವೇನು? ಉತ್ತರಪ್ರದೇಶದ ಇತಿಹಾಸ ಬಲ್ಲ ಮತ್ತು ಸದಾ ಪ್ರಗತಿಪರ ಹೋರಾಟಗಳಲ್ಲಿ ಭಾಗಿಯಾಗುತ್ತಾ ಬಂದ, ಅಲ್ಲಿಯವರೇ ಆದ ಶರವಣರಾಮ್ ದಾರಾಪುರಿಯವರು ಹೇಳುವಂತೆ "ತಳಸಮುದಾಯದ ಜನ ಈಗ ನಿಜವಾಗಿಯೂ ನಿರ್ಗತಿಕರಾಗಿದ್ದಾರೆ. ಮಾಯಾವತಿಯವರಿಗೆ ಹಣ ಕೊಟ್ಟು ಟಿಕೇಟ್ ಪಡೆದ ಶಾಸಕರಾರೂ ಈ ಸಮುದಾಯದವರನ್ನು ಹತ್ತಿರಸೇರಿಸುತ್ತಿಲ್ಲ. ಅವರ ಮೇಲೆ ಏನೇ ಪ್ರಕರಣ ನಡೆಯಲಿ ಯಾರೂ ಆ ಬಗ್ಗೆ ಚಿಂತಿಸುವುದಿಲ್ಲ. ನಿಜವಾಗಿಯೂ ಇದೊಂದು ಆಘಾತಕಾರಿ ಬೆಳವಣಿಗೆ."

ಇತ್ತೀಚೆಗೆ ವಿಜಯ ಕರ್ನಾಟಕ ಪತ್ರಿಕೆ ನೋಟಿನ ಮಾಲೆಯ ಪ್ರಕರಣದ ಬಗ್ಗೆ ಒಂದು ಲೇಖನ ಪ್ರಕಟಿಸಿ ಅದಕ್ಕೆ ಪ್ರತಿಕ್ರಿಯೆ ನೀಡಲು ಇಬ್ಬರು ದಲಿತ ಬುದ್ಧಿಜೀವಿಗಳನ್ನು ಕೇಳಿತ್ತು. ವಿಜಯ ಕರ್ನಾಟಕ ಪತ್ರಿಕೆಯ ಒಲವು ನಿಲುವುಗಳ ಬಗ್ಗೆ ಇಲ್ಲಿ ಚರ್ಚಿಸುವುದು ಅಪ್ರಸ್ತುತ. ಆದರೆ ಈ ಬುದ್ಧಿ ಜೀವಿಗಳು ಮಾಯಾವತಿಯವರ ನಡತೆಯನ್ನು ಪುಷ್ಠೀಕರಿಸಿಕೊಂಡದ್ದು ಮಾತ್ರ ವಿಶೇಷ. ಒಬ್ಬರೆಂದರು ಮಾಯಾವತಿಯವರು ನೋಟಿನ ಹಾರ ಹಾಕಿಸಿಕೊಂಡದ್ದು ಒಂದು ರೀತಿಯ ಪ್ರತಿಭಟನೆ. ಆದುದರಿಂದ ಅದರಲ್ಲೇನೂ ತಪ್ಪಿಲ್ಲ. ಮೇಲ್ವರ್ಗದ ಅನೇಕ ನಾಯಕರು ತುಲಾಭಾರ ಮಾಡಿಸಿಕೊಳ್ಳುವುದಿಲ್ಲವೇ? ಹಾಗೇ ಇದು ಕೂಡ. ಇದರಲ್ಲಿ ವಿಶೇಷವೇನೂ ಇಲ್ಲ ಎಂದರು ಮತ್ತೊಬ್ಬರು. ಇವೆರಡೂ ಹೇಳಿಕೆಗಳನ್ನು ಸ್ವಲ್ಪ ಹಿಗ್ಗಲಿಸಿ ಹೇಳುವುದಾದರೆ ಮಾಯಾವತಿಯವರು ಯಾರೂ ಮಾಡದಿದ್ದ ತಪ್ಪನ್ನೇನು ಮಾಡಿಲ್ಲ. ನೀವು ಮಾಡಿದ್ದನ್ನು ನಾವೂ ಮಾಡಬಲ್ಲೆವು ಎಂದು ತೋರಿಸಲಿಕ್ಕಷ್ಟೆ ಅವರು ನೋಟಿನಹಾರ ಹಾಕಿಸಿಕೊಂಡದ್ದು ಎಂದು ಅರ್ಥೈಸಬಹುದು.

ಬೇರೆಯಾರೂ ಮಾಡಿಲ್ಲವೇ? ನಮ್ಮನ್ನೇ ಏಕೆ ದೂಷಿಸುತ್ತಾರೆ?

ಮಾಯಾವತಿ ನಾಲ್ಕನೆ ಬಾರಿಗೆ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದಾರೆ. ಮೊದಲ ಮೂರು ಬಾರಿ ಅವರ ಆಳ್ವಿಕೆ ಸೀಮಿತ ಸಮಯದ್ದಾಗಿದ್ದರೂ, ಈ ಬಾರಿ ಐದು ವರ್ಷ ಪೂರೈಸುವುದರಲ್ಲಿ ಯಾವುದೇ ಸಂಶಯಗಳಿಲ್ಲ. ಅವರು ಗಟ್ಟಿಯಾಗೇ ಮುಖ್ಯಮಂತ್ರಿಯ ಕುರ್ಚಿಯಲ್ಲಿ ಕುಳಿತಿದ್ದಾರೆ. ಯಾವುದೇ ನೀತಿ ನಿಯಮ, ಕಾನೂನು ಕಟ್ಟಳೆ ಅವರಿಗೆ ಹಿಂದೆಯೂ ಅಡ್ಡ ಬಂದಿಲ್ಲ, ಈಗಲೂ ಇಲ್ಲ. ಹಾಗೆಯೇ ಯಾವ ಸಹೋದ್ಯೋಗಿಯೂ ಅವರ ಯಾವ ಕೆಲಸಕ್ಕೂ ಅಡ್ಡ ಬರುವ ಸಾಧ್ಯತೆಯೂ ಇಲ್ಲ. ಒಂದು ಅರ್ಥದಲ್ಲಿ ಅವರು ನಿರಂಕುಶಪ್ರಭು, ಕಿರೀಟಧಾರಿಯಲ್ಲದ ಸಾಮ್ರಾಜ್ಞೆ! ಉತ್ತರ ಪ್ರದೇಶ ದೇಶದ ಅತ್ಯಂತ ಹಿಂದುಳಿದ ರಾಜ್ಯಗಳಲ್ಲೊಂದು. ಅದರಲ್ಲೂ ದಲಿತರ ಸ್ಥಿತಿಗತಿ ಅಲ್ಲಿ ಅತ್ಯಂತ ಶೋಚನೀಯ.

ಎಂಬ ಗೊಂದಲಬೆರೆತ ದೂರನ್ನು ಅನೇಕ ಸಂದರ್ಭಗಳಲ್ಲಿ ನಾವು ಕೇಳುತ್ತೇವೆ. ಇದರಲ್ಲಿ ತಕ್ಕ ಮಟ್ಟಿನ ಸತ್ಯವೂ ಇದೆ. ತಾರತಮ್ಯ ನಮ್ಮ ಸಮಾಜದಲ್ಲಿ ಮನೆ ಮಾಡಿ ಕೊಂಡಿದೆ. ಆದರೂ ಯಾರಾದರೂ ಮಾಡಿದ್ದಲ್ಲಿ ತಾವೂ ಮಾಡಬಹುದು ಎನ್ನುವುದೇ ಒಂದು ಅಳತೆ ಗೋಲಾದಲ್ಲಿ ಏನನ್ನಾದರೂ ಸಮರ್ಥಿಸಿಕೊಳ್ಳಬಹುದು. ಯಾಕೆಂದರೆ ಜಗತ್ತು ಕಾಣದ ನಡವಳಿಕೆಗಳೆ ಇಲ್ಲ. ಎಲ್ಲಾ ರೀತಿಯ ಒಳಿತು ಕೆಟ್ಟದ್ದನ್ನೂ ಅದು ಕಂಡಿದೆ. ಹಾಗೆ ನೋಡಿದರೆ ಯಾವುದೇ ಕೆಲಸದಲ್ಲಿ ಹೊಸತೇನೂ ಇಲ್ಲ. ಆದ್ದರಿಂದ ಬೇರೆ ಯಾರೂ ಮಾಡಿಲ್ಲವೆ ಎನ್ನುವುದರಿಂದ ಕೊಲೆ, ಸುಲಿಗೆಯನ್ನೊಳಗೊಂಡು ಏನನ್ನಾದರೂ ಪುಷ್ಟೀಕರಿಸಿ ಕೊಳ್ಳಲಿಕ್ಕೆ ಸಾಧ್ಯ. ಇದು ಪ್ರತಿಭಟನೆ ಅಲ್ಲ. ಇದು ಯಾರನ್ನೂ ಬದಲಾಗುವಂತೆ ಪ್ರೇರೇಪಿಸಲಾರದು. ತಾರತಮ್ಯವೇ ಜೀವನವಾಗಿರುವ ನಮ್ಮ ಹಿನ್ನಲೆಯಲ್ಲಿ ಮತ್ತಷ್ಟು ತಾರತಮ್ಯಕ್ಕೆ ಇದು ಎಡೆಮಾಡಿಕೊಡಬಹುದು.

ಯಾರೇ ಮುಖ್ಯಮಂತ್ರಿಯಾಗಲಿ ಅವರೂ ಲಂಚ ಕೋರರಿರುತ್ತಾರೆ. ಸ್ವಜನ ಪಕ್ಷಪಾತಿಗಳೂ ಆಗಿರುತ್ತಾರೆ. ಸಾಮಾನ್ಯ ಜನರ ಬಗ್ಗೆ ಯಾರೂ ಯೋಚಿಸುವುದಿಲ್ಲ. ಹೀಗಿರುವಾಗ ಎಲ್ಲಾ ಅಡೆತಡೆಗಳ ನಡುವೆ ನಮ್ಮವರೊಬ್ಬರು ಗೆದ್ದು ಬಂದಿದ್ದಾರೆ. ಅವರದೇನೇ ಕುಂದು ಕೊರತೆ ಇರಲಿ ಅವರನ್ನು ಬೆಂಬಲಿಸಬೇಕು. ಇದು ಬಹುಶ: ನಮ್ಮ ಬುದ್ಧಿಜೀವಿಗಳ ಚಿಂತನೆಯದಾಟಿ ಇರಬಹುದು. ಅನೇಕ ಅಧಿಕಾರ ಹಿಡಿದ ಲಫಂಗರನ್ನು ಆಯಾ ಜಾತಿಯ ಜನ ಇದೇ ರೀತಿ ಬೆಂಬಲಿಸಿರುವುದನ್ನು ನಾವು ಅನೇಕ ವೇಳೆ ಕಾಣುತ್ತೇವೆ. ಆದುದರಿಂದ ಬಹುಶ: ನಮ್ಮ ಬುದ್ಧಿ ಜೀವಿಗಳು ಸಹ ಈ ರೀತಿ ಯೋಚಿಸಿರಲೂ ಸಾಕು.

ಆದರೂ ಇಂತಹ ನಡವಳಿಕೆಯ ಇನ್ನೊಂದು ಪರಿಣಾಮವನ್ನು ಸಹ ನಾವು ಗ್ರಹಿಸಬೇಕು. ಇಂತಹ ಸ್ವವೈಭವೀಕರಣವನ್ನು, ನಿರಂಕುಶ ನಡವಳಿಕೆಯನ್ನು ಎಲ್ಲಾ ಮುಖ್ಯಮಂತ್ರಿಗಳೂ ಮೈಗೂಡಿಸಿಕೊಂಡರೆ ನಾವು ಎಲ್ಲಿ ತಲುಪ ಬಹುದೆಂಬುದನ್ನೂ ಯೋಚಿಸಬೇಕು. ಇದೇನು ಊಹಾ ಪೋಹದ ಮಾತಲ್ಲ. ಇಂತಹ ನಡವಳಿಕೆಯನ್ನು ಈಗಲೂ ನಾವು ಅಲ್ಲಲ್ಲಿ ಕಾಣಬಹುದು. ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪನವರನ್ನೇ ನೋಡಿ. ತಮ್ಮ ಜಾತಿಯ ಮಠಾಧೀಶರುಗಳನ್ನು ಅವರು ಓಲೈಸುವ ಪರಿ ಮೆಚ್ಚುವಂತ ಹದು. ತಮ್ಮ ಜಾತಿಯ ಮಠಗಳಿಗೆ ನೂರಾರುಕೋಟಿ ನೀಡಿದ್ದಾರೆ. ಇತರ ಜಾತಿ ಸಂಸ್ಥೆಗಳಿಗೂ ಅಲ್ಲೊಂದು ಇಲ್ಲೊಂದು ಎಂಬಂತೆ ಹಣನೀಡಿ ಅವರ ಸದ್ದಡಗಿಸಿದ್ದಾರೆ. ಇದಾವುದಕ್ಕೂ ಸಮಾನವಾದ ನೀತಿ ನಿಯಮಗಳಿಲ್ಲ. ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆ. ಏನೂ ಮಾಡಲೂ ಆಗುತ್ತಿಲ್ಲ ಎಂದು ಸಾರ್ವಜನಿಕವಾಗಿ ಗೋಳಾಡಬಲ್ಲರು. ಒಳಗೇ ಹಾಗೆಆಗಲು ಸಹಾಯ ಮಾಡಬಲ್ಲರು. ಬಹಿರಂಗವಾದಾಗ ಕಣ್ಣೀರು ಹಾಕಿ ತಪ್ಪು ಕೇಳಬಲ್ಲರು. ಮತ್ತೆ ಅಂತಹುದೇ ಅನೇಕ ತಪ್ಪನ್ನು ಎಸಗಲೂ ಬಲ್ಲರು. ನೂರಾರು ಎಕರೆ ಜಮೀನನ್ನು ಕದ್ದು ಮುಚ್ಚಿ ನೈಸ್‌ನಂತಹಸಂಸ್ಥೆ ನೀಡಬಲ್ಲರು. ಸಾವಿರ ಕೋಟಿ ಲಾಭ ತರುವ ಒಂದು ಲೈಸೆನ್ಸ್ ನೀಡಲು ಎಲ್ಲಾ ನಿಯಮಗಳೂ ಉಲ್ಲಂಘನೆಯಾಗುತ್ತವೆ. ಬಡವರಿಗೆ ಹತ್ತಿಪ್ಪತ್ತು ಸಾವಿರ ನೀಡಬೇಕಾದರೆ ಎಲ್ಲಾ ನಿಯಮಗಳೂ ಅಡ್ಡ ಬರಬಲ್ಲುವು. ಸರ್ಕಾರದ ಆಶಯಗಳು ಉಳ್ಳವರ ಪರ ಬದಲಾಗಿರುವುದನ್ನು ಇತ್ತೀಚೆಗೆ ನಾವು ಕಾಣುತ್ತೇವೆ. ಇದನ್ನೆಲ್ಲಾ ಹೇಳುತ್ತಿರುವ ಉದ್ದೇಶ ಅನೇಕ ರಾಜ್ಯಗಳು ಈ 60

ಕೇಂದ್ರ ಸರ್ಕಾರ ಯಾವುದೇ ಪ್ರಗತಿಪರ ಕ್ರಮ ಕೈಗೊಳ್ಳಲಿ ಅದಕ್ಕೆ ಹಣವಿಲ್ಲ, ಉತ್ತರ ಪ್ರದೇಶ ಸರ್ಕಾರ ಜಾರಿಮಾಡುವುದಿಲ್ಲ, ಎಂದೆಲ್ಲಾ ಕ್ಯಾತೆ ತೆಗೆಯುವ ಮಾಯಾವತಿಯವರ ದುಂದು ವೆಚ್ಚಕ್ಕೆ ಯಾವುದೇ ಎಲ್ಲೆಗಳಿಲ್ಲ. ಮಾಯಾವತಿಯವರ ಸ್ವವೈಭವೀಕರಣ ಅಂಬೇಡ್ಕರ್ ಅವರ ಎಲ್ಲಾ ಆಶಯಗಳನ್ನು ದೂಳಿಪಟ ಮಾಡಿದೆ. ಬಡವರ, ನಿರ್ಲಕ್ಷಿತರ ದುರ್ಬರ ಜೀವನವನ್ನು ಸುದಾರಿಸುವತ್ತ ವ್ಯಯವಾಗಬೇಕಿದ್ದ ಹಣ ಸ್ಮಾರಕಗಳ ನಿರ್ಮಾಣಕ್ಕೆ ವ್ಯಯವಾಗಿದೆ. ಸ್ಮಾರಕಗಳನ್ನು ನಿರ್ಮಾಣ ಮಾಡುವ ಉದ್ದೇಶ ವಿದ್ದರೆ ಸರಳವೂ, ಸುಂದರವೂ ಆದ ಸ್ಮಾರಕಗಳನ್ನು ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದಿತ್ತು.ಮಾಯಾವತಿಯವರು ಈ ಸ್ಮಾರಕಗಳು ಮುಂದೆ ಯಾತ್ರಾಸ್ಥಳಗಳಾಗುವ ಮಾತನಾಡಿದ್ದಾರೆ.

ವರ್ಷಗಳಲ್ಲಿ ರಾಜ್ಯಾಂಗದ ಆಶಯಗಳನ್ನು ಧಿಕ್ಕರಿಸಿ ಕಾರ್ಯ ನಿರ್ವಹಿಸುವುದನ್ನೇ ಒಂದು ಪರಿಪಾಠ ಮಾಡಿ ಕೊಂಡಿವೆ. ಆದುದರಿಂದ ಮಾಯಾವತಿಯವರು ಇಂತಹ ಕಾರ್ಯ ಎಸಗಲಿ, ಇತರರು ಎಸಗಲಿ ಪರಿಣಾಮ ಮಾತ್ರ ಈ ದೇಶದ ಬಡವರು ಮತ್ತು ನಿರ್ಗತಿಕರ ಮೇಲೆ ಮಾತ್ರ ಎನ್ನುವುದನ್ನು ನಾವು ಸದಾ ನೆನಪಿ ನಲ್ಲಿಡಬೇಕು.

ಇಲ್ಲಿ ಬಾಬಾ ಸಾಹೇಬ್ ಅಂಬೇಡ್ಕರರ ಹೋರಾಟವನ್ನು ನೆನಪಿಸಿಕೊಳ್ಳುವುದು ಉಪಯುಕ್ತ. ಬಾಬಾ ಸಾಹೇಬರ ಹೋರಾಟ ಸಂಪೂರ್ಣವಾಗಿ ಈ ದೇಶದಲ್ಲಿ ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ತರುವ ಕಡೆ ಇತ್ತು ಎಂಬುದು ಎಲ್ಲರಿಗೂ ತಿಳಿದ ವಿಚಾರ. ಇತಿಹಾಸದ ಪೂರ್ಣ ಪರಿಚಯವಿದ್ದ ಅವರು ಅಧಿಕಾರ ಹಿಡಿದವರು ಆಡಳಿತವನ್ನು ತಮ್ಮ ಪರವಾಗಿ ಹೇಗೆ ತಿರುಚಬಲ್ಲರು ಎಂಬುದನ್ನು ತಿಳಿದಿದ್ದರು. ಗಾಂಧೀಜಿ ಕೇವಲ ಆದರ್ಶಗಳನ್ನು ಮಾತಾಡಿದರೆ, ಒಂದು ಆದರ್ಶ ವ್ಯವಸ್ಥೆಯನ್ನು ಕಟ್ಟುವ ಕಡೆ ತಮ್ಮನ್ನು ಸಂಪೂರ್ಣವಾಗಿ ಅವರು ತೊಡಗಿಸಿಕೊಂಡರು. ಕಾನೂನಿನಡಿಯಲ್ಲಿ ಎಲ್ಲರ ಸಮಾನತೆ, ಹಾಗೂ ಕಾನೂನಿನ ಸಮಾನ ರಕ್ಷಣೆ; ಅತಿರೇಕಗಳನ್ನು ತಡೆಯಲು ಅವಶ್ಯವಾದ ಅಡೆತಡೆಗಳು ಇವುಗಳನ್ನು ವ್ಯವಸ್ಥೀಕರಿಸಿದರು. ನ್ಯಾಯ ಎಲ್ಲಾ ವರ್ಗಗಳಿಗೆ ದಕ್ಕುವಂತೆ ಮಾಡಿದರು. ರಾಜಕೀಯ ಸಮಾನತೆ, ಸಾಮಾಜಿಕ ಸಮಾನತೆಯಾಗಿ ಪರಿವರ್ತನೆಯಾಗಬೇಕು ಎಂದು ಕರೆ ನೀಡಿದರು. ವ್ಯಕ್ತಿ ಪೂಜೆಯನ್ನೆಂದೂ ಅವರು ಸಹಿಸಲಿಲ್ಲ. ವ್ಯಕ್ತಿ ಪೂಜೆ ಮಾಡದಂತೆ ಎಚ್ಚರಿಸುತ್ತಾ ಬಂದರು. ವ್ಯಕ್ತಿ ಪೂಜೆಯನ್ನು ಪ್ರೋತ್ಸಾಹಿಸುತ್ತಾರೆಂಬ ಕಾರಣಕ್ಕಾಗಿ ಗಾಂಧೀಜಿಯವರನ್ನು ಕಟುವಾಗಿ ಟೀಕಿಸಿದರು. ಸಾರ್ವಜನಿಕ ಹಣಕಾಸನ್ನು ಅತ್ಯಂತ ನಿಷ್ಠುರತೆಯಿಂದ ನಿರ್ವಹಿಸಿದರು. ತಾವು ಸಂಗ್ರಹಿಸಿದ ಚಿಕ್ಕಾಸನ್ನೂ ತಳಸಮುದಾಯಗಳ ಏಳಿಗೆಗೆ ಸಂಸ್ಥೆಗಳನ್ನು ಕಟ್ಟುವತ್ತ ಉಪಯೋಗಿಸಿದರು.

ಕೇಂದ್ರ ಸರ್ಕಾರ ಯಾವುದೇ ಪ್ರಗತಿಪರ ಕ್ರಮ ಕೈಗೊಳ್ಳಲಿ ಅದಕ್ಕೆ ಹಣವಿಲ್ಲ, ಉತ್ತರಪ್ರದೇಶ ಸರ್ಕಾರ ಜಾರಿಮಾಡುವುದಿಲ್ಲ, ಎಂದೆಲ್ಲಾ ಕ್ಯಾತೆ ತೆಗೆಯುವ ಮಾಯಾವತಿಯವರ ದುಂದುವೆಚ್ಚಕ್ಕೆ ಯಾವುದೇ ಎಲ್ಲೆಗಳಿಲ್ಲ. ಮಾಯಾವತಿಯವರ ಸ್ವವೈಭವೀಕರಣ ಅಂಬೇಡ್ಕರ್ ಅವರ ಎಲ್ಲಾ ಆಶಯಗಳನ್ನು ದೂಳಿಪಟ ಮಾಡಿದೆ. ಬಡವರ, ನಿರ್ಲಕ್ಷಿತರ ದುರ್ಬರ ಜೀವನವನ್ನು ಸುಧಾರಿಸುವತ್ತ ವ್ಯಯವಾಗಬೇಕಿದ್ದ ಹಣ ಸ್ಮಾರಕಗಳ ನಿರ್ಮಾಣಕ್ಕೆ ವ್ಯಯವಾಗಿದೆ. ಸ್ಮಾರಕಗಳನ್ನು ನಿರ್ಮಾಣ ಮಾಡುವ ಉದ್ದೇಶವಿದ್ದರೆ ಸರಳವೂ, ಸುಂದರವೂ ಆದ ಸ್ಮಾರಕಗಳನ್ನು ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದಿತ್ತು. ಮಾಯಾವತಿಯವರು ಈ ಸ್ಮಾರಕಗಳು ಮುಂದೆ ಯಾತ್ರಾ ಸ್ಥಳಗಳಾಗುವ ಮಾತನಾಡಿದ್ದಾರೆ. ಇವು ಮಾಯಾವತಿಯವರನ್ನು ತಾಜ್ ಮಹಲ್ ಕಟ್ಟಿದ ಶಹಜಾನನ ಹಾಗೆ ಅಮರ ಮಾಡಲೂಬಹುದು. ಸಮುದಾಯಗಳಿಗೆ ಇದರಿಂದ ಆಗುವ ಉಪಯೋಗವೇನೂ ಇಲ್ಲ.

ಮಾಯಾವತಿಯವರ ಬೆಂಬಲಿಗರು ಅವರನ್ನು ಸಮರ್ಥಿಸಿಕೊಳ್ಳಲು ವಿವಿಧ ವಾದಗಳನ್ನು ಮಂಡಿಸಿದ್ದಾರೆ. ಒಬ್ಬರು "ಎಲ್ಲಾ ಸ್ಮಾರಕಗಳೂ ಸಾರ್ವಜನಿಕ ಹಣದಿಂದಲೇ ನಿರ್ಮಾಣವಾದುವು, ಅವೆಲ್ಲಾ ಖಾಸಗಿ ಸ್ಮಾರಕಗಳೇ ಎಂದಿದ್ದಾರೆ ಮತ್ತು ಪಿರಮಿಡ್‌ಗಳಿಂದ ಹಿಡಿದು ಅನೇಕ ಹಳೆಯ ಹೊಸ ಸ್ಮಾರಕಗಳನ್ನು ಸ್ಮರಿಸಿದ್ದಾರೆ. ಇದು ನಿಜವೇ ಇರಬಹುದು. ಆದರೆ ಅವರು ಮರೆತಿರುವ ಒಂದು ಮಾತಿದೆ. ಪಿರಮಿಡ್ ನಿರ್ಮಿಸಿದವರು, ತಾಜ್ ಮಹಲ್ ಕಟ್ಟಿದವರು ರಾಜ ಮಹಾರಾಜರಾಗಿದ್ದರು. ರಾಜ ದೇವರ ರೂಪ, ಎಲ್ಲಾ ಹಿಂಸೆ ನಮ್ಮ ಕರ್ಮ ಫಲದಿಂದ ಬಂದಿದೆ ಎಂದು ನಂಬಿದ್ದ ಕಾಲ ಅದು. ಆ ಸ್ಮಾರಕಗಳೂ ಹಿಂಸೆ- ಜನರ ರಕ್ತದ ಮಡುವಿನ ಮೇಲೆಯೇ ಕಟ್ಟಿದಂತ ಹವುಗಳು ಎನ್ನುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಆದರೆ ಇಂದು ಕಾಲ ಬದಲಾಗಿದೆ. ಮನುಷ್ಯರ ಸಮಾನತೆಯಲ್ಲಿ ನಂಬಿಕೆ ಇದೆ. ಪ್ರತಿ ಐದು ವರ್ಷಗಳಿಗೊಮ್ಮೆ ಜನರ ಮುಂದೆ ನನ್ನನ್ನು ಆರಿಸಿ ಎಂದು ಕೈಜೋಡಿಸಿ ನಿಲ್ಲಬೇಕಾದ ಪರಿಸ್ಥಿತಿ ಇವೆಲ್ಲವೂ ಎಲ್ಲರ ಮುಂದಿರುವಂತೆ ಮಾಯಾವತಿಯವರ ಮುಂದೆಯೂ ಇವೆ. ಜನರ ಭಾವನಾತ್ಮಕತೆಯನ್ನು ಉಪಯೋಗಿಸಿಕೊಂಡು ಯಾವಾಗಲೂ ಜಯಿಸಬಹುದೆಂದು ಲೆಕ್ಕವಿರಬಹುದು ಮಾಯಾವತಿಯವರದು. ಈ ಲೆಕ್ಕ ತಪ್ಪಲೂಬಹುದು. ನಿತ್ಯ ಜೀವನದ ಯಾವ ಜಂಜಾಟವೂ ಇಲ್ಲದೆ ಕ್ರಿಕೆಟ್ ಎಸೆತಗಳು, ಅವು ತರುವ ರನ್‌ಗಳು ಮತ್ತು ಉರುಳುವ ವಿಕೆಟ್ಗಳನ್ನೇ ಎವೆಇಕ್ಕದೆ ನೋಡಿ ಹಿರಿಹಿರಿ ಹಿಗ್ಗುವ ಕ್ರಿಕೆಟ್ ಫ್ಯಾನ್‌ಗಳ ಹಾಗೆ, ಸರ್ವ ರೀತಿಯಿಂದಲೂ ಸಂತೃಪ್ತರಾದ ಬುದ್ಧಿಜೀವಿಗಳು ಮಾಯಾವತಿಯವರ ರಾಜಕೀಯ ದೊಂಬರಾಟದಿಂದ ಉದ್ದೀಪನಗೊಂಡು ಇತರರಿಗೆ ಬುದ್ಧಿ ಕಲಿಸುತ್ತೇವೆಂದು ಕೊಂಡಲ್ಲಿ ಬಹುಶ: ಅವರು ಎಲ್ಲಿಲ್ಲದ ತಪ್ಪು ಮಾಡುತ್ತಾರೆ. ಒಂದು ಪ್ರಜಾಸತ್ತಾತ್ಮಕ ಸರ್ಕಾರದ ಸರಿ ತಪ್ಪುಗಳನ್ನು, ಅದರ ಕಾರ್ಯವೈಖರಿ ಸಾಮಾನ್ಯ ಮನುಷ್ಯನ ಜೀವನದಲ್ಲಿ ಏಳಿಗೆ ತಂದಿದೆಯೇ ಎಂಬ ಅಳತೆಗೋಲಲ್ಲಿ ಅಳೆಯಲಾಗದಿದ್ದಲ್ಲಿ ನಮ್ಮೆಲ್ಲಾ ಬುದ್ಧಿವಂತಿಕೆ ಸೋತಂತೆ. ಉಳಿದೆಲ್ಲವೂ ನಗಣ್ಯ.

□

ಬೆಂಗಳೂರು ವಿಶ್ವವಿದ್ಯಾಲಯವೆಂಬ ಗುಜರಿ ಅಂಗಡಿ

ಕೆ.ಎಲ್. ಚಂದ್ರಶೇಖರ್ ಐಜೂರ್

ಇದು ಬೆಂಗಳೂರು ವಿಶ್ವವಿದ್ಯಾಲಯದ ಅಂಚೆ ತೆರಪು ಮತ್ತು ದೂರಶಿಕ್ಷಣ ನಿರ್ದೇಶನಾಲಯ ತಲುಪಿರುವ ರಸಾತಳವೋ ಅಥವಾ ಇಲ್ಲಿಗೆ ಕಲಿಯಲು ಬರುವ ವಿದ್ಯಾರ್ಥಿಗಳ ದೌರ್ಭಾಗ್ಯವೋ ಗೊತ್ತಾಗುತ್ತಿಲ್ಲ. ಶಿಕ್ಷಣದ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಗುಜರಿ ಅಂಗಡಿ ತೋರಿಸುವ ಎಲ್ಲ ಕೆಲಸಗಳನ್ನು ಎಗ್ಗಿಲ್ಲದೆ ದೂರಶಿಕ್ಷಣ ನಿರ್ದೇಶನಾಲಯವು ಮಾಡುತ್ತಿದೆ. ಮನೆಯ ಬಡತನದ ಕಾರಣದಿಂದ ಅನೇಕರು ಕೆಲಸಮಾಡಿ ಕೊಂಡು ರಾತ್ರಿ ಪಾಳಿಗಳಲ್ಲಿ, ದೂರಶಿಕ್ಷಣ ಕೇಂದ್ರಗಳಲ್ಲಿ ಬಾಹ್ಯ ವಿದ್ಯಾರ್ಥಿಗಳಾಗಿ ಓದುವುದು ಸಹಜ.

ಕರ್ನಾಟಕದ ಅನೇಕ ವಿಶ್ವವಿದ್ಯಾಲಯಗಳು ಸಂಜೆ ಕಾಲೇಜುಗಳನ್ನು ರದ್ದುಮಾಡಿದ ಮೇಲೆ ಎಸ್ಸೆಸ್ಸೆಲ್ಸಿ, ಪಿಯುಸಿ ಪಾಸಾದ ಅನೇಕರು ಅನಿವಾರ್ಯವಾಗಿ ದೂರಶಿಕ್ಷಣ ಕೇಂದ್ರಗಳ ಮೊರೆ ಹೋಗಬೇಕಾಯಿತು. ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ದವರು ಕಳೆದ ವರ್ಷ ನೀಡಿದ ಮಾಹಿತಿಯ ಪ್ರಕಾರ ಇಂಡಿಯಾದ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಶೇಕಡ 70ರಷ್ಟು ವಿದ್ಯಾರ್ಥಿಗಳು ಅಂಚೆ ತೆರಪು, ಮುಕ್ತ ವಿಶ್ವವಿದ್ಯಾಲಯ – ಬಾಹ್ಯ ಯೋಜನೆ ವಿದ್ಯಾರ್ಥಿಗಳಾಗಿ ಪದವಿಗಳನ್ನು ಪಡೆಯುತ್ತಿದ್ದಾರೆ. ಮನೆಯಲ್ಲಿನ ಕಡುಬಡತನ, ವಯಸ್ಸಿನ ಕಾರಣಗಳು ಮತ್ತು ತಾವು ಬಯಸಿರುವ ಪದವಿ ಪಡೆಯಲು ಅಗತ್ಯ ಅಂಕಗಳಿಲ್ಲದ ಅನೇಕರು ಕೆಲಸಮಾಡಿ ಕೊಂಡು ವಿಶ್ವವಿದ್ಯಾಲಯಗಳ ದೂರಶಿಕ್ಷಣ ಕೇಂದ್ರಗಳಲ್ಲಿ ಓದುವುದು ಎಲ್ಲರಿಗೂ ಗೊತ್ತಿರುವಂಥದ್ದೇ. ಹೀಗೆ ಓದಲು ಬರುವ ವಿದ್ಯಾರ್ಥಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುವ ಸಂದರ್ಭದಲ್ಲಿಯೇ ನರಕ ದರ್ಶನವಾಗುತ್ತದೆ.

ಕಡಿಮೆ ಸಂಖ್ಯೆಯಲ್ಲಿರುವ ಹಾಗೂ ಸರಿಯಾದ ತರಬೇತಿ ಇಲ್ಲದ ಇಲ್ಲಿನ ಸಿಬ್ಬಂದಿಗಳು ದೂರದಿಂದ ದಣಿದು ಬರುವ ವಿದ್ಯಾರ್ಥಿಗಳಿಗೆ ತೀರಾ ಅಗತ್ಯವಿರುವ ಮಾಹಿತಿಗಳನ್ನು ನೀಡುವ ಬದಲು ಪೊಲೀಸ್ ಪೇದೆಗಳಂತೆ ಗದರಿ ದೂರವಿಡುತ್ತಾರೆ. ಇನ್ನು ಇಲ್ಲಿ ಮಾಹಿತಿ ಪಡೆಯಲು ಬೆಂಗಳೂರು ವಿಶ್ವವಿದ್ಯಾಲಯ ನೀಡಿರುವ ಪರಿಚಯ ಕೈಪಿಡಿಯಲ್ಲಿ ಕೊಟ್ಟಿರುವ ದೂರವಾಣಿ ಸಂಖ್ಯೆ (080–229 61264, 66, 67; 61, 62)ಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರೆ ವರ್ಷದ 365 ದಿನಗಳು ಅವು ರಿಪೇರಿಯೇ ಮಾಡಲಿಕ್ಕಾಗದಷ್ಟು ದುರಸ್ತಿಯಲ್ಲಿರುತ್ತವೆ. ಈ ದೂರವಾಣಿ ಸಂಖ್ಯೆಗಳನ್ನು ನಂಬಿಕೊಂಡು ಯಾರಾದರೂ ಇಲ್ಲಿ ಪದವಿ ಪಡೆಯುವ ಆಸೆಗಳನ್ನು ಇಟ್ಟುಕೊಂಡಿದ್ದರೆ, ಅವರು ಪದವಿ ಪಡೆಯುವ ಮುನ್ನವೇ ಮುದುಕರಾಗಿಬಿಡಬಹುದು. ಸದಾ ಸಂಪರ್ಕದಲ್ಲಿ ಸಿಗದ ಈ ಫೋನ್‌ಗಳಿಗೆ ಡಯಲ್ ಮಾಡುವ ಆಸೆಬಿಟ್ಟು ದೂರದ ಊರುಗಳಿಂದ ನೂರಾರುರೂಪಾಯಿ ಬಸ್‌ಚಾರ್ಜ್ ತೆತ್ತು ಬರುವ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಬದಲು ನಾಳೆಯೋ ಮುಂದಿನ ವಾರವೋ ಬರುವಂತೆ ಯಾವುದೇ ಮುಲಾಜಿಲ್ಲದೆ ಇಲ್ಲಿನ ಸರ್ಕಾರಿ ನೌಕರರು ಹೇಳಬಲ್ಲರು.

ಅನುವಾದವೆಂಬ ಅಧ್ವಾನ

ಪ್ರವೇಶ ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸ್ಥಳದಲ್ಲಿಯೇ ಅಧ್ಯಯನ ಸಾಮಗ್ರಿಗಳನ್ನು ಪೂರೈಸುವ ಬದಲು ಅವನ್ನು ಕಾಸಿಗಿಷ್ಟು ಕೊಸರಿಗಿಷ್ಟು ಎನ್ನುತ್ತಾ ವರ್ಷಪೂರ್ತಿ ವಿದ್ಯಾರ್ಥಿಗಳನ್ನು ಅಲೆದಾಡಿಸಿ ಮೂರು ತಿಂಗಳಿಗೊಂದರಂತೆ ಪುಸ್ತಕ ಕೊಡುತ್ತ ಹೋಗುತ್ತಾರೆ. ಆ ಪುಸ್ತಕಗಳ ಗುಣಮಟ್ಟ ಮಾತ್ರ ಮೂರನೇ ದರ್ಜೆಯದು. ಒಂದೂವರೆ ದಶಕಗಳ ಹಿಂದೆ ಸಿದ್ಧಪಡಿಸಿದ ಪೇಲವ ಮತ್ತು ಸವಕಲು ಪಠ್ಯಪುಸ್ತಕಗಳನ್ನು ಇವತ್ತು ಕಲಿಯಲು ಹೋಗುವ ವಿದ್ಯಾರ್ಥಿಗಳು ಓದಬೇಕು. ಮೂಲ ಇಂಗ್ಲಿಷ್ ಭಾಷೆಯಲ್ಲಿರುವ ಪಠ್ಯಗಳನ್ನು ಅತಿ ಕೆಟ್ಟದಾದ ರೀತಿಯಲ್ಲಿ ಕನ್ನಡಕ್ಕೆ ಅನುವಾದ ಮಾಡಲಾಗಿದೆ.

ಕೆಲವು ಕಡೆಯಂತೂ ಅನುವಾದಕರು ಕನ್ನಡವನ್ನು ಕೊಲ್ಲುವುದರ ಜೊತೆಗೆ ವಾಕ್ಯರಚನೆಯನ್ನು ದಿಕ್ಕಾಪಾಲಾಗಿ ಹರಿಯಲು ಬಿಟ್ಟಿದ್ದಾರೆ. ಸ್ನಾತಕೋತ್ತರ ಪದವಿಯ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ ಪಠ್ಯಪುಸ್ತಕಗಳಂತೂ ಕಾಲೇಜು ವಿದ್ಯಾರ್ಥಿಗಳ ಕೈಗೆ ಹೋಮ್‌ವರ್ಕ್ ರೂಪದಲ್ಲಿ ಅಸೈನ್‌ಮೆಂಟ್ ಕೊಟ್ಟು ಅನುವಾದ ಮಾಡಿಸಿರುವಂತೆ ಕಾಣುತ್ತಿದೆ. ರಾಜ್ಯಶಾಸ್ತ್ರದ ಪಠ್ಯ ಪುಸ್ತಕದಲ್ಲಿ 'ಕ್ಯಾಪಿ

ಕರ್ನಾಟಕದ ಅನೇಕ ವಿಶ್ವವಿದ್ಯಾಲಯಗಳು ಸಂಜೆ ಕಾಲೇಜುಗಳನ್ನು ರದ್ದುಮಾಡಿದ ಮೇಲೆ ಎಸ್ಸೆಸ್ಸೆಲ್ಸಿ, ಪಿಯುಸಿ ಪಾಸಾದ ಅನೇಕರು ಅನಿವಾರ್ಯವಾಗಿ ದೂರ ಶಿಕ್ಷಣ ಕೇಂದ್ರಗಳ ಮೊರೆ ಹೋಗಬೇಕಾಯಿತು. ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ದವರು ಕಳೆದ ವರ್ಷ ನೀಡಿದ ಮಾಹಿತಿಯ ಪ್ರಕಾರ ಇಂಡಿಯಾದ ಬಹುತೇಕ ಎಲ್ಲ ವಿಶ್ವ ವಿದ್ಯಾಲಯಗಳಲ್ಲಿ ಶೇ ೭೦ರಷ್ಟು ವಿದ್ಯಾರ್ಥಿಗಳು ಅಂಚೆ ತೆರಪು, ಮುಕ್ತ ವಿಶ್ವವಿದ್ಯಾಲಯ -ಬಾಹ್ಯ ಯೋಜನೆ ವಿದ್ಯಾರ್ಥಿಗಳಾಗಿ ಪದವಿಗಳನ್ನು ಪಡೆಯುತ್ತಿದ್ದಾರೆ. ಮನೆಯಲ್ಲಿನ ಕಡುಬಡತನ, ವಯಸ್ಸಿನ ಕಾರಣಗಳು - ತಾವು ಬಯಸಿರುವ ಪದವಿಪಡೆಯಲು ಅಗತ್ಯ ಅಂಕಗಳಿಲ್ಲದ ಅನೇಕರು ಕೆಲಸ ಮಾಡಿ ಕೊಂಡು ವಿಶ್ವವಿದ್ಯಾಲಯಗಳ ದೂರ ಶಿಕ್ಷಣ ಕೇಂದ್ರಗಳಲ್ಲ ಓದುಸವುದು ಎಲ್ಲರಿಗೂ ಗೊತ್ತಿರುವಂಥದ್ದೇ.

ಟಲ್ ಪನಿಷ್‌ಮೆಂಟ್' ಎಂಬ ಪದ ಇಂಥ ವರ ಕೈಗೆ ಸಿಕ್ಕು 'ಬಂಡವಾಳ ಶಿಕ್ಷೆ'ಯಾಗಿದೆ. ಇಂಥ ಉದಾಹರಣೆಗ ಳನ್ನು ಪುಟಕ್ಕೆ ನಾಲ್ಕು ಐದರಂತೆ ಕೊಡಬಹುದು. ಇದನ್ನು ಅನುವಾದ ಎಂದು ಕರೆಯುವುದಕ್ಕಿಂತ ಅಧ್ವಾನ ಎನ್ನು ವುದೇ ಸರಿಯೇನೋ. ಈ ಕುರಿತು ಬೆಂಗಳೂರು ವಿಶ್ವವಿ ದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಉಪ ನ್ಯಾಸಕರೊಬ್ಬ ರನ್ನು ಸಂಪರ್ಕಿಸಿ ಪ್ರಶ್ನಿಸಿದರೆ ಅಂಚೆ ತೆರಪು ಪಠ್ಯಪುಸ್ತಕಗ ಳನ್ನು ಕಾಲಕಾಲಕ್ಕೆ ನವೀಕರಿಸುವ ವಿಚಾರದಲ್ಲಿ ವಿಶ್ವವಿದ್ಯಾ ಲಯದಲ್ಲಿ ಬಿಗಿಯಾದ ನಿಯಮಗಳಿಲ್ಲ – ಅದಕ್ಕೊಂದು ಸಮಿತಿಯೇ ಇಲ್ಲ ಅನ್ನುವ ಉತ್ತರ ಕೊಡುತ್ತಾರೆ.

ಇದಾದ ನಂತರ ಪರೀಕ್ಷೆ ಬರೆಯಲು ಹಾಲ್ ಟಿಕೆ ಟ್‌ನ ನಿರೀಕ್ಷೆಯಲ್ಲಿ ಅಂಚೆಪೇದೆಗಾಗಿ ಕಾದು ಕೂತರೆ ವಿದ್ಯಾರ್ಥಿಗಳು ಮೋಸಹೋಗಬೇಕಾಗುತ್ತದೆ. ಈ ಕುರಿತು ವಿದ್ಯಾರ್ಥಿಗಳು ಖುದ್ದಾಗಿ ವಿಶ್ವವಿದ್ಯಾಲಯವನ್ನು ಸಂಪರ್ಕಿ ಸಿದರೆ ಇಂಟರ್‌ನೆಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳು ವಂತೆ ತಾಕೀತು ಮಾಡುತ್ತಾರೆ. ಇದನ್ನು ಪರೀಕ್ಷೆಗೂ ಹತ್ತು ದಿನಗಳ ಮುನ್ನ ಪತ್ರಿಕೆಗಳಿಗೆ ಸುದ್ದಿ ಕೊಡುವ ಮೂಲಕ ತಿಳಿಸಬೇಕಿತ್ತು ಎಂದು ವಿದ್ಯಾರ್ಥಿಗಳು ದಬಾಯಿಸಿದರೆ ಅಲ್ಲಿನ ಗುಮಾಸ್ತರು ವಿಶ್ವವಿದ್ಯಾಲಯದ ನಿರ್ದೇಶಕರನ್ನು ಸಂಪರ್ಕಿಸುವಂತೆ ಹೇಳಿ ತಲೆತಪ್ಪಿಸಿಕೊಳ್ಳುತ್ತಾರೆ. ನಿರ್ದೇಶ ಕರನ್ನು ಕಾಣಲು ಹೋದರೆ ಅವರ ಕೊಠಡಿಗೆ ಸದಾ ಬೀಗ ಜಡಿಯಲಾಗಿರುತ್ತದೆ.

ಇಷ್ಟೆಲ್ಲ ನಡೆದು ಇಂಟರ್ ನೆಟ್‌ನಲ್ಲಿ ಪರೀಕ್ಷೆಯ ಹಾಲ್ ಟಿಕೆಟ್ ಪ್ರಿಂಟ್‌ಔಟ್ ತೆಗೆದು ಕೈಗೆತ್ತಿಕೊಂಡರೆ ಮತ್ತೊಂದು ಶಾಕ್ ಕಾದಿರುತ್ತದೆ. ಹಾಲ್ ಟಿಕೆಟ್‌ನಲ್ಲಿ ಪರೀಕ್ಷಾ ಕೇಂದ್ರದ ಹೆಸರು ಮತ್ತು ಊರಿನ ಹೆಸರು ಬಿಟ್ಟರೆ ಅದರ ರಸ್ತೆ, ತಿರುವು, ಲ್ಯಾಂಡ್‌ಮಾರ್ಕ್, ಪಿನ್ ಕೋಡ್ ಇದ್ಯಾವುದನ್ನು ವಿವರವಾಗಿ ತಿಳಿಸಿರುವುದಿಲ್ಲ. ಬೆಳಿಗ್ಗೆ ಹನ್ನೊಂದರ ಹೊತ್ತಿಗೆ ಪರೀಕ್ಷೆ ಇಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಿಂದ ಬರುವ ಬಡ ವಿದ್ಯಾರ್ಥಿ ಗಳು ಮೆಜೆಸ್ಟಿಕ್, ಮಾರ್ಕೆಟ್‌ನಂತಹ ರಾಕ್ಷಸನಗರಿಯ ನರಕದಲ್ಲಿ ಕೇವಲ ಬಸ್ ನಂಬರುಗಳಿಗಾಗಿ ಪರದಾಡ ಬೇಕು. ರಾಮನಗರ, ಚನ್ನಪಟ್ಟಣ, ಮಂಡ್ಯ, ಮದ್ದೂರಿನ ವಿದ್ಯಾರ್ಥಿಗಳಿಗೆ ಹಲಸೂರು, ಕೆ.ಆರ್.ಪುರಂಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಕೊಟ್ಟಿದ್ದರೆ, ಚಿಕ್ಕನಾಯಕನಹಳ್ಳಿ, ತುಮಕೂರು, ಚಿತ್ರದುರ್ಗ, ಚಳ್ಳಕೆರೆ ಊರುಗಳ ವಿದ್ಯಾರ್ಥಿ ಗಳು ಕೋರಮಂಗಲ, ಜಯನಗರ, ಜೆ.ಪಿ.ನಗರ, ಬನ್ನೇ ರುಘಟ್ಟಗಳ ಗಡಿದಾಟಬೇಕು. ಹೊರ ಊರುಗಳಿಂದ ಪರೀಕ್ಷೆ ಬರೆಯಲು ಬರುವ ಹೆಣ್ಣುಮಕ್ಕಳು ತಮ್ಮ ಜೊತೆಗೆ ಯಾರಾದರೊಬ್ಬರನ್ನು ಕರೆತರದಿದ್ದರೆ ಅವರು ಪರೀಕ್ಷಾ ಕೇಂದ್ರವನ್ನು ತಲುಪಿ ಪರೀಕ್ಷೆ ಬರೆಯುವುದು ಕನಸಿನ ಮಾತಾಗುತ್ತದೆ.

ಇನ್ನು ಪರೀಕ್ಷೆ ಬರೆದಾದ ನಂತರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ತಾರತಮ್ಯದ ಕಟ್ಟಕಡೆಯ ಕ್ರೌರ್ಯಕ್ಕೂ ಮುಖ ಕೊಡಬೇಕು. ಜೂನ್ ಜುಲೈ ತಿಂಗಳಲ್ಲಿ ನಡೆದ ಪರೀಕ್ಷೆಯ ಫಲಿತಾಂಶ ನೀಡಲು ವಿಶ್ವವಿದ್ಯಾಲಯ ತೆಗೆದು ಕೊಳ್ಳುವ ಅವಧಿ ಕೇವಲ ಹತ್ತು ತಿಂಗಳು. ಮಾರ್ಕ್ಸ್ ಕಾರ್ಡ್ ಪಡೆಯಲು ವಿದ್ಯಾರ್ಥಿಗಳು ಮತ್ತಾರು ತಿಂಗಳು ವಿಶ್ವವಿದ್ಯಾಲಯದ ಆವರಣದ ಸುತ್ತ ಹಸಿದ ಕಾಗೆಗಳಂತೆ ರೌಂಡು ಹೊಡೆಯಬೇಕು. ಅಂಕಪಟ್ಟಿ ನೀಡಲು ತಡ ಮಾಡುತ್ತಿರುವುದೇಕೆ ಎಂದು ವಿಶ್ವವಿದ್ಯಾಲಯದ ಸಿಬ್ಬಂದಿ ಗಳನ್ನು ವಿದ್ಯಾರ್ಥಿಗಳು ಪ್ರಶ್ನಿಸಿದರೆ ಜ್ಞಾನಭಾರತಿಯಲ್ಲಿರುವ ಪರೀಕ್ಷಾ ಭವನದಲ್ಲಿ ನೀವೇ ಐಡೆಂಟಿಟಿ ಕಾರ್ಡ್ ತೋರಿಸಿ ಅಂಕಪಟ್ಟಿ ಪಡೆದುಕೊಳ್ಳಿ ಎಂಬ ಜಾಣ ಉತ್ತರ ನೀಡಿ ಅವರನ್ನು ಸಾಗಹಾಕುತ್ತಾರೆ.

> **ಪದವಿ ಪರೀಕ್ಷೆಗಳಲ್ಲಿ ಶೇಕಡ 50ರಷ್ಟು ಅಂಕಗಳಿಸದಿದ್ದರೆ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಲು ಸಾಧ್ಯವಿಲ್ಲ ಜೊತೆಗೆ ಸರ್ಕಾರದ ಕೆಲವು ಇಲಾಖೆಗಳು ಕೆಪಿ ಎಸ್‌ಸಿ ಮೂಲಕ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಕೂರಲು ಸಾಧ್ಯವಾಗುವುದಿಲ್ಲ. ಸ್ನಾತಕೋತ್ತರ ಪದವಿಗಳಲ್ಲಿ ಶೇ 55ರಷ್ಟು ಅಂಕಗಳು ಬರದಿದ್ದರೆ ವರ್ಷಕ್ಕೆರಡು ಬಾರಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ದವರು ನಡೆಸುವ ಎನ್‌ಇಟಿ ಪರೀಕ್ಷೆಗೆ ಕೂರಲು ಖಂಡಿತ ಸಾಧ್ಯವಿಲ್ಲ. ಪಿಎಚ್. ಡಿ ಮಾಡುವ ಆಸೆ ಇಟ್ಟುಕೊಂಡ ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ನೀಡುವ ಪುಡಿ ಅಂಕಗಳನ್ನು ನೆಚ್ಚಿಕೊಂಡರೆ ಭ್ರಮನಿರಸನ ಕ್ಕೀಡಾಗುವುದು ಖಚಿತ. ಈ ಅಂಕಗಳನ್ನಿಟ್ಟುಕೊಂಡು ವಿದ್ಯಾರ್ಥಿಗಳು ಒಂದೋ ಮರು ಮೌಲ್ಯಮಾಪನ ಅಥವಾ ಮರು ಪರೀಕ್ಷೆಯನ್ನು ಎದುರಿಸಬೇಕು ಇಲ್ಲದಿದ್ದರೆ ಕೊಟ್ಟಿರುವಷ್ಟೆ ಅಂಕಗಳಿಗೆ ಸುಮ್ಮನಾಗಿ ಆ ಪದವಿಯನ್ನು ಯಾವ ಉಪಯೋಗಕ್ಕೂ ಬಳಸಿಕೊಳ್ಳಲಿಕ್ಕಾಗದೆ ಕೇವಲ ಮದುವೆ ಲಗ್ನ ಪತ್ರಿಕೆಗಳಲ್ಲಿ ಮತ್ತು ವಿಸಿಟಿಂಗ್ ಕಾರ್ಡ್‌ಗಳಲ್ಲಿ ತಮ್ಮ ಹೆಸರಿನ ಮುಂದೆ ಎಂ.ಎ., ಎಂ.ಕಾಂ., ಡಿಗ್ರಿಗಳನ್ನು ಮುದ್ರಿಸಿಕೊಂಡು ಖುಷಿಪಡಬೇಕಾಗುತ್ತದಷ್ಟೇ. ಈಚೆಗೆ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಮತ್ತು ಸ್ನಾತಕ್ಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನ ಮಾಡಿ ಬಂದ ನನ್ನ ಗೆಳೆಯರೊಬ್ಬರು ತಮ್ಮ ಅನುಭವ ಹೇಳಿಕೊಂಡರು ದಿನವೊಂದಕ್ಕೆ ಅವರು 24 ರೆಗ್ಯುಲರ್ ವಿದ್ಯಾರ್ಥಿಗಳ(ಹಾಲಿ ತರಗತಿಯಲ್ಲಿ ಓದಿದ ವಿದ್ಯಾರ್ಥಿಗಳ) ಉತ್ತರ ಪತ್ರಿಕೆಗಳನ್ನು ಮೌಲ್ಯಮಾಡಬೇಕಿತ್ತಂತೆ.**

ಪದವಿ ಪರೀಕ್ಷೆಗಳಲ್ಲಿ ಶೇಕಡ 50ರಷ್ಟು ಅಂಕಗಳಿ ಸದಿದ್ದರೆ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಲು ಸಾಧ್ಯವಿಲ್ಲ ಜೊತೆಗೆ ಸರ್ಕಾರದ ಕೆಲವು ಇಲಾಖೆಗಳು ಕೆಪಿ ಎಸ್‌ಸಿ ಮೂಲಕ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಕೂರಲು ಸಾಧ್ಯವಾಗುವುದಿಲ್ಲ. ಸ್ನಾತಕೋತ್ತರ ಪದವಿಗಳಲ್ಲಿ ಶೇಕಡ 55ರಷ್ಟು ಅಂಕಗಳು ಬರದಿದ್ದರೆ ವರ್ಷಕ್ಕೆರಡು ಬಾರಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ದವರು ನಡೆಸುವ ಎನ್‌ಇಟಿ ಪರೀಕ್ಷೆಗೆ ಕೂರಲು ಖಂಡಿತ ಸಾಧ್ಯವಿಲ್ಲ. ಪಿಎಚ್.ಡಿ ಮಾಡುವ ಆಸೆ ಇಟ್ಟುಕೊಂಡ ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ನೀಡುವ ಪುಡಿ ಅಂಕಗಳನ್ನು ನೆಚ್ಚಿಕೊಂಡರೆ ಭ್ರಮನಿರಸನ ಕ್ಕೀಡಾ ಗುವುದು ಖಚಿತ. ಈ ಅಂಕಗಳನ್ನಿಟ್ಟುಕೊಂಡು ವಿದ್ಯಾರ್ಥಿ ಗಳು ಒಂದೋ ಮರುಮೌಲ್ಯಮಾಪನ ಅಥವಾ ಮರುಪ ರೀಕ್ಷೆಯನ್ನು ಎದುರಿಸಬೇಕು ಇಲ್ಲದಿದ್ದರೆ ಕೊಟ್ಟಿರುವಷ್ಟೆ ಅಂಕಗಳಿಗೆ ಸುಮ್ಮನಾಗಿ ಆ ಪದವಿಯನ್ನು ಯಾವ ಉಪ ಯೋಗಕ್ಕೂ ಬಳಸಿಕೊಳ್ಳಲಿಕ್ಕಾಗದೆ ಕೇವಲ ಮದುವೆ ಲಗ್ನ ಪತ್ರಿಕೆಗಳಲ್ಲಿ ಮತ್ತು ವಿಸಿಟಿಂಗ್ ಕಾರ್ಡ್‌ಗಳಲ್ಲಿ ತಮ್ಮ ಹೆಸ ರಿನ ಮುಂದೆ ಎಂ.ಎ., ಎಂ.ಕಾಂ., ಡಿಗ್ರಿಗಳನ್ನು ಮುದ್ರಿಸಿ ಕೊಂಡು ಖುಷಿಪಡಬೇಕಾಗುತ್ತದಷ್ಟೇ.

ಮೌಲ್ಯಮಾಪನದಲ್ಲಿ ತಾರತಮ್ಯವೇಕೇ?

ಈಚೆಗೆ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಮತ್ತು ಸ್ನಾತಕ್ಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನ ಮಾಡಿಬಂದ ನನ್ನ ಗೆಳೆಯರೊಬ್ಬರು ತಮ್ಮ ಅನುಭವ ಹೇಳಿಕೊಂಡರು. ಒಂದು ಉತ್ತರಪತ್ರಿಕೆಯ ಮೌಲ್ಯಮಾಪ ನಕ್ಕೆ ನಿಗದಿಯಾಗಿದ್ದ ಸಂಭಾವನೆ ಹನ್ನೆರಡು ರೂಪಾಯಿ. ಇದೇ ವಿಶ್ವವಿದ್ಯಾಲಯದ ದೂರ ಶಿಕ್ಷಣ ಮತ್ತು ಅಂಚೆ ತೆರಪಿನ ವಿದ್ಯಾರ್ಥಿಗಳು ಬರೆದ ಉತ್ತರಪತ್ರಿಕೆಗಳನ್ನು ದಿನಕ್ಕೆ ಐವತ್ತಕ್ಕು ಹೆಚ್ಚು ಸಂಖ್ಯೆಯಲ್ಲಿ ಮೌಲ್ಯಮಾಪನ ಮಾಡು ವಂತೆ ಕಸ್ಟೋಡಿ ಯನ್ ತಾಕೀತು ಮಾಡಿದರಂತೆ.

ಕೆಲವು ಮೌಲ್ಯಮಾಪಕರು ಕರೆಸ್ಪಾಂಡೆನ್ಸ್ ವಿದ್ಯಾರ್ಥಿ ಗಳು ಕೆಲಸ ಮಾಡಿಕೊಂಡು ಓದುತ್ತಿರುವುದರಿಂದ ಅವರು ರೆಗ್ಯುಲರ್ ವಿದ್ಯಾರ್ಥಿಗಳಷ್ಟು ಸೂಕ್ಷ್ಮ ಮತ್ತು ಬುದ್ಧಿವಂತರಿ ರುವುದಿಲ್ಲವೆಂಬ ಪೂರ್ವಾಗ್ರಹಗಳ ಲೆಕ್ಕಾಚಾರದಿಂದ ಅವ ರನ್ನು ಪಾಸು ಮಾಡುವುದೇ ಕಷ್ಟ. ಅಕಸ್ಮಾತ್ ಪಾಸುಮಾ ಡಿದರೂ ಅವರು ದ್ವಿತೀಯ ದರ್ಜೆಗಿಂತ ಮೇಲೇರದಂತೆ, ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಂತೆ ಹಾಗೂ ಸರ್ಕಾರಿ, ಖಾಸಗಿ ಕೆಲಸಗಳಿಗೆ ಅರ್ಜಿಯೇ ಹಾಕಲಾಗದಷ್ಟು ಕಡಿಮೆ ಅಂಕಗಳನ್ನು ನೀಡಿ ಮಾನಸಿಕವಾಗಿ ನರಳುವಂತೆ ಮಾಡುತ್ತಾರೆ. ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕಬೇಕೆಂದರೆ ಒಂದು ಸಬ್ಜೆಕ್ಟಿಗೆ ಒಂದು ಸಾವಿರ ರೂಪಾಯಿ ಶುಲ್ಕ ಕಟ್ಟಬೇಕು.

ಮನೆಯ ಕಷ್ಟಗಳಿಂದ ಕೆಲಸ ಮಾಡಿಕೊಂಡು ಓದುವ ಗ್ರಾಮಾಂತರ ಪ್ರದೇಶದ ಬಡ ವಿದ್ಯಾರ್ಥಿಗಳು ಅಷ್ಟೊಂದು ದುಡ್ಡು ತೆತ್ತು ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕುವುದು ಕನಸಿನಮಾತು. ಒಂದು ಸಾವಿರ ರೂಪಾಯಿ ನೀಡಿ ಒಂದು ಸಬ್ಜೆಕ್ಟಿನ ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕುವ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿ ಗಳನ್ನಾದರೂ ವಿಶ್ವವಿದ್ಯಾಲಯ ನೀಡುತ್ತದಾ ಎಂದು ನೋಡಿದರೆ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮತ್ತು

(15ನೇ ಪುಟಕ್ಕೆ)

ಲೋಹಿಯಾವಾದಿಗಳಿಗೊಂದು ಪತ್ರ:

ಶವಪರೀಕ್ಷೆ ಬೇಡ– ಆತ್ಮವಿಮರ್ಶೆಯೂ ಬೇಡವೇ?

ಶಿವಸುಂದರ್

ಸಮಾಜವಾದಿ ರಾಜಕಾರಣದಲ್ಲೂ ಸೈದ್ಧಾಂತಿಕ ಮೂಲಭೂತವಾದೀತನ ಮತ್ತು 'ರಾಜಿ'ಕಾರಣ ಎರಡೂ ಸಂಭವಿಸುತ್ತಿದೆ. ಮಾರ್ಕ್ಸ್‌ವಾದಿ ಸಮಾಜವಾದಿಗಳ ಬಗ್ಗೆ ಈ ದೇಶದ ಸಮಾಜವಾದಿಗಳು ಅದರಲ್ಲೂ ಲೋಹಿಯಾವಾದಿಗಳು ಸಕಾರಣವಾಗಿ ಮಾಡುವ ವಿಮರ್ಶೆ ಮೊದಲನೇ ವರ್ಗಕ್ಕೆ ಸೇರಿದ್ದು. ಅಂದರೆ ಈ ದೇಶದ ಕಮ್ಯುನಿಸ್ಟರು ವರ್ತಮಾನದ ಸವಾಲುಗಳಿಗೂ ತೆರೆದುಕೊಂಡಿಲ್ಲ - ಈ ದೇಶದ ಸ್ಥಳೀಯ ಸವಾಲುಗಳನ್ನು ಅರ್ಥ ಮಾಡಿಕೊಂಡಿಲ್ಲ ಎಂಬುದು. ಭಾರತದಲ್ಲಿ ನಿಜಕ್ಕೂ ಕ್ರಾಂತಿ ಮಾಡಬೇಕು ಎಂಬ ನಿಶ್ಚಲ ನಿಷ್ಠೆಯುಳ್ಳ ಯಾವ ನೈಜ ಕಮ್ಯುನಿಷ್ಟನಿಗೂ ಈ ವಿಮರ್ಶೆಯ ಬಗ್ಗೆ ತಕಾರಾರಿರಬೇಕಿಲ್ಲ. ೮೦ ವರ್ಷಗಳ ವಿವಿಧ ಬಗೆಯ ಕಮ್ಯುನಿಸ್ಟ್ ಚರಿತ್ರೆ ಈ ಸವಾಲುಗಳನ್ನು ಅದರ ಮುಂದೆ ಮುಖಕ್ಕೆ ರಾಚುವಂತೆ ಒಗೆಯುತ್ತಿದೆ. ಒಂದು ಕ್ರಾಂತಿಕಾರಿ ರಾಜಕೀಯ ಸಂಸ್ಕೃತಿಯೆಂದರೆ ನಿರ್ಭಿಡ ಆತ್ಮವಿಮರ್ಶೆ.

2009ರ ಮಾರ್ಚ್ 23ರಿಂದ ರಾಜ್ಯದೆಲ್ಲೆಡೆ ಈ ದೇಶದ ಅತ್ಯಂತ ಪ್ರಮುಖ ಸಾಮಾಜಿಕ ಚಿಂತಕ, ರಾಜಕೀಯ ಮುತ್ಸದ್ಧಿ, ರಾಮಮನೋಹರ ಲೋಹಿಯಾರವರ ಜನ್ಮಶತಾಬ್ಧಿ ಆಚರಣೆಯು ನಡೆಯುತ್ತಿದೆ. ಲೋಹಿಯಾರ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಚಿಂತನೆಗಳನ್ನು ಯುವಜನಾಂಗಕ್ಕೆ ಪರಿಚಯಿಸುವ ಲೇಖನ, ಕಿರುಪುಸ್ತಿಕೆಗಳ ಪ್ರಕಟಣೆಯಿಂದ ಹಿಡಿದು ಮೊನ್ನೆ ಮೇ-2ರ ಭಾನುವಾರ ನಡೆದ ಬೃಹತ್ ಸಮಾರಂಭದ ತನಕ ಹಲವು ಕಾರ್ಯಕ್ರಮಗಳು ನಡೆಯುತ್ತಿವೆ. ಹಿಂದೂತ್ವದ ದಾಳಿ, ಕಾರ್ಪೊರೇಟ್ ಜಾಗತೀಕರಣದ ಆಕ್ರಮಣದಿಂದಾಗಿ ಸಮಾಜವಾದವೆಂಬ ಪರಿಕಲ್ಪನೆಯೇ ಅಪಹಾಸ್ಯಕ್ಕೀಡಾಗುತ್ತಿರುವ ಸಂದರ್ಭದಲ್ಲಿ ಯಾವುದೇ ಬಗೆಯ ಸಮಾಜವಾದೀ ಚಿಂತನೆಯ ಕಾರ್ಯಕ್ರಗಳು ನಡೆಯುವುದೂ, ಹಿಂದೂತ್ವದ ಬ್ರಾಹ್ಮಣ್ಯವನ್ನೂ ಮತ್ತು ಜಾಗತೀಕರಣದ ಮಾರುಕಟ್ಟೆ ಮೂಲಭೂತವಾದವನ್ನು ವಿರೋಧಿಸುವುದು ಸ್ವಾಗತಾರ್ಹ ಸಂಗತಿಯೇ!

ಆದರೆ ಸಮಾಜವಾದ, ಮಾರ್ಕ್ಸ್‌ವಾದ, ಸಮತಾವಾದಂಥ ಚಿಂತನೆಗಳು ಕೇವಲ ಒಬ್ಬ ಚಿಂತಕನ ಪ್ರತಿಕ್ರಿಯೆಗಳಲ್ಲ. ನಿರಂತರ ಸಾಮಾಜಿಕ ಪ್ರಯೋಗಕ್ಕೆ ಒಳಪಟ್ಟು ವರ್ತಮಾನಕ್ಕೂ ಮತ್ತು ಭವಿಷ್ಯಕ್ಕೂ ಮಾರ್ಗದರ್ಶನ ಮಾಡಬಲ್ಲ ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತಗಳು. ಸೋಲು ಮತ್ತು ಗೆಲವುಗಳು ತಂದುಕೊಟ್ಟ ವಿವೇಕದ ಸಹಾಯದಿಂದ ಸದಾ ಪರಿಷ್ಕರಣೆಯಾಗುತ್ತಾ ಬಂದ ಜೀವಂತ ತತ್ವ ಪ್ರಣಾಳಿಗಳು. ಪರ್ಯಾಯ ನಾಗರೀಕತೆಯ ದರ್ಶನಗಳು. ಒಂದುಕಡೆ ಪ್ರಯೋಗಗಳಿಂದ ಸಿದ್ಧವಾದ ಶಾಶ್ವತ ಸತ್ವಗಳನ್ನು ಕ್ರೂಢೀಕರಣ ಮಾಡಿಕೊಳ್ಳುತ್ತಲೇ ಮತ್ತೊಂದೆಡೆ ವರ್ತಮಾನಕ್ಕೆ ಮುಖಾಮುಖಿಯಾಗುತ್ತಾ ನಿರಂತರ ಚಲನಶೀಲತೆಯನ್ನು ಹೊಂದಿರುವುದೇ ಈ ಸಿದ್ಧಾಂತಗಳ ಕ್ರಾಂತಿಕಾರಿ ಸತ್ವ. ಅಥವಾ ಒಂದು ಸಿದ್ಧಾಂತ ಈ ಕಾಲಕ್ಕೂ-ಸದಾಕಾಲಕ್ಕೂ ಕ್ರಾಂತಿಕಾರಿ ಯಾಗಿಯೇ ಉಳಿಯಬೇಕೆಂದರೆ ಅದು ಈ ನಿರಂತರತೆ (ಕಂಟಿ ನ್ಯುಟಿ) ಯನ್ನೂ – ಬದಲಾವಣೆಯನ್ನೂ (ಚೇಂಜ್)ಅನ್ನು ಏಕಕಾಲದಲ್ಲಿ ಹೊಂದಿರಬೇಕಾಗುತ್ತದೆ. ಹಳೆಯದರ ನಿರಂತರತೆಯನ್ನು ಮಾತ್ರ ಹೊಂದಿದ್ದು ವರ್ತಮಾನ ಕೋರುವ ಬದಲಾವಣೆ ಇಲ್ಲವಾದರೆ ಸೈದ್ಧಾಂತಿಕ ಮೂಲಭೂತವಾಕ್ಕೆ ಕಾರಣವಾಗುತ್ತದೆ. ಹಳೆಯ ಅನುಭವ ಮತ್ತು ಸಿದ್ಧ ಸತ್ವಗಳನ್ನು ತಿರಸ್ಕರಿಸಿ ಕೇವಲ ಬದಲಾವಣೆಯನ್ನು ಮಾತ್ರ ಅಪ್ಪಿಕೊಂಡರೆ ಅದು ವರ್ತಮಾನ ದೊಂದಿಗೆ ರಾಜಿಗೆ ಕಾರಣವಾಗುತ್ತದೆ.



ಇಂದು ಸಮಾಜವಾದಿ ರಾಜಕಾರಣದಲ್ಲೂ ಸೈದ್ಧಾಂತಿಕ ಮೂಲಭೂತ ವಾದೀತನ –'ರಾಜಿ'ಕಾರಣ ಎರಡೂ ಸಂಭವಿಸುತ್ತಿದೆ. ಮಾರ್ಕ್ಸ್‌ವಾದಿ ಸಮಾಜವಾದಿಗಳ ಬಗ್ಗೆ ಈ ದೇಶದ ಸಮಾಜವಾದಿಗಳು ಅದರಲ್ಲೂ ಲೋಹಿಯಾವಾದಿಗಳು ಸಕಾರಣವಾಗಿಮಾಡುವ ವಿಮರ್ಶೆ ಮೊದಲನೇವರ್ಗಕ್ಕೆ ಸೇರಿದ್ದು. ಅಂದರೆ ಈ ದೇಶದ ಕಮ್ಯುನಿಸ್ಟರು ವರ್ತಮಾನದ ಸವಾಲುಗಳಿಗೂ ತೆರೆದುಕೊಂಡಿಲ್ಲ – ಈ ದೇಶದ ಸ್ಥಳೀಯ ಸವಾಲುಗಳನ್ನು ಅರ್ಥಮಾಡಿಕೊಂಡಿಲ್ಲ ಎಂಬುದು. ಭಾರತದಲ್ಲಿ ನಿಜಕ್ಕೂ ಕ್ರಾಂತಿ ಮಾಡಬೇಕು ಎಂಬ ನಿಶ್ಚಲ ನಿಷ್ಠೆಯುಳ್ಳ ಯಾವ ನೈಜ ಕಮ್ಯುನಿಷ್ಟನಿಗೂ ಈ ವಿಮರ್ಶೆಯ ಬಗ್ಗೆ ತಕರಾರಿರ ಬೇಕಿಲ್ಲ. 80 ವರ್ಷಗಳ ವಿವಿಧ ಬಗೆಯ ಕಮ್ಯುನಿಸ್ಟ್ ಚರಿತ್ರೆ ಈ ಸವಾಲುಗಳನ್ನು ಅದರ ಮುಂದೆ ಮುಖಕ್ಕೆ ರಾಚುವಂತೆ ಒಗೆಯುತ್ತಿದೆ. ಒಂದು ಕ್ರಾಂತಿಕಾರಿ ರಾಜಕೀಯ ಸಂಸ್ಕೃತಿಯೆಂದರೆ ನಿರ್ಭಿಡ ಆತ್ಮವಿಮರ್ಶೆ. ಕ್ರಾಂತಿಯೇ ಪರಮ ಗುರಿಯಾದ ಯಾರಿಗೂ ತಮ್ಮ ತಪ್ಪುಗಳನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲಾಗಲೀ, ಬದಲಾಯಿಸಿ ಕೊಳ್ಳಲಾಗಲೀ ಅಡ್ಡಿಯಿರಬೇಕಿಲ್ಲ.

ಆದರೆ ಅದು ಹೇಳಿದಷ್ಟು ಸುಲಭವೂ ಅಲ್ಲ. ಹಾಗೆಯೇ ಲೋಹಿಯಾವಾದಿಗಳು ಹೇಳುವಂತೆ ಮಾರ್ಕ್ಸ್‌ವಾದ ಬೆಳದೇ ಇಲ್ಲ ಲೋಹಿಯಾವಾದಿಗಳ ವಿಮರ್ಷೆಯೂ ಸಂಪೂರ್ಣ ಸರಿಯಲ್ಲ. ಮೊದಲನೆಯದಾಗಿ ಹೊರಗಿನ ಶತೃಗಳನ್ನು ಎದುರಿಸಿದಷ್ಟು ಸುಲಭವಾಗಿ ತಮ್ಮೊಳಗಿನ, ಅದಕ್ಕಿಂತಲೂ ಹೆಚ್ಚಾಗಿ ತನ್ನೊಳಗಿನ ಶತ್ರುಗಳ ವಿರುದ್ಧ ಯುದ್ಧ ನಡೆಸುವುದು ಅಷ್ಟು ಸುಲಭವೂ ಅಲ್ಲ. ಇಲ್ಲದಿದ್ದರೆ ಹೊರಗಿನ ಬಂಡವಾಳಶಾಹಿಯನ್ನು ಸೋಲಿಸಿ ಕ್ರಾಂತಿಮಾಡಿದ ರಷ್ಯಾ. ಚೀನಾಗಳು ನಂತರ ತಮ್ಮ ಪಕ್ಷದಲ್ಲಿ ಮತ್ತು ಸಮಾಜದಲ್ಲಿ ಹುಟ್ಟಿಕೊಂಡ ಬಂಡವಾಳಶಾಹಿಗಳನ್ನು ಗುರುತಿಸಲೂ–ಸೋಲಿಸಲು ವಿಫಲವಾಗುತ್ತಿರಲಿಲ್ಲ.

ಸಮಾಜವಾದಿ ಕ್ರಾಂತಿಯ ನಂತರವೂ ಬಂಡವಾಳಶಾಹಿ ಜನಿಸಲು ಚೀನಾದಲ್ಲಿ ಇರಬಹುದಾದಹತ್ತು ವ್ಯವಸ್ಥಾತ್ಮಕ ಕಾರಣಗಳನ್ನು ಮಾವೋ ಪಟ್ಟಿ ಮಾಡುತ್ತಾರೆ. ಹಾಗೆಯೇ ಹೊಸ ಮನುಷ್ಯನನ್ನು ಸೃಷ್ಟಿಮಾಡಲು ಕ್ರಾಂತಿಯ ನಂತರವೂ ನಿರಂತರ ಕ್ರಾಂತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿ ಮಾರ್ಕ್ಸ್‌ವಾದವನ್ನು ಮತ್ತಷ್ಟು ಬೆಳೆಸುತ್ತಾರೆ. ಇದು ಸಾಧ್ಯವಾದದ್ದು ಜಂಗಮತನವನ್ನು ಕಳ 'ದುಕೊಂಡು ಸ್ಥಾವರವಾಗಿಬಿಟ್ಟಿದ್ದ ಸ್ಥಾಪಿತ ಮಾರ್ಕ್ಸ್‌ವಾದವನ್ನು ನಿರ್ದಾಕ್ಷಿಣ್ಯವಾಗಿ ಪೋಸ್ಟ್ ಮಾರ್ಟೆಮ್ –ಶವ ಪರೀಕ್ಷೆ ಮಾಡಿದ್ದರಿಂದ. ಇದರ ರಾಜಕೀಯ – ಸಾಮಾಜಿಕ ಬೇರುಗಳನ್ನು ಹೊಡೆದು ಹಾಕಲೆಂದು ಮಾವೋ 1967ರಲ್ಲಿ "ಸಾಂಸ್ಕೃತಿಕ ಕ್ರಾಂತಿ"ಯನ್ನು ಪ್ರಾರಂಭಿಸಿದ್ದು. "Bombard The Head Quarters"– "ಪಕ್ಷದಲ್ಲಿ ಮತ್ತು ಸರ್ಕಾರದಲ್ಲಿ ಇಂಥಾ ನವಬಂಡವಾಳವಾದದ ಹುಟ್ಟಿಗೆ ಕಾರಣರಾದ ನೇತಾರರ ಕಚೇರಿಯ ಮೇಲೇ ಯುದ್ಧ ಹೂಡಿ"– ಎಂದು ಘೋಷಿಸಿದ್ದು. ತಮ್ಮ "ತಲೆ"ಗಳ

ವಿರುದ್ಧ ತಾವೇ ಯುದ್ಧ ಸಾರಬೇಕೆಂದುಕರೆ ಕೊಟ್ಟಿದ್ದು. ಆದರೆ ಅದೂ ಅತಿರೇಕಕ್ಕೆ ಹೋದದ್ದೂ – ಅಂತಿಮವಾಗಿ ವಿಫಲ ವಾದದ್ದೂ ಈಗ ಇತಿಹಾಸ.

ನೈಜ ಸಮಾಜವಾದವು ಕೇವಲ ಉತ್ಪಾದನಾ ಶಕ್ತಿಗಳ ಅಂದರೆ ಯಂತ್ರ ಮತ್ತು ತಂತ್ರಜ್ಞಾನಕ್ಕೆ ಒತ್ತುಕೊಟ್ಟು ಕೇವಲ ಉತ್ಪಾದನೆ ಜಾಸ್ತಿ ಮಾಡುವದರಿಂದ ಸಾಕಾರಗೊಳ್ಳುವುದಿಲ್ಲ. ಬದಲಿಗೆ ಅದು ಮತ್ತೆ ಬಂಡವಾಳಶಾಹಿಯ ಹುಟ್ಟಿಗೇ ಕಾರಣವಾಗುತ್ತದೆ. ಆದರೆ ಉತ್ಪಾದನಾ ಸಂಬಂಧಗಳ ಸತತ ಪ್ರಜಾತಾಂತ್ರೀಕರಣದಿಂದ ಮಾತ್ರ ನೈಜ ಸಮಾಜವಾದ ಸೃಷ್ಟಿಯಾಗುತ್ತದೆ ಎಂಬ ಚೀನಾ ಕ್ರಾಂತಿಯ ಅದರಲ್ಲೂ ಮಾವೋನ ರಾಜಕೀಯ ಮತ್ತು ಆರ್ಥಿಕ ದರ್ಶನ ಕನ್ನಡದಲ್ಲಿ ಸಾಕಷ್ಟು ಚರ್ಚೆಗೊಳಗಾಗಿಲ್ಲ. ಆದ್ದರಿಂದಲೇ ಈಗಲೂ ಮಾರ್ಕ್ಸ್‌ವಾದವನ್ನು ಏಕ ಧಾರೆಯಾಗಿ ಗ್ರಹಿಸುವ ಮತ್ತು ಕಮುನಿಸಮ್ ಕೇವಲ ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಮಾತ್ರ ಒತ್ತುಕೊಡುತ್ತದೆ, ಹೊಸ ಮನುಷ್ಯನ ಸೃಷ್ಟಿಗಲ್ಲ, ಅದನ್ನು ಪ್ರತಿಪಾದಿಸಿದವರು ಲೋಹಿಯಾ ಮಾತ್ರ ಎಂಬಂಥ ಸತ್ಯಕ್ಕೆ ದೂರವಾದ ಸಂಗತಿಗಳನ್ನೇ ಹಲವು ಲೋಹಿಯಾವಾದಿಗಳು ಮತ್ತು ಗಾಂಧೀವಾದಿಗಳು ಬಿತ್ತರಿಸುತ್ತಿದ್ದಾರೆ. ಮಿಕ್ಕಂತೆ ಪ್ರಬುದ್ಧವಾದ ಚಿಂತನೆ ವ್ಯಕ್ತಪಡಿಸುವ ಅನಂತಮೂರ್ತಿಯಂತ ಅನಂತಮೂರ್ತಿಗಳೂ ಸಹಚಿಲ್ಲರೆ ಚಿಂತಕರಂತೆ ಸಾಂಸ್ಕೃತಿಕ ಕ್ರಾಂತಿಯೆಂದರೆ ಕೇವಲ ಅರ್ಥರಹಿತ ಕೊಲೆ ಮಾತ್ರ ಎಂದು ಭಾಷ್ಯ ನೀಡುತ್ತಾರೆ ಅಥವಾ ಮಾವೋನ ಲಾಂಗ್ ಮಾರಚ್ ಅಂತಿಮವಾಗಿ ಹೋಗಿ ಸೇರಿದ್ದು ಕೋಲಾಗಲ್ಲವೇ ಎಂದು ಚಮತ್ಕಾರವಾಗಿ ಹೇಳಿಕೆ ನೀಡುತ್ತಾರೆ. (ಅದನ್ನೇ ಲೋಹಿಯಾವಾದಿಗಳ ಆಚರಣೆಗೂ ಅನ್ವಯಿಸುವುದಾದರೆ ಲೋಹಿಯಾರವರ ಸಪ್ತಕ್ರಾಂತಿ ಅಂತಿಮವಾಗಿ ಹಿಂದೂತ್ವ ಪುನರುತ್ಥಾನಕ್ಕೆ ಕಾರಣವಾಯಿತಲ್ಲವೇ ಎಂದು ಕೇಳಿಬಿಡಬಹುದು. ಆದರೆ ಎರಡೂ ನಿಜವಲ್ಲ. ಉದ್ದೇಶಿತ ವಾದದ್ದಲ್ಲ.)

ಅದೇನೇ ಇರಲಿ ಕ್ರಾಂತಿ ಯಂಬುದು ಸಾವಿರ ಮೈಲು ದೂರವಿರುವ ಸಮಾಜವಾದ ದೆಡೆಗೆ ಹಾಕಿರುವ ಪ್ರಥಮ ಹೆಜ್ಜೆ. ಅಲ್ಲಿಗೆ ತಲುಪಲು ನಿರಂತರ ಕ್ರಾಂತಿಯ ಅಗತ್ಯವಿದೆ ಎಂದುಹೇಳಿದ ಮಾವೋನಿಂದ ಮತ್ತು ಅವನ ಪ್ರಯೋಗಗಳಿಂದ ಕಲಿಯಲು ಭಾರತದ ಎಲ್ಲಾ ಬಗೆಯ ಸಮಾಜವಾದಿಗಳಿಗೂ ಸಾಕಷ್ಟಿದೆ. ಸಿದ್ಧ ಮಾದರಿಗಳನ್ನು ವಿಮರ್ಶಿಸಿ, ಅನಗತ್ಯವಾದದ್ದನ್ನು ತಿರಸ್ಕರಿಸಿ–ವೈಫಲ್ಯಗಳ ಪೋಸ್ಟ್ ಮಾರ್ಟೆಮ್ ಮಾಡಿ, ಯಾರನ್ನೂ ದೇವರನ್ನಾಗಿ ಮಾಡದೆ ಮಾರ್ಕ್ಸ್, ಲೆನಿನ್, ಸ್ಟಾಲಿನ್‌ರನ್ನೂ ತೀವ್ರ ವಿಮರ್ಶೆ ಮಾಡುತ್ತಾ, ತಮ್ಮನ್ನು ತಾವು ನಿರ್ದಾಕ್ಷಿಣ್ಯವಾಗಿ ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಾ ಮಾರ್ಕ್ಸ್‌ವಾದಿ ಸಮಾಜವಾದಿಗಳು ಸಂದರ್ಭಕ್ಕೆ ಸೂಕ್ತವಾದ ಸಮಾಜವಾದಿ ಮಾದರಿಯನ್ನೂ, ಸಮಾಜವಾದಿ ಅಭಿವೃದ್ಧಿ ಕ್ರಮಗಳನ್ನೂ ಹುಡುಕಿಕೊಂಡಿದ್ದು. ಇದು ಮಾರ್ಕ್ಸ್‌ವಾದ ಸ್ಥಾವರವಾಗದೆ ಬೆಳದರೀತಿ. ಇದರರ್ಥ ಕಮ್ಯುನಿಸಂ ಹೆಸರುಹೇಳಿಕೊಳ್ಳುವ ಮೂಲಭೂತ ವಾದಿಗಳೂ, ಬಂಡವಾಳ ವಾದಿಗಳು ಇಲ್ಲವೆಂದಲ್ಲ. ಅಂತವರ ಬಗ್ಗೆ ಲೋಹಿಯಾ ವಾದಿಗಳು ಸಾಕಷ್ಟು ಉದಾಹರಣೆ ನೀಡುತ್ತಾರೆ. ಅವರು ಹೇಳದೇ ಹೋಗುವುದು ಬೆಳೆಯುತ್ತಲೇ ಇರುವ ಮಾರ್ಕ್ಸ್‌ವಾದ ಬಗ್ಗೆ. ಚೀನಾ ಕಮ್ಯುನಿಷ್ಟರ ರೀತಿಯಲ್ಲೇ ಭಾರತದ ಮಾರ್ಕ್ಸ್ ವಾದಿಗಳೂ ಮಾರ್ಕ್ಸ್‌ವಾದವನ್ನು ಭಾರತದ ಸಂದರ್ಭಕ್ಕೆ ಸರಿಯಾಗಿ ಅನ್ವಯಿಸಿದ್ದರೆ ಭಾರತಕ್ಕೆ ಇಷ್ಟು



ಸಮಾಜವಾದಿ ಕ್ರಾಂತಿಯ ನಂತರವೂ ಬಂಡವಾಳಶಾಹಿ ಜನಿಸಲು ಚೀನಾದಲ್ಲಿ ಇರಬಹುದಾದ ಹತ್ತು ವ್ಯವಸ್ಥಾತ್ಮಕ ಕಾರಣಗಳನ್ನು ಮಾವೋ ಪಟ್ಟಿ ಮಾಡುತ್ತಾರೆ. ಹಾಗೆಯೇ ಹೊಸ ಮನುಷ್ಯನನ್ನು ಸೃಷ್ಟಿ ಮಾಡಲು ಕ್ರಾಂತಿಯ ನಂತರವೂ ನಿರಂತರ ಕ್ರಾಂತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿ ಮಾರ್ಕ್ಸ್‌ವಾದವನ್ನು ಮತ್ತಷ್ಟು ಬೆಳೆಸುತ್ತಾರೆ. ಇದು ಸಾಧ್ಯವಾದದ್ದು ಜಂಗಮತನವನ್ನು ಕಳೆದುಕೊಂಡು ಸ್ಥಾವರವಾಗಿಬಿಟ್ಟಿದ್ದ ಸ್ಥಾಪಿತ ಮಾರ್ಕ್ಸ್‌ವಾದವನ್ನು ನಿರ್ದಾಕ್ಷಿಣ್ಯವಾಗಿ ಪೋಸ್ಟ್ ಮಾರ್ಟೆಮ್–ಶವ ಪರೀಕ್ಷೆ ಮಾಡಿದ್ದರಿಂದ. ಇದರ ರಾಜಕೀಯ ಮತ್ತು ಸಾಮಾಜಿಕ ಬೇರುಗಳನ್ನು ಹೊಡೆದು ಹಾಕಲೆಂದು ಮಾವೋ 1967ರಲ್ಲಿ "ಸಾಂಸ್ಕೃತಿಕ ಕ್ರಾಂತಿ" ಯನ್ನು ಪ್ರಾರಂಭಿಸಿದ್ದು. "Bombard The Head Quarters"- "ಪಕ್ಷದಲ್ಲಿ ಮತ್ತು ಸರ್ಕಾರದಲ್ಲಿ ಇಂಥಾ ನವಬಂಡವಾಳವಾದದ ಹುಟ್ಟಿಗೆ ಕಾರಣರಾದ ನೇತಾರರ ಕಚೇರಿಯ ಮೇಲೇ ಯುದ್ಧ ಹೂಡಿ"ಮತ್ತು ಎಂದು ಘೋಷಿಸಿದ್ದು. ತಮ್ಮ "ತಲೆ"ಗಳ ವಿರುದ್ಧ ತಾವೇ ಯುದ್ಧ ಸಾರಬೇಕೆಂದು ಕರೆಕೊಟ್ಟಿದ್ದು.

ಹೊರಗಿನ ವರಾಗುತ್ತಿರಲಿಲ್ಲ.

ಆದರೂ ಸ್ಥಾವರವಾಗಿದ್ದ ಭಾರತೀಯ ಮಾರ್ಕ್ಸ್‌ವಾದಕ್ಕೆ ಚಲನೆ ತಂದಿದ್ದು ನಕ್ಸಲ್ ಚಳವಳಿ. ಇಂದೂ ಲೋಹಿಯಾವಾದಿ ಸಮಾಜವಾದಿಗಳು ತಮ ಸಾಧನೆಯೆಂದು ಹೇಳಿಕೊಳ್ಳುತ್ತಿರುವ ಹಲವಾರು ಸಾಧನೆಗಳ (ಭೂ ಸುಧಾರಣೆ, ಉಳುವವನಿಗೆ ಭೂಮಿ, ಪಂಚಾಯತ್ ರಾಜ್) ಹಿಂದೆ ನಕ್ಸಲ್ ಚಳವಳಿಯ ಹಿನ್ನೆಲೆಯಿದೆ. ಇಂದಿಗೂ ಆದಿವಾಸಿಗಳ ಎತ್ತಂಗಡಿ ಎಲ್ಲಿಯಾದರೂ ಯಶಸ್ವಿಯಾಗಿ ತಡೆಗಟ್ಟಲಾಗಿದ್ದರೆ ಅದು ನಕ್ಸಲ್ ಚಳವಳಿ ಇರುವ ಕಡೆ ಮಾತ್ರ. ಭಾರತದ ಅಭಿವೃದ್ಧಿ ಮಾದರಿಯನ್ನು ವಿಮರ್ಶಿಸಿ ಅದಕ್ಕೆ ಪರ್ಯಾಯವಾದ ಮಾದರಿಯನ್ನು ಪ್ರಾಯೋಗಿಕವಾಗಿ ಮುಂದಿಟ್ಟದ್ದೂ ಸಹ ಮಾವೋವಾದಿ ನಕ್ಸಲರೇ! ಇದನ್ನು ಹಲವು ಲೋಹಿಯಾವಾದಿಗಳೂ ಈಗ ಒಪ್ಪಿಕೊಳ್ಳುತ್ತಾರೆ. ಆದರೆ ಈ ಕಾಲಘಟ್ಟದಲ್ಲಿ ಅದೂ ಸಹ ಹೊಸ ರಾಜಕೀಯ ಮತ್ತು ಸೈದ್ಧಾಂತಿಕ ಸವಾಲುಗಳಿಗೆ ತೆರೆದುಕೊಳ್ಳದೆ ಜಡಗಟ್ಟುತ್ತಿದೆ. ಆತ್ಮ ಬಲಿದಾನದ ಹೆಗ್ಗಳಿಕೆ ಮತ್ತು ಕೆಲವು ದುರ್ಗಮ ಪ್ರದೇಶಗಳಲ್ಲಿ ದೊರಕುತ್ತಿರುವ ಬೃಹತ್ ಜನಬೆಂಬಲಗಳು ಅವರನ್ನೂ ಕುರುಡು – ಕಿವುಡರನ್ನಾಗಿಸಿದೆ. ಹೀಗಾಗಿಯೇ ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡುತ್ತಾ ನಿಂತ ಕಡೆಯೇ ನಿಂತಿದ್ದಾರೆ. ಹೀಗಾಗಿ ಭಾರತೀಯ ಮಾರ್ಕ್ಸ್ ವಾದಿ ಸಮಾಜವಾದ ಮತ್ತೊಂದು ನಿರ್ದಾಕ್ಷಿಣ್ಯ ಪೋಸ್ಟ್ ಮಾರ್ಟೆಮ್ ಅನ್ನು ಕೇಳುತ್ತಿದೆ. ಈ ಕಾಲ ಮತ್ತು ಸಂದರ್ಭದ ಸವಾಲುಗಳಿಗೆ ಸೃಜನಶೀಲವಾಗಿ ಮಾರ್ಕ್ಸ್‌ವಾದವನ್ನು ಅನ್ವಯಿಸುತ್ತಾ ಬೆಳಸಲೇಬೇಕಾದ ಸಂಕ್ರಮಣ ಘಟ್ಟದ ಸವಾಲನ್ನು ಮಾರ್ಕ್ಸ್‌ವಾದಿಗಳು ಎದುರಿಸುತ್ತಿದ್ದಾರೆ.

ಆದರೆ ಇದು ಕೇವಲ ಮಾರ್ಕ್ಸ್‌ವಾದಿ ಸಮಾಜವಾದಿಗಳಿಗೆ ಮಾತ್ರ ಅನ್ವಯಿಸುವ ತಾತ್ಪರ್ಯವೇನಲ್ಲ. ಯಾವುದೇ ಸಾಮಾಜಿಕ ಚಳವಳಿ ನಿರ್ದಾಕ್ಷಿಣ್ಯ ಆತ್ಮ ವಿಮರ್ಶೆಯನ್ನೂ ಮತ್ತು ವೈಫಲ್ಯಗಳ ಪೋಸ್ಟ್ ಮಾರ್ಟೆಮ್ ಅನ್ನು ಮಾಡಿಕೊಳ್ಳದಿದ್ದರೆ ಎದುರಿಸಲೇ ಬೇಕಾದದ್ದು ಜಡತೆ. ಸ್ಥಗಿತತೆ.ಅದರ ನಂತರದ ಹಂತ ಕೊಳೆಯುವುದು. ಇದರ ಅಭಿವ್ಯಕ್ತಿ ಆತ್ಮ ವಿಮರ್ಶೆಯ ನಿರಾಕರಣ. ಆತ್ಮ ವೈಭವೀಕರಣ. ಇದನ್ನು ಸ್ಥಾವರಗೊಂಡ ಕಮ್ಯುನಿಷ್ಟರೂ ಮಾಡುತ್ತಾರೆ. ಆಚರಣೆಯೊಪ್ಪದ ಲೋಹಿಯಾವಾದಿಗಳೂ ಮಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲೇ ಲೋಹಿಯಾರವರ ಜನ್ಮಶತಮಾನೋತ್ಸವವನ್ನು ಲೋಹಿಯಾವಾದಿಗಳು, ಅದರಲ್ಲೂ ಕರ್ನಾಟಕದ ಲೋಹಿಯಾವಾದಿಗಳು ಆಚರಿಸುತ್ತಿರುವ ರೀತಿಯನ್ನು ವಿಶ್ಲೇಷಿಸಿದರೆ ನಿರಾಸೆಯುಂಟಾಗುತ್ತಿದೆ. ಲೋಹಿಯಾ ಚಳವಳಿ ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿ ಏಳನ್ನು ಮತ್ತು ಆಳವಾದ ಬೀಳನ್ನು ಕಂಡಿದೆ. ರಾಷ್ಟ್ರಮಟ್ಟದಲ್ಲೂ ಲೋಹಿಯಾವಾದಿಗಳಲ್ಲಿ ಆದಷ್ಟು ಛಿದ್ರೀಕರಣ ಪ್ರಾಯಶಃ ಕಮ್ಯುನಿಸ್ಟ್ ಚಳವಳಿಯಲ್ಲಿ ಮಾತ್ರ ಆಗಿರಬೇಕು. ಆದರೆ ಲೋಹಿಯಾವಾದಿಗಳು ಮಾಡಿದಷ್ಟು ರಾಜಕೀಯ – ಸೈದ್ಧಾಂತಿಕ "ರಾಜಿ"ಕಾರಣ ಯಾವಬಗೆಯ ಕಮ್ಯುನಿಸ್ಟರೂ ಮಾಡಿಕೊಳ್ಳಲಿಲ್ಲವೆಂದೇ ಹೇಳಬೇಕು. ಲೋಹಿಯಾವಾದ ಕೆಲವು ನಿರ್ದಿಷ್ಟ ವ್ಯಕ್ತಿಗಳಲ್ಲಿ ವ್ಯಕ್ತಿಗತ ನೈತಿಕತೆಯಲ್ಲಿ ಪ್ರಜ್ವಲಿಸಿತಾದರೂ ಒಂದು ಚಳವಳಿಯಾಗಿ ಬೆಳಗಿದ್ದು ಕಡಿಮೆ. ಒಬ್ಬ ರಾಜಕೀಯ ನೇತಾರನನ್ನು ನೆನಪು ವಾಸ್ತವವಾಗಿ ಇಂಥಾ ಎಲ್ಲದರ ಮುಕ್ತ ಆತ್ಮ ವಿಮರ್ಶೆಯ ಸಂದರ್ಭವಾಗಬೇಕು.

ಇದೇ ನಿರೀಕ್ಷೆಯನ್ನು ಇಟ್ಟುಕೊಂಡು ನಾನು ಕಳೆದ ವರ್ಷದಿಂದ ನಡೆಯುತ್ತಾ ಬಂದಿರುವ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಈ ಸಂದರ್ಭದಲ್ಲಿ ಕರ್ನಾಟಕ ಪ್ರಮುಖ ಸಮಾಜವಾದಿಗಳು ಮಾಡಿದ ಭಾಷಣಗಳನ್ನು ಕೇಳಿದ್ದೇನೆ, ಮತ್ತು ಬರೆದ ಬಹುಪಾಲು ಲೇಖನಗಳನ್ನು ಓದಿದ್ದೇನೆ. ಆದರೆ ವಿಷಾದದ ಸಂಗತಿಯೆಂದರೆ ಮಾರ್ಕ್ಸ್‌ವಾದಿಗಳಿಗೆ ಆತ್ಮವಿಮರ್ಶೆಯಿಲ್ಲವೆಂದೂ ಹೀಗೆಳೆಯುವ ಮತ್ತು ಭೂತಕಾಲದಲ್ಲಿ ಮಾತ್ರ ಸಂಭ್ರಮಿಸುತ್ತಾರೆಂದು ಕೆಲವೊಮ್ಮೆ ಸಕಾರಣವಾಗಿ ಟೀಕಿಸುವ ಲೋಹಿಯಾವಾದಿಗಳು ಮಾತ್ರ ಇಲ್ಲಿಲ್ಲೂ ತಮ್ಮನ್ನು ಮತ್ತು ತಮ್ಮ ಸಿದ್ಧಾಂತವನ್ನು ಆತ್ಮವಿಮರ್ಶೆಯ ನಿಕಷಕ್ಕೆ ಒಡ್ಡಿಕೊಳ್ಳಲೇ ಇಲ್ಲ.

"ಸಮಾಜವಾದಕ್ಕೆ 75" ತುಂಬಿದಾಗ ಪ್ರಜಾವಾಣಿಯಲ್ಲಿ ಬಾಪೂಹೆದ್ದೂರ ಶೆಟ್ಟಿಯವರು ಒಂದು ಸುದೀರ್ಘ ಲೇಖನ ಬರೆದಿದ್ದರು. ಬೆಂಗಳೂರಿನ ಸೆನೆಟ್ ಹಾಲಿನಲ್ಲಿ ಒಂದಿಡೀದಿನದ ವಿಚಾರ ಸಂಕಿರಣವೂ ನಡೆಯಿತು. ಎರಡೂಕಡೆ ಇದ್ದದ್ದು ಸಾಧನೆಯ ಭಾವನೆಯೇ ಹೊರತು ಸಾಸಿವೆ ಕಾಳಿನಷ್ಟೂ ಆತ್ಮವಿಮರ್ಶೆಯಿರಲಿಲ್ಲ. ಬಾಪೂ ಹೆದ್ದೂರ ಶೆಟ್ಟಿಯವರ ಲೇಖನದಲ್ಲಂತೂ ಹೆಚ್ಚೂ ಕಡಿಮೆ ಭಾರತದ ಈಗಲೂ ಸಮಾಜವಾದಿ ಪಥದಲ್ಲಿದೆ ಎಂಬ ಧಾರ್ಷ್ಟ್ಯದ ವಿಶ್ಲೇಷಣೆಯಿತ್ತು.

ಈ ದೇಶ ಜಾಗತೀಕರಣದ ದಾಳಿಗೆ ಸಿಕ್ಕಿ ಗಳಿಸಿದ್ದ ಎಲ್ಲವನ್ನೂ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ 1934ರಲ್ಲಿ ತಾವು ಅರ್ಪಿಸಿದ ಸಮಾಜವಾದಿ ಪ್ರಣಾಳಿಕೆಯನ್ನೇ ನೆಹರೂ ಆಚರಣೆಗೆ ತಂದರೆಂದೂ, ಈಗಲೂ ಭಾರತ ತಲೆ ಎತ್ತಿ ನಿಂತಿರುವುದಕ್ಕೇ ತಾವೇ ಕಾರಣವೆಂಬ ಹುಂಬ ಹೆಗ್ಗಳಿಕೆಯೇ ಆ ಲೇಖನದ ಮತ್ತು ಆ ಸಮಾರಂಭದ ಪ್ರಮುಖ ಧ್ವನಿಯಾಗಿತ್ತು. ಮಾರ್ಚ್ 23ರ ಸಂದರ್ಭದಲ್ಲಿ ಮತ್ತೆ ಗಣಪತಿಯಪ್ಪ ಹಾಗೂ ಡಾ. ನಟರಾಜ್ ಹುಳಿಯಾರ್‌ರವರು ಪ್ರಜಾವಾಣಿಯಲ್ಲಿ ಒಂದಿಡೀ ಪುಟದಷ್ಟು ಲೇಖನವನ್ನು ಬರೆದರು. ಇದರಲ್ಲೂ ಚರಿತ್ರೆಯ ಸಂಭ್ರಮದ ನೆನಪುಗಳು ಮತ್ತು ಲೋಹಿಯಾವಾದದ ಪ್ರಸ್ತುತತೆಗಳೇ ಪ್ರಮುಖವಾಗಿತ್ತೇ ವಿನಃ ಪ್ರಸ್ತುತ ಸಮಾಜವಾದಿ ಚಳವಳಿಯ ವೈಫಲ್ಯವನ್ನೂ ಗುರುತಿಸುವ ಸಾಹಸವನ್ನೇ ಈ ಚಿಂತಕರು ಮಾಡಿರಲಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಕಳೆದ ಮೇ-2ರಂದು ನಡೆದ ಲೋಹಿಯಾ ಜನ್ಮಶತಮಾನೋತ್ಸವದ ಅದ್ದೂರಿ ಸಮಾರಂಭದಲ್ಲಿ ಭಾಗವಹಿಸಿದ್ದ ಈ ನಾಡಿನ ಅತ್ಯಂತ ಪ್ರಮುಖ ಸಮಾಜವಾದಿಗಳಾದ ಯು.ಆರ್. ಅನಂತಮೂರ್ತಿ, ರವಿವರ್ಮ ಕುಮಾರ್, ನಟರಾಜ್ ಹುಳಿಯಾರ್‌ರಂತವರು ಒಕ್ಕೊರಲಿಂದ ನೀಡಿದ ಘೋಷಣೆಯೇನೆಂದರೆ **"ಸಮಾಜವಾದದ ವೈಫಲ್ಯದ ಪೋಸ್ಟ್ ಮಾರ್ಟೆಮ್ ಅಗತ್ಯವಿಲ್ಲ"!**

ಹೀಗೆ ಆತ್ಮವಿಮರ್ಶೆಯನ್ನೇ ಸೈದ್ಧಾಂತಿಕವಾಗಿ ನಿರಾಕರಿಸಿಬಿಟ್ಟಮೇಲೆ ಅಂಥಾ ಸಿದ್ಧಾಂತ ಒಂದು ಚಳವಳಿಯಾಗುವುದು ಹೇಗೆ ಸಾಧ್ಯ? ಹಿಂದೂತ್ವ ಮತ್ತು ಜಾಗತೀಕರಣದ ಜಂಟಿ ಆಕ್ರಮಣಗಳು ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಸಾರಭೂತವಾದ ವ್ಯತ್ಯಾಸಗಳನ್ನು ಕಡಿಮೆ ಮಾಡುತ್ತಿರುವ ಈ ಹೊತ್ತಿನಲ್ಲಿ ಈ ಲೋಹಿಯಾವಾದಿ ಮುಖಂಡರು ಸಮಾಜವಾದವನ್ನು ಬೆಳೆಸಲು ಹಾಕಿಕೊಂಡ ಕಾರ್ಯಕ್ರಮವಾದರೂ ಏನು? ಪ್ರತ್ಯೇಕ ಸಮಾಜವಾದಿ ಚಳವಳಿ ಕಟ್ಟುವುದು ಅಸಾಧ್ಯ ಮತ್ತು ಅನಗತ್ಯ. ಹೀಗಾಗಿ ಬಿಜೆಪಿಯೇತರ ವಿರೋಧ ಪಕ್ಷಗಳಲ್ಲಿ ಒಂದು ಸಮಾಜವಾದಿ ಬ್ಲಾಕ್ ಅನ್ನು ಕಟ್ಟಲು ಪ್ರಯತ್ನಿಸುವುದು! ಇದು ತೋರಿಕೆಗೇ ಕಾಣುವಂತೆ ಒಂದು ಡಿಫೀಟಿಸ್ಟ್ ಅಜೆಂಡಾ!

ಅಂದಿನ ಎಲ್ಲರ ಭಾಷಣಗಳಲ್ಲೂ ಇತರ ಸಿದ್ಧಾಂತಗಳ ಅನುಚಿತ ವಿಮರ್ಶೆಗಳು ರಾರಾಜಿಸುತ್ತಿದ್ದವು. ಅದೇ ರೀತಿ ಚಳವಳಿಗಳು ಮಾಡಿರುವ ಎಲ್ಲಾ ಸಾಧನೆಗಳು ಕೇವಲ ಲೋಹಿಯಾವಾದಿಗಳ ಪ್ರಯತ್ನದಿಂದಲೇ ಸಂಭವಿಸಿತೆಂಬ ಅಪ್ರಾಮಾಣಿಕ ಹೆಗ್ಗಳಿಕೆಗಳು ಇಣುಕುತ್ತಿದ್ದವು. ಉದಾಹರಣೆಗೆ ಈ ದೇಶದಲ್ಲಿ ಭೂ ಸುಧಾರಣಾ ನೀತಿಗಳು ಜಾರಿಗೆ ಬರಲು ಕಮ್ಯುನಿಸ್ಟ್ ಚಳವಳಿಗಳದ್ದೂ ಪ್ರಮುಖ ಪಾತ್ರವಿದೆ. ಅದೇ ರೀತಿ ಕರ್ನಾಟಕದಲ್ಲಿ ದೇವರಾಜ್ ಅರಸ್ ತಂದ ಭೂ ಸುಧಾರಣೆ ನೀತಿಯು ಅದು ಜಾರಿಯಾದ ರೂಪದಲ್ಲಿ ಬರಲು ಕಾರಣವಾದದ್ದು ಕಮ್ಯುನಿಸ್ಟ್ ಕಕ್ಕಿಲ್ಲಾಯ ನೇತೃತ್ವದ ಸದನಸಮಿತಿ ಎಂಬುದನ್ನೂ ಯಾರೂ ಜ್ಞಾಪಿಸಿಕೊಳ್ಳಲಿಲ್ಲ. ಹಾಗೆಯೇ ಆಂಧ್ರ, ಪ. ಬಂಗಾಳ, ಕೇರಳ, ಆಂಧ್ರ ಇನ್ನಿತ್ಯಾದಿ ಕಡೆಗಳಲ್ಲಿ ಭೂ ಸುಧಾರಣೆ ನೀತಿಗಳು ಅನುಷ್ಠಾನಕ್ಕೆ ಬಂದದ್ದೇ ಕಮ್ಯುನಿಸ್ಟ್ ಚಳವಳಿಗಳಿಂದ ಎಂಬುದನ್ನು ಕೇರಳವನ್ನೂ ಚೆನ್ನಾಗಿ ಬಲ್ಲ ಅನಂತಮೂರ್ತಿಗಳೂ ಒಮ್ಮೆಯೂ ನೆನಪು ಮಾಡಿಕೊಳ್ಳಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇಂದು ಛಿದ್ರಛಿದ್ರವಾಗಿರುವ ಸಮಾಜವಾದಿ ಚಳವಳಿ ಮತ್ತು ಶತ್ರುಗಳೊಂದಿಗೂ ರಾಜಿಯಾದ ಚಳವಳಿಯ ನಾಯಕರ ಬಗ್ಗೆ ವಿಮರ್ಶೆಯಿರಲಿ ಅಂದು ಅವರೇ ಸಮಾರಂಭದ ಕೇಂದ್ರಬಿಂದುವಾಗಿದ್ದದ್ದು ಅಶ್ಲೀಲವೇ ಆಗಿತ್ತು.

ಅನಂತಮೂರ್ತಿಗಳಂತೂ ಚಳವಳಿಯಾಗಿ ನಾವು ಸಾಧನೆ ಮಾಡದಿದ್ದರೂ ಇಂದು ನಾಡಿನಲ್ಲಿ ನಡೆಯುತ್ತಿರುವ ಎಲ್ಲಾ ಚಳವಳಿಗಳ ಹಿಂದೆ ಲೋಹಿಯಾ ಸ್ಫೂರ್ತಿ ಪಡೆದ ವ್ಯಕ್ತಿಗಳಿದ್ದಾರೆ ಎಂಬುದೇ ಲೋಹಿಯಾವಾದದ ಯಶಸ್ಸಿಗೆ ದ್ಯೋತಕ ಎಂದು ಘೋಷಿಸಿಬಿಟ್ಟರು ಕರ್ನಾಟಕದಲ್ಲಿ ನಡೆದ ಭಾಷಾ ಚಳವಳಿ, ರೈತ ಚಳವಳಿ, ದಲಿತ ಚಳವಳಿಯ ನಾಯಕರೆಲ್ಲರೂ ಲೋಹಿಯಾವಾದಿಗಳೆ ಎಂದು ಭೂತಕಾಲದ ಸಾಧನೆಗಳಲ್ಲಿ ಸಂಭ್ರಮ ಪಟ್ಟ ಈ ನಾಯಕರು ಇಂದು ಆ ಎಲ್ಲಾ ಚಳವಳಿಗಳು ಛಿದ್ರವಾಗುವುದಕ್ಕೂ ಲೋಹಿಯಾವಾದದ ಪಾಲೆಷ್ಟು ಮತ್ತು ಲೋಹಿಯಾವಾದಿಗಳ ಪಾಲೆಷ್ಟು ಎಂಬ ಸಣ್ಣ ಪ್ರಶ್ನೆಯನ್ನೂ ಹಾಕಿಕೊಳ್ಳಲಿಲ್ಲ. ಕಮ್ಯುನಿಸ್ಟ್ ಚಳವಳಿಯ ವಿಮರ್ಶೆಗೆ ಬಳಸುವ ಯಾವ ಹತಾರವನ್ನು ಈ ನಾಯಕರು ಲೋಹಿಯಾವಾದೀ ಚಳವಳಿಯ ವಿಮರ್ಶೆಗೆ ಬಳಸದೇ ಇದ್ದದ್ದು ರಾಜಕೀಯ ಭ್ರಷ್ಟತನ ಮಾತ್ರವಲ್ಲ.

ತತ್ವಭ್ರಷ್ಟತನವೂ ಹೌದಲ್ಲವೇ? ಸಾರಾಂಶದಲ್ಲಿ ಇದು ಲೋಹಿಯಾವಾದಕ್ಕೆ ಇಂದಿನ ಕಾಲ ಸಂದರ್ಭಕ್ಕೆ ತಕ್ಕಂತೆ ಮರುಹುಟ್ಟನ್ನು ಕೊಡುವ ಅಜೆಂಡಾವೆ ಕರ್ನಾಟಕದ ಲೋಹಿಯಾ ವಾದಿಗಳಿಗಿಲ್ಲವೇನೋ ಎಂಬ ಅನುಮಾನವನ್ನೂ ಮೂಡಿಸುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿಗತದ ಸಂಭ್ರಮವು ವರ್ತಮಾನದಲ್ಲಿ ಅದು ಹುಟ್ಟಿಹಾಕುವವೈರುಧ್ಯವನ್ನೂ ಅರ್ಥ ಮಾಡಿಕೊಳ್ಳದಷ್ಟರ ಮಟ್ಟಿಗೆ ಈ ಮಹಾನ್ ಲೋಹಿಯಾ ವಾದಿಗಳನ್ನು ಕುರುಡರನ್ನಾಗಿ ಮಾಡಿತ್ತು ಎಂಬುದಕ್ಕೆಈ ಕೆಲವು ಉದಾಹರಣೆಗಳೇಸಾಕು.

ತತ್ವಭ್ರಷ್ಟತನವೂ ಹೌದಲ್ಲವೇ? ಸಾರಾಂಶದಲ್ಲಿ ಇದು ಲೋಹಿಯಾವಾದಕ್ಕೆ ಇಂದಿನ ಕಾಲ ಮತ್ತು ಸಂದರ್ಭಕ್ಕೆ ತಕ್ಕಂತೆ ಮರುಹುಟ್ಟನ್ನು ಕೊಡುವ ಅಜೆಂಡಾವೆ ಕರ್ನಾಟಕದ ಲೋಹಿಯಾ ವಾದಿಗಳಿಗಿಲ್ಲವೇನೋ ಎಂಬ ಅನುಮಾನವನ್ನೂ ಮೂಡಿಸುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿಗತದ ಸಂಭ್ರಮವು ವರ್ತಮಾನದಲ್ಲಿ ಅದು ಹುಟ್ಟಿಹಾಕುವ ವೈರುಧ್ಯವನ್ನೂ ಅರ್ಥಮಾಡಿಕೊಳ್ಳದಷ್ಟರ ಮಟ್ಟಿಗೆ ಈ ಮಹಾನ್ ಲೋಹಿಯಾ ವಾದಿಗಳನ್ನು ಕುರುಡರನ್ನಾಗಿ ಮಾಡಿತ್ತು ಎಂಬುದಕ್ಕೆ ಈ ಕೆಲವು ಉದಾಹರಣೆಗಳೇಸಾಕು.

ಮೊದಲನೆಯದಾಗಿ ಲೋಹಿಯಾವಾದವು ಪರ್ಯಾಯ ನಾಗರಿಕ ದರ್ಶನವನ್ನು ನೀಡಿತು. ನೆಹರೂವಾದಿ ಮತ್ತು ಕಮ್ಯುನಿಸ್ಟ್ ಯೋಜನೆಗಳೆರಡೂ ಆಧುನಿಕತೆಯೆಡೆಗೇ ಮುಖಮಾಡಿದ ಸಿದ್ಧಾಂತವಾದ್ದರಿಂದ ನಿಜವಾದ ಪರ್ಯಾಯ ಗಾಂಧಿವಾದದ ಸ್ಪರ್ಷವಿದ್ದ ಲೋಹಿಯಾವಾದವೇ ಹೊರತು ಕಮ್ಯುನಿಸಮ್ಮಲ್ಲ ಎಂದು ಅನಂತಮೂರ್ತಿಗಳಾದಿಯಾಗಿ ದೇಶದ ಎಲ್ಲಾ ಲೋಹಿಯಾವಾದಿಗಳು ಹೇಳಿಕೊಳ್ಳುತ್ತಾರೆ. ಹಾಗೂ ಸ್ವಾತಂತ್ರ್ಯಾನಂತರ ಗಾಂಧಿ-ಲೋಹಿಯಾ ಮಾದರಿ ಅಭಿವೃದ್ಧಿಯನ್ನು ನಿರಾಕರಿಸಿ ನೆಹರು ಮಾದರಿ ಬಂಡವಾಳಶಾಹಿ ಅಧುನಿಕತೆಯನ್ನು ಅಪ್ಪಿಕೊಂಡಿದ್ದೇ ಭಾರತದ ಇಂದಿನ ಎಲ್ಲಾ ದುರಂತಗಳಿಗೂ ಕಾರಣವೆಂದು ವಿಶ್ಲೇಷಿಸುತ್ತಾರೆ. ಆದರೆ ಅದೇ ಉಸಿರಿನಲ್ಲಿ ಭಾರತ 1934ರಲ್ಲಿ ಸಮಾಜವಾದಿಗಳು ಹಾಕಿಕೊಟ್ಟ ಮಾರ್ಗಸೂಚಿಯಂತೆ ನಡೆದುಕೊಂಡಿದ್ದರಿಂದಲೇ ಇಂದು ತಲೆ ಎತ್ತಿ ನಿಂತಿದೆ ಎಂದೂ ವಾದಿಸುತ್ತಾರೆ!! ಎರಡು ತದ್ವಿರುದ್ಧ ಸಂಗತಿಗಳು ಏಕಕಾಲದಲ್ಲಿ ಹೇಗೆ ಸಂಭವಿಸಲು ಸಾಧ್ಯ?

ಕಮ್ಯುನಿಸಮ್ಮನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ವಚನ ಮಾಡುವ ಅನಂತಮೂರ್ತಿಗಳಂಥ ಲೋಹಿಯಾವಾದಿಗಳು ಕಮ್ಯುನಿಸಮ್ಮಿನ ಆಚರಣೆಯಲ್ಲಿ ಸ್ಟಾಲಿನ್ನಿನ ರಷ್ಯಾಗೂ ಮಾವೋನ ಚೀನಾಗೂ ಅಜಗಜಾಂತರ ವ್ಯತ್ಯಾಸವಿದ್ದದ್ದನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸುತ್ತಾರೆ. ಎಲ್ಲಾ ಕಮ್ಯುನಿಸ್ಟರು ಬಂಡವಾಳಶಾಹಿ ಆಧುನಿಕತೆಯ ಪ್ರತಿಪಾದಕರೆಂದೇ ವಾದಿಸುತ್ತಾರೆ. ಆದರೆ ಲೋಹಿಯಾಗಿಂತ ಎಷ್ಟೋ ಮೊದಲು ಚೀನಾದಲ್ಲಿ ಮಾವೋ ನೇತೃತ್ವದಲ್ಲಿ ಪರ್ಯಾಯ ನಾಗರಿಕತೆಯ ಮತ್ತು ಹೊಸ ಮನುಷ್ಯನ ಹುಟ್ಟಿಗೆ ನಡೆದ ಮಹಾನ್ ಪ್ರಯತ್ನವನ್ನು ಬಹಳ ಸುಲಭವಾಗಿ ಹೀಯಾಳಿಸುತ್ತಾರೆ. ಅದು ಮಹಾನ್ ವೈಫಲ್ಯವನ್ನೂ ಕಂಡಿದ್ದೂ ನಿಜ. ಆದರೆ ಗಾಂಧೀ – ನೆಹರೂರವರ ಅಭಿವೃದ್ಧಿ ಮೀಮಾಂಸೆಯಲ್ಲಿ ಭಿನ್ನತೆಯನ್ನು ಕಾಣಬಲ್ಲ ಈ ಬುದ್ಧಿಜೀವಿಗಳು ಮಾವೋನ ಅಭಿವೃದ್ಧಿ ಮೀಮಾಂಸೆಗೂ ಮತ್ತು ಇಂದಿನ ಬಂಡವಾಳಶಾಹಿ ಚೀನಾದ ಜನಕ ಡೆಂಗ್-ಶೋ-ಪೆಂಗ್‌ನ ಅಭಿವೃದ್ಧಿ ಮೀಮಾಂಸೆಗೂ ಇದ್ದ ವ್ಯತ್ಯಾಸಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡುತ್ತಾರೆ.

ಅಂದಿನ ಸಮಾರಂಭದಲ್ಲಿ ಮತ್ತೊಬ್ಬ ಲೋಹಿಯಾವಾದಿ ಚಿಂತಕ ರವಿವರ್ಮಕುಮಾರ್‌ರವರು ಲೋಹಿಯಾವಾದಿಗಳು ವಿರೋಧಪಕ್ಷವಾಗಿ ಮಾತ್ರ ಸಮರ್ಥರು, ಆಳುವಪಕ್ಷವಾಗಿ ಅಲ್ಲ ಎನ್ನುತ್ತಾರೆ. ಆದರೆ ಬಿಹಾರದ

ನಿತೀಶ್ ಕುಮಾರ್‌ರನ್ನು ನೋಡಿ ಅವರು ಬಿಹಾರನ್ನು ಹೇಗೆ ಬದಲಾಯಿಸಿಬಿಟ್ಟಿದ್ದಾರೆ, ಇಂದು ಬಿಹಾರದ ಅಭಿವೃದ್ಧಿ ದರ ಶೇ.8ರಷ್ಟಿದೆ. ಯಡಿಯೂರಪ್ಪನವರು ಅನುಸರಿಸುವುದಿದ್ದರೆ ನಿತೀಶ್ ಕುಮಾರ್‌ರನ್ನು ಅನುಸರಿಸಬೇಕು ಎಂದು ಕರೆನೀಡಿದರು.

ಲೋಹಿಯಾವಾದಿಗಳ ವರ್ಚಸ್ಸನ್ನು ಹೊಗಳುವ ಭರದಲ್ಲಿ ಅವರು ನಿತೀಶ್ ಕುಮಾರರ ಎನ್.ಡಿ.ಎ ಸಖ್ಯವನ್ನೂ ಅದರ ಹಿಂದಿರುವ ಸೈದ್ಧಾಂತಿಕ ರಾಜಿಕೋರತನವನ್ನೂ ಕಿಂಚಿತ್ತೂ ವಿಮರ್ಶಿಸಲಿಲ್ಲ. ಅದೇ ರೀತಿ ಈ ಅಭಿವೃದ್ಧಿ ಮಾದರಿಗೂ ಕೇಂದ್ರದ ಅಭಿವೃದ್ಧಿ ಮಾದರಿಗೂ ಯಾವ ವ್ಯತ್ಯಾಸವೂ ಇಲ್ಲವೆಂಬ ವೈರುಧ್ಯ ಅವರ ಗಮನಕ್ಕೇ ಬರಲಿಲ್ಲ. ನಿತೀಶ್‌ಕುಮಾರ್ ಅಭಿವೃಧಿ ಮಾದರಿಗೂ ಲೋಹಿಯಾ ಪ್ರತಿಪಾದಿಸಿದರೆಂದು ಅನಂತ ಮೂರ್ತಿಯವರು ಹೇಳುವ ಆಧುನಿಕ ನಾಗರಿಕತೆ ವಿರೋಧೀ ಮಾರ್ಗಕ್ಕೂ ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆಯನ್ನೂ ಅವರು ಹಾಕಿಕೊಳ್ಳಲಿಲ್ಲ. ಚೀನಾದಲ್ಲಿ ಮತ್ತು ಪ.ಬಂಗಾಳದಲ್ಲಿ ಕಮ್ಯುನಿಸಮ್ಮಿನ ಮುಸುಕಿನಲ್ಲಿರುವ ಅಭಿವೃದ್ಧಿ ಮಾದರಿಯೂ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯೇ. ಬಿಹಾರದಲ್ಲಿ ಲೋಹಿಯಾವಾದಿ ಸಮಾಜವಾದಿ ಮುಸುಕಿನಲ್ಲಿರುವ ಅಭಿವೃದ್ಧಿ ಮಾದರಿಯೂ ಅಮೆ ರಿಕನ್ ಪ್ರಣೀತ ಬಂಡವಾಳಶಾಹಿ ಅಭಿವೃದ್ಧಿಮಾದರಿಯೇ. ಹಾಗಿದ್ದಲ್ಲಿ ಚೀನಾದ ವಿಶ್ಲೇಷಣೆಗೆ ಬಳಸುವ ಹತಾರವನ್ನು ಬಿಹಾರದ ವಿಶ್ಲೇಷಣೆಗೆ ಬಳಸಲು ವಿಫಲಾಗುವ ಚಿಂತನೆಯ ನೈತಿಕತೆಯೇನು? ಇವೆಲ್ಲವನ್ನೂ ತಪ್ಪನ್ನು ಹುಡುಕಲೆಂದು ಆಡುತ್ತಿರುವ ಮಾತುಗಳಲ್ಲ. ಇಂದು ಚಳವಳಿಗಳೆಲ್ಲಾ ವಿಘಟನೆಯಾಗುತ್ತಿರುವ ಕಾಲ. 60ರ ದಶಕದಲ್ಲಿ ಸಾಮಾಜಿಕ ಕಳಕಳಿ ಸ್ವಲ್ಪ ಕಾವನ್ನು ಪಡೆದರೂ ತಾನಾಗಿಯೇ ಚಳವಳಿ ಆಗುತ್ತಿತ್ತು. ಆದರೆ ಇಂದು ಜಾಗತೀಕರಣ ಪರಮ ಸ್ವಾರ್ಥವನ್ನೂ, ಅಭಿವೃದ್ಧಿಯ ಭ್ರಾಂತಿಯನ್ನು ಬಿತ್ತಿದೆ.

ಅದು ನರಭಕ್ಷಕ ಬ್ರಾಹ್ಮಣವಾದದೊಂದಿಗೆ ಮೈತ್ರಿ ಮಾಡಿ ಕೊಂಡಿದೆ. ಇವೆರಡರ ಜಂಟೀ ಕಾರ್ಯಾಚರಣೆ ಸಾಮಾ ಜಿಕ ಚಳವಳಿಗಳಿಗೆ ಹೊಸ ಸವಾಲನ್ನು ಹಾಕಿದೆ. 67ರ ಕಾಲ ಸಂದರ್ಭವೂ ಬದಲಾಗಿದೆ. ಸಿದ್ಧಾಂತ ಮತ್ತು ಕಾರ್ಯಾ ಚರಣೆಗಳೂ ಏಕಕಾಲದಲ್ಲಿ ಇನ್ನಷ್ಟು ಕ್ರಾಂತಿಕಾರಿಯೂ ಮತ್ತು ಪ್ರಜಾತಾಂತ್ರಿಕವೂ ಆಗದೆ ಪರ್ಯಾಯ ನಾಗರಿ ಕತೆಯನ್ನಿರಲಿ ಚಳವಳಿಯನ್ನೇ ಕಟ್ಟಲು ಸಾಧ್ಯವಿಲ್ಲ. ಇಂಥಾ ಸಂಕ್ರಮಣ ಕಾಲಘಟ್ಟದಲ್ಲಿ ಮೊದಲಿಗೇ ಹೇಳಿದಂತೆ ಹಳೆಯ ವಿವೇಕದ ಕಂಟಿನ್ಯುಟಿಯ ಜೊತೆಗೆ ಹೊಸ ಸಂದರ್ಭವು ಕೇಳುತ್ತಿರುವ ಬದಲಾವಣೆಯನ್ನೂ ಮೈಗೂಡಿಸಿಕೊಳ್ಳಬೇಕಿದೆ. ಅದಕ್ಕೆ ಪೂರ್ವಭಾವಿಯಾಗಿ ಅಗತ್ಯವಿರುವುದು ನಮ್ಮ ವೈಫಲ್ಯಗಳ ನಿರ್ದಾಕ್ಷಿಣ್ಯ ಪೋಸ್ಟ್ ಮಾರ್ಟೆಮ್. ನಿರ್ದಾಕ್ಷಿಣ್ಯ ಆತ್ಮವಿಮರ್ಶೆ. ಇಲ್ಲದಿದ್ದರೆ ಅಲ್ಪ ತೃಪ್ತಿ ನಿಧಾನಕ್ಕೆ ಆತ್ಮವಂಚನೆಗೆ ದಾರಿಮಾಡಿಕೊಡುತ್ತದೆ. □

ಬೆಂಗಳೂರು ವಿಶ್ವವಿದ್ಯಾಲಯವೆಂಬ
ಗುಜರಿ ಅಂಗಡಿ

(11ನೇ ಪುಟದಿಂದ)

ಮಾಡಲು ಇರುವಷ್ಟು ಉತ್ಸಾಹ ಮೌಲ್ಯಮಾಪನವನ್ನು ಪಾರದರ್ಶಕಗೊಳಿಸುವತ್ತ ಖಂಡಿತ ಇಲ್ಲ. ನೊಂದ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಯ ಝರಾಕ್ಸ್ ಪ್ರತಿ ನೀಡಲು ವಿಶ್ವ ವಿದ್ಯಾಲಯಕ್ಕೆ ಎದುರಾಗಿರುವ ಅಡ್ಡಿಯೇನು? ಉತ್ತರ ಪತ್ರಿಕೆಯ ನಕಲು ಪ್ರತಿಯನ್ನು ವಿದ್ಯಾರ್ಥಿಗಳಿಗೆ ನೀಡಿದರೆ ತನ್ನ ಕಳಪೆ ಮೌಲ್ಯಮಾಪನದ ನಿಜವಾದ ಬಂಡವಾಳ ಹೊರಜಗತ್ತಿಗೆ ಸುಲಭವಾಗಿ ಗೊತ್ತಾಗಿಬಿಡುತ್ತದೆ ಎಂಬ ಅಳುಕು ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ಇದ್ದಂತಿದೆ.

ಹೀಗಾಗಿ ಬೆಂಗಳೂರು ವಿ.ವಿ. ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ದಿಟ್ಟವಾದ ನಿಲುವು ತೆಗೆದುಕೊಳ್ಳುವ ಬದಲು ಹೊಣೆಗೇಡಿಯಂತೆ ವರ್ತಿಸುತ್ತಿದೆ. ಬಹಳಷ್ಟು ಸಲ ಕರೆಸ್ಪಾಂಡೆನ್ಸ್ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳನ್ನು ಮೌಲ್ಯಮಾಪಕರು ಅವರು ತೆಗೆದು ಕೊಂಡಿರುವ ಹೆಚ್ಚುವರಿ ಪುಟಗಳ ತೂಕದ ಆಧಾರದ ಮೇಲೆ ಅಂಕ ನೀಡುತ್ತಾರೆ ಎಂಬ ಮಾತುಗಳು ಕೇಳಿಬರುತ್ತವೆ. ರೆಗ್ಯುಲರ್ ಮತ್ತು ಕರೆಸ್ಪಾಂಡೆನ್ಸ್ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವಲ್ಲಿ ವಿಶ್ವ ವಿದ್ಯಾಲಯ ಮತ್ತು ಮೌಲ್ಯಮಾಪಕರು ಇಂಥ ಕೆಳದರ್ಜೆಯ ತಾರತಮ್ಯ ತೋರುತ್ತಿರುವುದೇಕೇ? ವಿಶ್ವವಿದ್ಯಾಲಯದಲ್ಲಿ ಬಾಹ್ಯ ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ತರಗತಿಯ ಪಾಠಗಳನ್ನು ಕೇಳಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗಿಂತ ಕಡಿಮೆ ಬುದ್ಧಿವಂತರು ಎಂದು ನಿರ್ಧರಿಸಲು ಯಾವುದಾದರೂ ವೈಜ್ಞಾನಿಕ ಮಾನ ದಂಡವಿದ್ದರೆ ಬಲ್ಲವರು ತಿಳಿಸಲಿ.

ಎನ್.ಎ.ಎ.ಸಿ. (National Assessment and Accreditation Council)ನವರು ಐದು ಸ್ಟಾರ್‌ಗಳ ರ್‍ಯಾಂಕಿಂಗ್ ನೀಡಿರುವುದನ್ನೇ ಎದೆಯುಬ್ಬಿಸಿಕೊಂಡು ಊರೆಲ್ಲ ಡಂಗುರ ಸಾರುವ ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಣದ ಗುಣಮಟ್ಟದ ವಿಚಾರದಲ್ಲಿ ಮಾತ್ರ ಥೇಟ್ ಕಲಾಸಿಪಾಳ್ಯದ ಬಸ್‌ನಿಲ್ದಾಣದಂತಿದೆ. ಪರೀಕ್ಷೆ ಮತ್ತು ಮೌಲ್ಯಮಾಪನದ ವಿಚಾರಗಳಲ್ಲಿ ಕರ್ನಾಟಕದ ಬಹುತೇಕ ಎಲ್ಲ ವಿಶ್ವ ವಿದ್ಯಾಲಯಗಳು ಹೆಚ್ಚು ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದರೂ ಈ ವಿಶ್ವವಿದ್ಯಾಲಯ ಮಾತ್ರ ಅದೇ ಹಳೆಯ ಓಬಿರಾಯನ ಕಾಲದ ರೋಗಗ್ರಸ್ತ ಸ್ಥಿತಿಯಲ್ಲೇ ಇನ್ನೂ ಮುಂದುವರೆಯುತ್ತಿದೆ. ಇನ್ನೊಂದು ರೀತಿಯಲ್ಲಿ ಈ ವಿಶ್ವವಿದ್ಯಾಲಯ ಭ್ರಷ್ಟರ ಸ್ವರ್ಗದಂತಿದೆ. ದುಡ್ಡು ಚೆಲ್ಲಿದರೆ ಪರೀಕ್ಷೆ, ಮೌಲ್ಯಮಾಪನ, ಮರುಮೌಲ್ಯ ಮಾಪನಗಳರಗಳೆಗಳೇಬೇಡ, ಮೂರುಮುಕ್ಕಾಲುದಿನಗಳಲ್ಲಿ ನಿಮ್ಮ ಕಾಲಬುಡದಲ್ಲಿ ಮಾರ್ಕ್ಸ್‌ಕಾರ್ಡ್ ಬಂದು ಬಿದ್ದಿರುತ್ತದೆ.

ದುಡ್ಡಿಗಾಗಿ ವಿಶ್ವವಿದ್ಯಾಲಯವನ್ನೇ ಹರಾಜಿಗಿಡುವ ದುಡ್ಡುಬಾಕರು ಇಲ್ಲಿ ದಂಡಿಯಾಗಿ ಸಿಗುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದ ದೂರ ಶಿಕ್ಷಣ ಮತ್ತು ಅಂಚೆ ತೆರಪಿನ ಕೇಂದ್ರದಿಂದ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುವುದಕ್ಕಿಂತ ನಿರಕ್ಷರಿಯಾಗಿ ಉಳಿದುಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅನೇಕ ನತದೃಷ್ಟ ವಿದ್ಯಾರ್ಥಿಗಳಿಗೆ ಅನ್ನಿಸಿದರೆ ಅದು ಸುಳ್ಳಲ್ಲ.

□



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ದಲಿತ ಚಳವಳಿ: ಐಕ್ಯತೆಯ ಸವಾಲುಗಳು

ನಾ ದಿವಾಕರ

> ಅರಣ್ಯ ರಕ್ಷಣೆ, ಭೂ ಸುಧಾರಣೆ, ಹಸಿರು ಕ್ರಾಂತಿ, ಕೈಗಾರಿಕಾ ಪ್ರಗತಿ, ಬ್ಯಾಂಕುಗಳ ರಾಷ್ಟ್ರೀಕರಣ, ವಿಮಾ ರಾಷ್ಟ್ರೀಕರಣ, ಆದಿ ವಾಸಿಗಳ ರಕ್ಷಣೆ ಹೀಗೆ ೬೦ರ ದಶಕದಲ್ಲಿ ಆಳ್ವಿಕರು ಕೈಗೊಂಡ ಜನಪರ ಎನಿಸುವ ಕಾರ್ಯಕ್ರಮಗಳು ಕ್ರಮೇಣ ಭಾರತೀಯ ಜನತೆಯನ್ನು ಸಾಂತ್ವನ ಗೊಳಿಸುವ ನಿಟ್ಟಿನಲ್ಲಿ ಸಫಲವಾಗಿದ್ದವು. ಆದರೆ ಸರ್ಕಾರದ ಈ ಯೋಜನಾ ಕ್ರಮಗಳ ಫಲ ತಳಮಟ್ಟದ ಜನ ತೆಯನ್ನು ಮುಟ್ಟದೆ ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳ ಮತ್ತು ಉದ್ಯಮಿಗಳ ವಶವಾ ದದ್ದು ದೇಶದ ಜನತೆ ಯಲ್ಲಿ ಮತ್ತೊಮ್ಮೆ ವಿಷಾದದ ಛಾಯೆ ಮೂಡಿಸಿತ್ತು. ಸ್ವತಂತ್ರ ಸಾರ್ವಭೌಮ ಭಾರತ ದಲ್ಲಿ ತಮ್ಮ ಸುಂದರ ಕನಸುಗಳ ಸಾಕಾರ ಕ್ಕಾಗಿ ಹಾತೊರೆಯುತ್ತಿದ್ದ ಜನಸಮುದಾಯಗಳಿಗೆ ನಿರಾಸೆಯ ಕಾರ್ಮೋಡ ಕವಿಯುವ ವಾತಾವರಣ ಕವಿಯಲು ಹೆಚ್ಚುಕಾಲ ಬೇಕಾಗಲಿಲ್ಲ

ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟಗಳ ಪ್ರತಿಫಲವಾಗಿ 1970ರ ದಶಕದಲ್ಲಿ ಕರ್ನಾಟಕದಾದ್ಯಂತ ಜ್ವಾಲಾಮುಖಿಯಂತೆ ಹರಡಿ, ಆಳುವ ವರ್ಗಗಳ, ಸಾಮಾಜಿಕ ವರ್ಗ ಹಿತಾಸಕ್ತಿಗಳ, ಜಾತಿ ವ್ಯವಸ್ಥೆಯ ಹರಿಕಾರರ ಪ್ರಜ್ಞೆಯನ್ನೇ ಅಲುಗಾಡುವಂತೆ ಮಾಡಿದ ದಲಿತ ಚಳುವಳಿ ಇದೇ ವರ್ಗ ಹಿತಾಸಕ್ತಿಗಳ ಆಮಿಷಗಳಿಗೆ ಒಳಗಾಗಿ ಛಿದ್ರವಾದದ್ದು ಕಳೆದ ಶತಮಾನದ ಮಹತ್ತರವಾದ ಘಟನೆಯೂ ಹೌದು ವಿಡಂಬನೆಯೂ ಹೌದು. ರಾಜಕೀಯ, ರಾಜಕಾರಣ, ಹೋರಾಟ, ಪ್ರತಿರೋಧ ಇವೆಲ್ಲವೂ ಕೇವಲ ರಾಜಕೀಯ ಪಕ್ಷ ಸಂಘಟನೆಗಳಿಗೆ ಸೀಮಿತವಾಗಿದ್ದ ಸ್ವತಂತ್ರ ಭಾರತದ ಮೊದಲ ಮೂರು ದಶಕಗಳು ಒಂದು ರೀತಿಯಲ್ಲಿ ಬ್ರಿಟೀಷರ ಶೈಲಿಯನ್ನೇ ಅನುಸರಿಸುವ ದೇಸಿ ಆಳ್ವಿಕರ ಅವಧಿಯಾಗಿತ್ತು. ಸಮಾಜವಾದಿ-ಎಡಪಕ್ಷಗಳನ್ನು ಹೊರತು ಪಡಿಸಿ ಮತ್ತಾವುದೇ ಸಂಘಟನೆಗಳು ಜನಸಾಮಾನ್ಯರ ಹಿತಾಸಕ್ತಿಗಳಿಗಾಗಿ ಪಣತೊಟ್ಟು ಹೋರಾಡುವ ಛಲ ತೋರಿರಲಿಲ್ಲ. ನೆಹರೂ ಆಳ್ವಿಕೆಯ ಮಿಶ್ರ ಆರ್ಥಿಕ ವ್ಯವಸ್ಥೆ ಮತ್ತು ಮೇಲ್ನೋಟಕ್ಕೆ ಕ್ರಾಂತಿಕಾರಿಯಾಗಿ ಕಂಡುಬಂದ ಕೆಲವು ಸಾಮಾಜಿಕ ನ್ಯಾಯವನ್ನೊದಗಿಸುವ ಕ್ರಮಗಳು ಭಾರತೀಯ ಜನತೆಯನ್ನು ಸಮ್ಮೋಹನಗೊಳಿಸಿತ್ತು.

ಆದರೆ ಬೂದಿ ಮುಚ್ಚಿದ ಕೆಂಡದಂತೆ ಸುಪ್ತವಾಗಿದ್ದ ದೇಶದ ದುಡಿಯುವ ಜನಗಳ ಅಂತರಂಗದ ಆಕ್ರೋಶಗಳು ಆಳ್ವಿಕರ ಗಮನಕ್ಕೆ ಬರಲು ಹೆಚ್ಚಿನ ಸಮಯ ಬೇಕಾಗಿರಲಿಲ್ಲ. ಸಮಾಜವಾದದ ಮುಖವಾಡ, ಸಮತಾವಾದದ ಉತ್ಪ್ರೇಕ್ಷೆಗಳು ಬಂಡವಾಳ ವ್ಯವಸ್ಥೆಯ ನೆರಳಿನಲ್ಲಿ ಹೆಚ್ಚು ದಿನ ಪ್ರಕಾಶಿಸಲು ಸಾಧ್ಯವಾಗಲೂ ಇಲ್ಲ. ಭೂ ಸುಧಾರಣೆ, ಉದ್ಯೋಗ ಮೀಸಲಾತಿ, ಮಹಿಳಾ ಸಬಲೀಕರಣ, ಆದಿವಾಸಿಗಳ ಅಭಿವೃದ್ಧಿ ಇವೆಲ್ಲವೂ ಆಳುವ ವರ್ಗಗಳ ಕಣ್ಣೊರೆಸುವ ತಂತ್ರಗಳೆಂಬ ಸತ್ಯ 1960ರ ದಶಕದ ಪ್ರಾರಂಭದಲ್ಲೇ ಜನತೆಗೆ ಅರಿವಾಗತೊಡಗಿತ್ತು. ಭಾರತದ ಆಳ್ವಿಕರ ಸಾಮ್ರಾಜ್ಯಶಾಹಿ ಪ್ರಜ್ಞೆ ಮತ್ತು ಭೌಗೋಳಿಕ ಅಧಿಪತ್ಯದ ಒಲವು ಅನೇಕ ಜನಸಮುದಾಯಗಳ ಆಕ್ರೋಶಕ್ಕೆ ಗುರಿಯಾಗಿತ್ತು. ನಾಗಾಲ್ಯಾಂಡ್, ಮಣಿಪುರ, ಮಿಝೋರಾಂ, ಅಸ್ಸಾಂ ಮುಂತಾದ ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತೆಯ ಬೀಜಗಳು ಮೊಳೆ ಯಲಾರಂಭಿಸಿದ್ದವು. ಅವ್ಯಕ್ತವಾಗಿದ್ದ ಜನ ಸಮುದಾಯಗಳ ಪ್ರತಿರೋಧದ ದನಿ ಬಹಿರಂಗವಾಗಿ ಕಾಣಿಸಿಕೊಳ್ಳ ತೊಡಗಿದ ಕೂಡಲೇ ಭಾರತದ ಆಳ್ವಿಕರು ತಮ್ಮದೇಆದ ಮಾರ್ಗೋಪಾಯಗಳನ್ನು ಅನುಸರಿಸಲಾರಂಭಿಸಿದ್ದರು.

ಅರಣ್ಯ ರಕ್ಷಣೆ, ಭೂ ಸುಧಾರಣೆ, ಹಸಿರು ಕ್ರಾಂತಿ, ಕೈಗಾರಿಕಾ ಪ್ರಗತಿ, ಬ್ಯಾಂಕುಗಳ ರಾಷ್ಟ್ರೀಕರಣ, ವಿಮಾ ರಾಷ್ಟ್ರೀಕರಣ, ಆದಿವಾಸಿಗಳ ರಕ್ಷಣೆ ಹೀಗೆ 60ರ ದಶಕದಲ್ಲಿ ಆಳ್ವಿಕರು ಕೈಗೊಂಡ ಜನಪರ ಎನಿಸುವ ಕಾರ್ಯಕ್ರಮಗಳು ಕ್ರಮೇಣ ಭಾರತೀಯ ಜನತೆಯನ್ನು ಸಾಂತ್ವನಗೊಳಿಸುವ ನಿಟ್ಟಿನಲ್ಲಿ ಸಫಲವಾಗಿದ್ದವು. ಆದರೆ ಸರ್ಕಾರದ ಈ ಯೋಜನಾ ಕ್ರಮಗಳ ಫಲ ತಳಮಟ್ಟದ ಜನತೆಯನ್ನು ಮುಟ್ಟದೆ ಪಟ್ಟ ಭದ್ರ ರಾಜಕೀಯ ಹಿತಾಸಕ್ತಿಗಳ ಮತ್ತು ಉದ್ಯಮಿಗಳ ವಶವಾದದ್ದು ದೇಶದ ಜನತೆಯಲ್ಲಿ ಮತ್ತೊಮ್ಮೆ ವಿಷಾದದ ಛಾಯೆ ಮೂಡಿಸಿತ್ತು. ಸ್ವತಂತ್ರ ಸಾರ್ವಭೌಮ ಭಾರತದಲ್ಲಿ ತಮ್ಮ ಸುಂದರ ಕನಸುಗಳ ಸಾಕಾರಕ್ಕಾಗಿ ಹಾತೊರೆಯುತ್ತಿದ್ದ ಜನಸಮುದಾಯಗಳಿಗೆ ನಿರಾಸೆಯ ಕಾರ್ಮೋಡ ಕವಿಯುವ ವಾತಾವರಣ ಕವಿಯಲು ಹೆಚ್ಚುಕಾಲ ಬೇಕಾಗಲಿಲ್ಲ. ಒಂದೆಡೆ ಸಂಘಟಿತ ಕಾರ್ಮಿಕ ವಲಯದ ಬಲವೃದ್ಧಿಯಾಗುತ್ತಿದ್ದಂತೆಯೇ ಮತ್ತೊಂದೆಡೆ ಅಸಂಘಟಿತ ವಲ

ಯದ ಕೃಷಿ ಕಾರ್ಮಿಕರು, ರೈತಾಪಿ ಜನತೆ ಮತ್ತು ಆದಿವಾಸಿ ಸಮು ದಾಯಗಳು ಆಧುನಿಕ ಬಂಡವಾಳಶಾಹಿ ಅಭಿವೃದ್ಧಿ ಪಥದ ಬಲಿ ಪಶುಗಳಾಗಿ ಪರದಾಡಬೇಕಾಯಿತು. ಈ ಸಂದರ್ಭ ದಲ್ಲಿ ನಡೆದ ಎರಡು ಯುದ್ಧಗಳು ದೇಶದ ಆರ್ಥಿಕತೆ ಯನ್ನು ಮತ್ತಷ್ಟು ಬಲಹೀನಗೊಳಿಸಿತ್ತು. ಆಹಾರ ಭದ್ರ ತೆಗೇ ಸಂಚಕಾರ ಒದಗಿದ ವಿಷಮ ಸನ್ನಿವೇಶದಲ್ಲಿ ಜಾರಿ ಗೊಳಿಸಲಾದ ಹಸಿರು ಕ್ರಾಂತಿ ಸಮಸ್ಯೆಗಳ ಉಲ್ಬಣಕ್ಕೂ ಎಡೆಮಾಡಿ ಕೊಟ್ಟಿತ್ತು.

ಹೋರಾಟದ ಕಿಡಿಗಳು

ವಿಶ್ವದ ಭೂಪಟದಲ್ಲಿ ಭಾರತ ಒಂದು ಅಭಿವೃದ್ಧಿ ಶೀಲ ರಾಷ್ಟ್ರವಾಗಿ ಹೊರಹೊಮ್ಮುವುದೇ ಅಲ್ಲದೆ ತೃತೀಯ ವಿಶ್ವದ ರಾಷ್ಟ್ರಗಳಿಗೆ ನಾಯಕತ್ವ ವಹಿಸಿಕೊಂಡ ಅವಧಿ ಯಲ್ಲೇ ಆಂತರಿಕವಾಗಿ ಅನೇಕ ಸಮಸ್ಯೆಗಳನ್ನು, ಸಂಘ ರ್ಷಮಯ ವಾತಾವರಣವನ್ನು, ವೈಷಮ್ಯಗಳನ್ನು ಎದುರಿ ಸಬೇಕಾದ್ದು ಸ್ವತಂತ್ರ ಭಾರತದ ವಿಡಂಬನೆಯಾಗಿತ್ತು. ಜಾಗತಿಕ ಮಟ್ಟದಲ್ಲಿ ಕ್ಯೂಬಾ, ವಿಯೆಟ್ನಾಂ – ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡಿದ್ದ ಕ್ರಾಂತಿಯ ಕೂಗು ಭಾರತದಲ್ಲೂ ಪ್ರತಿಧ್ವನಿಸಲಾರಂಭಿಸಿದ್ದು ಈ ಅವಧಿಯಲ್ಲೇ. ಈ ಬೆಳವಣಿಗೆಗೆ ಕಾರಣಗಳೂ ಇಲ್ಲ ದಿರಲಿಲ್ಲ. ಹಸಿರು ಕ್ರಾಂತಿಯ ಪರಿಣಾಮವಾಗಿ ಗ್ರಾಮೀಣ ಬಡಜನತೆ ದಾರಿದ್ರ್ಯತೆಯ ಕೂಪಕ್ಕೆ ತಳ್ಳಲ್ಪಟ್ಟರು. ಕೃಷಿ ಕ್ಷೇತ್ರದಲ್ಲಿ ಯಂತ್ರ –ತಂತ್ರಜ್ಞಾನಗಳ ಬಳಕೆ ಹೆಚ್ಚಾದಂತೆಲ್ಲಾ ದುಡಿಯುವ ಕೈಗಳು ನಿರ್ಲಕ್ಷಿಸಲ್ಪಟ್ಟವು. ಕೈಗಾರಿಕಾ ಪ್ರಗ ತಿಯ ದಾಪುಗಾಲು ಗ್ರಾಮೀಣ ಆರ್ಥಿಕತೆಯನ್ನು ಕುಂಠಿತ ಗೊಳಿಸಿತ್ತು. ಬ್ಯಾಂಕುಗಳ ರಾಷ್ಟ್ರೀಕರಣದಿಂದ ಗ್ರಾಮಾಂತರ ಬಡಜನತೆಗೆ ಅನೇಕ ಸವಲತ್ತುಗಳು ದೊರೆತರೂ ಬಂಡ ವಾಳಿಗರ ಅಧಿಪತ್ಯವೇನೂ ಕ್ಷೀಣಿಸಲಿಲ್ಲ.

ಏತನ್ಮಧ್ಯೆ ಕೈಗಾರಿಕೋದ್ಯಮದ ಅಭಿವೃದ್ಧಿಯಾಗುತ್ತಿದ್ದಂತೆಲ್ಲಾ ಗ್ರಾಮೀಣ ಕ್ಷೇತ್ರದಲ್ಲಿ ನಿರುದ್ಯೋಗ ಉಲ್ಬಣಿಸತೊಡಗಿತ್ತು. ಭೂ ಸುಧಾರಣೆ, ಭೂದಾನ, ಮೀಸಲಾತಿ, ಉದ್ಯೋಗ ಅವಕಾಶಗಳು ಸಮಸಮಾಜವನ್ನು ನಿರ್ಮಿಸುವ ಬದಲು, ಅಸಮಾನತೆ ತಾಂಡವಾಡುವ ಅಸಮ ತೋಲನ ಅಭಿವೃದ್ಧಿಯ ಹಾದಿಯಲ್ಲಿ ಕ್ರಮಿಸಿದ್ದವು. ತತ್ಪರಿಣಾಮವಾಗಿ 1967–75ರ ಅವಧಿಯಲ್ಲಿ ದೇಶದೆಲ್ಲೆಡೆ ಪ್ರತಿಭಟನೆಗಳ ಮಹಾಪೂರವೇ ಹರಿಯಿತು. 1967ರ ನಕ್ಸಲ್‌ಬಾರಿ ದಂಗೆ ಮತ್ತೊಮ್ಮೆ ಸಶಸ್ತ್ರ ಹೋರಾಟದ ಪ್ರೇರಣೆಯನ್ನು ಒದಗಿಸಿತ್ತು. ಭೂಸುಧಾರಣಾ ಕ್ರಮಗಳ ನಂತರ ಊಳಿಗಮಾನ್ಯ ವ್ಯವಸ್ಥೆ ಕೊನೆಗೊಂಡಿದೆ ಎಂಬ ಆಳ್ವಿಕರ ಭ್ರಮೆ ಹುಸಿ ಎನಿಸಲು ಹೆಚ್ಚು ಕಾಲಾವಧಿ ಬೇಕಿರಲಿಲ್ಲ. ಹಸಿರು ಕ್ರಾಂತಿಯ ಪರಿಣಾಮವಾಗಿ ಮತ್ತೊಮ್ಮೆ ಗ್ರಾಮೀಣ ಪ್ರದೇಶಗಳಲ್ಲಿ ಅರೆ ಊಳಿಗಮಾನ್ಯ ವ್ಯವಸ್ಥೆ ತನ್ನದೇ ಆದ ಪ್ರಭಾವಳಿಯನ್ನು ನಿರ್ಮಿಸಿತ್ತು. ಸ್ವಾತಂತ್ರ್ಯ ಪೂರ್ವದ ಕನಸುಗಳನ್ನು ಸಾಕಾರಗೊಳಿಸುವಲ್ಲಿ ನವ ಭಾರತ ನಿರ್ಮಾತೃಗಳು ಸಂಪೂರ್ಣ ವಿಫಲರಾಗದಿದ್ದರೂ ದೇಶದ ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಎಡವಿದ್ದಂತೂ ಈ ಸಂದರ್ಭದಲ್ಲಿ ಸ್ಪಷ್ಟವಾಗಿತ್ತು.

ಈ ಹಂತದಲ್ಲಿ ಭಾರತದ ಜನಸಾಮಾನ್ಯರ ಮುಂದೆ ಇದ್ದ ಒಂದೇ ಪ್ರಶ್ನೆ ಎಂದರೆ ಪ್ರಜಾಸತ್ತೆಯ ಉಳಿವು – ಜನಪರ ಅಭಿವೃದ್ಧಿಯ ಮಾರ್ಗವಾಗಿತ್ತು. ದಲಿತರು, ಹಿಂದುಳಿದ ವರ್ಗಗಳು, ಮಹಿಳೆಯರು, ಅಲ್ಪಸಂಖ್ಯಾತರು, ಯುವ ವಿದ್ಯಾರ್ಥಿಗಳು ಭ್ರಮನಿರಸನಕ್ಕೊಳಗಾಗಿದ್ದು ಸ್ಪಷ್ಟ

ವಿಶ್ವದ ಭೂಪಟದಲ್ಲಿ ಭಾರತ ಒಂದು ಅಭಿವೃದ್ಧಿ ಶೀಲ ರಾಷ್ಟ್ರವಾಗಿ ಹೊರಹೊಮ್ಮುವುದೇ ಅಲ್ಲದೆ ತೃತೀಯ ವಿಶ್ವದ ರಾಷ್ಟ್ರಗಳಿಗೆ ನಾಯಕತ್ವ ವಹಿಸಿಕೊಂಡ ಅವಧಿಯಲ್ಲೇ ಆಂತರಿಕವಾಗಿ ಅನೇಕ ಸಮಸ್ಯೆಗಳನ್ನು, ಸಂಘರ್ಷಮಯ ವಾತಾವರಣವನ್ನು, ವೈಷಮ್ಯಗಳನ್ನು ಎದುರಿಸಬೇಕಾದ್ದು ಸ್ವತಂತ್ರ ಭಾರತದ ವಿಡಂಬನೆಯಾಗಿತ್ತು. ಜಾಗತಿಕ ಮಟ್ಟದಲ್ಲಿ ಕ್ಯೂಬಾ, ವಿಯೆಟ್ನಾಂ ಮತ್ತು ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡಿದ್ದ ಕ್ರಾಂತಿಯ ಕೂಗು ಭಾರತದಲ್ಲೂ ಪ್ರತಿಧ್ವನಿಸಲಾರಂಭಿಸಿದ್ದು ಈ ಅವಧಿಯಲ್ಲೇ. ಈ ಬೆಳವಣಿಗೆಗೆ ಕಾರಣಗಳೂ ಇಲ್ಲದಿರಲಿಲ್ಲ. ಹಸಿರು ಕ್ರಾಂತಿಯ ಪರಿಣಾಮವಾಗಿ ಗ್ರಾಮೀಣ ಬಡಜನತೆ ದಾರಿದ್ರ್ಯತೆಯ ಕೂಪಕ್ಕೆ ತಳ್ಳಲ್ಪಟ್ಟರು. ಕೃಷಿ ಕ್ಷೇತ್ರದಲ್ಲಿ ಯಂತ್ರ – ತಂತ್ರಜ್ಞಾನಗಳ ಬಳಕೆ ಹೆಚ್ಚಾದಂತೆಲ್ಲಾ ದುಡಿಯುವ ಕೈಗಳು ನಿರ್ಲಕ್ಷಿಸಲ್ಪಟ್ಟವು. ಕೈಗಾರಿಕಾ ಪ್ರಗತಿಯ ದಾಪುಗಾಲು ಗ್ರಾಮೀಣ ಆರ್ಥಿಕತೆಯನ್ನು ಕುಂಠಿತಗೊಳಿಸಿತ್ತು. ಬ್ಯಾಂಕುಗಳ ರಾಷ್ಟ್ರೀಕರಣದಿಂದ ಗ್ರಾಮಾಂತರ ಬಡಜನತೆಗೆ ಅನೇಕ ಸವಲತ್ತುಗಳು ದೊರೆತರೂ ಬಂಡವಾಳಿಗರ ಅಧಿಪತ್ಯವೇನೂ ಕ್ಷೀಣಿಸಲಿಲ್ಲ

ವಾಗಿತ್ತು. ಒಂದೆಡೆ ಬೆಲೆ ಏರಿಕೆ ಮತ್ತೊಂದೆಡೆ ನಿರುದ್ಯೋಗ ಸಾಮಾನ್ಯ ಜನತೆಯ ಜೀವನವನ್ನು ದುಸ್ತರಗೊಳಿಸಿತ್ತು. ಕೇಂದ್ರ ಸರ್ಕಾರದ ಅಭಿವೃದ್ಧಿ ಮಾರ್ಗಗಳು ಮತ್ತು ಪ್ರಗತಿಯ ಧೋರಣೆಗಳು ಹೆಚ್ಚು ಹೆಚ್ಚಾಗಿ ಕೈಗಾರಿಕೋದ್ಯಮಿಗಳ ಪರವಾಗಿದ್ದು ಗ್ರಾಮೀಣ ಬಡತನ ಹೆಚ್ಚಾಗುತ್ತಿತ್ತು. ಈ ಎಲ್ಲ ವಿದ್ಯಮಾನಗಳ ಹಿನ್ನೆಲೆಯಲ್ಲೇ ನಕ್ಸಲ್ ಚಳುವಳಿ ರೈತಾಪಿ ಜನರನ್ನು, ಆದಿವಾಸಿಗಳನ್ನು, ನಗರದ ಶಿಕ್ಷಿತ ನಿರುದ್ಯೋಗಿಗಳನ್ನು ಆಕರ್ಷಿಸಿದರೆ, ಜೆಪಿಯವರ ಸಂಪೂರ್ಣ ಕ್ರಾಂತಿಯ ಕನಸು ನಗರೀಕೃತ ಮಧ್ಯಮ ವರ್ಗಗಳನ್ನು ಆಕರ್ಷಿಸಿತ್ತು. ಅಂಚಿಗೆ ತಳ್ಳಲ್ಪಟ್ಟ ಶೋಷಿತ ಸಮುದಾಯಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವಲ್ಲಿ ಈ ಜನಾಂದೋಲನಗಳು ಕೊಂಚಮಟ್ಟಿಗೆ ಯಶಸ್ಸುಕಂಡದ್ದೂ ಸತ್ಯ. ಹಾಗಾಗಿಯೇ 1970ರ ದಶಕದ ಪ್ರಾರಂಭದ ದಿನಗಳು ದೇಶದಲ್ಲಿ ವಿಪ್ಲವಕಾರಿ ಚಟುವಟಿಕೆಗಳು ದೇಶವ್ಯಾಪಿಯಾಗಿದ್ದವು. 1975ರ ತುರ್ತುಪರಿ ಸ್ಥಿತಿಯ ಘೋಷಣೆಯನ್ನೂ ಈ ಹಿನ್ನೆಲೆಯಲ್ಲೇ ನೋಡ ಬೇಕಾಗುತ್ತದೆ.

ತುರ್ತುಪರಿಸ್ಥಿತಿಯ ಕರಾಳ ದಿನಗಳು ಭಾರತೀಯ ಜನತೆಗೆ ಸಂಸದೀಯ ಪ್ರಜಾತಂತ್ರದ ಮತ್ತೊಂದು ಮುಖವಾಡವನ್ನು ಪರಿಚಯಿಸಿತ್ತು. ತಮ್ಮ ಸಂವಿಧಾನಬದ್ಧ ಬೇಡಿಕೆಗಳಿಗಾಗಿ ಹೋರಾಡುವ ಜನಸಾಮಾನ್ಯರ ಆಕ್ರೋಶದ ಪ್ರತಿಭಟನಾ ದನಿಗಳನ್ನು ಅಡಗಿಸಲು ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನೇ ದಮನಕಾರಿಯಾಗಿ ಉಪಯೋಗಿಸುವ ಪರಿಯನ್ನು ತುರ್ತುಪರಿಸ್ಥಿತಿ ಪರಿಚಯಿಸಿತ್ತು. ಪ್ರಜಾಸತ್ತಾತ್ಮಕ–ಸಂವಿಧಾನಿಕ ಹಕ್ಕುಗಳ ದಮನ ಮಾತ್ರವಲ್ಲದೆ ಪ್ರಜೆಗಳ ಪ್ರತಿಭಟನಾ ದನಿಯನ್ನು ಹುಟ್ಟಡಗಿಸುವ ಪ್ರವೃತ್ತಿಗೂ ತುರ್ತುಪರಿಸ್ಥಿತಿ ನಾಂದಿ ಹಾಡಿತ್ತು. ಇಂದಿಗೂ ದೇಶದ ಹಲವೆಡೆ ಅಘೋಷಿತ ತುರ್ತುಪರಿಸ್ಥಿತಿ ಇದೇ ಮಾದರಿಯಲ್ಲಿ ಕಾರ್ಯಗತವಾಗಿರುವುದನ್ನು ಕಾಣಬಹುದು. ದೇಶದ ಜನತೆ ಈ ದಮನಕಾರಿ ಪ್ರವೃತ್ತಿಯ ವಿರುದ್ಧ ವೀರೋಚಿತವಾಗಿ ಹೋರಾಡಿದರಾದರೂ, ಪ್ರಜಾಸತ್ತೆಯ ರಕ್ಷಣೆಗಾಗಿ ಹೋರಾಡುತ್ತಲೇ ತಮ್ಮ ಫ್ಯಾಸಿಸ್ಟ್ ಧೋರಣೆಗೆ ಪ್ರಜಾಮನ್ನಣೆ ದೊರಕಿಸಿಕೊಳ್ಳುವ ಹುನ್ನಾರವೂ ಈ ಸಂದರ್ಭದಲ್ಲಿ ಸುಪ್ತವಾಗಿ ಕಾರ್ಯ ನಿರ್ವಹಿಸಿತ್ತು. ಒಂದೆಡೆ ಕಾಂಗ್ರೆಸ್ ವಿರೋಧಿ ಧೋರಣೆ ಮತ್ತೊಂದೆಡೆ ಪ್ರಜಾತಂತ್ರದ ಉಳಿವು ಫ್ಯಾಸಿಸ್ಟ್ ಶಕ್ತಿಗಳ ಉಗಮಕ್ಕೆ ಕಾರಣವಾಗಿತ್ತು.

ಈ ಎಲ್ಲಾ ಜನಾಂದೋಲನಗಳು ಮತ್ತು ರಾಜಕೀಯ ಬೆಳವಣಿಗೆಗಳಲ್ಲೂ ಕಂಡೂ ಕಾಣದಂತಿದ್ದ ಒಂದು ಪ್ರಮುಖ ಅಂಶವೆಂದರೆ ದೇಶದ ದಲಿತ ಸಮುದಾಯಗಳ ಸಾಮಾಜಿಕ ಘನತೆಯ ಪ್ರಶ್ನೆ. ಅಂದಿನ ಸನ್ನಿವೇಶದಲ್ಲಿ ಈ ದಲಿತ ಪ್ರಜ್ಞೆಯ ಪ್ರಸ್ತುತತೆ ಹೆಚ್ಚಾಗಿದ್ದರೂ ರಾಜಕೀಯ ವಲಯದಲ್ಲಿ ಈ ಅಂಶ ಪರಿಣಾಮಕಾರಿಯಾಗಿ ಮೂಡದಿದ್ದುದೂ ಸತ್ಯ. ಉದ್ಯೋಗ ಮೀಸಲಾತಿ ಮತ್ತು ಸರ್ಕಾರಿ ಯೋಜನೆಗಳ ಚೌಕಟ್ಟಿನಲ್ಲೇ ದಲಿತ–ಆದಿವಾಸಿ ಸಮುದಾಯಗಳ ಅಭಿವೃದ್ಧಿಯನ್ನು ಪರಾಮರ್ಶಿಸುವ ಆಳ್ವಿಕರ ನೀತಿ ಒಂದು ರೀತಿಯಲ್ಲಿ ದಲಿತ ಸಮುದಾಯದ ಸಾಮಾಜಿಕ ಘನತೆ ಮತ್ತು ಆರ್ಥಿಕ ಸಮಾನತೆಗೆ ವ್ಯತಿರಿಕ್ತವಾಗಿ ಪರಿಣಮಿಸಿತ್ತು. ದೇಶದ ಮೂಲೆಮೂಲೆಗಳಲ್ಲಿ ಸುಪ್ತವಾಗಿ, ಅವ್ಯಕ್ತವಾಗಿ, ಅಗೋಚರವಾಗಿ ಕೆಲವೊಮ್ಮೆ ಪ್ರತ್ಯಕ್ಷವಾಗಿ ತಾಂಡವಾಡುತ್ತಿದ್ದ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ದಮನಿತ ಜನಸಮುದಾಯಗಳನ್ನು ಹೋರಾಟದ ಮಾರ್ಗದಲ್ಲಿ ಕೊಂಡೊಯ್ದಿತ್ತು. ಆದರೆ ದಲಿತ–ಆದಿವಾಸಿ ಸಮುದಾಯಗಳಿಗೂ ಒಂದು ರಾಜಕೀಯ ದನಿ ಒದಗಿಸಿತ್ತು. ತಮ್ಮ ಕೃಷಿ ನೆಲೆಯನ್ನೇ ಕಳೆದುಕೊಳ್ಳತೊಡಗಿದ್ದ ರೈತ ಸಮುದಾಯಗಳು ಹೋರಾಟದ ಸಂಘರ್ಷದ ಹಾದಿ ಮೆಟ್ಟಿದ್ದವು.

ಎಡ ಪಕ್ಷಗಳ ಕಾರ್ಮಿಕ ಸಂಘಟನೆಗಳೂ ಸಂಘರ್ಷದ ಹಾದಿ ಹಿಡಿದಿದ್ದವು. ಈ ಎಲ್ಲಾ ಚಳುವಳಿ ಗಳನ್ನೂ ಯಾವುದೋ ಒಂದು ರೀತಿಯಲ್ಲಿ ಆವರಿಸಿದ್ದುದು ದಲಿತ ಪ್ರಜ್ಞೆ ಮತ್ತು ದಲಿತ–ಆದಿವಾಸಿ ಸಮುದಾಯಗಳ ಸಾಮಾಜಿಕ ಘನತೆಯ ಪ್ರಶ್ನೆ. ಆದರೆ ಸಮಸ್ಯೆ ಯಾಗಿದ್ದುದು ದಲಿತ ಸಮುದಾಯಗಳ ಐಕ್ಯತೆಯಗಳ ಹೋರಾಟಗಳಿಗೆ ಸ್ಪಂದಿಸುವ ರಾಜಕೀಯ ವೇದಿಕೆ ಲಭ್ಯವಿರಲಿಲ್ಲ. ಇದು 1970ರ ದಶಕದ ವಿಶಿಷ್ಟ ಸಂದರ್ಭವೂ, ಸ್ವತಂತ್ರ ಭಾರತದ ರಾಜಕೀಯ ವಿಡಂಬನೆಯೂ ಆಗಿತ್ತು.

ಡಾ. ಬಿ.ಆರ್. ಅಂಬೇಡ್ಕರ್ ಹಾಕಿಕೊಟ್ಟ ಸಂಘರ್ಷದ ಮಾರ್ಗಗಳು ಮತ್ತು ಪ್ರಜಾಸತ್ತಾತ್ಮಕ ಹೋರಾಟದ ಪರಂಪರೆಗೆ ಒಂದು ಹೊಸ ಆಯಾಮ ಒದಗಿಬಂದಿದ್ದು

ಈ ಅವಧಿಯಲ್ಲೇ ಎಂಬುದನ್ನು ಗಮನಿಸಬೇಕು. ಮಹಾರಾಷ್ಟ್ರದಲ್ಲಿ ಆರಂಭವಾದ ದಲಿತ್ ಪ್ಯಾಂಥರ್ ಚಳುವಳಿ ದೇಶದೆಲ್ಲೆಡೆ ಅಂಬೇಡ್ಕರ್‌ವಾದವನ್ನು ಪ್ರಚುರಪಡಿಸುವುದರಲ್ಲಿ ಯಶಸ್ವಿಯಾಗಿತ್ತು. ಮತ್ತೊಂದೆಡೆ ಆದಿವಾಸಿಗಳನ್ನು, ರೈತ ಕೂಲಿಗಳನ್ನು, ನಿರುದ್ಯೋಗಿ ಯುವಕರನ್ನು ಆಕರ್ಷಿಸಿದ್ದ ನಕ್ಸಲ್‌ಬಾರಿ ಚಳುವಳಿ ದಮನಿತ-ಶೋಷಿತ ಸಮುದಾಯ ಹೋರಾಟ ಮತ್ತು ಸಂಘಟನಾತ್ಮಕ ಸ್ವರೂಪ. ಈ ಸಮಸ್ಯೆಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸಂಘಟನಾತ್ಮಕವಾಗಿ ಸಂಘರ್ಷ ನಡೆಸಲು ಮುಂದಾದದ್ದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಹೆಗ್ಗಳಿಕೆ. ಬಹುಶಃ ಕರ್ನಾಟಕದ ಸಾಮಾಜಿಕ-ರಾಜಕೀಯ ಇತಿಹಾಸದಲ್ಲಿ ಅತ್ಯಂತ ಶೀಘ್ರಗತಿಯಲ್ಲಿ ಇಡೀ ರಾಜ್ಯವನ್ನು ವ್ಯಾಪಿಸಿ ಒಂದು ಪ್ರಬಲ ಜನಾಂದೋಲನವಾಗಿ ರೂಪುಗೊಂಡ ಚಳುವಳಿ ಎಂದರೆ ದಲಿತ ಚಳುವಳಿ ಎಂದೇ ಹೇಳಬೇಕು. ದಲಿತೇತರರನ್ನೂ ತನ್ನೊಳಗೆ ಅಡಗಿಸಿ ಕೊಂಡು ಹೋರಾಟದ ಹಾದಿ ಹಿಡಿದ ದಲಿತ ಚಳುವಳಿ ಸ್ವಾಭಾವಿಕವಾಗಿ ಒಂದು ಪ್ರಜಾಸತ್ತಾತ್ಮಕ ಆಂದೋಲನ ವಾಗಿ ರೂಪುಗೊಂಡಿತ್ತು.

ದಲಿತ ಚಳುವಳಿಯ ಹೆಜ್ಜೆಗಳು

ವಿಭಿನ್ನ ಚಿಂತನೆಗಳು, ಸೈದ್ಧಾಂತಿಕ ಧೋರಣೆಗಳು, ಹೋರಾಟದ ಮಾರ್ಗಗಳು ದಲಿತ ಚಳುವಳಿಯನ್ನು ಪ್ರಾರಂಭದಲ್ಲಿಯೇ ಕಾಡಿದರೂ, ಶೂನ್ಯದಿಂದ ಪ್ರಾರಂಭಗೊಂಡ ಮಹತ್ತರ ಜನಾಂದೋಲನಕ್ಕೆ ದಲಿತ ಸಮುದಾಯಗಳ ಸಾಮಾಜಿಕ ಘನತೆಯೇ ಪ್ರಧಾನ ಅಂಶವಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ದಲಿತರ ಆರ್ಥಿಕ ಸಮಾನತೆಯೂ ಅಷ್ಟೇ ಪ್ರಧಾನವಾಗಿತ್ತು. ಯಾವುದೇ ರಾಜಕೀಯ ಉದ್ದೇಶಗಳಿಲ್ಲದೆ ರೂಪುಗೊಂಡ ದಲಿತ ಚಳುವಳಿ ಸಾಮಾಜಿಕ ಘನತೆಯನ್ನೇ ತನ್ನ ಸೈದ್ಧಾಂತಿಕ ತಳಹದಿಯನ್ನಾಗಿ ಆಯ್ಕೆ ಮಾಡಿಕೊಂಡಿದ್ದು, ಮುಂಬರುವ ದಿನಗಳಲ್ಲಿ ಅನೇಕ ಸಮಸ್ಯೆಗಳನ್ನು ಹುಟ್ಟಿಹಾಕಿದ್ದನ್ನೂ ಮರೆಯುವಂತಿಲ್ಲ. ರಾಜಕೀಯ ಅಧಿಕಾರದ ಧ್ಯೇಯವಿಲ್ಲದೆ ಪ್ರಾರಂಭಗೊಂಡ ಚಳುವಳಿ ದಲಿತರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುವ ಯತ್ನವನ್ನೂ ಪ್ರಾಮಾಣಿಕವಾಗಿ ಮಾಡಲಿಲ್ಲವೆಂದೇ ಹೇಳಬಹುದು.

ವಿಭಿನ್ನ ಸೈದ್ಧಾಂತಿಕ ಧೋರಣೆಗಳು ಪ್ರಾರಂಭಿಕ ಹಂತದಲ್ಲಿ ಅವ್ಯಕ್ತವಾಗಿದ್ದರೂ, ಕ್ರಮೇಣ ತನ್ನದೇ ಆದ ಪ್ರಭಾವ ಬೀರತೊಡಗಿದ್ದನ್ನು ಪ್ರಸ್ತುತ ಸಂದರ್ಭದಲ್ಲಿ ಸ್ಮರಿಸುವುದು ಅಗತ್ಯ. ದಲಿತ ಚಳುವಳಿಯ ನಾಯಕರುಗಳು ವೈಯಕ್ತಿಕ ನೆಲೆಗಟ್ಟಿನಲ್ಲಿ ತಮ್ಮ ಸೈದ್ಧಾಂತಿಕ ನಿಲುವುಗಳನ್ನು ಬದಿಗಿಟ್ಟು, ದಲಿತ ಐಕ್ಯತೆಗಾಗಿ ಪಣ ತೊಟ್ಟು ನಿಂತರೂ, ಸಂಘಟನಾ ಕ್ಷೇತ್ರದಲ್ಲಿ ಇದೇ ಸೈದ್ಧಾಂತಿಕ ನಿಲುವುಗಳು ನೇತ್ಯಾತ್ಮಕ ಪರಿಣಾಮ ಬೀರಿದ್ದು ದಲಿತ ಚಳುವಳಿಯ ಹಿನ್ನಡೆಗೂ ಕಾರಣವಾಗಿತ್ತು. ಅಂಬೇಡ್ಕರ್ ಅವರ ಚಿಂತನೆ ಮತ್ತು ಧೋರಣೆಗಳು ವ್ಯಾಪಕವಾಗಿ ಪ್ರಚಾರ ಪಡೆದು ಮನೆಮಾತಾದರೂ, ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಪರಾಮರ್ಶಿಸಿ ನೋಡುವಲ್ಲಿ ದಲಿತ ಚಳುವಳಿ ವಿಫಲವಾಗಿತ್ತು. ಅಂಬೇಡ್ಕರ್‌ವಾದವನ್ನು ದಲಿತರ ಸಾಮಾಜಿಕ ಘನತೆಯ ದೃಷ್ಟಿಯಿಂದ ಮಾತ್ರ ನೋಡುವ ಮೂಲಕ ಚಳುವಳಿಗೆ ರಾಜಕೀಯ ಆಯಾಮ ದೊರಕಿಸುವುದರಲ್ಲಿ ವಿಫಲವಾದ ದಲಿತ ಚಳುವಳಿ ದಲಿತರಲ್ಲಿ ಮೂಲಭೂತ ರಾಜಕೀಯ ಪ್ರಜ್ಞೆಯನ್ನು ಮೂಡಿಸುವುದರಲ್ಲೂ ವಿಫಲವಾಗಿತ್ತು. ಸೈದ್ಧಾಂತಿಕ ಧೋರಣೆಗಳಿಗಿಂತಲೂ ವೈಯಕ್ತಿಕ ನಿಲುವುಗಳು ಮತ್ತು

ಪ್ರತಿಷ್ಠೆಗಳೇ ಪ್ರಧಾನ ಭೂಮಿಕೆವಹಿಸಿದ ಪರಿಣಾಮ ದಲಿತ ಸಂಘರ್ಷ ಸಮಿತಿ ಒಂದು ರಾಜಕೀಯ ವೇದಿಕೆಯಾಗುವುದು ಸಾಧ್ಯವಾಗಲೇ ಇಲ್ಲ.

ಕರ್ನಾಟಕದ ಪ್ರಗತಿಪರ ಚಳುವಳಿಯ ಪ್ರಧಾನ ಭೂಮಿಕೆಯನ್ನು ದಲಿತ ಚಳುವಳಿ ವಹಿಸಿಕೊಂಡರೂ ಕರ್ನಾಟಕದಲ್ಲಿ ಅದೇ ಕಾಲಾವಧಿಯಲ್ಲೇ ಪ್ರಬಲವಾಗಿ ರೂಪುಗೊಂಡ ರೈತ ಚಳುವಳಿ ಮತ್ತು ಮಹಿಳಾ ಚಳುವಳಿಗಳೊಡನೆ ಅನ್ಯ ಸೈದ್ಧಾಂತಿಕ ಗುಂಪುಗಳೊಡನೆ ರಾಜಕೀಯವಾಗಿ ಗುರುತಿಸಿಕೊಳ್ಳುವಲ್ಲಿ ವಿಫಲವಾಗಿತ್ತು. ಮಾರ್ಕ್ಸ್‌ವಾದ, ಲೋಹಿಯಾವಾದಗಳ ಸೈದ್ಧಾಂತಿಕ ಸಂಘರ್ಷದ ನಡುವೆ ಬಲಿಪಶುವಾದದ್ದು ದಲಿತ ಚಳುವಳಿ ಎಂದರೂ ತಪ್ಪಾಗಲಾರದು. ಆದರೆ ಈ ಸಂಘರ್ಷದ ಪರಿಣಾಮ ಇತ್ಯಾತ್ಮಕವಾಗಿ ಕೊನೆಗೊಳ್ಳುವುದರ ಬದಲು ದಲಿತ ಸಂಘಟನೆಗಳ ವಿಘಟನೆಗೆ ಕಾರಣವಾಗಿದ್ದು ಮತ್ತಷ್ಟು ಸಮಸ್ಯೆಗಳನ್ನು ಹುಟ್ಟುಹಾಕಿತು. ತನ್ನ ಮೂಲ ತಳಹದಿಯಾದ ಗ್ರಾಮೀಣ ಸಂಘಟನೆಯನ್ನೇ ಕಡೆಗಣಿಸಿದ ದಲಿತ ಚಳುವಳಿ ನಗರೀಕೃತ ರಾಜಕಾರಣದ ಗುಂಪುಗಳಾಗಿ ಹರಿದು ಹಂಚಿಹೋದದ್ದು ಸಮಸ್ಯೆಯನ್ನು ಇನ್ನೂ ಜಟಿಲಗೊಳಿಸಿತು. ತತ್ಪರಿಣಾಮವಾಗಿ ರಾಜಕೀಯ ಪಕ್ಷಗಳಿಗೆ ದಲಿತ ಸಂಘಟನೆಗಳನ್ನು, ನಾಯಕರನ್ನು ಪ್ರಲೋಭನೆಗಳಿಗೆ ಒಳಪಡಿಸಲು ಅನುಕೂಲವೂ ಆಗಿತ್ತು. ಈ ವಿದ್ಯಮಾನದ ನೇರ ಪರಿಣಾಮವನ್ನು 90ರ ದಶಕದಿಂದೀಚೆಗೆ ಸ್ಪಷ್ಟವಾಗಿ ಕಾಣಬಹುದಾಗಿತ್ತು. ಸಾಮಾಜಿಕ ಘನತೆ ಮತ್ತು

ವಿಭಿನ್ನ ಚಿಂತನೆಗಳು, ಸೈದ್ಧಾಂತಿಕ ಧೋರಣೆಗಳು, ಹೋರಾಟದ ಮಾರ್ಗಗಳು ದಲಿತ ಚಳುವಳಿಯನ್ನು ಪ್ರಾರಂಭದಲ್ಲಿಯೇ ಕಾಡಿದರೂ, ಶೂನ್ಯದಿಂದ ಪ್ರಾರಂಭಗೊಂಡ ಮಹತ್ತರಜನಾಂದೋಲನಕ್ಕೆ ದಲಿತ ಸಮುದಾಯಗಳ ಸಾಮಾಜಿಕ ಘನತೆಯೇ ಪ್ರಧಾನ ಅಂಶವಾಗಿತ್ತು.

ಆರ್ಥಿಕ ಸಮಾನತೆಗಾಗಿ ಹೋರಾಟದ-ಸಂಘರ್ಷದ ಹಾದಿ ಹಿಡಿಯುತ್ತಿದ್ದ ದಲಿತ ಚಳುವಳಿಯನ್ನು ತನ್ನ ಮೂಲ ಸಿದ್ಧಾಂತದಿಂದ ವಿಮುಖವನ್ನಾಗಿ ಮಾಡುವುದರಲ್ಲಿ ರಾಜಕೀಯ ಪಕ್ಷಗಳ ಪಾತ್ರದಷ್ಟೇ ಕೆಲವು ಸೈದ್ಧಾಂತಿಕ ಗುಂಪುಗಳ ಪಾತ್ರವೂ ಇದ್ದುದನ್ನು ಅಲ್ಲಗಳೆಯಲಾಗುವುದಿಲ್ಲ.

ಪ್ರಸ್ತುತ ಸವಾಲುಗಳು

ದಲಿತ ಚಳುವಳಿ ಹುಟ್ಟಿಕೊಂಡ ಕಾಲಾವಧಿಯಲ್ಲಿದ್ದ ಸಾಮಾಜಿಕ-ರಾಜಕೀಯ ಸನ್ನಿವೇಶಗಳಿಗೂ ಪ್ರಸ್ತುತ ಸನ್ನಿವೇಶಗಳಿಗೂ ಸಾಮ್ಯತೆ ಇರುವುದನ್ನು ಮನಗಂಡೇ ದಲಿತ ಐಕ್ಯತೆಯ ಸವಾಲುಗಳನ್ನೂ ಎದುರಿಸಬೇಕಾಗುತ್ತದೆ. 70ರ ದಶಕದಲ್ಲಿದ್ದ ಎಲ್ಲ ಸಮಸ್ಯೆಗಳೂ ಇಂದಿಗೂ ಜೀವಂತವಾಗಿರುವುದಲ್ಲದೆ, ಕೆಲವು ಸಮಸ್ಯೆಗಳು ಮತ್ತಷ್ಟು ಗಂಭೀರವಾಗಿರುವುದರ ಹಿನ್ನೆಲೆಯಲ್ಲಿ ದಲಿತ ಚಳುವಳಿ ತನ್ನದೇ ಆದ ಪ್ರತ್ಯೇಕ ರಾಜಕೀಯ ಮಾರ್ಗವನ್ನು ಅನುಸರಿಸುವುದು ಅನಿವಾರ್ಯವೂ ಹೌದು, ಅಗತ್ಯವೂ ಹೌದು. ಈ ಲೇಖನದ ಪ್ರಾರಂಭದಲ್ಲಿ ಉಲ್ಲೇಖಿಸಲಾಗಿರುವ ಅನೇಕ ಸಾಮಾಜಿಕ-ರಾಜಕೀಯ ಸಮಸ್ಯೆಗಳು ಇಂದು ವಿಭಿನ್ನಸ್ತರ'ದಲ್ಲಿ ವ್ಯಕ್ತವಾಗುತ್ತಿದ್ದು, ಬೃಹದಾಕಾರವಾಗಿ ಬೆಳೆದು ನಿಂತಿದೆ. ನಕ್ಸಲ್‌ಬಾರಿ ಚಳುವಳಿಯ ಪ್ರಸ್ತುತತೆಯೇ ಪ್ರಶ್ನಾರ್ಹವಾಗುತ್ತಿರುವ ಸಂದರ್ಭದಲ್ಲಿ, ಎಡಪಂಥೀಯ ಚಳುವಳಿ ತನ್ನ ಮೊನಚು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ, ಪ್ರಗತಿಪರ ಚಳುವಳಿಗಳು ತನ್ನ ಕಾವು ಕಳೆದುಕೊಂಡಿರುವ ಸಂದರ್ಭದಲ್ಲಿ ದಲಿತ ಚಳುವಳಿ ತನ್ನದೇ ಆದ ಹೊಸ ಭೂಮಿಕೆಯನ್ನು ಸಿದ್ಧಪಡಿ ಸಬೇಕಿದೆ.

ಈ ನಿಟ್ಟಿನಲ್ಲಿ ದಲಿತ ಸಂಘಟನೆಗಳ ಐಕ್ಯತೆಯ ಪ್ರಯತ್ನಗಳನ್ನು ಸ್ವಾಗತಿಸುತ್ತಲೇ ಸಂಘಟನೆ ಮತ್ತು ಚಳುವಳಿಯ ಭವಿಷ್ಯದ ಹೆಜ್ಜೆಗಳನ್ನು ಕುರಿತು ಗಂಭೀರ ಆಲೋಚನೆ ಮಾಡುವ ಅಗತ್ಯತೆಯನ್ನೂ ಮನಗಾಣಬೇಕಾಗಿದೆ. ಜಾಗತೀಕರಣ ಮತ್ತು ನವ ಉದಾರೀಕರಣ ಪ್ರಕ್ರಿಯೆಯಿಂದ ಉಂಟಾಗಿರುವ ಸಾಮಾಜಿಕ ಮತ್ತು ಆರ್ಥಿಕ ಅಭದ್ರತೆಗಳನ್ನು ಚಳುವಳಿಯ ಮೂಲ ಕಾರ್ಯಸೂಚಿಯಾಗಿ ಪರಿಗಣಿಸುವುದು ಅತ್ಯಗತ್ಯ. ಯಾವುದೇ

(28ನೇ ಪುಟಕ್ಕೆ)

ಮಗ್ಗುಲು ಸೊಪ್ಪಿನ ಪದ

ತಂಗಡಿಸೊಪ್ಪು ಲೆಕ್ಕಿಸೊಪ್ಪು
ಮಗ್ಗುಲು ಸೊಪ್ಪು ಎಲ್ಲೋದು
ಸ್ಕೂಲಿನೊಳಗೆ ಲೆಕ್ಕ ತಪ್ಪು
ಅಲ್ಲೆ ಎಲ್ಲೊ ಕಳೆದೋದು

ಅಪ್ಪ ಸೆಣಬು ಹುರುಳಿ ಸೊಪ್ಪು
ಎಲ್ಲೋದು ಎಲ್ಲೋದು
ತಲೆಯ ಒಳಗೆ ಗೋಣಿ ಸೊಪ್ಪು
ಕಾಲೇಜೊಳಗೆ ಕಳೆದೋದು

ರೈತರ ಅನುಭವ ಚಿಂದಿಯಾಯಿತು
ಲ್ಯಾಬಿನ ಲೋಕ ಮಂಗನ ಮೂಡಿತು
ಮಣ್ಣಿನ ಬಣ್ಣ ಕಳೆದೇ ಹೋಯಿತು
ನೀರಿನ ಊರು ಬೆತ್ತಲಾಯಿತು

ದನಾ ಕರುಗಳ ಮಾರಿಕೊಂಡರು
ತಿಪ್ಪೆಸ್ವಾಮಿಯ ತಿಪ್ಪೆಗೆಸೆದರು
ಗೋಡಿನ ಗಾಡನು ಕ್ಯಾರೇ ಎನ್ನದೆ
ಕೇಡಿನ ಕೆರೆಯಲಿ ಮುಳುಗಿದರು.

ಸೊಪ್ಪು ಎಂದರೆ ಸಪ್ಪಲಲ್ಲ
ಸಾರಜನಕದ ನೊರೆಹಾಲು
ಅಪಾರ ಅನ್ನದ ಅಪಾರ ರುಚಿಗೆ
ಹಸಿರು ಗೊಬ್ಬರ ಸವಿಜೇನು

ಸಗಣಿ ದೇವರ ಕೈ ಕಾಲಿಡಿಯಿರಿ
ಚೀಲದ ಗೊಬ್ಬರ ಛಿ ಥೂ ಉಗಿಯಿರಿ
ಹೊಂಗೆಯ ಸೊಪ್ಪನ್ನು ಗದ್ದೆಗೆ ತುಳಿಯಿರಿ
ತೊನೆಯುವ ತೆನೆಯನು ಕಂಡುಕುಣಿಯಿರಿ

○ ಕೃಷ್ಣ ಮೂರ್ತಿ ಬಿಳಿಗೆರೆ

(7ನೇ ಪುಟದಿಂದ)

ವಾಳ ಕೇವಲ 1,69,691 ಕೋಟಿ ರೂಪಾಯಿಗಳು. ಎರಡನೇ ಸ್ಥಾನದಲ್ಲಿರುವುದು ದೆಹಲಿ ವಲಯ. ಕಳೆದ ಹತ್ತು ವರ್ಷಗಳಲ್ಲಿ ಈ ವಲಯಕ್ಕೆ ಬಂದಿರುವ ಒಟ್ಟಾರೆ ವಿದೇಶಿ ಬಂಡವಾಳ 97,125ಕೋಟಿ ರೂಪಾಯಿಗಳು. ಮೂರನೇ ಸ್ಥಾನದಲ್ಲಿ ಬೆಂಗಳೂರು ವಲಯವಿದೆ. ಈ ವಲಯಕ್ಕೆ ಕಳೆದ ಹತ್ತು ವರ್ಷಗಳಲ್ಲಿ ಹರಿದುಬಂದಿರುವ ವಿದೇಶಿ ಬಂಡವಾಳ ಎಷ್ಟು? ಕೇವಲ 29,850 ಕೋಟಿ ರೂಪಾಯಿಗಳು. ಭಾರತಕ್ಕೆ ವಿದೇಶಿ ಬಂಡವಾಳದ ಹರಿವಿನ ಮೇಲ್ವಿಚಾರಣೆ ಮತ್ತು ಉತ್ತೇಜನ ಮಾಡುವ ಕೇಂದ್ರ ಸರ್ಕಾರದ ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರಿಯಲ್ ಪಾಲಿಸಿ ಅಂಡ್ ಪ್ರಮೋಷನ್ ಒದಗಿಸಿರುವ ಅಂಕಿಅಂಶದ ಪ್ರಕಾರ ಭಾರತವು 4,68,000ಕೋಟಿ ರೂಬಂಡವಾಳದ ಹೂಡಿಕೆಯ ಭರವಸೆ ಪಡೆದುಕೊಂಡಿದ್ದರೂ ಕಳೆದ ಹತ್ತು ವರ್ಷಗಳಲ್ಲಿ ಭಾರತ ವಾಸ್ತವವಾಗಿ ಪಡೆದುಕೊಂಡ ವಿದೇಶಿ ಬಂಡವಾಳ ಕೇವಲ 2,35,992 ಕೋಟಿ ರೂಪಾಯಿಗಳು ಮಾತ್ರ. ಅದರಲ್ಲಿ ಕರ್ನಾಟಕದ ಪಾಲು ಎಷ್ಟು ಗೊತ್ತೆ? ಕೇವಲ 5219 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಒಟ್ಟಾರೆ ದೇಶದಲ್ಲಾದ ಬಂಡವಾಳ ಹೂಡಿಕೆಯ ಶೇ.2.21ರಷ್ಟು ಮಾತ್ರ!!

ಹೀಗೆ ಸರ್ಕಾರದ ಅಂಕಿಅಂಶಗಳೇ ಹೇಳುವಂತೆ 2000-2010ರ ನಡುವೆ ಕರ್ನಾಟಕ ಪಡೆದುಕೊಂಡ ವಿದೇಶಿ ಬಂಡವಾಳ ಹೆಚ್ಚೆಂದರೆ 29,000 ಕೋಟಿ ಕಡಿಮೆಯೆಂದರೆ 5219 ಕೋಟಿ ರೂಗಳು ಮಾತ್ರ. ಅದೂ 2000ದ ಜೂನ್‌ನಲ್ಲಿ ಆಗಿನ ಸರ್ಕಾರ ಬೃಹತ್ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡಿದ ನಂತರ ಎಂಬುದನ್ನೂ ಮರೆಯುವಂತಿಲ್ಲ. ಆದ್ದರಿಂದಲೇ ಈಗ ಯಡಿಯೂರಪ್ಪನವರ ಸರ್ಕಾರ ಮತ್ತೊಂದು ಜಾಗತಿಕ ಸಮಾವೇಶ ಮಾಡಿದ ಕೂಡಲೇ ಕಳೆದ ಹತ್ತು ವರ್ಷಗಳಲ್ಲಿ ರಾಜ್ಯ ಪಡೆದ ವಿದೇಶಿ ಬಂಡವಾಳದ ಹತ್ತು ಪಟ್ಟು ಹೆಚ್ಚಿನ ಬಂಡವಾಳ ಬರುತ್ತದೆ ಎಂಬ ಬಿಜೆಪಿ ಸರ್ಕಾರದ ಬೊಗಳೆಗಳು ಎಷ್ಟು ಸುಳ್ಳು ಎಂಬುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಇನ್ನು ಮೂರು ಲಕ್ಷ ಉದ್ಯೋಗಗಳು ಸಿಗುವ ವಿಷಯ. ಮೂರು ಲಕ್ಷ ಕೋಟಿ ಬಂಡವಾಳವೇ ಇಲ್ಲವೆಂದ ಮೇಲೆ ಮೂರು ಲಕ್ಷ ಉದ್ಯೋಗ ಎಲ್ಲಿಂದ ಸೃಷ್ಟಿಯಾಗುತ್ತದೆ? ಹೀಗಾಗಿ ಅದು ಮತ್ತೊಂದು ಸುಳ್ಳು. ಈಗಲೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಒಂದು ಕೋಟಿ ಬಂಡವಾಳಕ್ಕೆ ಹೆಚ್ಚೂ ಕಡಿಮೆ 20 ಉದ್ಯೋಗಗಳನ್ನು ಸೃಷ್ಟಿಸುತ್ತವೆ. ಆದರೆ ಭಾರಿ ಬಂಡವಾಳ ಹೂಡುವ ಉದ್ಯಮಗಳಲ್ಲಿ ಬಂಡವಾಳ ಹೆಚ್ಚಿದಷ್ಟು ಉದ್ಯೋಗದ ಅನುಪಾತ ಕಡಿಮೆಯಾಗುತ್ತಲೇ ಹೋಗುತ್ತದೆ. ಭಾರಿ ಕೈಗಾರಿಕೆಗಳೆಂದು ಪರಿಗಣಿಸಲ್ಪಡುವ ಸಿಮೆಂಟ್, ಆಟೋಮೊಬೈಲ್, ಔಷಧ ಮತ್ತು ರಾಸಾಯನಿಕ ಮತ್ತು ಉಕ್ಕು ಕ್ಷೇತ್ರಗಳಲ್ಲೂ ಇತ್ತೀಚಿನ ವರ್ಷಗಳಲ್ಲಿ ತಂತ್ರಜ್ಞಾನ ಬೆಳೆದ್ದು ಪ್ರತಿ ಕೋಟಿ ರೂಪಾಯಿ ಬಂಡವಾಳ ಸೃಷ್ಟಿಸುವ ಉದ್ಯೋಗದ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿದೆ. ಈ ಮೊದಲು ಒಂದು ಕೋಟಿಗೆ 5-7 ಉದ್ಯೋಗಗಳು ಸೃಷ್ಟಿಯಾಗುತ್ತಿದ್ದವು. ಆದರೆ ಈಗ ಸರ್ಕಾರವೇ ಹೇಳುವಂತೆ 3ಲಕ್ಷ ಕೋಟಿಗೆ 3ಲಕ್ಷ ಉದ್ಯೋಗಗಳು. ಅಂದರೆ ಒಂದುಕೋಟಿ ಬಂಡವಾಳಕ್ಕೆ ಒಂದು ಉದ್ಯೋಗ! ಆದರೆ

ಸರ್ಕಾರದ ಪ್ರಕಟಣೆಗಳು ತಿಳಿಸುವಂತೆ ಈ ಜಾಗತಿಕ ಸಮಾವೇಶದ ಮೂಲಕ ಕರ್ನಾಟಕದಲ್ಲಿ ಹೂಡಿಕೆ ಮಾಡಲಿರುವ ಪ್ರಮುಖ ವಿದೇಶಿ ಉದ್ಯಮಗಳೆಂದರೆ ಆರ್ಸಲರ್ ಮಿತ್ತಲ್, ಪೊಸ್ಕೋ ಮತ್ತು ಲಾಫರೇಜ್ ಕಂಪನಿಗಳು. ಇವಲ್ಲದೆ ದೇಸೀ ಕಂಪನಿಗಳಾದ ಒಎನ್‌ಜಿಸಿ, ಜಿಎಐಎಲ್, ರಿಲೈಯನ್ಸ್ ಕಂಪನಿಗಳು ಸಹ ದೊಡ್ಡಮಟ್ಟದಲಿ ಬಂಡವಾಳ ಹೂಡುವ ನಿರೀಕ್ಷೆ ಇವೆ.ಇದರಲ್ಲಿ ಪ್ರಮುಖವಾದದ್ದು ಮಿತ್ತಲ್ ಮತ್ತು ಪೋಸ್ಕೋ ಕಂಪನಿಗಳು. ಮಿತ್ತಲ್ ಕಂಪನಿ 30,000 ಕೋಟಿ ರೂ ಬಂಡವಾಳ ಹೂಡಿ ಬೃಹತ್ ಉಕ್ಕು ಕಾರ್ಖಾನೆ ಯನ್ನು ಸ್ಥಾಪಿಸುವ ಇರಾದೆ ಯನ್ನು ಕಳೆದ ಕೆಲ ವರ್ಷಗಳಿಂದ ತೋರುತ್ತಾ ಬಂದಿದೆ.ವಿಶ್ವದಲ್ಲೇ ದೊಡ್ಡ ಸ್ಟೀಲ್ ಕುಳವಾದ ಈ ಲಕ್ಷ್ಮಿ ಮಿತ್ತಲ್ ಸಂಸ್ಥೆ ಪ್ರಧಾನವಾಗಿ ಸುಧಾರಿತ ತಂತ್ರಜ್ಞಾನ ಬಳಸಿ ಹೆಚ್ಚಿನ ಲಾಭದತ್ತ ಗಮನ ಇಟ್ಟಿರುವ ಕಂಪನಿಯೇ ಹೊರತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಕಂಪನಿಯಲ್ಲ.

ವಾಸ್ತವವಾಗಿ ಇದು ಕೂಡಾ ಉತ್ಪ್ರೇಕ್ಷೆಯೇ! ಏಕೆಂದರೆ ಈಗ ಅಂತರರಾಷ್ಟ್ರಿಯ ಮಟ್ಟದಲ್ಲಿ ಶ್ರಮಶಕ್ತಿಯನ್ನು ಬೇಡುವ ಸಿಮೆಂಟ್, ಆಟೊಮೊಬೈಲ್, ಉಕ್ಕು ಕ್ಷೇತ್ರದಲ್ಲೂ 7 ಕೋಟಿ ರೂ ಬಂಡವಾಳ ಒಂದು ಉದ್ಯೋಗವನ್ನು ಸೃಷ್ಟಿಸುತ್ತದೆ. ಅಷ್ಟೆ, ಟಾಟಾದವರು ಬಂಗಾಳದ ಸಿಂಗೂರಿನಲ್ಲಿ 1,000 ಕೋಟಿರೂಗಳ ನಾನೋ ಕಾರಿನ ಘಟಕ ಹಾಕಿದಾಗ ಅದು ಹತ್ತು ಸಾವಿರ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಸರ್ಕಾರ ಹೇಳಿತ್ತು. ಆದರೆ ಅದು ಕೇವಲ 750 ಶಾಶ್ವತ ಉದ್ಯೋಗಗಳನ್ನು ಮತ್ತು 1,000 ಅವಲಂಬಿತ ಉದ್ಯೋಗಗಳನ್ನು ಮಾತ್ರ ಸೃಷ್ಟಿಸಲು ಸಾಧ್ಯ ಎಂಬುದನ್ನು ನಂತರ ಟಾಟಾದವರೇ ಒಪ್ಪಿಕೊಂಡರು. ಹೀಗಾಗಿ ಮೂರು ಲಕ್ಷ ಕೋಟಿ ಬಂಡವಾಳ ಹೂಡಿಕೆಯಾದರೂ ಮೂರು ಲಕ್ಷ ಉದ್ಯೋಗಗಳು ಸೃಷ್ಟಿಯಾಗುವುದು ಕನಸಿನಮಾತು!

ಇಷ್ಟಾಗಿಯೂ ಸರ್ಕಾರ ಈ ಸಮಾವೇಶದ ಮೂಲಕ ಆಹ್ವಾನಿಸುತ್ತಿರುವ ಉದ್ಯಮಗಳು ಶ್ರಮಿಕರನ್ನು ಹೆಚ್ಚಿಗೆ ಬೇಡುವ ಉದ್ಯಮಗಳಲ್ಲ. ಬದಲಿಗೆ ತಂತ್ರಜ್ಞಾನ ಮತ್ತು ಬಂಡವಾಳ ಹೆಚ್ಚಿರುವ ಉದ್ಯಮಗಳು. ಉದಾಹರಣೆಗೆ ಸರ್ಕಾರದ ಹೇಳಿಕೆಗಳೇ ಸ್ಪಷ್ಟಪಡಿಸುವಂತೆ ಈ ಸಮಾವೇಶದಲ್ಲಿ ಬಂಡವಾಳ ಹೂಡಲಿರುವ ಉದ್ಯಮಗಳಿಗೆ ಸರ್ಕಾರ ಏಳು ವಿಶೇಷ ಅರ್ಥಿಕ ವಲಯಗಳನ್ನು (SEZ) ರೂಪಿಸಲಿದೆ. ಧಾರವಾಡ, ಕೋಲಾರ ಹಾಗೂ ಮೈಸೂರುಗಳಲ್ಲಿ ಐಟಿ ಉದ್ಯಮಗಳು, ಬೆಂಗಳೂರಿನ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಏರೋಸ್ಪೇಸ್ ವಲಯ, ಹಾಸನದ ಬಳಿ ಆಹಾರ, ಟೆಕ್ಸ್‌ಟೈಲ್ಸ್, ಮತ್ತು ಔಷಧ ಕೈಗಾರಿಕಾ ವಲಯ ಮತ್ತು ಬೀದರ್ ಹಾಗೂ ಗುಲ್ಬರ್ಗಗಳಲ್ಲಿ ಇಂಡಸ್ಟ್ರಿಯಲ್ ಪಾರ್ಕ್‌ಗಳನ್ನು ನಿರ್ಮಿಸುವುದಾಗಿ ಸರ್ಕಾರ ಹೇಳುತ್ತಿದೆ. ಮೇಲಿನ ಉದ್ಯಮಗಳ ಬಗೆಗಳನ್ನೇ ನೋಡಿದರೂ ಅವು ಹೆಚ್ಚಿನ ಬಂಡವಾಳ ಸಾಂದ್ರತೆ ಹೊಂದಿರುವ ಮತ್ತು ಹೆಚ್ಚಿನ ವಿದ್ಯಾರ್ಹತೆ ಮತ್ತು ಕೌಶಲ್ಯವನ್ನು ಬೇಡುವ ಉದ್ಯೋಗಗಳೆಂದು ಅರ್ಥವಾಗುತ್ತದೆ. ಇವು ಮೂರು ಲಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡುವುದುಂಟೆ?

ಸರ್ಕಾರದ ಪ್ರಕಟಣೆಗಳು ತಿಳಿಸುವಂತೆ ಈ ಜಾಗತಿಕ ಸಮಾವೇಶದ ಮೂಲಕ ಕರ್ನಾಟಕದಲ್ಲಿ ಹೂಡಿಕೆ ಮಾಡಲಿರುವ ಪ್ರಮುಖ ವಿದೇಶಿ ಉದ್ಯಮಗಳೆಂದರೆ ಆರ್ಸಲರ್ ಮಿತ್ತಲ್, ಪೊಸ್ಕೋ ಮತ್ತು ಲಾಫರೇಜ್ ಕಂಪನಿಗಳು. ಇವಲ್ಲದೆ ದೇಸೀ ಕಂಪನಿಗಳಾದ ಒಎನ್‌ಜಿಸಿ, ಜೆಎಐಎಲ್, ರಿಲೈಯನ್ಸ್ ಕಂಪನಿಗಳು ಸಹ ದೊಡ್ಡಮಟ್ಟದಲಿ ಬಂಡವಾಳ ಹೂಡುವ ನಿರೀಕ್ಷೆ ಇವೆ.

ಇದರಲ್ಲಿ ಪ್ರಮುಖವಾದದ್ದು ಮಿತ್ತಲ್ ಮತ್ತು ಪೋಸ್ಕೋ ಕಂಪನಿಗಳು. ಮಿತ್ತಲ್ ಕಂಪನಿ 30,000 ಕೋಟಿ ರೂ ಬಂಡವಾಳ ಹೂಡಿ ಬೃಹತ್ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸುವ ಇರಾದೆಯನ್ನು ಕಳೆದ ಕೆಲ ವರ್ಷಗಳಿಂದ ತೋರುತ್ತಾ ಬಂದಿದೆ. ವಿಶ್ವದಲ್ಲೇ ದೊಡ್ಡ ಸ್ಟೀಲ್ ಕುಳವಾದ ಈ ಲಕ್ಷ್ಮಿ ಮಿತ್ತಲ್ ಸಂಸ್ಥೆ ಪ್ರಧಾನವಾಗಿ ಸುಧಾರಿತ ತಂತ್ರಜ್ಞಾನ ಬಳಸಿ ಹೆಚ್ಚಿನ ಲಾಭದತ್ತ ಗಮನ ಇಟ್ಟಿರುವ ಕಂಪನಿಯೇ ಹೊರತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಕಂಪನಿಯಲ್ಲ. ಇಲ್ಲಿ ಅದರ ಕಣ್ಣಿರುವುದು ಸುಲಭವಾಗಿ ಸಿಗುವ ಅದಿರಿನ ಮೇಲೇ ಮತ್ತು ತುಂಗಭದ್ರ ಡ್ಯಾಮಿನಿಂದ ಸಿಗುವ ನೀರಿನ ಮೇಲೆಯೇ ವಿನಃ ಕಾರ್ಮಿಕರ ಕ್ಷಮತೆಯ ಮೇಲಲ್ಲ. ಅದು ಸುಧಾರಿತ ತಂತ್ರಜ್ಞಾನವನು ಬಳಸುತ್ತದೆಯೇ ವಿನಃ ಕಾರ್ಮಿಕರ ಕ್ಷಮತೆಯನ್ನು ಹೆಚ್ಚು ಆಧರಿಸಿಯೇ ಇಲ್ಲ. ಇಡೀ ಪ್ರಪಂಚದಾದ್ಯಂತ ತನ್ನ ಸ್ಥಾವರಗಳನ್ನು ಹೊಂದಿರುವ ಈ ಕಂಪನಿ ಈವರೆಗೆ ಸೃಷ್ಟಿಸಿರುವ ಉದ್ಯೋಗದ ಸಂಖ್ಯೆ ಒಂದು ಲಕ್ಷವನ್ನು ದಾಟುವುದಿಲ್ಲ. ಇನ್ನು ಪೊಸ್ಕೋ ಎಂಬ ಕೊರಿಯನ್ ಕಂಪನಿಯದ್ದೂ ಇದೇ ಕಥೆ. ಉದ್ಯೋಗದ ಭರವಸೆ ನೀಡು ಈಗಾಗಲೇ ಒರಿಸ್ಸಾದಲ್ಲಿ ತನ್ನದೇ ಆದ ಉಕ್ಕು ಸ್ಥಾವರ ಹೊಂದಿರುವ ಈ ಪೊಸ್ಕೋ ಸಂಸ್ಥೆ ಆನಂತರ ತಾನು ಹೇಳಿದಷ್ಟು ಉದ್ಯೋಗವನ್ನೂ ಸೃಷ್ಟಿಸಲಿಲ್ಲ. ಸೃಷ್ಟಿಸಿದ ಉದ್ಯೋಗಳಿಗೆ ಬೇಕಾದಷ್ಟು ವಿದ್ಯಾರ್ಹತೆ ಇಲವೆಂದು ಸ್ಥಳೀಯರಿಗೆ ಉದ್ಯೋಗವನ್ನೂ ನೀಡಲಿಲ್ಲ. ಈ ಸ್ಥಾವರಕ್ಕಾಗಿ ಜಮೀನು ಕಳೆದುಕೊಂಡ ಆದಿವಾಸಿಗಳು ಮತ್ತು ರೈತರು ಈಗ ಅದರ ವಿರುದ್ಧ ಜೀವನ್ಮರಣದ ಹೋರಾಟ ನಡೆಸುತ್ತಿರುವಾಗಲೇ ಈ ಪೊಸ್ಕೋ ಕರ್ನಾಟಕದತ್ತ ಮುಖ ಮಾಡಿದೆ.

ಹೀಗೆ ಬಿಜೆಪಿ ಸರ್ಕಾರ ಬೊಗಳೆ ಬಿಡುವಂತೆ ಈ ಜಾಗತಿಕ ಹೂಡಿಕೆದಾರರ ಸಮಾವೇಶವು ಕರ್ನಾಟಕಕ್ಕೆ ಕೊಚ್ಚಿಕೊಂಡಷ್ಟು ಬಂಡವಾಳವನ್ನೂ ತರುವುದಿಲ್ಲ, ಉದ್ಯೋಗವನ್ನು ಸೃಷ್ಟಿಸುವುದಿಲ್ಲ.

ಆದರೆ ಅದೇ ಸಮಯದಲ್ಲಿ ಸರ್ಕಾರದ ಮತ್ತು ಈ

ಕಂಪನಿಗಳ ನಿಮಿತ್ತವೇ ಇಲ್ಲದಂತೆ ತಮ್ಮದೇ ಜಮೀನಿನಲ್ಲಿ ಕೃಷಿ ಮಾಡಿಕೊಳ್ಳುತ್ತಾ ಮನೆಮಕ್ಕಳೆಲ್ಲಾ ಉದ್ಯೋಗ ಕಂಡು ಕೊಂಡಿರುವ ಲಕ್ಷಾಂತರ ರೈತ ಕುಟುಂಬಗಳನ್ನು ಮಾತ್ರ ನಿರುದ್ಯೋಗಿಗಳನ್ನಾಗಿ ಮಾಡುವುದು ಖಂಡಿತಾ. ಈ ನಾಡಿನ ರೈತರಿಗೆ ವಿಪತ್ತನ್ನು, ಬಡವರ ಮತ್ತು ಮಧ್ಯಮ ವರ್ಗದ ಬದುಕಿಗೆ ಕಂಟಕವನ್ನೂ ಸೃಷ್ಟಿಸುವುದಂತೂ ನಿಜ. ಏಕೆಂದರೆ ಈ ಬಂಡವಾಳಿಗರು ಬೇರೇ ರಾಜ್ಯಗಳಿಗೆ ಹೋಗದೆ ನಮ್ಮ ರಾಜ್ಯಕ್ಕೆ ಬರಬೇಕೆಂದು ಆಕರ್ಷಿಸಲು ಕರ್ನಾಟಕ ರಾಜ್ಯ ಸರ್ಕಾರ ಹಲವಾರು ರಿಯಾಯತಿಗ ಳನ್ನೂ, ವಿನಾಯತಿಗಳನ್ನೂ, ಸಹಾಯಧನವನ್ನೂ ನೀಡು ತ್ತಿದೆ. ಉದ್ರಿಯಾಗಿ ಅಥವಾ ಕಡಿಮೆ ಬೆಲೆಯಲ್ಲಿ ಭೂಮಿ, ವಿದ್ಯುತ್, ನೀರನ್ನು ಒದಗಿಸಲಿದೆ. ಇವೆಲ್ಲವೂ ಹೆಚ್ಚುವರಿ ಯಾಗಿ ಬೇರೆಲ್ಲಿಂದಲೋ ಬರುವುದಿಲ್ಲ. ಈವರೆಗೆ ಈ ನಾಡಿನ ಜನತೆಯ ಬಳಿ ಇದ್ದದ್ದನ್ನೇ ಕಿತ್ತು ಈ ಲಾಭ ಕೋರ ಕಂಪನಿಗಳಿಗೆ ಕೊಡಲಾಗುತ್ತದೆ.

ಉದಾಹರಣೆಗೆ ಮಿತ್ತಲ್ ಕಂಪನಿಗೆ ಕರ್ನಾಟಕ ಸರ್ಕಾರ ಬಿಡಿಗಾಸಿನ ಬೆಲೆಗೆ ಬಳ್ಳಾರಿಯ ಕುಡಿತಿನಿಯ ಬಳಿ 4,500 ಎಕರೆ ಫಲವತ್ತಾದ ಜಮೀನನ್ನು ಕೊಡಲು ಎಲ್ಲಾ ಸಿದ್ಧತೆಗಳನ್ನು ನಡೆಸಿದೆ. ಆ ಜಮೀನಿನ ಶೇ.60 ರಷ್ಟು ಭಾಗದಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರು ವರ್ಷಕ್ಕೆ ಒಂದೆರಡು ಬೆಳೆ ಬೆಳೆದು ಇದ್ದದ್ದರಲ್ಲಿ ಬೀದಿ ಪಾಲಗದೆ ಬದುಕುತ್ತಿದ್ದರು. ಈಗ ಈ ಯೋಜನೆಯ ಮುಖಾಂತರ ಆ ಭಾಗದ ಆ ಸಾವಿರಾರು ರೈತರು ಬೀದಿಪಾಲಾಗಲಿದ್ದಾರೆ. ಅದೇ ರೀತಿ ಬಿಜೆಪಿ ಸರ್ಕಾರವು ಈ ಜಾಗತಿಕ ಸಮಾವೇಶಕ್ಕೆ ಮುನ್ನವೇ 50.000 ಎಕರೆ ಜಮೀನನ್ನು ವಶಪಡಿಸಿಕೊಳ್ಳುವ ನೋಟೀಸು ನೀಡಿದ್ದು ಅವನ್ನು ಈ ಕಂಪನಿಗಳಿಗೆ ಪರಭಾರೆ ಮಾಡಲಿದೆ. ಅದೇ ರೀತಿ ಇನೂ 1 ಲಕ್ಷ ಎಕರೆ ಜಮೀನನ್ನು ಅಧಿಕವಾಗಿ ಈ ಕಂಪನಿಗಳಿಂದು ಗುರುತಿಸಲಾಗಿದೆ. ಒಂದು ಎಕರೆ ಭೂಮಿ ಏನಿಲ್ಲವೆಂದರೂ 5 ಜನಕ್ಕೆ ಕೆಲಸ ನೀಡಿ 5 ಜನರನ್ನೂ ಸಾಕುತ್ತಿತ್ತು ಎಂದಿಟ್ಟುಕೊಂಡರೂ ಈ ಸಮಾ ವೇಶದ ಮೂಲಕ ಬಿಜೆಪಿ ಸರ್ಕಾರ ಈ ಬಾಬತ್ತಿನಲ್ಲೇ ಏನಿಲ್ಲವೆಂದರೂ ಏಳುಲಕ್ಷಕ್ಕೂ ಹೆಚ್ಚು ಜನರನ್ನು ಬೀದಿ ಪಾಲು ಮಾಡಲಿದೆ. ಈ ಕಂಪನಿಗಳು ಮೂರು ಲಕ್ಷ ಉದ್ಯೋಗವನ್ನು ಸೃಷ್ಟಿಸಲು ಸಾಧ್ಯವೇ ಇಲ್ಲವೆಂದು ಈಗಾಗಲೇ ನೋಡಿದ್ದೇವೆ. ಆದರೆ ಉಳುವ ಯೋಗ್ಯ ಭೂಮಿಯನ್ನು ಕಂಪನಿಗಳಿಗೆ ಪರಭಾರೆ ಮಾಡುವ ಮೂಲಕ ಏನಿಲ್ಲವೆಂದರೂ ಏಳು ಲಕ್ಷ ಉದ್ಯೋಗಗಳನ್ನು ಕಸಿಯುವುದಂತೂ ಖಾತರಿ.

ಹಾಗೆಯೇ ಈ ಕಂಪನಿಗಳು ತಮ್ಮ ಬಂಡವಾಳ ಹೂಡುತ್ತವೆ ಎಂಬುದೇ ಒಂದು ಬಗೆಯ ಕುಚೋದ್ಯ. ಏಕೆಂದರೆ ಅವರು ಇಲ್ಲಿ ಹೂಡುತ್ತಾರೆ ಎನ್ನಲಾಗುವ ಲಕ್ಷಾಂತರ ಕೋಟಿ ರೂಪಾಯಿ ಬಂಡವಾಳದಲ್ಲಿ ಅವರ ಹೂಡುವ ಪಾಲು ಶೇ.20 ಅನ್ನು ದಾಟುವುದಿಲ್ಲ. ಉಳಿದ ದ್ದನ್ನು ಯಾವ ಸರ್ಕಾರವು ಅವರಿಗೆ ಕಡಿಮೆ ಬಡ್ಡಿಯ ದರದಲ್ಲಿ ಬಂಡವಾಳವನ್ನು ಸಾಲವಾಗಿ ಒದಗಿಸುತ್ತದೆಯೋ ಅಲ್ಲಿ ಅವರು ಉದ್ಯಮ ಹೂಡುತ್ತಾರೆ. ಬಿಜೆಪಿ ಸರ್ಕಾರ ಕಿಂಚಿತ್ತೂ ಬಡ್ಡಿ ಸ್ವೀಕರಿಸದೆ ಸಾಲವನ್ನು ಒದಗಿಸುವ ಭರ ವಸೆಯ ಮೇಲೆ ಹಲವು ಕಂಪನಿಗಳನ್ನು ಆಕರ್ಷಿಸಿದೆ. ಸರ್ಕಾರ ಎಲ್ಲಿಂದ ದುಡ್ಡನ್ನು ತರುತ್ತದೆ? ನಮ್ಮ ತೆರಿಗೆ ಹಣದಿಂದ! ಬಜೆಟ್ಟುಗಳಲ್ಲಿ ನಮ್ಮ ಹಳ್ಳಿಯ ರಸ್ತೆ, ಶಾಲೆಗೆ, ಪಡಿತರಕ್ಕೆ ಕೊಡಬೇಕಾದ ಹಣವನ್ನು ಕಿತ್ತು ಅವರಿಗೆ ಕೊಡುವದರಿಂದ! ಬ್ಯಾಕುಗಳಲ್ಲಿ ನಾವಿಟ್ಟಿರುವ ಉಳಿತಾ ಯದ ಹಣದಿಂದ! ಅಂದರೆ ಹಣ ನಮ್ಮದು.ಲಾಭ ಅವ ರದು. ಏಕೆಂದರೆ ಸರ್ಕಾರ ಅವರಿಗೆ ಕೊಡುವ ಸಾಲವನ್ನು ಸುಲಭವಾಗಿ ವಾಪಸ್ ತೀರಿಸಲು ಸಹಾಯವಾಗುವಂತೆ ಹಲವಾರು ಲಾಭದ ದಾರಿಗಳನ್ನು ಕೊಟ್ಟಿದೆ. ಉಚಿತ ಜಮೀನು, ತೆರಿಗೆ ವಿನಾಯತಿ, ಖಚಿತ ಲಾಭದ ಖಾತರಿ, ಅಗ್ಗದ ವಿದ್ಯುತ್, ಕಡ್ಡಾಯ ಖರೀದಿ ಇನ್ನಿತರ ಈ ನಾಡಿನ ಯಾವುದೇ ರೈತನಿಗೂ ಇಲ್ಲದ, ನಾಗರಿಕನಿಗೂ ಇಲ್ಲದ, ಸಣ್ಣ ಪುಟ್ಟ ಬಂಡವಾಳಿಗರಿಗೂ ಇಲ್ಲದ ಅಪಾರ ಲಾಭ ಸೌಲಭ್ಯವನ್ನು ಈ ಕಂಪನಿಗಳಿಗೆ ಒದಗಿಸುತ್ತದೆ. ಇವುಗಳಿಗೆ ಕೊಡುವ ಸೌಲಭ್ಯದಿಂದ ಉಂಟಾಗುವ ಖೋತಾವನ್ನು ರೈತರಿಗೆ ಸಹಾಯಧನವನ್ನು ಕಡಿಮೆ ಮಾಡುವ ಮೂಲಕ, ಈ ನಾಡಿನ ಜನರಿಗೆ ಕೊಡುತ್ತಿದ್ದ ವಿದ್ಯುತ್, ನೀರು ಇವು ಗಳ ಶುಲ್ಕವನ್ನು ಹೆಚ್ಚಿಸುವ ಮೂಲಕ, ರೈತರ ಜಮೀನಿಗೆ ಅತ್ಯಂತ ಕಡಿಮೆ ದರವನ್ನು ಕೊಟ್ಟು ಬೀದಿಪಾಲು ಮಾಡುವ ಮೂಲಕ ಸರಿದೂಗಿಸಿಕೊಳ್ಳುತ್ತದೆ.

ಹೀಗೆ ನಮ್ಮ ಸಂಪನ್ಮೂಲವನ್ನು ಬಿಡಿಗಾಸಿಗೆ ಈ ವಿದೇಶಿ ಕಂಪನಿಗಳಿಗೆ ಕೊಟ್ಟು, ಈ ನಾಡಿನ ಜನರನ್ನು ಸುಲಿದು ಆ ಕಂಪನಿಗಳ ಲಾಭವನ್ನು ಹೆಚ್ಚಿಸುವುದೇ ಈ ಜಾಗತೀಕ ಬಂಡವಾಳ ಹೂಡಿಕೆದಾರರ ಸಮಾವೇಶದ ಪರಿಣಾಮ. ಏಕೆಂದರೆ ಬಿಜೆಪಿ ಸರ್ಕಾರಕ್ಕೆ ಈ ದೇಶದ ನಾಗರಿಕರು ಕೊಡುತ್ತಿರುವ ತೆರಿಗೆ ಹಣ ಸಂಪನ್ಮೂಲ ವೆನಿಸುವುದೇ ಇಲ್ಲ. ಡಾಲರ್ ಬಂಡವಾಳ ಮಾತ್ರ ಸಂಪ ನ್ಮೂಲವೆನಿಸುತ್ತದೆ. ಈ ದೇಶದ ಕೃಷಿಯಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗುತ್ತಿರುವುದು ಅವರಿಗೆ ಉದ್ಯೋಗ ವೆನಿಸುವುದಿಲ್ಲ. ಈ ಕಂಪನಿಗಳು ಸೃಷ್ಟಿಸುವ ಉದ್ಯೋಗ ಮಾತ್ರವೇ ಉದ್ಯೋಗವಾಗಿ ಕಾಣುತ್ತದೆ. ಆದ್ದರಿಂದಲೇ ರೈತರ ಜಮೀನು ವಶವಾಗುವುದರಿಂದ ರೈತರ ಉದ್ಯೋ ಗಗಳು ನಾಶವಾಗುವುದು ಕಾಣುವುದೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಜಾಗತೀಕರಣದ ಕಾಲಘಟ್ಟದಲ್ಲಿ ಡಾಲರಿನ ಮುಂದೆ ಈ ದೇಶದ ಜನರು ಅವರ ಕಣ್ಣಿಗೆ ನಿವಾರಿಸಿ ಕೊಳ್ಳಬೇಕಾದ ಹೊರೆಯಂತೆ ಕಾಣುತ್ತಿದೆಯೇ ವಿನಃ ಈ ದೇಶದ ನಿಜವಾದ ಮಾಲೀಕರಂತಲ್ಲ.

ಇದು ದೇಶಭಕ್ತ ಬಿಜೆಪಿಗಳ ಅಸಲಿ ಬ್ರಿಟಿಷ್ ಮನೋಭಾವ.

ಕಾಂಗ್ರೆಸ್ಸಿನ ಮನಮೋಹನ್ ಸಿಂಗ್‌ದೂ ಇದೇ ಮನೋಭಾವ. ಮೊನ್ನೆ ಯುಪಿಎ ಸರ್ಕಾರಕ್ಕೆ ಒಂದು ವರ್ಷ ತುಂಬಿದ್ದಕ್ಕೆ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಪ್ರಧಾನ ಮಂತ್ರಿಗಳು ಶುರು ಮಾಡಿದ್ದೇ " ಈ ದೇಶ ಬಿಲಿ ಯನ್(ನೂರು ಕೋಟಿ) ಡಾಲರ್...ಸಾರಿ ಬಿಲಿಯನ್ ಜನಸಂಖ್ಯೆ ಇರುವ ದೇಶ" ಎಂದು. ಎಂದರೆ ಕನಸು ಮನಸ್ಸಿನಲ್ಲೂ ಡಾಲರನ್ನೇ ಕನಸುವ ಜನರೇ ನಮ್ಮನ್ನು ಆಳುತ್ತಿದ್ದಾರೆ. ಇದು ಈ ದೇಶದ ಜನ ಎದುರಿಸುತ್ತಿರುವ ಅತಿ ದೊಡ್ಡ ಸವಾಲು.

ಮೊನ್ನೆ ಕೂಡಲಸಂಗಮದಲ್ಲಿ ನಡೆದ ಸಾವಯವ ರೈತರ ಸಮಾವೇಶದಲ್ಲಿ ರೈತರು "ಕೃಷಿ ಶ್ರೇಷ್ಠ ವ್ರತ. ನಾನು ಕೃಷಿಯನ್ನು ಪ್ರೀತಿಸುತ್ತೇನೆ. ಭೂಮಿ ಮತ್ತು ನೀರು ಪ್ರಮುಖ ಸಂಪನ್ಮೂಲಗಳು. ನಾವು ಇವುಗಳನ್ನು ಸಂರಕ್ಷಿ ಸುತ್ತೇವೆ. ಸುಸ್ಥಿರ ಕೃಷಿಗೆ ನಾನು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳುತ್ತೇನೆ." ಎಂದು ಪ್ರತಿಜ್ಞೆ ಸ್ವೀಕರಿಸಿದ್ದಾ ರಂತೆ. ಅದು ನಿಜವೇ ಆಗಿದ್ದಲ್ಲಿ ಈ ನಾಡಿನ ರೈತಾಪಿ ಮತ್ತು ಎಲ್ಲಾ ಸ್ವಾಭಿಮಾನಿ ಜನತೆ ಈ ನಾಡನ್ನು ಮಾರುವ ಜಾಗತಿಕ ಹೂಡಿಕೆದಾರರ ಸಮಾವೇಶದ ವಿರುದ್ಧ ಕೂಡಲೇ ಹೋರಾಟವನ್ನು ಪ್ರಾರಂಭಿಸಬೇಕಿದೆ.

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳ ಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇ ಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸು ವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾ ಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಅಡ್ಡಹಾದಿ ಹಿಡಿದಿರುವ ಅರುಂಧತಿ ರಾಯ್....*

'ನಕ್ಸಲರ ಜೊತೆ ಹೆಜ್ಜೆ ಹಾಕುತ್ತಾ...' ಲೇಖನ ಮಾಲೆಗೊಂದು ಪ್ರತಿಕ್ರಿಯೆ

ಡಿ.ಎಸ್.ನಾಗಭೂಷಣ

ಮೊದಲು 'ಔಟ್‌ಲುಕ್' ಸಾಪ್ತಾಹಿಕದಲ್ಲಿ ಪ್ರಕಟವಾದ ಮತ್ತು ಅನಂತರ 'ಪ್ರಜಾವಾಣಿ'ಯಲ್ಲಿ ಕೆಲದಿನಗಳ ಕಾಲ ಧಾರಾವಾಹಿಯಾಗಿ ಪ್ರಕಟವಾದ ಛತ್ತೀಸಘಡದಲ್ಲಿನ ನಕ್ಸಲ್ ಚಟುವಟಿಕೆ ಕುರಿತ ಅರುಂಧತಿ ರಾಯ್ ಅವರ 'ನಕ್ಸಲೀಯರೊಂದಿಗೆ ಹೆಜ್ಜೆ ಹಾಕುತ್ತಾ...' ಎಂಬ ಶೀರ್ಷಿಕೆಯ ಲೇಖನ ಮಾಲೆ ಕುತೂಹಲಕಾರಿಯಾಗಿದೆ. ಅದಕ್ಕಿಂತ ಹೆಚ್ಚಾಗಿ, ಅದು ನಕ್ಸಲ್ ಚಳುವಳಿ ಬಗೆಗೆ ಸಾಮಾನ್ಯ ಜನರಲ್ಲಿದ್ದ ಒಂದು ಸ್ಥೂಲ ಕಲ್ಪನೆಗೆ ಒಂದಿಷ್ಟು ಸ್ಪಷ್ಟತೆ ಒದಗಿಸುವಂತಿದೆ. 'ಪ್ರಜಾವಾಣಿ'ಯ ಶ್ರೀಮತಿ ಎಂ.ಎಚ್. ನೀಳಾ ಅವರ ಸೊಗಸಾದ ಅನುವಾದವೂ ಇದಕ್ಕೆ ಕಾರಣ ಎಂದರೆ ತಪ್ಪಾಗಲಾರದು.

ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪಡೆದಿರುವ ಅರುಂಧತಿ ರಾಯ್ ನಮ್ಮ ಅತ್ಯುತ್ತಮ ಗದ್ಯ ಲೇಖಕಿಯರಲ್ಲೊಬ್ಬರು. ಗದ್ಯವನ್ನು ಪದ್ಯದಂತೆ ಬರೆಯುವ ಅವರ ಅಲಂಕಾರಿಕ ಶೈಲಿ ಯಾರನ್ನಾದರೂ ಮರುಳು ಮಾಡುವಂತಹದು. ನಕ್ಸಲ್ ಪ್ರದೇಶದ 'ಪ್ರವಾಸ' ಕುರಿತ ಸದರಿ ಲೇಖನವೂ ಇದಕ್ಕೆ ಹೊರತಲ್ಲ. ಅದರೆ, ಯಾವ ವೃತ್ತಿಪರ ಪತ್ರಕರ್ತನೂ ಹೊಗಲಾರದ ನಕ್ಸಲ್ ಚಟುವಟಿಕೆಯ ಕೇಂದ್ರ ಸ್ಥಳಗಳಿಗೆ ಭೇಟಿ ನೀಡಿ, ನಕ್ಸಲರ ಬಗ್ಗೆ, ಅವರ ರಾಜಕಾರಣ ಮತ್ತು ಕಾರ್ಯಕ್ರಮಗಳ ಬಗ್ಗೆ ಸಕಾರಣವಾಗಿ ಎಂಬಂತೆಯೇ ಸ್ವಲ್ಪ ಸಹಾನುಭೂತಿಯಿಂದಲೇ ಬರೆದಿರುವ ರಾಯ್ ಬಗ್ಗೆ ಮೆಚ್ಚುಗೆ ಮೂಡುತ್ತದೆ. ಆದರೆ, ಈ ಚಳುವಳಿಯೊಂದೇ ಭಾರತ ಇಂದು ಎದುರಿಸುತ್ತಿರುವ ಸಂಕಷ್ಟಗಳಿಗೆ ಏಕೈಕ ಉತ್ತರವೇನೋ ಎಂಬ ಧ್ವನಿಯೊಂದಿಗೆ ಅವರು ಲೇಖನವನ್ನು ಮುಗಿಸಿರುವುದು ಮಾತ್ರ ಪ್ರಶ್ನಾರ್ಹವಾಗಿದೆ. ಭಾರತದ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿ ಒಂದು ದೊಡ್ಡ ಬಿಕ್ಕಟ್ಟಿನಲ್ಲಿದೆ, ನಿಜ. ಆದರೆ ಆ ಬಿಕ್ಕಟ್ಟನ್ನು ಬಳಸಿಕೊಂಡು ನಕ್ಸಲ್ ಚಳುವಳಿ ಪ್ರತಿಪಾದಿಸುವ ಹಿಂಸಾತ್ಮಕ ದಂಗೆಯ ಮೂಲಕ 'ವರ್ಗ ಶತ್ರು'ಗಳನ್ನು ನಾಶಮಾಡಿ 'ದುಡಿ ಯುವವರ್ಗ'ದ ಏಕಪಕ್ಷೀಯ ಪ್ರಭುತ್ವವನ್ನು ಸ್ಥಾಪಿಸುವ ಪ್ರಯತ್ನ ಜನರ ಪಾಲಿಗೆ ಸದ್ಯದ ಬಿಕ್ಕಟ್ಟಿಗಿಂತ ದೊಡ್ಡ ಬಿಕ್ಕಟ್ಟನ್ನು ಸೃಷ್ಟಿಸಿದರೆ ಆಶ್ಚರ್ಯವಿಲ್ಲ.

ಏಕೆಂದರೆ, ಹಿಂಸೆ ಎನ್ನುವುದು ಅದು ದುರ್ಬಲರದಿರಲಿ, ಸಬಲರದಿರಲಿ, ವಿವೇಚನೆ ಸಂಪೂರ್ಣ ನಾಶವಾದಾಗ ಹುಟ್ಟುವಂತಹುದು. ಹಾಗೇ 'ವರ್ಗ ಶತ್ರು' –'ದುಡಿಯುವ ವರ್ಗ' ಎನ್ನುವುದು ಕೂಡಾ, ರಾಜಕೀಯ ಸಂದರ್ಭ ಬದಲಾದಂತೆ ಸದಾ ಅರ್ಥ ಬದಲಾವಣೆಗೊಳಪಡುವ ಮತ್ತು ಪರಸ್ಪರ ...

ಶಬ್ದ ಪರಿಕಲ್ಪನೆಗಳು. ಹಾಗೆ ನೋಡಿದರೆ, ಸುಮಾರು ನಲವತ್ತು ವರ್ಷಗಳ ಇತಿಹಾಸ ಹೊಂದಿರುವ ನಕ್ಸಲೀಯ ಚಳುವಳಿ ಹಲವು ಏಳು ಬೀಳುಗಳನ್ನು ಕಂಡ ಹಾಗೇ ಹಲವರ ಭ್ರಮ ನಿರಸನಕ್ಕೂ ಕಾರಣವಾದ ಚಳುವಳಿಯಾಗಿದೆ. ಹಲ ವಾರು ಮಾಜಿ ನಕ್ಸಲೀಯರು ಇಂದು, ಈ ಹಿಂದೆ ಯಾವ ದಂಧೆಯ ಕಾರಣಗಳಿಂದಾಗಿ ಕೆಲವರನ್ನು 'ವರ್ಗ ಶತ್ರು'ಗಳೆಂದು ಕಟುವಾಗಿ ಟೀಕಿಸಿ ಅವರ ನಿರ್ಮೂಲನೆಗೆ ಕರೆಕೊಡುತ್ತಿದ್ದರೋ ಅಂತಹುದೇ ದಂಧೆಗಳಲ್ಲಿ ನಿರತರಾಗಿರುವುದನ್ನು ಕಾಣಬಹುದು. ಉದಾ: ರಿಯಲ್ ಎಸ್ಟೇಟ್ ಮುಂತಾದ ದಲ್ಲಾಳಿ ಕೆಲಸಗಳು, ವಸೂಲಿ ಪತ್ರಿಕೋದ್ಯಮ, ವಾಮಾಚಾರ ಮತ್ತು ಜ್ಯೋತಿಷ್ಯಶಾಸ್ತ್ರ ಇತ್ಯಾದಿ! ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಹಿಂಸೆಯನ್ನು ಒಂದು ತತ್ವವನ್ನಾಗಿ, ಕಾರ್ಯ ಕ್ರಮವನ್ನಾಗಿ ನಂಬಿಕೊಂಡವರು ಬಹುಬೇಗ ಹತಾಶಗೊಳ್ಳುವವ ರಾಗಿರುತ್ತಾರೆ. ಅವರು ಹೋದ ಕಡೆಯಲ್ಲೆಲ್ಲಾ ಹತಾಶೆಗೊಳ್ಳುತ್ತಾ, ಸುತ್ತಮುತ್ತಲಿದ್ದವರನ್ನು ಕಂಗೆಡಿಸುತ್ತಾ ಸದಾ ಕ್ಷೇತ್ರ ಬದಲಾಯಿಸುವಂತಹವರಾಗಿರುತ್ತಾರೆ. ಹಾಗಾಗಿಯೇ ನಕ್ಸಲ್ ಚಳುವಳಿಗೆ ಸೇರುವವರಂತೆಯೇ ಅದನ್ನು ಬಿಟ್ಟು ಬರುವವರೂ ಸದಾ ಇದ್ದೇ ಇರುತ್ತಾರೆ.

ಅಂದ ಮಾತ್ರಕ್ಕೆ ನಕ್ಸಲೀಯರಲ್ಲಿ ರಾಜಕೀಯ ಬದ್ಧತೆ ಇರುವವರು ಇಲ್ಲವೇ ಇಲ್ಲವೆಂದಲ್ಲ. ತಾನು ನಂಬಿದ ತಾತ್ವಿಕತೆಯಲ್ಲಿ ಅಚಲನಂಬಿಕೆಯಿರುವ ಒಂದು ಕೇಂದ್ರ ಗುಂಪು ಇರುವುದರಿಂದಲೇ ಅದು ಒಂದು ಚಳುವಳಿಯಾಗಿ ನಲವತ್ತು ವರ್ಷಗಳಲ್ಲಿ ಹಲವು ದಮನಗಳನ್ನು ಎದುರಿಸಿಯೂ ಉಳಿದಿರುವುದು. ಆದರೆ ಅದರ ಅನುಯಾಯಿಗಳ ಬದ್ಧತೆ ಸದಾ ಚಂಚಲವೇ. ಭೂರಹಿತನೊಬ್ಬ ಭೂ ಒಡೆಯನಾಗುತ್ತಿದ್ದಂತೆ ಅಥವಾ ಅಧಿಕಾರ ವಂಚಿತನೊಬ್ಬ ಅಧಿಕಾರ ಸಂಪನ್ನನಾದೊಡನೆ ಅವನ ವರ್ಗ ಚ ಹ ರ ಗ ಳ ೀ ಬದಲಾವಣೆಯಾಗುತ್ತವೆ. ಇದು ಬಲತ್ಕಾರದ ರಾಜಕೀಯ ಚಳುವಳಿಯ ಮೂಲಕ ತಿದ್ದಲಾಗದ ಮನುಷ್ಯ ಗುಣ. ಇದು ಹಲವು ದೇಶಗಳಲ್ಲಿ, ಹಲವು ಚಳುವಳಿಗಳಲ್ಲಿ ಸಾಬೀತಾಗಿದೆ.

ಇದನ್ನು ಯುಗೋಸ್ಲಾವಿಯಾದ ಮಾಜಿ ಕಮ್ಯೂನಿಸ್ಟ್ ಚಿಂತಕ ಮಿಲೋವ್ ಜಿಲಾಸ್ ತನ್ನ 'The New Cla' ಕೃತಿಯಲ್ಲಿ ವಿವರವಾಗಿ ಮತ್ತು ಸೋದಾಹರಣವಾಗಿ ವಿಶ್ಲೇಷಿದ್ದಾನೆ. ಹಾಗಾಗಿ ಇವರ 'ಕ್ರಾಂತಿ' ಈ ಮೊದಲೇ ಹೇಳಿದ ಹಾಗೆ ಸಂಸದೀಯ ಪ್ರಜಾಪ್ರಭುತ್ವದ ಮೂಲಕ ನಾವು ಸದ್ಯಕ್ಕೆ ಎದುರಿಂತ ದೊಡ್ಡ

ಸುಮಾರು ನಲವತ್ತು ವರ್ಷಗಳ ಇತಿಹಾಸ ಹೊಂದಿರುವ ನಕ್ಸಲೀಯ ಚಳುವಳಿ ಹಲವು ಏಳು ಬೀಳುಗಳನ್ನು ಕಂಡ ಹಾಗೇ ಹಲವರ ಭ್ರಮ ನಿರಸನಕ್ಕೂ ಕಾರಣವಾದ ಚಳುವಳಿಯಾಗಿದೆ. ಹಲವಾರು ಮಾಜಿ ನಕ್ಸಲೀಯರು ಇಂದು, ಈ ಹಿಂದೆ ಯಾವ ದಂಧೆಯ ಕಾರಣಗಳಿಂದಾಗಿ ಕೆಲವರನ್ನು 'ವರ್ಗ ಶತ್ರು'ಗಳೆಂದು ಕಟುವಾಗಿ ಟೀಕಿಸಿ ಅವರ ನಿರ್ಮೂಲನೆಗೆ ಕರೆಕೊಡುತ್ತಿದ್ದರೋ ಅಂತಹುದೇ ದಂಧೆಗಳಲ್ಲಿ ನಿರತರಾಗಿರುವುದನ್ನು ಕಾಣಬಹುದು. ಉದಾ: ರಿಯಲ್ ಎಸ್ಟೇಟ್ ಮುಂತಾದ ದಲ್ಲಾಳಿ ಕೆಲಸಗಳು, ವಸೂಲಿ ಪತ್ರಿಕೋದ್ಯಮ, ವಾಮಾಚಾರ ಮತ್ತು ಜ್ಯೋತಿಷ್ಯಶಾಸ್ತ್ರ ಇತ್ಯಾದಿ! ಇದನ್ನು ನಾನು ಏಕೆಹೇಳುತ್ತಿದ್ದೇನೆಂದರೆ, ಹಿಂಸೆಯನ್ನು ಒಂದು ತತ್ವವನ್ನಾಗಿ, ಕಾರ್ಯ ಕ್ರಮವನ್ನಾಗಿ ನಂಬಿಕೊಂಡವರು ಬಹುಬೇಗ ಹತಾಶಗೊಳ್ಳುವವ ರಾಗಿರುತ್ತಾರೆ.

ದಾದ ಮತ್ತು ಜಟಿಲವಾದ ಬಿಕ್ಕಟ್ಟನ್ನು ಸೃಷ್ಟಿಸಿದಲ್ಲಿ ಆಶ್ಚರ್ಯವಿಲ್ಲ. ಅದೇನೇ ಇರಲಿ, ಈಗ ರಾಷ್ಟ್ರದ ಗಮನ ಸೆಳೆದಿರುವ ನಕ್ಸಲ್ ಚಳುವಳಿ ಒಂದು ವಿಷಯದಲ್ಲಿ ಒಳ್ಳೆಯದನ್ನೇ ಮಾಡಿದೆಎಂದು ಹೇಳ ಬಹುದು. ಅದು 'ಅಭಿವೃದ್ಧಿ'ಯ ಹೆಸರಲ್ಲಿ ರಾಷ್ಟ್ರ ನಡೆಯುತ್ತಿರುವ ಮತ್ತು ನಮ್ಮ ಸಂವಿಧಾನ ಕೂಡಾ ತನ್ನ ನ್ಯಾಯಾಂಗದ ಮೂಲಕ ಅನುಮತಿಸಿರುವಂತೆ ತೋರುವದಾರಿಯನ್ನು ನಿರ್ಣಾಯಕವಾಗಿ ಮುಖಾ ಮುಖಿಯಾಗಿಸಿ ಕೊಂಡಿದೆ. ನಿರ್ಣಾಯಕ ಏಕೆಂದರೆ, ಆಧುನಿಕ ನಾಗರೀಕತೆ ಎತ್ತಿ ಹಿಡಿದಿರುವ ಲೌಕಿಕ ಅಭಿ ವೃದ್ಧಿಯ ಆಧಾರ ಗಳನ್ನೇ ಅದು ಪ್ರಶ್ನಿಸಿದೆ. ಇದನ್ನು ಈವರೆಗೆ ಗಾಂಧಿ ವಾದಿಗಳೆನಿಸಿಕೊಂಡವರು, ಸಮಾಜ ವಾದಿಗಳೆನಿಸಿಕೊಂಡವರು ಮತ್ತು ಇತ್ತೀಚೆಗೆ ಪರಿಸರ ವಾದಿಗಳೆನಿಸಿಕೊಂಡವರು ತಾತ್ವಿಕವಾಗಿ ಪ್ರಶ್ನಿಸಿ ಅಲ್ಲಲ್ಲಿ ಹೋರಾಟಗಳನ್ನು ಮಾಡಿದರಾದರೂ, ಅವರೆಲ್ಲ ಅದನ್ನು ಸುಸ್ಥಿರವಾಗಿ ನಡೆಸಿಕೊಂಡು ಹೋಗಲಾರದೆ ಅಂತಿಮ ವಾಗಿ ಸೋತವರೇ; ವ್ಯವಸ್ಥೆಯೊಂದಿಗೆ ರಾಜಿಯಾದವರೇ.

ಇದಕ್ಕೆ ಅವರ ಸೀಮಿತವಾದ ಸಂಪನ್ಮೂಲಗಳು, ಜನ ಬೆಂಬಲಗಳಷ್ಟೇ ಕಾರಣವಾದ ಸಂಗತಿ ಎಂದರೆ, ಇವರು ಕೂಡಾ ಆಧುನಿಕ ನಾಗರೀಕತೆಯ ಗಾಳಿಯ ಸೋಂಕಿನಿಂದ ರೋಮಾಂಚಿತರಾದವರೇ; ಅದರ ಸುಖ ಫಲಗಳಿಂದ ಒಂದಿಷ್ಟು ಆಕರ್ಷಿತರಾದವರೇ ಎಂಬುದು! ಈ ರೋಮಾಂಚನ ಹಾಗೂ ಆಕರ್ಷಣೆಗಳ ಹಿಂದಿರುವುದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳು ನಮಗೆ ಈವರೆವಿಗೂ ಅಪರಿಚಿತವಾಗಿದ್ದ ಆಧುನಿಕ ಮೌಲ್ಯಗಳೆಂಬಂತೆ, ಅವನ್ನು ಫ್ರೆಂಚ್ ಕ್ರಾಂತಿಯಿಂದ ಒಡಮೂಡಿದ ತತ್ವಗಳೆಂಬಂತೆ ಮಾತ್ರ ಅರ್ಥಮಾಡಿಕೊಂಡಿರುವುದು. ಇದು ವಸಾಹತುಶಾಹಿ ಶಿಕ್ಷಣ ಪ್ರದಾನಮಾಡಿದ ಗ್ರಹಿಕೆಯ ಕ್ರಮದ ಪರಿಣಾಮವಲ್ಲದೆ ಮತ್ತೇನಲ್ಲ. ಇದರ ಹಿಂದೆ ಯೂರೋಪ್‌ನಲ್ಲಿ 15ನೇ ಶತಮಾನದಲ್ಲಿ ಆರಂಭವಾದ 'ಪುನರುಜ್ಜೀವನ' ಯುಗದ ಮೌಲ್ಯಗಳಿವೆ ಎಂಬುದನ್ನು ಮರೆಸುವ ತಂತ್ರವಿದೆ.

'ಪುನರುಜ್ಜೀವನ' ಎಂಬುದೇ ಇತ್ತೀಚಿನ 'ಜಾಗತೀಕರಣ', '(ಆರ್ಥಿಕ) ಸುಧಾರಣೆ', 'ಉದಾರೀಕರಣ' ಮುಂತಾದ ಪದಪುಂಜಗಳಂತೆಯೇ ಕಪಟ ರಾಜಕಾರಣದಿಂದ ಹುಟ್ಟಿದ; ಮೂಲಾರ್ಥ ವಿರೋಧಿಯಾದ ಒಂದು ಪದಪುಂಜ. ಪುನರುಜ್ಜೀವನ ಎಂಬುದು ಸುಮಾರು ಎರಡು ಮೂರು ದಶಕಗಳ ಕಾಲ ನಡೆದ 'ಹೊಸ' ಬೆಳವಣಿಗೆಗಳನ್ನು, ಅಂತಿಮವಾಗಿ ವಸಾಹತುಶಾಹಿ ರಾಜಕಾರಣಕ್ಕಾಗಿ ಒಟ್ಟಿಗೆ ಸೇರಿಸಿ ರೂಪಿಸಿದ ಪರಿಕಲ್ಪನೆ ಮತ್ತು ಪದಪುಂಜ. ನಿಜ, ಈ ಪುನರುಜ್ಜೀವನ ಮನುಷ್ಯನ ಚೈತನ್ಯ ಪುಟಿದೆದ್ದ, ಅದರಿಂದಾಗಿ ಅವನು ಶತಶತಮಾನಗಳಿಂದ ಮೈಮೇಲೆ ಬಿದ್ದಿದ್ದ ಧೂಳನ್ನು ಒಮ್ಮೆ ಕೊಡವಿಕೊಂಡು ಅನೇಕ ಐತಿಹಾಸಿಕ ಸಾಹಸಗಳನ್ನು ಕೈಗೊಳ್ಳಲು ಸಾಧ್ಯವಾದ ಕಾಲ. ಆದರೆ ಇದೆಲ್ಲದರ ಮಧ್ಯೆ ಎದ್ದು ಕಾಣುವ ಒಟ್ಟು ಪರಿಣಾಮವೆಂದರೆ, ಅದು ಮನುಷ್ಯನಲ್ಲಿ ಸರಕಿನ ಪರಿಕಲ್ಪನೆಯನ್ನು ಸೃಷ್ಟಿಸಿದ್ದು.

ಬದುಕಿನ ಆಧಾರವನ್ನು, ಅಗತ್ಯಗಳ ಉತ್ಪಾದನೆ ಮತ್ತು ಪೂರೈಕೆಗಳ ನೆಲೆಯಿಂದ ಲಾಭಕೋರತನ ಮತ್ತು ವ್ಯಾಪಾರೀಕರಣಕ್ಕೆ ಬದಲಾಯಿಸಿದ್ದು, ಇದಕ್ಕಾಗಿ ಜಗತ್ತನ್ನು ಮತ್ತು ಅದರ ಅರಿವನ್ನು ಭೌತ-ಅಭೌತವೆಂದು ವಿಭಜಿಸಿದ್ದು, ಇದರ ಮುಂದುವರಿಕೆಯಾಗಿ ದಿನ ನಿತ್ಯದ ಬದುಕನ್ನು ರಾಜಕೀಯ ವಿಭಾಜನೆಗೆ ಒಳಪಡಿಸುವ 'ಸೆಕ್ಯುಲರಿಸಂ' ಎಂಬ ಅಸ್ತ್ರವನ್ನು ರೂಪಿಸಿದ್ದು. ಇದೆಲ್ಲದರ ಮೊತ್ತ ಎಂದರೆ, ಮನುಷ್ಯನ ಮುಗ್ಧತೆ ನಿರ್ಣಾಯಕವಾಗಿ ನಾಶವಾದದ್ದು, ತೃಪ್ತಿ, ನೆಮ್ಮದಿಗಳಕಲ್ಪನೆಗಳಿಗೆ ವಿರುದ್ಧವಾಗಿ ಸುಖಾಪೇಕ್ಷೆ-ಸ್ಪರ್ಧೆಯ ವಾತಾವರಣ ನಿರ್ಮಾಣವಾದದ್ದು.@

'ಪುನರುಜ್ಜೀವನ' ಎಂಬುದೇ ಇತ್ತೀಚಿನ 'ಜಾಗತೀಕರಣ', '(ಆರ್ಥಿಕ)ಸುಧಾರಣೆ' ,'ಉದಾರೀಕರಣ' ಮುಂತಾದ ಪದ ಪುಂಜಗಳಂತೆಯೇ ಕಪಟ ರಾಜಕಾರಣ ದಿಂದ ಹುಟ್ಟಿದ; ಮೂಲಾರ್ಥ ವಿರೋಧಿಯಾದ ಒಂದು ಪದಪುಂಜ. ಪುನರುಜ್ಜೀವನ ಎಂಬುದು ಸುಮಾರು ಎರಡು ಮೂರು ದಶಕಗಳ ಕಾಲ ನಡೆದ 'ಹೊಸ' ಬೆಳವಣಿಗೆಗಳನ್ನು, ಅಂತಿಮವಾಗಿ ವಸಾಹತುಶಾಹಿ ರಾಜಕಾರಣ ಕ್ಕಾಗಿ ಒಟ್ಟಿಗೆ ಸೇರಿಸಿ ರೂಪಿಸಿದ ಪರಿ ಕಲ್ಪನೆ ಮತ್ತು ಪದಪುಂಜ. ನಿಜ, ಈ ಪುನರುಜ್ಜೀವನ ಮನುಷ್ಯನ ಚೈತನ್ಯ ಪುಟಿದೆದ್ದ, ಅದರಿಂದಾಗಿ ಅವನು ಶತಶತಮಾನಗಳಿಂದ ಮೈಮೇಲೆ ಬಿದ್ದಿದ್ದ ಧೂಳನ್ನು ಒಮ್ಮೆ ಕೊಡವಿಕೊಂಡು ಅನೇಕ ಐತಿಹಾಸಿಕ ಸಾಹಸಗಳನ್ನು ಕೈಗೊಳ್ಳಲು ಸಾಧ್ಯವಾದ ಕಾಲ. ಆದರೆ ಇದೆಲ್ಲದರ ಮಧ್ಯೆ ಎದ್ದು ಕಾಣುವ ಒಟ್ಟು ಪರಿಣಾಮವೆಂದರೆ, ಅದು ಮನುಷ್ಯನಲ್ಲಿ ಸರಕಿನ ಪರಿಕಲ್ಪನೆಯನ್ನು ಸೃಷ್ಟಿಸಿದ್ದು.

ನಾವಿಂದು ಒಪ್ಪಿಕೊಂಡು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿ ಈ ವಾತಾವರಣದಲ್ಲಿ ಹುಟ್ಟಿದುದು. ಇದು ಮೂಲತಃ ವಸಾಹತುಶಾಹಿ ರಾಜಕಾರಣ ರೂಪಿಸಿಕೊಟ್ಟ ಅಭಿವೃದ್ಧಿ ಮಾದರಿ. ಹಾಗಾಗಿ ಇದು, ಒಂದುದೇಶವನ್ನೋ ಅಥವಾ ದೇಶವೊಂದರೊಳಗೇ ಒಂದು ಜನಸಮುದಾಯ ಇನ್ನೊಂದು ಜನಸಮುದಾಯವನ್ನು ದೋಚುತ್ತಲೇ, ಇನ್ನೊಂದು ದೇಶವನ್ನು ಅಥವಾ ಜನ ಸಮುದಾಯವನ್ನು 'ಅಭಿವೃದ್ಧಿ'ಗೊಳಿಸುವಂತಹ ಮಾದರಿ. ಇದು ಜನ ಸಮುದಾಯವೊಂದರಲ್ಲಿ ಸುಖದ ನಿರೀಕ್ಷೆಗಳನ್ನು ಏರಿ ಸುತ್ತಾ ಸದಾ ಅವರನ್ನು ಅಶಾಂತರನ್ನಾಗಿಡುವ ಮಾದರಿ ಹಾಗೂ ಉಳ್ಳವರನ್ನು ಮತ್ತಷ್ಟು ಉಳ್ಳವರನ್ನಾಗಿ – ಇಲ್ಲದ ವರನ್ನು ಮತ್ತಷ್ಟು ಇಲ್ಲದವರನ್ನಾಗಿ ಮಾಡುವಮಾದರಿ.

ಹಾಗೇ ಉಳ್ಳವರು ಮತ್ತು ಇಲ್ಲದವರ ನಡುವೆ ಅಂತರವನ್ನು ಸದಾ ಹೆಚ್ಚಿಸುತ್ತಾ ಹೋಗುವ ಮಾದರಿ. ಆ ಮೂಲಕ ಅವರ ನಡುವಣ ಸಂಪರ್ಕವನ್ನು ಕಡಿದುಹಾಕುತ್ತಾ ಸಾಮಾಜಿಕ ವಾತಾವರಣವನ್ನು ಹೆಚ್ಚೆಚ್ಚು ವಿಕ್ಷಿಪ್ತಗೊಳಿಸುತ್ತಾ, ಹಿಂಸಾತ್ಮಕಗೊಳಿಸುತ್ತಾ ಹೋಗುವಂತಹ ಮಾದರಿ. ಇಂದು ನಾವು ಇದೆಲ್ಲವನ್ನೂ ಭಾರತೀಯ ಸಮಾಜದಲ್ಲಿ ನೋಡುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಅಷ್ಟೇ ಅಲ್ಲ, ಇದು ನಮ್ಮ ಕಣ್ಮುಂದೆಯೇ, ಆದರೆ ನಮ್ಮ ಸಂವೇದನೆಗೆ ಚೂರೂ ತಾಗದಂತೆ ನಮ್ಮ ಕಾಡುಗಳನ್ನು ಬೋಳಿಸುತ್ತಾ, ಬೆಟ್ಟ ಗುಡ್ಡಗಳನ್ನು ಬಗೆದು ಹಾಕುತ್ತಾ, ಊರಿನ ಮರ ಗಿಡಗಳನ್ನೂ ಹೊಡೆದುರುಳಿಸುತ್ತಾ, ನಮ್ಮ ನದಿ ಕೆರೆ ಹಳ್ಳ ಕೊಳ್ಳಗಳನ್ನು ಬತ್ತಿಸುತ್ತಾ; ನಮ್ಮ ಒಳ ಹೊರಗೆರಡನ್ನೂ ಬಂಜರು ಮಾಡುತ್ತಿರುವ ಆತ್ಮಘಾತುಕವಾದ ಮಾದರಿ ಕೂಡಾ. ಇದೆಲ್ಲದರ ಹಿಂದಿರುವುದು, ಮೊದಲು ಉಳ್ಳವರಲ್ಲಿ ನಂತರ ಅದರ ಸಾಂಕ್ರಾಮಿಕ ಪರಿಣಾಮವಾಗಿ ಇತರರಲ್ಲಿ ಹೆಚ್ಚೆಚ್ಚು ಸುಖದಾಸೆಯನ್ನು ಪ್ರೇರೇಪಿಸುತ್ತಿರುವ ಅತಿ ಲಾಭಕೋರತನದ ಮೇಲೆ ನಿಂತಿರುವ ಸರಕಿನ ಅರ್ಥಶಾಸ್ತ್ರದ ದುರಾಸೆಯೇ. ಇದು ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ, ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ, ಜಾಗತೀಕರಣದ ಹೆಸರಲ್ಲಿ ಶಿಖರ ಮುಟ್ಟುತ್ತಿದ್ದಂತೆ, ಇದಕ್ಕೆ ಮೊದಲು-ಕಳೆದ ಹತ್ತು ವರ್ಷಗಳಲ್ಲಿ-ರೈತರು ಬಲಿಯಾದರು;ಆಗುತ್ತಿದ್ದಾರೆ ಕೂಡಾ. ಅವರ ಆತ್ಮಹತ್ಯೆಯ ಸಂಖ್ಯೆ ಈಗ ಒಂದೂವರೆ ಲಕ್ಷವನ್ನು ದಾಟಿ ಹೋಗಿದೆ. ಈಗ ಆದಿವಾಸಿಗಳ ಸರದಿಯಷ್ಟೆ.

ಆದರೆ ಆದಿವಾಸಿಗಳು ರೈತರಂತೆ ತಮ್ಮನ್ನು ತಾವು ಆಧುನಿಕ ನಾಗರೀಕತೆಗೆ ಒಪ್ಪಿಸಿಕೊಂಡವರಲ್ಲ. ಮೊದಲಾಗಿ ಅದರಿಂದ ಆಕರ್ಷಿತರಾದವರೂ ಅಲ್ಲ. ಅದು ಹುಟ್ಟಿಸುವ ಲೋಭಕ್ಕೆ ಈಡಾಗದಂತಹ ವಿಶಿಷ್ಟ ಜೀವನಕ್ರಮವನ್ನು ರೂಪಿಸಿಕೊಂಡವರು ಅವರು. ಅರುಂಧತಿ ರಾಯ್ ಅವರೇ ಹೇಳಿರುವಂತೆ ಅವರು ಇಪ್ಪತ್ತರ ನಂತರ ಎಣಿಸಲು ಬಾರದವರು;ಅಲ್ಲಲ್ಲ, ಇಪ್ಪತ್ತರ ನಂತರ ಎಣಿಸುವ ಅಗತ್ಯವನ್ನೇ ಕಾಣದೆ ಒಂದು ಸಮುದಾಯವಾಗಿ ಇನ್ನೂ ತಮ್ಮ ನಿಸರ್ಗ ಸಹಜಮುಗ್ಧತೆಯನ್ನು ಕಳೆದುಕೊಳ್ಳದವರು. ಲೇಖಕಿಗೆ ಒಬ್ಬ ಪೋಲೀಸ್ ಅಧಿಕಾರಿಹೇಳಿ ದಂತೆ, ಅವರನ್ನು ಮಣಿಸುವ ಏಕೈಕ ಮಾರ್ಗವೆಂದರೆ ಅವರೆಲ್ಲರ ಮನೆಗೆ ಟಿ.ವಿ. ಒದಗಿಸಿ ಅವರನ್ನು ದುರಾಸೆಯ ಜನರನ್ನಾಗಿ ಮಾಡುವುದು! ಹಾಗಾಗಿಯೇ ಅವರು ಆಧುನಿಕ ಅಭಿವೃದ್ಧಿ ಮಾದರಿಯ ಬಿಸಿ ತಾಗಿದೊಡನೆ ಪ್ರಾಣಿ ಸಹಜ ರೋಷದೊಂದಿಗೆ ಬಂಡಾಯವೆದ್ದಿದ್ದಾರೆ.

ಆಸ್ತಿಯ ಕಲ್ಪನೆಯೇ ಇಲ್ಲದೆ ತಮ್ಮ ಬದುಕಿಗಾಗಿ ನಿಸರ್ಗ ಸಹಜವಾದ ಆರ್ಥಿಕ ಹದವೊಂದನ್ನು ರೂಪಿಸಿಕೊಂಡು ನೆಮ್ಮದಿಯಿಂದ ಬಾಳುವೆ ನಡೆಸುತ್ತಿದ್ದ ಅವರನ್ನು 'ಅಭಿವೃದ್ಧಿ' ಗೊಳಿಸಲು, 'ನಾಗರೀಕತೆ'ಯ ವ್ಯಾಪ್ತಿಗೆತಂದು ಉದ್ಧಾರ ಮಾಡಲು(ಐರೋಪ್ಯರು ಕಳೆದ ಶತಮಾನದಲ್ಲಿ ನಮ್ಮನ್ನು ಉದ್ಧರಿಸಲು ಪ್ರಯತ್ನಿಸಿದಂತೆ) ನಮ್ಮ ನಾಗರಿಕ ಸರ್ಕಾರ ಸಕಲ ಬಲದೊಡನೆ ಹೊರಟೊಡನೆ, ಆಧುನಿಕ ಶೈಲಿಯ ಆಕ್ರಮಣಶೀಲತೆಯನ್ನು ಮೈಗೂಡಿಸಿಕೊಳ್ಳದ ಕಾರಣ ಅದನ್ನು ಎದುರಿಸಲಾಗದೆ ಅಸಹಾಯಕರಾದ ಅವರು ನಕ್ಸಲರ ತೆಕ್ಕೆಗೆ ಬಿದ್ದಿದ್ದಾರಷ್ಟೆ. ಅದಕ್ಕೆಂದೇ ಕಾಯುತ್ತಿದ್ದ ನಕ್ಸಲರು ಅವರನ್ನು ಬಲವಾಗಿ ಆತುಕೊಂಡಿದ್ದಾರೆ. ಆದರೆ ಆದಿವಾಸಿಗಳ ಈ ಅಸಹಾಯಕತೆಯನ್ನು, ತನ್ನ 'ಅಭಿವೃದ್ಧಿ'ಯ ಹುಚ್ಚಿನಿಂದಾಗಿ, ಕುರುಡಿನಿಂದಾಗಿ ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಲಾಗದ ಸರ್ಕಾರ ಅದನ್ನು ನಕ್ಸಲೀಯರ ಈ ರಾಜಕೀಯ ಸಮರತಂತ್ರದಿಂದ ಬೇರ್ಪಡಿಸಲಾಗದೆ, ಪರಿಸ್ಥಿತಿಯನ್ನು ಗೋಜಲುಗೊಳಿಸಿದೆ. ಅರುಂಧತಿ ರಾಯ್‌ರಂತಹ ಮಾನವ ಹಕ್ಕುಗಳ ಕಾರ್ಯಕರ್ತರ ವಿಪರೀತ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಟ್ಟಿದೆ.

ರಾಯ್ ತಮ್ಮ ಲೇಖನದಲ್ಲಿ ನಕ್ಸಲೀಯ ಕಾರ್ಯ

ಕರ್ತರನ್ನು ಬಿಡಿಬಿಡಿಯಾಗಿ ಪರಿಚಯಿಸುತ್ತಾ, ಅವರ ಚಹರೆಗಳನ್ನು ವೈಭವೀಕರಿಸುತ್ತಾ, 'ಈತ/ಈಕೆ ನೋಡಿ, ರಾಷ್ಟ್ರದ ಭದ್ರತೆಗೆ ಅತ್ಯಂತ ಭೀಕರವಾದ ಬೆದರಿಕೆ!' ಎಂದು ಸರ್ಕಾರದ ಬಗ್ಗೆ ಆಡುತ್ತಾ ಹೋಗುವ ವ್ಯಂಗ್ಯದ ಮಾತುಗಳು ಈ ವಿಪರೀತ ವ್ಯಾಖ್ಯಾನಕ್ಕೆ ಒಂದು ಉದಾಹರಣೆ. ಸರ್ಕಾರ ಹೇಳುತ್ತಿರುವುದು ನಕ್ಸಲೀಯರು ಇಡಿಯಾಗಿ ಒಂದು ರಾಜಕೀಯ ಆಂದೋಲನವಾಗಿ ರಾಷ್ಟ್ರದ ಭದ್ರತೆಗೆ ಅತ್ಯಂತ ದೊಡ್ಡ ಬೆದರಿಕೆ ಉಂಟು ಮಾಡಿದ್ದಾರೆ ಎಂದೇ ಹೊರತು, ಅದರ ಬಿಡಿ ಬಿಡಿ ಕಾರ್ಯಕರ್ತರ ಬಗ್ಗೆ ಅಲ್ಲ.

ಹಾಗೇ ಅರುಂಧತಿ ರಾಯ್ ಅವರು ಈ ಆದಿವಾಸಿಗಳು ನಕ್ಸಲ್ ಕಾರ್ಯಕ್ರಮಗಳಲ್ಲಿ ತೊಡಗದೆ ಧರಣಿ ನಡೆಸಬೇಕಿತ್ತೇ ಅಥವಾ ಜಂತರ್ ಮಂತರ್ ಮುಂದೆ ಉಪವಾಸ ಕೂರಬೇಕಿತ್ತೇ ಎಂದು ಗಾಂಧೀಜಿ ಮುಖಕ್ಕೆ ರಾಚು ವಂತಹ ಹಾಕುವ ಪ್ರಶ್ನೆಕೂಡಾ ಅಗ್ಗದ ವ್ಯಂಗ್ಯವೇ ಆಗಿದೆ. ಗಾಂಧಿ ತಮ್ಮ ಬದುಕಿನ ಪ್ರಯೋಗಗಳ ಮೂಲಕ ಸಂಘಟಿಸಿಕೊಂಡಿದ್ದ ನೈತಿಕ ಹಾಗೂ ಅಧ್ಯಾತ್ಮಿಕ ಶಕ್ತಿ ಹಾಗೂ ಬೆಂಬಲದ ಅರಿವಿಲ್ಲದೆ ಅವರು ರೂಪಿಸಿ ಕೊಟ್ಟ ಕಾರ್ಯಕ್ರಮಗಳ ಬಗ್ಗೆ ಆಡಿರುವ ಅವಿವೇಕದ ಮಾತುಗಳಿವು. 'ನರ್ಮದಾ ಬಚಾವೋ' ಆಂದೋಲನದ ಭಾಗವಾಗಿ ನ್ಯಾಯಾಂಗದ ಬಗ್ಗೆ ಆಡಿದ ಅಡ್ಡ ಮಾತಿ ನಿಂದಾಗಿ ಅತ್ಯುನ್ನತ ನ್ಯಾಯಾಂಗದಿಂದ ಒಂದು ದಿನದ ಸೆರೆಮನೆ ಶಿಕ್ಷೆಗೆ ಒಳಗಾಗಿ, ಆ ಶಿಕ್ಷೆಗೆ ಹೆದರಿ ದಂಡ ಕೊಟ್ಟು ತಪ್ಪಿಸಿಕೊಂಡ ರಾಯ್ ಇಂತಹ ಮಾತುಗಳ ನ್ನಾಡುವುದಕ್ಕೆ ಯಾವುದೇ ನೈತಿಕ ಹಕ್ಕನ್ನು ಹೊಂದಿಲ್ಲ.

ಬದುಕಿಗಾಗಿ ನಡೆದಿರುವ ಒತ್ತಡಗಳ ಮಧ್ಯೆ ಅಸಹಾಯಕತೆಯಿಂದಲೇ ನಕ್ಸಲೀಯರಾಗಿರುವ ಆದಿವಾಸಿಗಳು, ನೈತಿಕ ಹಾಗೂ ಅಧ್ಯಾತ್ಮಿಕ ಶಕ್ತಿ ಸಂಘಟಿಸಿಕೊಂಡ ನಾಯಕತ್ವದಡಿ ಧರಣಿಯೋ ಉಪವಾಸವೋ ಕೂರುವುದಾದರೆ, ಖಂಡಿತ ಅವರಿಗೆ ಜನ ಬೆಂಬಲ ದೊರೆತು ನಿಧಾನವಾಗಿಯಾದರೂ ಸರ್ಕಾರ ಅವರಿಗೆ ಮಣಿಯುವ ಎಲ್ಲ ಸಾಧ್ಯತೆಗಳಿವೆ. ಆದರೆ ಅವರು ಎಲ್ಲ ನೈತಿಕತೆ-ಅಧ್ಯಾತ್ಮಿಕತೆಗಳನ್ನು ನಿರಾಕರಿಸುವ ಹಿಂಸಾವಾದಕ್ಕೆ ಮರುಳಾಗಿದ್ದಾರೆ. ಅದನ್ನು ಅರುಂಧತಿ ರಾಯ್‌ರಂತಹವರು, ಪೋಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ಅವರನ್ನು ಭೀಕರ ರೀತಿಗಳಲ್ಲಿ ಕೊಲ್ಲುವ ದೃಶ್ಯವನ್ನು ಚಿತ್ರೀಕರಿಸಿಕೊಂಡು, ಮತ್ತೆ ಮತ್ತೆ ಅದನ್ನು ನೋಡುತ್ತಾ ಸ್ಫೂರ್ತಿಗೊಳ್ಳುವ ಕಾರ್ಯಕರ್ತೆಯೊಬ್ಬಳ ವ್ಯಕ್ತಿತ್ವವನ್ನು ವೈಭವೀಕರಿಸುವ ಮೂಲಕ ಅನುಮೋದಿಸುತ್ತಿರುವುದು ಜಿಗುಪ್ಸೆಕರವಷ್ಟೇ ಅಲ್ಲ, ಖಂಡನೀಯ ಕೂಡಾ. ಹಾಗೇ, ನಮ್ಮ ನ್ಯಾಯಾಂಗದ ದೌರ್ಬಲ್ಯಗಳನ್ನು ಖಂಡಿಸುತ್ತಾ, ನಕ್ಸಲೀಯರ ಜನತಾ ನ್ಯಾಯಾಲಯಗಳ ನ್ಯಾಯದಾನ ಪದ್ಧತಿಯನ್ನು ಸಮರ್ಥಿಸುವ ರೀತಿ ಕೂಡಾ.

ಜನ ಸಮೂಹವೊಂದು ಕೈಯೆತ್ತಿ ಒಬ್ಬನಿಗೆ ಮರಣ ದಂಡನೆ ವಿಧಿಸುವ-ಅದೂ ಕತ್ತು ಕುಯ್ದು ಎಸೆಯುವ-ಕ್ರಮವನ್ನು ರಾಕ್ಷಸೀಯವೆಂದೂ ಕರೆಯಲಾಗದೇನೋ! ರಾಕ್ಷಸರಿಗೂ ಒಂದು ಸಂಸ್ಕೃತಿ ಇತ್ತಲ್ಲವೆ? ಅರುಂಧತಿ ಅವರ ಗದ್ಯ ಇಂತಹ ಹಲವುಕಡೆ ಅಶ್ಲೀಲವಾಗಿದೆ. ಇವರ ಇಂತಹ ಬರವಣಿಗೆಯ ಶೈಲಿಯೇ ದಾಂತೇವಾಡದಲ್ಲಿ ಏಪ್ರಿಲ್ 6ರಂದು ನಡೆದ 76 ಜನ ಪೋಲೀಸರ ನಿಷ್ಕಾರಣ ಮಾರಣ ಹೋಮಕ್ಕೆ(ಹಾಗೂ ಇತ್ತೀಚಿನ, ನಲವತ್ತು ಜನ ನಾಗರಿಕರ ರಕ್ತಸಿಕ್ತ ಸಾವಿಗೆ ಕಾರಣವಾದ ಬಸ್ ಸ್ಫೋಟಕ್ಕೆ) ಅ-ನೈತಿಕ ಸ್ಥೈರ್ಯ ಒದಗಿಸಿದ್ದರೂ ಆಶ್ಚರ್ಯವಿಲ್ಲ. ಶ್ರೇಷ್ಠ ಲೇಖಕಿಯೊಬ್ಬಳ ಸಾಹಿತ್ಯ ಶಕ್ತಿಯ ಕರಾಳ ಮುಖವಿದು. ಇದು ಬರವಣಿಗೆಯ ಭಾವಾವೇಶದ ಲೋಪವಾಗಿದ್ದಲ್ಲಿ ಮಾತ್ರ ಕ್ಷಮಾರ್ಹ.

ಆದರೆ ಅರುಂಧತಿ ರಾಯ್ ಲೇಖಕಿಯಾಗಿ ಒಂದೆರಡುಕಡೆ ಈ ಮಟ್ಟವನ್ನು ಮುಟ್ಟಿರುವ ಬಗೆಗಿನ ಹತಾಶೆಯಲ್ಲಿ, ಈ ಲೇಖನ ಮಾಲೆಗೊಂದು ರಚನಾತ್ಮಕ ಮುಖವೂ ಇದೆ ಎಂಬುದನ್ನು ನಾವು ಗುರುತಿಸದೇ ಹೋಗಬಾರದು. ಇದೇ ನಿಜವಾಗಿ ಈಲೇಖನ ಮಾಲೆಯ ಅತ್ಯಂತ ಮಹತ್ವದ ಸಂದೇಶವೂ ಆಗಿದೆ. ನಕ್ಸ ಲೀಯರು ತಾವು ಅಧಿಕಾರ ಸ್ಥಾಪಿಸಿಕೊಂಡಿರುವ ವಿಶಾಲ ಪ್ರದೇಶದ ವ್ಯಾಪ್ತಿಯಲ್ಲಿ 'ಗ್ರಾಮ ಸ್ವರಾಜ್ಯ' ಮಾದರಿಯ 'ರಾಜ್ಯ ವ್ಯವಸ್ಥೆ'ಯೊಂದನ್ನು ಸ್ಥಾಪಿಸಿದ್ದಾರೆ ಎಂದು ಲೇಖಕಿ ಹೇಳುತ್ತಾರೆ. ಇತರ ಮೂಲಗಳೂ ಇದನ್ನು ದೃಢಪಡಿಸಿವೆ. ಇದು ನಿಜವೇ ಆಗಿದ್ದಲ್ಲಿ ನಕ್ಸಲೀಯರು ಆರಿಸಿಕೊಂಡಿರುವ ಅಥವಾ ಸರಿಯಾಗಿ ಹೇಳುವುದಾದರೆ ಅವರು ಆರಿಸಿಕೊಳ್ಳುವಂತೆ ಮಾಡಲಾಗಿರುವ ಅಭಿವೃದ್ಧಿ ಮಾದರಿ ಬಗ್ಗೆ ಮೆಚ್ಚುಗೆ ಮೂಡುತ್ತದೆ.

ಇದು ಯಾವು ದನ್ನು ಗಾಂಧೀಜಿ ಒಂದು ರೋಗ ಎಂದು ಕರೆದಿದ್ದರೋ, ಆ ಆಧುನಿಕ ನಾಗರೀಕತೆಯ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಸಂಕೀರ್ಣ ಬದುಕಿಗೆ ಪ್ರತಿಯಾಗಿ; ಅವರು ಭಾರತೀಯ ಪರಂಪರೆಯನ್ನು ಹಿನ್ನೆಲೆಯಾಗಿಟ್ಟು ಕೊಂಡು ರೂಪಿಸಿಕೊಟ್ಟಿದ್ದ ಮಿತಿಗಳುಳ್ಳ ಸರಳ ಬದುಕಿನ ಮಾದರಿ. ಆದರೆ ಅದನ್ನು ಅಲ್ಲಿ ಬಂದೂಕಿನ ಬಲದಿಂದ ಕಟ್ಟಲಾಗಿದೆ ಎಂಬ ಸಂಗತಿ 'ಗ್ರಾಮ ಸ್ವರಾಜ್ಯ' ಕಲ್ಪನೆಯನ್ನೇ ಬುಡಮೇಲು ಗೊಳಿಸುತ್ತದದಾದರೂ, ಅದು ಬದುಕಿನ ಒಂದು ಮಾದರಿಯಾಗಿ ನೆಹರೂ ಮತ್ತು ಅವರ ಆಧುನಿಕಾವಾದಿ ಗೆಳೆಯರು ವಾದಿಸಿದಂತೆ ಅವ್ಯಾವಹಾರಿಕವೇನಲ್ಲ ಎಂಬುದನ್ನೂ ಸೂಚಿಸುತ್ತದೆ ಎಂಬುದನ್ನೂ ನಾವು ಗಮನಿಸಬೇಕು.

ಅಲ್ಲಿ ನಡೆದಿರುವ ದೊಡ್ಡ ಪ್ರಮಾಣದ (ಮೂರು ಲಕ್ಷ ಎಕರೆ?) ಭೂ ವಿತರಣೆ, ಎರಡೂವರೆ ಪಟ್ಟು ಇಳುವರಿ ಹೆಚ್ಚಿಸಿರುವ ದೇಶೀ ಕೃಷಿ ಪದ್ಧತಿಯ ಅಳವಡಿಕೆ ಮತ್ತು ಅದು ಒಟ್ಟಾರೆ ಕಟ್ಟಿ ಕೊಡುವ ಜೀವನ ಕ್ರಮ, ಅರುಂಧತಿ ರಾಯ್ ಅವರು ವರ್ಣಿಸುವ 'ಭೂಮ್ಕಾಲ್ ಹಬ್ಬ'ದ ವರ್ಣನೆಗಳು ಸೂಚಿಸುವಂತೆ ಅವರ ಬದುಕಿನಲ್ಲಿ ಹರ್ಷ-ನೆಮ್ಮದಿಗಳನ್ನೇ ತಂದುಕೊಟ್ಟಿರುವಂತಿದೆ. ಇದು ಅವರ ಬದುಕಿನ ನಿಜವಾದ ಆಧುನೀಕರಣದ ಆರಂಭ.

ಈ ಬಗೆಗಿನ ಇಲ್ಲಿನ ಸೂಚನೆ, ದೇಶದ ಬಹು ದೊಡ್ಡ ಭಾಗವನ್ನು ಸುಸ್ತು ಮಾಡಿ ಕಂಗೆಡಿಸಿ ಕೂರಿಸಿರುವ ಆಧುನಿಕ ಅಭಿವೃದ್ಧಿ ಮಾದರಿಗೆ ಪರ್ಯಾಯವಾಗಿ ಗ್ರಾಮ ಸ್ವರಾಜ್ಯವನ್ನೇ ಅಲ್ಲದಿದ್ದರೂ, ಆ ಮಾದರಿಯ ಆಶಯಗಳ ಸುತ್ತಮುತ್ತಲೇ ಬದುಕಿನ ಒಂದು ಹೊಸ ಮಾದರಿಯನ್ನು ರೂಪಿಸಲಾಗದೇಕೆ ಎಂಬ ದೂರದ ಆಸೆಯನ್ನಾದರೂ ಹುಟ್ಟಿಸುವಂತಿದೆ. ನಕ್ಸಲ್ ಚಳುವಳಿ ಆದಿವಾಸಿಗಳ ಒಡನಾಟದಲ್ಲಿ ಅವರ ಹೋರಾಟದ ಮೂಲಕ ಹುಟ್ಟಿಸಿರುವ ದೊಡ್ಡ ಆಶೆಯಿದು. ಇದು ಗತಿತಾರ್ಕಿಕ ಭೌತವಾದಿಗಳಾಗಿ ಆಧುನಿಕ ನಾಗರೀಕತೆಯ ಶಿಶುಗಳೇ ಆಗಿರುವ ನಕ್ಸಲೀಯರ ಕಣ್ಣುಗಳನ್ನೂ ತೆರೆಸಬೇಕು. ನಕ್ಸಲೀಯರು ಬಂದೂಕನ್ನು ಕೆಳಗಿಟ್ಟು ಸಂಸದೀಯ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ನೇರವಾಗಿ ಪಾಲ್ಗೊಳ್ಳುವ ಮೂಲಕ ಮಾತ್ರ ಇದಕ್ಕೆ ನಿಜವಾದ ಚಾಲನೆ ನೀಡಬಲ್ಲರು. ಹಾಗೆ ಮಾಡುವ ಮೂಲಕ ಅವರು 2050ರ ಹೊತ್ತಿಗೆ ಸಾಧಿಸಬೇಕೆಂದಿರುವ 'ಕ್ರಾಂತಿ'ಗಾಗಿ ಗಳಿಸಕೊಳ್ಳಬೇಕೆಂದಿರುವ ಜನ ಬೆಂಬಲವನ್ನು ಇನ್ನೂ ಬಹುಮುಂಚಿಯೇ ಗಳಿಸಿಕೊಳ್ಳಬಹುದು. ಅದಕ್ಕಾಗಿ, ಮೊದಲು ಆದಿವಾಸಿಗಳ ಕೈಯಿಂದ ಬಂದೂಕುಗಳ ಕೆಳಗಿಳಿಯುವಂತಾಗಬೇಕು.

ಆದರೆ ಸರ್ಕಾರ ಇದಕ್ಕೆ ಅವಕಾಶ ಕೊಡುವುದೇ? ಮೊದಲಾಗಿ ಆದಿವಾಸಿಗಳ ಕೈಗೆ ಬಂದೂಕುಗಳನ್ನು ಇರಿಸಿದವರಾದರೂ ಯಾರು? ನಕ್ಸಲೀಯರೆಂಬುದು ಸುಲಭದ ಉತ್ತರ. ಆದರೆ ಆದಿವಾಸಿಗಳನ್ನು ನಕ್ಸಲೀಯರ ತೆಕ್ಕೆಗೆ ಮತ್ತು ಈ ದೇಶದ ನಾಗರಿಕ ಹಕ್ಕುಗಳ ಆಂದೋಲನಕಾರರನ್ನೂ ಹಾಗೂ ಬಹಳಷ್ಟು ಬುದ್ಧಿಜೀವಿಗಳನ್ನು ನಕ್ಸಲೀಯರ ಬಗೆಗಿನ ಸಹಾನುಭೂತಿಯ ವೈಚಾರಿಕ ವೃತ್ತಕ್ಕೆ ತಳ್ಳಿದವರಾದರೂ ಯಾರು? ಇದನ್ನು ಅರುಂಧತಿರಾಯ್, ಸರ್ಕಾರ ಹೇಗೆ ಪೋಲೀಸರು, ಬೇಹುಗಾರರು, 'ಸಲ್ವಾ ಜುಡಂ'(ಹಳ್ಳಿಗಳ ಭೂಮಾಲಿಕರು ಮತ್ತು ಇತರೆ ಪಟ್ಟಭದ್ರ ಹಿತಾಸಕ್ತಿಗಳು ರೂಪಿಸಿಕೊಂಡಿರುವ 'ಸ್ವಯಂಸೇವಾದಳ') ನವರು ಮತ್ತು 'ವಿಶೇಷ ಪೋಲೀಸ್ ಅಧಿಕಾರಿ'ಗಳು ಎಂಬ ಮಧ್ಯವರ್ತಿಗಳನ್ನು ಬಳಸಿಕೊಂಡು ಆದಿವಾಸಿಗಳ ಮಾನವ ಹಕ್ಕುಗಳಿರಲಿ, ಬದುಕುವ ಮೂಲಭೂತ ಹಕ್ಕನ್ನೇ ನಿರಾಕರಿಸಿ ನಡೆಸಿದ ಭಯಾನಕ ಅತ್ಯಾಚಾರಗಳ ಉದಾಹರಣೆಗಳ ಮೂಲಕ ವಿಷದೀಕರಿಸಿದ್ದಾರೆ. ಆತ್ಮಘಾತುಕವಾದ ಅಭಿವೃದ್ಧಿ ಕಾರ್ಯಕ್ರಮದ ಚಟ ಹತ್ತಿಸಿಕೊಂಡ ನಮ್ಮ ಸರ್ಕಾರ, ಆಧುನಿಕ ನಾಗರೀಕತೆಯ ಎಲ್ಲ ದುರಾಸೆಗಳಿಗೆ ಬಲಿಯಾಗಿರುವ ನಾಗರೀಕ ಪ್ರದೇಶಗಳನ್ನು ಸುಲಭವಾಗಿ ಕೈವಶ ಮಾಡಿಕೊಂಡು ಕೆಲವರಿಗೆ ಕೈತುತ್ತು ಮಾಡಿಕೊಟ್ಟ ನಂತರ, ಆದಿವಾಸಿಗಳ ಪ್ರದೇಶದ ಮೇಲೆ ಕಣ್ಣು ಹಾಕಿ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದೆ. ನಮ್ಮ ನಿಜವಾದ ಪರಂಪರೆಯ ಬೀಜ ಭೂಮಿಯಾದ ಆ ಪ್ರದೇಶ, ಆಧುನಿಕ ನಾಗರೀಕತೆಯ ಲಾಭಕೋರರ ವಸಾಹತುವಾಗಲು ಸ್ಪಷ್ಟವಾಗಿ ಮತ್ತು ದಿಟ್ಟವಾಗಿ ನಿರಾಕರಿಸಿದೆ.

ಆದಿವಾಸಿಗಳ ಅಸ್ತಿತ್ವಲ್ಲ, ಅವರ ಬದುಕಿನ ಅವಿಭಾಜ್ಯ ಅಂಗವೇ ಆಗಿರುವ ಬೆಟ್ಟ-ಗುಡ್ಡ-ಕಣಿವೆ-ನದಿ-ತೊರೆ-ಸರೋವರಗಳನ್ನು, ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಅಗ್ಗದ ಮಾನವ ಶ್ರಮದ ಮೂಲಕ ಸೂರೆ ಮಾಡಲು ಬಂದಿರುವ ಬಹುರಾಷ್ಟ್ರೀಯ ಕಂಪನಿಗಳೊಡನ ನಮ್ಮ ನಾಗರೀಕ (ಕೇಂದ್ರ-ರಾಜ್ಯ)ಸರ್ಕಾರಗಳು 2009ರ ಸೆಪ್ಟಂಬರ್‌ವರೆಗೆ ಒಟ್ಟು 6,69338 ಕೋಟಿ ರೂಪಾಯಿಗಳ ಮೌಲ್ಯದ ಒಪ್ಪಂದಗಳನ್ನು ಮಾಡಿಕೊಂಡಿವೆ. ಇವುಗಳ ಜಾರಿಗೆ ಎದುರಾಗಿರುವ, ಈ ದೇಶದ ನಿಜವಾದ ಒಡಲಾಳದ ಈ ಪ್ರತಿ ರೋಧವನ್ನು ನಕ್ಸಲೀಯರ ಪ್ರತಿ ರೋಧವೆಂದಷ್ಟೇ ಅರ್ಥೈಸಿ, ಅದನ್ನು ಸಂವೈಧಾನಿಕ ರಾಜ್ಯ ವ್ಯವಸ್ಥೆಯ ವಿರುದ್ಧ ಘೋಷಿಸಲಾಗಿರುವ ಯುದ್ಧವೆಂದು ಪ್ರಚಾರ ಮಾಡತೊಡ ಗುವುದು ನಮ್ಮ ವಿರುದ್ಧವೇ ಮಾಡಿಕೊಳ್ಳುವ ಅಪಪ್ರಚಾರ ವಾಗುತ್ತದೆ.

ಇದು ಈ ನೆಲದ ಆದಿ ಸಮುದಾಯವೊಂದು ತನ್ನ ಹುಟ್ಟು ಹಕ್ಕಾದ ಬದುಕಿನ ಸ್ವಾಯತ್ತತೆಗಾಗಿ, ತನ್ನ ಜೀವನ ಕ್ರಮದ ರಕ್ಷಣೆಗಾಗಿ, ತನ್ನ ಅಧ್ಯಾತ್ಮಿಕ ಅಸ್ತಿತ್ವದ ಶೋಧನೆಗಾಗಿ ನಡೆಸಿರುವ ಹೋರಾಟ. ಹಾಗೆ ನೋಡಿದರೆ ಇದು ಆಧುನಿಕ ಅಭಿವೃದ್ಧಿ ಮಾದರಿಯ ಮೋಹಕ್ಕೆ ಒಳಗಾಗಿ ತ್ರಿಶಂಕು 'ಸ್ವರ್ಗ'ದಲ್ಲಿ ಸಿಕ್ಕಿಹಾಕಿಕೊಂಡಿರುವ ನಮ್ಮ ಪರವಾಗಿ ನಮ್ಮ 'ಪೂರ್ವಿಕರು' ನಡೆಸಿರುವ ಸಮಕಾಲೀನ ಹೋರಾಟವದು. ಇಲ್ಲಿ ನಕ್ಸಲೀಯರದೇನಿದ್ದರೂ ಜಾಣ ಮಧ್ಯವರ್ತಿ ಪಾತ್ರವಷ್ಟೆ. ಈ ಪ್ರದೇಶದಲ್ಲಿ ಅಭಿವೃದ್ಧಿಯಾಗಿದ್ದಿದ್ದರೆ ಅಲ್ಲಿ ನಕ್ಸಲೀಯರಿಗೆ ಜಾಗವಿರುತ್ತಿರಲಿಲ್ಲ

ವೆಂಬುದು ಎಂಬುದು ಅರ್ಧ ಸತ್ಯ ಮಾತ್ರ.

ಏಕೆಂದರೆ, ಅಭಿವೃದ್ಧಿ ಮಾದರಿಯ ಮತ್ತು ಅದು ತನ್ನ ಸ್ವರೂಪ ದಿಂದಾಗಿಯೇ ತಾನು ಒಳಗೊಳ್ಳಬಹುದಾದ ವ್ಯಾಪ್ತಿಯ ಪ್ರಶ್ನೆಯು ನಮ್ಮ ಮುಖ್ಯ ರಾಜಕೀಯ ಪ್ರಶ್ನೆಯಾಗುವ ಬಹು ಮೊದಲೇ ನಕ್ಸಲಿಸಂ–ಆ ಹೆಸರಿನಲ್ಲದಿದ್ದರೂ–ಇಲ್ಲಿ ಆರಂಭವಾಗಿತ್ತು ಎಂಬುದನ್ನು ನಾವು ನೆನಪಿಡಬೇಕು. ನಮ್ಮ ಸ್ವಾತಂತ್ರ್ಯ ಚಳುವಳಿ ಅಥವಾ ರಾಷ್ಟ್ರೀಯ ಹೋರಾಟ ಕಟ್ಟಿ ಕೊಟ್ಟ ಆದರ್ಶ, ಮೌಲ್ಯಗಳು ಹಾಗೂ ಸಂಸ್ಥೆಗಳನ್ನು ಹೊಡೆದುರುಳಿಸುವುದೇ ಅದರ ಮೂಲ ಗುರಿ. ಸರ್ಕಾರದ ಕಡೆಯಿಂದ 'ಆಪರೇಷನ್ ಗ್ರೀನ್ ಹಂಟ್' ಕಾರ್ಯಾಚರಣೆ ಆರಂಭವಾಗುವ ಬಹು ಮುನ್ನವೇ ಅವರು 'ನಂದಿಗ್ರಾಮ' ಚಳುವಳಿಯ ಅಂಗವಾಗಿ ಪ.ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಬಸು ಅವರನ್ನು–ಅವರ ವಾಹನ ಹಾದು ಹೋಗುವ ಹಾದಿಯಲ್ಲಿ ಬಾಂಬ್ ಸ್ಫೋಟಿಸುವ ಮೂಲಕ–ಕೊಲ್ಲಲು ಮಾಡಿದ ವಿಫಲ ಪ್ರಯತ್ನ(ಇದರಲ್ಲಿ ಬಸು ಕೂದಲೆಳೆಯ ಅಂತರದಿಂದ ಪಾರಾದರಷ್ಟೆ) ಹಾಗೂ ಇದೀಗ ದಾಂತೇವಾಡದ ಬಳಿ ನಾಗರಿಕ ಪ್ರಯಾಣಕರಿದ್ದ ಬಸ್ಸೊಂದನ್ನು ಸ್ಫೋಟಿಸಿ ನಲವತ್ತು ಜನ ಅಮಾಯಕರನ್ನು ಕೊಂದ ಘಟನೆ(ಈ ವರ್ಷ ನಕ್ಸಲೀಯರಿಂದ ಕೊಲ್ಲಲ್ಪಟ್ಟವರ ಸಂಖ್ಯೆ 900ನ್ನು ತಲುಪಿದೆ.) ಅದು ಈಗ ತಲುಪಿರುವ ರಾಜಕೀಯ ವಿಕ್ಷಿಪ್ತತೆಗೆ ಇತ್ತೀಚಿನ ಸಾಕ್ಷಿಯಂತಿವೆ. ಹಾಗಾಗಿ ಅದನ್ನು ಎದುರಿಸಬೇಕಾದ ನೆಲೆಯೇ ಬೇರೆ.

ಅಭಿವೃದ್ಧಿ ಮಾದರಿಯ ಮತ್ತು ಅದು ತನ್ನ ಸ್ವರೂಪದಿಂದಾಗಿಯೇ ತಾನು ಒಳಗೊಳ್ಳಬಹುದಾದ ವ್ಯಾಪ್ತಿಯ ಪ್ರಶ್ನೆಯು ನಮ್ಮ ಮುಖ್ಯ ರಾಜಕೀಯ ಪ್ರಶ್ನೆಯಾಗುವ ಬಹು ಮೊದಲೇ ನಕ್ಸಲಿಸಂ–ಆ ಹೆಸರಿನಲ್ಲದಿದ್ದರೂ–ಇಲ್ಲಿ ಆರಂಭವಾಗಿತ್ತು ಎಂಬುದನ್ನು ನಾವು ನೆನಪಿಡಬೇಕು. ನಮ್ಮ ಸ್ವಾತಂತ್ರ್ಯ ಚಳುವಳಿ ಅಥವಾ ರಾಷ್ಟ್ರೀಯ ಹೋರಾಟ ಕಟ್ಟಿ ಕೊಟ್ಟ ಆದರ್ಶ, ಮೌಲ್ಯಗಳು ಹಾಗೂ ಸಂಸ್ಥೆಗಳನ್ನು ಹೊಡೆದುರುಳಿಸುವುದೇ ಅದರ ಮೂಲ ಗುರಿ.

ಆದುದರಿಂದ ಸರ್ಕಾರ ಮೊದಲು ಆದಿವಾಸಿಗಳ ಬಂಡಾಯವನ್ನು ನಕ್ಸಲೀಯರ ಹಾವಳಿ ಎಂದು ಸಾರಾಸಗಟಾಗಿ ಪರಿಭಾವಿಸುವುದನ್ನು ತೊರೆದು, ಈ ಬಂಡಾಯದ ಹಿಂದಿರುವ ಆಳದ ರಾಜಕೀಯ ಪ್ರಶ್ನೆಗಳ ಬಗ್ಗೆ–ಇವು ಪರೋಕ್ಷವಾಗಿ ಗಾಂಧೀಜಿ ಎತ್ತಿದ್ದ ಪ್ರಶ್ನೆಗಳೂ ಆಗಿವೆ ಎಂಬುದನ್ನು ತಿಳಿದು–ಸಹಾನುಭೂತಿಯಿಂದ ಯೋಚಿಸತೊಡಗುವುದು ಈ ಸಮಸ್ಯೆಯನ್ನು ಬಗೆಹರಿಸಲು ಇಡಬಹುದಾದ ಮೊದಲ ಹೆಜ್ಜೆ. ಇದು ಆದಿವಾಸಿಗಳನ್ನು ಶತ್ರುಗಳೆಂದು ನೋಡದೆ, ಅರುಂಧತಿ ಅವರು ದಾಖಲಿಸಿರುವಂತೆ ರಾಷ್ಟ್ರೀಯತೆಯ ಹೆಸರಿನಲ್ಲಿ ಅವರ ಬದುಕನ್ನು ಅನ್ಯ ರಾಜ್ಯಗಳ ಮೀಸಲು ಪೋಲೀಸರನ್ನು ಕರೆಸಿ ಅಮಾನವೀಯವಾಗಿ ದಮನ ಮಾಡುವ ಪ್ರಯತ್ನಗಳನ್ನು ನಿಲ್ಲಿಸಲು ಪ್ರೇರೇಪಿಸಬಹುದು. ಹಾಗೇ, ಅವರು ನಾಗರಿಕ ಸಮಾಜಕ್ಕೆ ಮಹತ್ವದ್ದೇನನ್ನೋ, ಮೂಲ ಜೀವದಾಯಿಯಾದ ಸತ್ಯವೊಂದನ್ನು ಹೇಳಬಯಸಿದ್ದಾರೆ ಎಂಬ ಅರಿವನ್ನು ನಮ್ಮಲ್ಲಿ ಮೂಡಿಸಬಹುದು.

ಆಗ ಈ ಆದಿವಾ ಸಿಗಳಿಗೆ ಕೇವಲ ಮತದಾನದ ಹಕ್ಕನ್ನು ನೀಡಿ ಅವರನ್ನು 'ಗಣರಾಜ್ಯ ವ್ಯವಸ್ಥೆ'ಯ ವ್ಯಾಪ್ತಿಗೆ ಸೇರಿಸಿಕೊಂಡುಬಿಟ್ಟಿದ್ದೇವೆಂದು ಬೊಗಳೆ ಬಿಡುತ್ತಾ ನಮ್ಮ ನಾಗರೀಕತೆಯ ಶ್ರೇಷ್ಠತೆಯ ಅಹಮ್ಮಿನಲ್ಲಿ ಅವರ ಬದುಕಿನ ಆವರಣದ ಮೇಲೇ, ಜೀವನ ಕ್ರಮದ ಮೇಲೇ ದಾಳಿ ಮಾಡುವ ಮೂಲಕ ಅವರ ಬದುಕಿನ ಹಕ್ಕನ್ನೇ ನಿರಾಕರಿಸುತ್ತಿರುವ ನಾವು ಸಂವಿಧಾನದ ಆಶಯಗಳನ್ನೇ ಬುಡಮೇಲುಗೊಳಿಸುತ್ತಿದ್ದೇವೆ ಎಂಬ ಎಚ್ಚರ ಮೂಡೀತು. ಅದರ ಭಾಗವಾಗಿ ಆದಿವಾಸಿ ಪ್ರದೇಶಗಳನ್ನು ತಂತಮ್ಮ ದೇಶಗಳ ಅಥವಾ ಪ್ರದೇಶಗಳ 'ಅಭಿವೃದ್ಧಿ'ಗಾಗಿ ಖರೀದಿಸಲು ಬಂದಿರುವ ಉದ್ಯಮಿಗಳೊಂದಿಗೆ (ತೀರ್ಥಹಳ್ಳಿ ಬಳಿಯ ಗುಡ್ಡವೊಂದು ಬೋಳಾಗುತ್ತಿದ್ದು, ಅದರ ಕಲ್ಲುಗಳನ್ನು ಜರ್ಮನಿಯ ಯಾವುದೋ ಒಂದು ಪಟ್ಟಣದಲ್ಲಿ ಹಾಲುಗಲ್ಲಿನ ಕಾಲು ಹಾದಿ ನಿರ್ಮಿಸಲು ಸಾಗಿಸಲಾಗುತ್ತಿದೆ ಎಂದು ರೈತ ಮುಖಂಡ ಕಡಿದಾಳು ಶಾಮಣ್ಣ ನನಗೆ ಇತ್ತೀಚೆಗೆ ತಿಳಿಸಿದರು) ಮಾಡಿಕೊಂಡಿರುವ ಒಪ್ಪಂದಗಳನ್ನು–ಅದೆಷ್ಟೇ ಪರಿಹಾರ ಕೊಟ್ಟಾದರೂ–ರದ್ದು ಮಾಡುವ ವಿವೇಕವೂ ಮೂಡಬಲ್ಲುದು.

ಆದರೆ ಮೂಲತಃ ಜಾತಿ ಶಪಿತವಾದ ನಮ್ಮ ನಾಗರಿಕ ಸಮಾಜ ಮತ್ತು ಸರ್ಕಾರ, ಆದಿವಾಸಿಗಳು ಮಹತ್ವದ್ದನ್ನು ಹೇಳಬಲ್ಲರು ಎಂಬುದನ್ನೇ ನಂಬದ ಸ್ಥಿತಿಯಲ್ಲಿದ್ದಂತೆ ಕಾಣುತ್ತದೆ. ದೇಶೀವಿವೇಕವಿಲ್ಲದ ಆಧುನಿಕತೆ ಮತ್ತು ಜಾತಿ ಅಹಂಕಾರಗಳು ಭಾರತೀಯ ಸಮಾಜವನ್ನು ಕುರುಡಾಗಿಸಿದೆ, ಕ್ರೂರವಾಗಿಸಿದೆ. ಇದರ ಅರಿವಾಗದ ಹೊರತು ಆದಿವಾಸಿಗಳು ಈಗ ಹೂಡಿರುವ ಬಂಡಾಯ ನಕ್ಸಲೀಯರನ್ನು ಬಲಗೊಳಿಸುತ್ತಲೇ ಹೋಗುತ್ತದೆ ಮತ್ತು ಅರುಂಧತಿ ರಾಯ್‌ರಂತಹ ಮಾನವ ಹಕ್ಕುಗಳ ಹೋರಾಟಗಾರರನ್ನು ಬಿಡುವಿಲ್ಲದ ಕೆಲಸಗಳಲ್ಲಿ ತೊಡಗಿಸಿರುತ್ತದೆ, ಅಷ್ಟೆ.

ಇದರ ಸಂಪಾದಿತ ರೂಪ 2010, ಏಪ್ರಿಲ್ 30ರ 'ಪ್ರಜಾವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದನ್ನು ಆಧರಿಸಿ ಕೆಲವರು ಕೆಲವು ಪ್ರಶ್ನೆಗಳನ್ನು ಎತ್ತಿರುವುದರಿಂದ, ಪೂರ್ಣ ಲೇಖನ ಅವುಗಳಿಗೆ ಉತ್ತರ ಒದಗಿಸಬಹುದೆಂದು ಅದನ್ನು 'ಸಂವಾದ'ದ ಸಂಪಾದಕರ ಸೌಜನ್ಯದಿಂದ ಇಲ್ಲಿ ಪ್ರಕಟಿಸಲಾಗುತ್ತಿದೆ.

@'ಪುನರುಜ್ಜೀವನ' ಕಾಲದ ಬೆಳವಣಿಗೆಗಳಿಂದ ಏನೂ ಒಳ್ಳೆಯದಾಗಲಿಲ್ಲವೇ ಎಂದು ಕೇಳುವವರಿಗೆ ನನ್ನದು ಒಂದೇ ಉತ್ತರ: ಅದು ಮಾಡಿದ ಏಕೈಕ ಒಳ್ಳೆಯ ಕೆಲಸವೆಂದರೆ, ಮತ ಮೌಢ್ಯದ ಆಧಾರಗಳನ್ನು ನಾಶ ಮಾಡಿದ್ದು. ಆದರೆ ಅದು ಅದರ ಜೊತೆಗೇ, 'ಧರ್ಮ'ದ ಕಲ್ಪನೆಯನ್ನು ಅನುಮಾನಾಸ್ಪದಗೊಳಿಸಿತು. ಸೃಷ್ಟಿಯ ಅಖಂಡತೆಯನ್ನು ಖಂಡಿಸಿತು. ಈ ಎಲ್ಲ ಅನಾಹುತಗಳೂ ಪುನರುಜ್ಜೀವನ ಕಾಲದ ಸಂಶೋಧನೆ–ಸಾಹಸಗಳಿಂದಾದ ಪರಿಣಾಮ ಎಂದು ನಾನು ಹೇಳುತ್ತಿಲ್ಲ. ಈ ಸಂಶೋಧನೆ ಮತ್ತು ಸಾಹಸಗಳನ್ನು ಒಂದು ರಾಜಕೀಯ ಶಕ್ತಿಯಾಗಿ ರೂಪಿಸಲು ಬಳಸಿಕೊಂಡ ಆ ಕಾಲ–ದೇಶದಲ್ಲಿ ಹುಟ್ಟಿದ ಮನೋಧರ್ಮದ ಪರಿಣಾಮಗಳ ಬಗ್ಗೆ ಹೇಳುತ್ತಿದ್ದೇನೆ. ಪುನರುಜ್ಜೀವನದಿಂದ ಶೋಷಕ ರಾಜಶಾಹಿ–ಊಳಿಗಮಾನ್ಯಶಾಹಿ ಕುಸಿಯಿತೆಂದು ಹೇಳುವುದಾದರೆ, ಅದು ಅದಕ್ಕಿಂತ ಹೆಚ್ಚು ಸಂಕೀರ್ಣ ಶೋಷಕನಾಗಿ ರೂಪುಗೊಂಡ ಬಂಡವಾಳಶಾಹಿಗೆ ಮತ್ತು ವಸಾಹತುಶಾಹಿಗೆ ಕಾರಣವಾಯಿತೆಂದೂ ಹೇಳಬೇಕಾಗುತ್ತದೆ. ಈ ವಸಾಹತುಶಾಹಿಯು ಭಾರತದಂತಹ ದೇಶಗಳಲ್ಲಿನ ಊಳಿಗಮಾನ್ಯಶಾಹಿಯನ್ನು ನಾಶ ಮಾಡಲು ಸಹಾಯವಾಯಿತೆಂದು ಹೇಳುತ್ತಾ ಅದಕ್ಕೆ ಡೊಗ್ಗು ಸಲಾಮು ಹಾಕುವವರೂ ಇದ್ದಾರೆ. ಆದರೆ ಅವರೇ, ಈ ಊಳಿಗಮಾನ್ಯಶಾಹಿಯು ಹೊಸ ಹೊಸರೂಪ ತಾಳಿ ಶೋಷಣೆ ಮುಂದುವರೆಯುತ್ತಿದೆ ಎಂದು ವಾದಿಸುತ್ತಾ 'ಸಾಮಾಜಿಕ ನ್ಯಾಯ' ಬಗ್ಗೆ ಹೆಚ್ಚು ಹೆಚ್ಚು ದೊಡ್ಡದಾದ ಕೂಗುಗಳನ್ನೂ ಹಾಕುತ್ತಿದ್ದಾರೆ. ಇದೆಂತಹ ವಿಪರ್ಯಾಸ! ಇದು ಭಾರತದಲ್ಲಿ ವಸಾಹತುಶಾಹಿ ಹುಟ್ಟು ಹಾಕಿದ ಜಾಣ, ಅಂತ್ಯವೇ ಇಲ್ಲದಂತೆ ತೋರುವ ವಿಭಜನಾ ರಾಜಕಾರಣ! □

ಮೂಲ: ಕನಕಮಣಿ ದೀಕ್ಷಿತ್
ಅನು: ಡಿ.ಎಸ್ ನಾಗಭೂಷಣ

ಹೊರಗಿನಿಂದ ನೋಡಿದಾಗ ಭಾರತದ ರಾಷ್ಟ್ರೀಯ ಮಾಧ್ಯಮಗಳು ಕ್ರಿಕೆಟ್ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸುತ್ತಾ, ಪರಿಧಿಯಲ್ಲಿ ನಡೆಯುತ್ತಿರುವ ಭೂಮಿ ನಡುಗಿಸುವಂತಹ ಘಟನೆಗಳ ಬಗ್ಗೆ, ತುಲನಾತ್ಮಕವಾಗಿ ಹೇಳುವುದಾರೆ, ಕುರುಡಾಗಿರುವುದು ಅಚ್ಚರಿ ಹುಟ್ಟಿಸುತ್ತದೆ. ಕಳೆದ ತಿಂಗಳುದ್ದಕ್ಕೂ ಓದುಗರು ಮತ್ತು ವೀಕ್ಷಕರಿಗೆ ಸಾನಿಯಾ-ಷೋಯಬ್ ಮದುವೆ ನಿಶ್ಚಿತಾರ್ಥ ಹಾಗೂ ಐಪಿಎಲ್ ವಿವಾದವನ್ನು ಉಣಬಡಿಸಲಾಗಿತ್ತು. ಈ ಎರಡು ತುದಿಗಳ ಮಧ್ಯೆ ದಾಂತೇವಾಡದಲ್ಲಿ ಮಾವೋವಾದಿಗಳಿಂದ ಅರೆ ಸೇನಾ ಪಡೆಯ 76 ಜನರ ಹತ್ಯೆಯ ಸುದ್ದಿ ಬಂತು;ಹಾಗೇ ದಿನ ನಿತ್ಯದ ಸಾಮನ್ಯ ಸುದ್ದಿಗಳ ಮಹಾಪೂರದೆದರು ಅದು ಜನರ ಮನಸ್ಸಿನಿಂದ ಬಹು ಬೇಗ ಕೊಚ್ಚಿಕೊಂಡು ಹೋಯಿತು.

ನೆಲದ ವಾಸ್ತವದಿಂದ ದೂರವಿರುವುದೇ, ಎಲ್ಲವನ್ನೂ ಅಮುಖ್ಯಗೊಳಿಸಿ ಅಪ್ರಸ್ತುತತವನ್ನಾಗಿ ಮಾಡಿಬಿಡುತ್ತದೆ. ಅಷ್ಟೇ ಅಲ್ಲ, 'ಭಾರತ'ದ ಬೃಹತ್‌ತನದಲ್ಲಿ ಏನೆಲ್ಲ ಅಡಗಿದೆ, ಅದು; ಕ್ರಿಕೆಟ್ ಮತ್ತು ಗಡಿಯಾಚೆಯ ನುಸುಳುಕೋರರ ಹಾವಳಿ ಮಾತ್ರ ಸಾರ್ವಜನಿಕ ಸಮೂಹವನ್ನು ಕೊನೆಯಿರದ ಮಂತ್ರಮುಗ್ಧತೆಯಲ್ಲಿ ಇಡಬಲ್ಲುದೆಂದು ಕಾಣುತ್ತದೆ. ಹಾಗಾಗಿ, ಮಾವೋವಾದಿ ದಂಗೆ ಹಾಗೂ ರಾಜ್ಯ ವ್ಯವಸ್ಥೆ ಅದಕ್ಕೆ ಪ್ರತಿಯಾಗಿ ನಡೆಸಿರುವ-ದಿನೇ ದಿನೇ ಹೆಚ್ಚು ಹೆಚ್ಚು ಕೊಳಕಾಗುತ್ತಿರುವ-ಸಮರ ಜನರ ಗಮನ ಸೆಳೆಯದಾಗಿದೆ. ಇದು ಏಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಬಹು ಮುಖ್ಯವಾಗಿದೆ.

ಅನುಬಂಧ:

ಮಾನವ ಹಕ್ಕುಗಳ ಬಹು ದಿಟ್ಟ ಹೋರಾಟಗಾರ್ತಿ ಎನಿಸಿರುವ ಅರುಂಧತಿ ರಾಯ್ ದಂಡಕಾರಣ್ಯದಲ್ಲಿನ ಮಾವೋವಾದಿಗಳನ್ನು ಭೇಟಿ ಮಾಡಿ ಬಂದು, 'ಔಟ್‌ಲುಕ್' ಪತ್ರಿಕೆಯಲ್ಲಿ ಬರೆದ ಸುದೀರ್ಘ ಅನುಭವ ಕಥನ ರಾಷ್ಟ್ರವ್ಯಂತ ಕುತೂಹಲ ಹುಟ್ಟಿಸಿ, ಹಲವು ನೆಲೆಗಳಿಂದ ಹಲವು ರೀತಿಯ ಪ್ರತಿಕ್ರಿಯೆಗಳ ಮಹಾಪೂರವನ್ನೇ ಆಹ್ವಾನಿಸಿದೆ. ಇವುಗಳಲ್ಲಿ ಸಗಟು ಸಗಟಾದ ಪರ-ವಿರೋಧ ನಿಲುವುಗಳೇ ಹೆಚ್ಚು. ಆದರೆ ಮಾವೋವಾದಿಗಳು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ ನೇಪಾಳದ ವಿಶಿಷ್ಟ ರಾಜಕಾರಣದ ಹಿನ್ನೆಲೆಯಲ್ಲಿ, ಆ ದೇಶದ ಪ್ರಮುಖ ಪತ್ರಿಕೆ 'ಹಿಮಾಲ್'ನ ಸಂಪಾದಕರಾದ ಕನಕಮಣಿ ದೀಕ್ಷಿತ್, ಅರುಂಧತಿ ರಾಯ್ ಅವರ ಬರಹಕ್ಕೆ ಬಂದ ಪ್ರತಿ ಕ್ರಿಯೆಗಳನ್ನು ಗಮನಿಸಿ 'ಔಟ್‌ಲುಕ್'ಗಾಗಿ ಬರೆದಿರುವ ಈ ಲೇಖನದಲ್ಲಿ ನಕ್ಸಲ್ ಸಮಸ್ಯೆಯ ಮುಖ್ಯ ಮೂಲ ವೊಂದನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಗಾಂಧಿ ಕಾಲದಿಂದಲೂ; ಭಾರತದ ಅಭಿವೃದ್ಧಿಗೆ ದೊಡ್ಡ ಅಡ್ಡಿಯಾಗಿರುವುದು, ಅದರ ಅಖಂಡತೆಯ ಹೆಸರಿನಲ್ಲಿ ಬೆಳಸಿಕೊಂಡು ಬರುತ್ತಿರುವ (ಭೌಗೋಳಿಕ ಹಾಗೂ ಆ ಮೂಲಕ ಸೃಷ್ಟಿಯಾಗುವ ಮಾನಸಿಕ)'ದೂರ'ದ ರಾಜಕಾರಣವೇ ಆಗಿದೆ ಎಂದು ಹಲವು ರಾಜಕೀಯ ಮತ್ತು ಅಬಿ. ವೃದ್ಧಿ ಚಿಂತಕರು ಹೇಳುತ್ತ ಬಂದಿದ್ದರೂ, ಅದರ ಕಡೆ ಯಾರ ಗಮನವೂ ಹರಿಯುತ್ತಿಲ್ಲ. ಬದಲಿಗೆ ಸರಿ ಸುಮಾರು ಎಲ್ಲ ರಾಜಕೀಯ ಪಕ್ಷಗಳಿಂದ ರಾಜಕೀಯ ವ್ಯವಸ್ಥೆಯನ್ನು ಹೆಚ್ಚೆಚ್ಚು ಕೇಂದ್ರೀಕರಣಕ್ಕೊಳಪಡಿಸುವ ಶಾಸನಗಳು ಮತ್ತು ರಾಜಕೀಯ ತಂತ್ರಗಳು ರೂಪಿತವಾಗುತ್ತಲೇ ಇವೆ. ಆದರೆ, ಯಾವ ಅಖಂಡತೆಯನ್ನು-ಮತ್ತು ಅದರ ಹಿಂದಿನ ಹಿತಾ ಸಕ್ತಿಗಳನ್ನು- ಕಾಪಾಡಲು ಈ ಎಲ್ಲ ರಾಜಕೀಯ ಕಸರತ್ತು ಗಳನ್ನು ಮಾಡಲಾಗುತ್ತಿದೆಯೋ, ಅವುಗಳ ಪರಿಣಾಮಗ ಳಿಂದಾಗಿಯೇ ಅದು ನಿರಂತರ ಅಪಾಯವನ್ನು ಎದುರಿಸು ತ್ತಿದೆ ಎಂಬುದು ಮಾತ್ರ ಇವರಾರ ಅರಿವಿಗೂ ಬರುತ್ತಿಲ್ಲ ಎಂಬುದೇ ಇಂದಿನ ಭಾರತೀಯ ರಾಜಕಾರಣದ ಬಹು ದೊಡ್ಡ ದುರಂತವಾಗಿದೆ.

ಬಹುಶಃ ಇಂದು ಜಗತ್ತಿನಲ್ಲಿ ಸವಾಧಿಕಾರಿ ರಾಷ್ಟ್ರ ಪ್ರಭುತ್ವಗಳ ಹೊರತಾಗಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಅತ್ಯಂತ ಹೆಚ್ಚು ರಾಜಕೀಯ ಕೇಂದ್ರೀಕರಣಕ್ಕೊಳಪಟ್ಟಿರುವ ರಾಷ್ಟ್ರ ಭಾರತವೇ ಆಗಿದೆ. ಇದರ ಒತ್ತಡಗಳು ಇಂದು ಹಲವು ಕಡೆ ಹಲವು ರೂಪಗಳಲ್ಲಿ ಕಾಣತೊಡಗಿವೆ. ಆದು ದರಿಂದ ಭಾರತ ನಿಜವಾದ ಅರ್ಥದಲ್ಲಿ(ನಮ್ಮಲ್ಲಿ ಬಹು ಜನರು ಆರಾಧಿಸುವ ಅಮೆರಿಕಾದ ಮಟ್ಟದಲ್ಲಿ ಬೇಡ; ಕನಿಷ್ಠ, ಬಹು ಜನರು ಕೀಳಾಗಿ ಕಾಣುವ ಪಾಕಿಸ್ಥಾನ-ಬಂಗ್ಲಾದೇಶ ಗಳ ಮಟ್ಟದಲ್ಲಾದರೂ)ರಾಜ್ಯಗಳ ಒಕ್ಕೂಟವಾಗದ ಹೊರತು ಮತ್ತು ಪ್ರತಿ ರಾಜ್ಯವೂ ವಿಕೇಂದ್ರೀಕೃತ ರಾಜ್ಯ ವ್ಯವಸ್ಥೆಯಾ ಗದ-ಅಂದರೆ ಈ ರಾಷ್ಟ್ರ ಪ್ರಭುತ್ವದ ಆಧುನಿಕ ಸ್ವರೂಪ ಬದಲಾಗದ-ಹೊರತು ಭಾರತದ ಅಖಂಡತೆ ಮತ್ತು ಅಭಿವೃದ್ಧಿಗಳೆಂಬುವು ಸದಾ ಬಹುದೂರದ ಗುರಿಗಳೇ ಆಗಿ ಉಳಿಯುವ ಸಾಧ್ಯತೆಗಳೇ ಹೆಚ್ಚು. ಕನಕಮಣಿ ದೀಕ್ಷಿತ್ ಅವರ ಈ ಲೇಖನ ಇದನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ. ಇದು, ಇದರ ಅನುವಾದದೆಡೆಗೆ ನನ್ನನ್ನು ಆಕರ್ಷಿಸಿದ ಸಂಗತಿ.

- ಅನುವಾದಕ

ಭಾರತದಲ್ಲಿನ ದೂರ, ಬಹು-ದೂರಗಳು

ಭಾರತದಲ್ಲಿ ರಾಷ್ಟ್ರೀಯ ಕೇಂದ್ರವಾದ ಹಾಗೂ ನೆಲ ಮಟ್ಟದ ರಾಜಕಾರಣದ ನಡುವೆ ವಿಪರೀತವೆನಿಸುವಷ್ಟು ಪದರಗಳಿವೆ. ನಿರ್ಧಾರ ತೆಗೆದುಕೊಳ್ಳುವವರು ಮತ್ತು ವಿಶ್ಲೇಷಣಾಕಾರರು, ಮಾವೋವಾದಿ ಸಮರ ನಡೆಯುತ್ತಿರುವ ಸ್ಥಳೀಯ 'ನೆಲೆ'ಗಳಿಂದ ಹಲವು ಮಟ್ಟಗಳ ಅಂತರದಲ್ಲಿರುವಂತಹ ಸ್ಥಿತಿ ಇಲ್ಲಿನ ರಾಜಕಾರಣದಲ್ಲಿ ಅಂತರ್ಗತವಾಗಿಹೋಗಿದೆ. ಈ ಮುಖ್ಯ ಸಂಗತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು, ಇದನ್ನು ನೇಪಾಳದ ಪರಿಸ್ಥಿತಿಯೊಂದಿಗೆ ಹೋಲಿಸಿ ನೋಡಬೇಕು. ಮಾವೋವಾದಿ ದಂಗೆ 1998ರಲ್ಲಿ ಆರಂಭವಾದಾಗ, ಇದು ತುರ್ತು ಗಮನಕ್ಕೆ ಅರ್ಹವಾದ ಸಂಗತಿಯೆಂದು ಕಠ್ಮಂಡುವಿಗೆ ಅರಿವಾದಷ್ಟು ತೀವ್ರ ಗತಿಯಲ್ಲಿ ಇಂದು ನವದೆಹಲಿ ಮಟ್ಟದಲ್ಲಿ ಆಗುತ್ತಿಲ್ಲ. ಇದಕ್ಕೆ ಎಲ್ಲಕ್ಕಿಂತ ಮುಖ್ಯವಾಗಿ, ನೇಪಾಳದಲ್ಲಿ ಕೇಂದ್ರ ಮತ್ತು ಪರಿಧಿ ನಡುವಣ ಅಂತರ ಬಹಳ ಕಡಿಮೆ ಇರುವುದೇ ಕಾರಣ.

ಸ್ಥಳೀಯದಿಂದ ರಾಷ್ಟ್ರೀಯವು ಭೌಗೋಳಿಕವಾಗಿ ಹಾಗೂ ಮಾನಸಿಕವಾಗಿ ದೂರವಿರುವುದು ಎಂದರೆ, ತಕ್ಷಣವೇ ಸವಾಲನ್ನು ಆಹ್ವಾನಿಸದಂತಹ ಜನ ವಿರೋಧಿ ನೀತಿಯನ್ನು ಎಗ್ಗಿಲ್ಲದೆ ಜಾರಿಗೆ ತರಲು ಸಾಧ್ಯವಿರುವ ವ್ಯವಸ್ಥೆ ಎಂದೇ ಅರ್ಥ. ನೇಪಾಳದಂತಹ ಸಣ್ಣ ರಾಜಕೀಯ ವ್ಯವಸ್ಥೆ, ಜಿಲ್ಲಾ ಮಟ್ಟದ ಸ್ಥಳೀಯ ಕಾವಲು ಸಂಸ್ಥೆಗಳು–ಅವು ಅಗತ್ಯ ಸಂಖ್ಯೆಯಲ್ಲಿ ಇಲ್ಲದಿದ್ದರೂ–ಬೆಳೆಯಲು ಅವಕಾಶ ಮಾಡಿಕೊಟ್ಟಿದ್ದರೆ, ಭಾರತದ ಬಹುಭಾರಿಯಾದ ಏಕಾತ್ಮಕ ವ್ಯವಸ್ಥೆ ಇಂತಹ ಸಂಸ್ಥೆಗಳ ವಿಕಾಸವನ್ನು ಕುಂಠಿತಗೊಳಿಸುತ್ತಾ ಬಂದಿದೆ. 'ಸ್ಥಳೀಯ'ದಿಂದ ಇರುವ ಈ ದೂರವೇ, ಇತ್ತೀಚೆಗೆ ಒಂದು ರಾಷ್ಟ್ರೀಯ ಸುದ್ದಿ ಪತ್ರಿಕೆ ಬಳಸಿದಂತೆ, ಮಾಧ್ಯಮಗಳು 'ರಕ್ತ ಪಿಪಾಸು ಮಾವೋವಾದಿಗಳು' ಎಂಬ ನುಡಿಗಟ್ಟುಗಳನ್ನು ಸುಲಭವಾಗಿ ಬಳಸಲು ಅವಕಾಶ ಮಾಡಿಕೊಡುವುದು. ಈ ದೂರತ್ವವೇ ಮಾವೋವಾದಿಗಳು ಮತ್ತು ರಾಜ್ಯ ವ್ಯವಸ್ಥೆಯನ್ನು ಒಳಿತು–ಕೆಡಕುಗಳ ದ್ವಿದಳ ರೂಪದಲ್ಲಿ ಮಂಡಿಸಿ, ಬಂಡುಕೋರರನ್ನು ಕೆಲವರು ರಾಕ್ಷಸೀಯವಾಗಿ ಚಿತ್ರಿಸಲು ಮತ್ತು ಕೆಲವರು ಅವರನ್ನು ರಮ್ಯೀಕರಿಸಲು ಸಾಧ್ಯ ಮಾಡುತ್ತದೆ.

ಒಂದು ಸುಕ್ಷೇಮ ದೂರದಿಂದ ಹಿಂಸಾತ್ಮಕ ದಂಗೆಯನ್ನು ಬೆಂಬಲಿಸುವುದು ಒಂದು ರೀತಿಯ ವದಂತಿ ಕೋರತನವೇ ಆಗಿದೆ. ಇದರ ಭಾಗವಾಗಿಯೇ ನವದೆಹಲಿಯ ವಿಶ್ಲೇಷಣಾಕಾರರು ನೇಪಾಳ ಅಥವಾ ಚತ್ತೀಸಗಢದ ದಂಗೆಕೋರರ ಬಗ್ಗೆ 'ಜನ ಕೇಂದ್ರಿತ'ವೆಂದು ಹೇಳಲಾಗುವ ಧರ್ಮೋಪದೇಶ ನೀಡಬಲ್ಲವರಾಗಿದ್ದಾರೆ. ಈ 'ಸಾಮ್ರಾಜ್ಯಶಾಹಿ–ಪ್ರತಿಪರ' ನಿಲುವು, ವಿಶ್ಲೇಷಣಾಕಾರರು ಪ್ರತಿಷ್ಠಿತ ಜಗತ್ತಿನ ಭವ್ಯ ನಗರಗಳ ಎಲ್ಲ ಸುಖ ಸಂತೋಷಗಳನ್ನು ಅನುಭವಿಸಿಕೊಂಡೂ, ವ್ಯವಸ್ಥೆಗೆ ಛೀಮಾರಿ ಹಾಕಲು ಸಾಧ್ಯ ಮಾಡುತ್ತದೆ. ಸಹಜವಾಗಿಯೇ ಇವರಿಗೆ, ಒಂದು ಕಡೆ ರಾಷ್ಟ್ರೀಯ ಸುಭದ್ರತೆಯ ಮಂತ್ರ ಹೇಳುವ ರಾಜ್ಯ ವ್ಯವಸ್ಥೆ ಮತ್ತು ಇನ್ನೊಂದು ಕಡೆ ನಕರಾತ್ಮಕವಾದ ಹಾಗೂ ತುಕ್ಕು ಹಿಡಿದ ಮಾವೋವಾದಿ ವಿಚಾರಧಾರ'ಯನ್ನು ಪ್ರಶ್ನಿಸುತ್ತಲೇ, ನೆಲ ಮಟ್ಟದ ಪ್ರಜಾಪ್ರಭುತ್ವವನ್ನು ಆಳಗೊಳಿಸಿ ಬೆಂಬಲಿಸುವ ಬೇಸರಿಕೆಯ ಮಧ್ಯಮ ಮಾರ್ಗ ಬೇಕಿಲ್ಲ.

ಭವ್ಯ ನಗರಗಳ ಆರಾಮ ಕುರ್ಚಿಗಳಿಂದ ಮಾವೋವಾದಿಗಳ ದಮನಕ್ಕೆ ಕರೆ ಕೊಡುವುದಾಗಲೀ ಅಥವಾ ದಂಗೆಕೋರರ ಬಳಿ ಎಲ್ಲ ಸಮಸ್ಯೆಗಳಿಗೆ ಉತ್ತರಗಳಿವೆಯೆಂದು ಪ್ರತಿಪಾದಿಸುವುದಾಗಲೀ ಸುಲಭ. ಆದರೆ ಎಂದಿನಂತೆ, ಮಧ್ಯಮ ಮಾರ್ಗ ಕಡಿಮೆ ರಮ್ಯ, ಆದರೆ ಹೆಚ್ಚು ವಾಸ್ತವಿಕ. ಅದು ಭಾರತದ ಪ್ರತಿ ರಾಜ್ಯದ ಆಡಳಿತವನ್ನೂ ಉತ್ತರದಾಯಿತ್ವಕ್ಕೆ ಒಳಪಡಿಸುವಂತಹ ಒಕ್ಕೂಟವಾದವನ್ನು ಪೋಷಿಸುವಂತೆಸುವಂತೆ ಆಗ್ರಹಿಸುತ್ತದೆ. ಭಾರತ, ಎಲ್ಲಿ ಸ್ಥಳೀಯ ನಿಯಂತ್ರಣ ಮತ್ತು ಸಮತೋಲನಗಳ ವ್ಯವಸ್ಥೆ ಹೊಂದಿದೆಯೋ, ಅಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವವಾಗಿದೆ; ಎಲ್ಲಿ ಅವು ಇಲ್ಲವೋ ಅಲ್ಲಿ, ಅದು ಜನರ ಪಾಲಿಗೆ ಹಸಿದ ಹೆಬ್ಬುಲಿಯಂತಹ ರಾಜ್ಯ ವ್ಯವಸ್ಥೆಯಾಗಿ ಮಾರ್ಪಡಲು ಹವಣಿಸುತ್ತಿದೆ. ಎಲ್ಲಿ ಸ್ಥಳೀಯ ಪ್ರಜಾಪ್ರಭುತ್ವ ದುರ್ಬಲವಾಗಿದೆಯೋ ಅಲ್ಲಿ ಮಾವೋವಾದಿಗಳು ಕಾಣಿಸಿಕೊಂಡು ಅತಿವಾದದ ವಾತಾವಣ ಸೃಷ್ಟಿಸಿ, ನಾಗರಿಕ ಹಕ್ಕುಗಳ ಕಾರ್ಯಕರ್ತರು ನಿರ್ದಿಷ್ಟವಾಗಿ ಒಂದಲ್ಲ ಒಂದು ಪಕ್ಷದ ಕಡೆ ನಿಲ್ಲುವಂತೆ ಒತ್ತಾಯಿಸುವ ಮೂಲಕ ಎಲ್ಲ ಸಾಮಾಜಿಕ ಆಂದೋಲನಗಳೂ ನೆಲಕಚ್ಚುವಂತೆ ಮಾಡಲಾಗುತ್ತಿದೆ.

ರಾಜ್ಯ ವ್ಯವಸ್ಥೆಯ ನೀತಿಯನ್ನು ರೂಪಿಸುವವರು, ಭೂಮಿಗೆ ಅಪಚಾರ ಮಾಡುವಂತಹ ನೀತಿಯು ಗ್ರಾಮೀಣ ಕಾರ್ಯಕರ್ತರು ತಮ್ಮ ಉಳಿವಿಗಾಗಿ ಮಾವೋವಾದಿಗಳ ತೆಕ್ಕೆಗೆ ಬೀಳುವಂತೆ ಮಾಡುತ್ತದೆ ಎಂಬುದನ್ನು ಮೊದಲು ಅರಿಯಬೇಕು. ಅದೇ ವೇಳೆಯಲ್ಲಿ, ಮಾವೋವಾದಿ ನಾಯಕರುಗಳಲ್ಲಿ ತಮ್ಮ ಹೋರಾಟವು ಖಂಡಿತ ಕ್ರಮೇಣ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಆತ್ಮವನ್ನೇ ನಾಶ ಮಾಡುವಂತಹ ಸುಲಿಗೆ ಯಂತ್ರವಾಗಿ ಮಾರ್ಪಡುವುದೆಂಬ ಅರಿವು ಮೂಡಬಲ್ಲುದೇ? ಹೋರಾಟಕ್ಕೆ ಬಂದು ಸೇರಿಕೊಳ್ಳುವ ಅರಳುಗಣ್ಣುಗಳ ಹುಡುಗ–ಹುಡುಗಿಯರು ಬಹು ಬೇಗ ಬಂದೂಕಿನ ಬಲದ ಮತ್ತು ಅದರ ಮೂಲಕ ಹಣವಸೂಲಿ ಹಾಗೂ ಜನರ ಶರಣಾಗತಿಯನ್ನು ಸಾಧಿಸುವ ಆಕರ್ಷಣೆಗೆ ಬಲಿ ಬೀಳುತ್ತಾರೆ. ಇದು, ಬಿತ್ತದೇ ಬೆಳೆಯುವುದನ್ನು ಕಲಿಯುವ ಅನುತ್ಪಾದಕ ಯುವಜನರ ಒಂದು ವರ್ಗವನ್ನೇ ಸೃಷ್ಟಿಸುತ್ತದೆ.

ನಿಜ, ಜನರ ಶರಣಾಗತಿಯನ್ನು ಒತ್ತಾಯಿಸುವಂತಹ ಸಾಧನಗಳ ಮೇಲೆ ಏಕ ಸ್ವಾಮ್ಯ ಹೊಂದಿರುವುದು ಯಾವುದೇ ಉದಾರವಾದಿ ಪ್ರಜಾಪ್ರಭುತ್ವದ ಮೂಲ ಆಧಾರಗಳಲ್ಲೊಂದಾಗಿರುತ್ತದೆ. ಆದರೆ ಜನ ತಿರುಗಿ ಬೀಳುವ ಭಯದಿಂದ ಅವನ್ನು ಬಳಸಲಾಗುವುದಿಲ್ಲವಷ್ಟೆ. ಹೀಗಾಗಿ, ಮಾನವ ಹಕ್ಕುಗಳ ಕಾರ್ಯಕರ್ತರ ಕೆಲಸವೆಂದರೆ, ಎಲ್ಲ ರೀತಿಯ ಪ್ರತಿಕೂಲ ಪರಿಸ್ಥಿತಿಗಳಲ್ಲೂ ರಾಜ್ಯ ವ್ಯವಸ್ಥೆ ಉತ್ತರದಾಯಿಯಾಗಿರುವಂತೆ ನೋಡಿಕೊಂಡು, ಕಾನೂನಿನ ಆಳ್ವಿಕೆಯನ್ನು ಖಚಿತಗೊಳಿಸಿಕೊಳ್ಳುವುದೇ ಆಗಿದೆ. ಕ್ರಾಂತಿಕಾರರಿಗೆ ಕ್ಷಿಪ್ರ ಮತ್ತು ಸುಲಭ ಬೆಂಬಲ ಘೋಷಿಸುವುದು, 'ಜನತಾ ಸಮರ' ಎಲ್ಲಿ ನಡೆಯುತ್ತಿದೆಯೋ ಅಲ್ಲಿ ಬದುಕು ನಡೆಸಬೇಕಾದ ಅಗತ್ಯವಿರದವರ ಪ್ರಗತಿಪರತೆಯ ಡೌಲು ಮಾತ್ರವಾಗಿರುತ್ತದೆ.

ನಿಜ, ಭಾರತವು ರಾಷ್ಟ್ರ ಮಟ್ಟದಲ್ಲಿ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ. ಅದರೆ ಅದರ ಬಹುತ್ವ ಮೂಲವಾದ ಸಾಮಾಜಿಕ–ಆರ್ಥಿಕ ಫಲಗಳು ಎಲ್ಲ ಕಡೆ ದೊರೆಯುವಂತೆ ಮಾಡಬಲ್ಲ ಸಂರಚನೆಗಳು ಇಲ್ಲಿ ಇನ್ನೂ ವಿಕಾಸಗೊಂಡಿಲ್ಲ. ದಾಂತೇವಾಡದಿಂದ ಕೇಳಿ ಬರುತ್ತಿರುವ ಕೂಗು, ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಎಂಬುವುಗಳನ್ನು ಹೆಚ್ಚು ಜನರ ಪಾಲುದಾರಿಕೆಗಾಗಿ ಮತ್ತು ಹೆಚ್ಚು ಸ್ಥಳೀಯತೆಗಳಿಗಾಗಿ ಸಜ್ಜುಗೊಳಿಸಲು ಪ್ರೇರೇಪಿಸುವಂತಾಗಬೇಕು. ಉತ್ತಮತರ ಸ್ಥಳೀಯ ಆಡಳಿತಕ್ಕಾಗಿನ ಈ ಕರೆ ಬಹು ರಮ್ಯವಾದ ಸಂಗತಿಯೇನೂ ಅಲ್ಲವೆಂದು ಕಾಣುತ್ತದೆ–ಏಕೆಂದರೆ, ಇಲ್ಲೇನೂ ನಾವು ಕಥೆ, ಕಾದಂಬರಿ ಬರೆಯುತ್ತಿಲ್ಲವಲ್ಲ! □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಗೌರವ ಬದುಕು ಬೇಕೆನ್ನುವವರು ಬೌದ್ಧರಾದರೆ ತಪ್ಪೇನು?

(4ನೇ ಪುಟದಿಂದ)

ಬೇಕಾದ ವೈರಿ ಜಾತಿ ನಿಷ್ಠ ಜನರಲ್ಲ, ಅವರಿಗೆ ಈ ಧರ್ಮವನ್ನು ಬೋಧಿಸಿದ ಶಾಸ್ತ್ರಗಳೇ ಶತ್ರು. ಅಂತರ್ ಜಾತಿಯಾ ಭೋಜನ ವಿವಾಹಗಳನ್ನು ಏರ್ಪಡಿಸುವುದರಿಂದ ನಿಮ್ಮ ಉದ್ದೇಶ ಈಡೇರಲಾರದು. ಶಾಸ್ತ್ರಗಳಲ್ಲಿ ಜನಗಿರುವ ನಿಷ್ಠೆಯನ್ನು ನಾಶಪಡಿಸುವುದೇ ನಿಜವಾದ ಮಾರ್ಗ.

8.ಬುದ್ಧನುತಾಳಿದ ನಿಲುವನ್ನೇ ನೀವು ತಾಳಬೇಕು. ಗುರು ನಾನಕರು ತಾಳಿದ ನಿಲುವನ್ನೇ ನೀವು ತಾಳಬೇಕು. ಅವರಿಬ್ಬರಂತೆ ನೀವುಕೊಡ ಶಾಸ್ತ್ರಗಳನ್ನು ಕಿತ್ತೊಗೆಯಬೇಕು, ಇಷ್ಟೆ ಅಲ್ಲ ಅವುಗಳ ಅಧಿಕಾರವನ್ನು ಧಿಕ್ಕರಿಸಬೇಕು, ಜಾತಿ ಬಹಳ ಪವಿತ್ರವೆಂಬ ಭ್ರಾಂತಿ ಹುಟ್ಟಿದ್ದು ನಿಮ್ಮ ಧರ್ಮದಿಂದ ಎಂಬ ಮಾತನ್ನು ಹಿಂದೂಗಳಿಗೆ ಹೇಳುವ ಧೈರ್ಯನಿಮಲ್ಲಿ ಬರಬೇಕು.

ಅಂಬೇಡ್ಕರ್‌ರವರ ಈ ಭಾಷಣರದ್ದಾದರೂ ಇವರ ಮುದ್ರಿತ ಪ್ರತಿಗಳಿಂದ ಬಹಳ ಚರ್ಚೆಗಳಾಗುತ್ತವೆ. ಗಾಂಧೀಜಿಯವರೂ ತಮ್ಮ ಹರಿಜನ ಪತ್ರಿಕೆಯಲ್ಲಿ ಇದಕ್ಕೆ ಉತ್ತರಿಸುತ್ತಾ, ತಮ್ಮ ಸಮರ್ಥವಾದ ಉಪನ್ಯಾಸದಲ್ಲಿ ಪಂಡಿತರಾದ ಈ ಡಾಕ್ಟರು ತಮ್ಮ ವಾದವನ್ನು ಅವಶ್ಯಕತೆಗಿಂತಲೂ ಹೆಚ್ಚಾಗಿ ಸಿದ್ಧಮಾಡಿದ್ದಾರೆ, ಚೈತನ್ಯ, ಜ್ಞಾನದೇವ, ತುಕರಾಮ, ತಿರುವಳ್ಳುವರ್, ರಾಮಕೃಷ್ಣ ಪರಮಹಂಸ, ರಾಜಾ ರಾಮ್ ಮೋಹನ್‌ರಾಯ್, ಮಹರ್ಷಿ ದೇವೇಂದ್ರನಾಥ್ ಠಾಕೂರ್, ವಿವೇಕಾನಂದ ಮತ್ತು ಅನೇಕಾನೇಕರು ಒಪ್ಪಿಕೊಂಡ ಧರ್ಮವು ಡಾ ಅಂಬೇಡ್ಕರ್ ಹೇಳುವಷ್ಟು ಗುಣಹೀನವಾಗಿರಬಲ್ಲುದೇ? ಧರ್ಮದ ಬೆಲೆಕಟ್ಟುವುದು ಅವರಕನಿಷ್ಠ ಮಾದರಿಗಳಿಂದಲ್ಲ ಆ ಧರ್ಮದಲ್ಲಿ ಉದಿಸಿದ ಅತ್ಯುತ್ತಮ ಮಾದರಿಗಳಿಂದ ಯಾಕೆಂದರೆ. ಇಟ್ಟು ಕೊಳ್ಳಬೇಕಾದ ಅವಶ್ಯವೆಂದರೆ ಅದೋಂದೇ.ಇದಕ್ಕೆ ಅಂಬೇಡ್ಕರ್‌ರವರು ಮತ್ತೆ ಉತ್ತರಿಸುತ್ತಾ, ಸಂತರು ಜಾತಿ – ಅಸ್ಪೃಶ್ಯತೆಯ ವಿರುದ್ಧವಾಗಿ ಎಂದೂ ಆಂದೋಲನ ನಡೆಸಲಿಲ್ಲವೆಂದು ನನ್ನ ವ್ಯಾಸಂಗದಿಂದ ಅರಿತುಕೊಂಡಿದ್ದೇನೆ. ಜೀವಾತ್ಮ – ಪರಮಾತ್ಮರ ಸಂಬಂಧವೇ ಅವರಿಗೆ ಮುಖ್ಯವಾಗಿತ್ತು. ಮನುಷ್ಯರೆಲ್ಲ ಸಮಾನರೆಂದು ಅವರು ಬೋಧಿಸಲಿಲ್ಲ ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾಸನೆಂದು ಮಾತ್ರ ಹೇಳಿದರು ಇದು ತುಂಬಾ ನಿರುಪದ್ರವಕಾರಿ ಹೇಳಿಕೆ.

ಅಂಬೇಡ್ಕರ್‌ರವರ ಮತಾಂತರ ಯಾಕೆ ಎನ್ನುವುದರಲ್ಲೂ ಅವರ ಸ್ಪಷ್ಟ ನೋವು ದಾಖಲಾಗಿದೆ "ಅಸ್ಪೃಶ್ಯತೆಯ ಸ್ವರೂಪ ಆಚರಣೆಗಳ ತಿಳುವಳಿಕೆಯಿಲ್ಲದೆ ಮತಾಂತರದ ನಿಜವಾದ ಅಂತರಾತ್ಮವನ್ನು ತಿಳಿಯಲಾರಿರಿ, ಮತಾಂತರವೊಂದರಿಂದಲೇ ಏನು ಸಾಧನೆಯಾಗುತ್ತದೆ ಎಂಬ ಕೆಲವು ಹಿಂದೂಗಳ ಪ್ರಶ್ನೆ ಕೇಳಿ ನನಗೆ ಆಶ್ಚರ್ಯವಾಗಿದೆ. ಭಾರತದ ಇಂದಿನ ಬಹುತೇಕ ಸಿಖ್ಖರು ಮುಸ್ಲಿಂರು ಮತ್ತು ಕ್ರೈಸ್ತರು ಹಿಂದೆ ಹಿಂದುಗಳೇ ಆಗಿದ್ದವರು ಅದರಲ್ಲೂ ಬಹುತೇಕ ಶೂದ್ರರು – ಅಸ್ಪೃಶ್ಯರಿಗೇನೂಲಾಭವಿಲ್ಲ ಎಂಬವಾದವೇ ಹುರುಳಿಲ್ಲದ್ದು.

ಹೀಗೆ ಅಂಬೇಡ್ಕರ್‌ರವರ ಕಾರಣಗಳನ್ನು ತಿಳಿದಾಗ ನಾಗಭೂಷಣ್‌ರವರು ಹೇಳಿದಂತೆ ಬುದ್ಧ ಪೂರ್ವ ಬೌಧವೇ ಆಗಿತ್ತು ಎನ್ನುವುದನ್ನು ಹಿಂದೂ ಅಡಿಯಲ್ಲಿ ಈಗ ಸಾಧಿಸುವುದಾದರೂ ಹೇಗೆ? ಶ್ರೇಣಿಕೃತ ಜಾತಿವ್ಯವಸ್ಥೆ ಎಷ್ಟೆ ಸಮಾಜಸುಧಾಕರು ಬಂದರೂ ಅಳಿದಿಲ್ಲ. ಬದಲಾಗಿ ಮತ್ತಷ್ಟು ಬಲಗೊಳ್ಳುತ್ತಿದೆ. ಇಂಥ ಸಂದರ್ಭದಲ್ಲಿ ಗೌರವದ ಬದುಕು ರೂಪಿಸಿಕೊಳ್ಳುವವರು ಬೌದ್ಧರಾಗುವುದಾದರೆ ಅದರಲ್ಲಿ ತಪ್ಪೇನು? ಬುದ್ಧಿಸ್ಟ್ ಆದವನು ಬುದ್ಧನಾದರೆ ಆತ ಖಂಡಿತ ತಾನು ಬುದ್ಧಿಸ್ಟ್ ಎಂದು ಹೇಳಿಕೊಳ್ಳುವುದಿಲ್ಲ. □

ದಲಿತ ಐಕ್ಯತೆಯ ಸವಾಲುಗಳು

(18ನೇ, ಪುಟದಿಂದ)

ಇಸಂಗಳಿಗೆ ಶರಣಾಗುವ ಅವಶ್ಯಕತೆ ಇಲ್ಲವಾದರೂ ಸಮಕಾಲೀನ ರಾಜಕೀಯ ಸಂದರ್ಭದಲ್ಲಿ ದಲಿತ ಸಂಘಟನೆಗಳು ಸಮುದಾಯದ ಜನತೆಯಲ್ಲಿ ತಮ್ಮದೇ ಆದ ರಾಜಕೀಯ ಪ್ರಜ್ಞೆಯನ್ನು ಮೂಡಿಸುವತ್ತ ಗಮನ ಹರಿಸಬೇಕಾಗಿದೆ. ದಲಿತ ಸಮುದಾಯದಲ್ಲಿ ಮೂಡಿರುವ ಎಡ–ಬಲ ವಿವಾದ, ಮೀಸಲಾತಿ ಸಮಸ್ಯೆ ಮತ್ತು ಇಂದಿಗೂ ಸಮಾಜವನ್ನು ಕಾಡುತ್ತಿರುವ ಅಸ್ಪೃಶ್ಯತೆ, ಜಾಗತೀಕರಣ–ನವ ಉದಾರೀಕರಣದ ಸ್ವೀಕೃತಿ, ಪ್ರಸಕ್ತ ರಾಜಕೀಯ ಗುಂಪುಗಳೊಡಗಿನ ಸಂಬಂಧಗಳು, ದಲಿತ ಸಮುದಾಯ ತಾಳಬೇಕಾದ ರಾಜಕೀಯ ನಿಲುವುಗಳು ಇವೆಲ್ಲವನ್ನೂ ಗಂಭೀರವಾಗಿಯೇ ಪರಿಗಣಿಸಬೇಕಾಗಿದೆ.

ನಾಲ್ಕು ದಶಕಗಳ ಪ್ರಬಲ ಚಳುವಳಿಯ ನಂತರವೂ ರಾಜ್ಯದ ದಲಿತ ಸಮುದಾಯದಲ್ಲಿ ಪ್ರತ್ಯೇಕ ರಾಜಕೀಯ ಪ್ರಜ್ಞೆ ಮೂಡದಿರುವುದೇ ದಲಿತ ಚಳುವಳಿಯ ಪ್ರಮುಖ ನ್ಯೂನತೆ ಎಂಬ ಅಂಶವನ್ನು ಪ್ರಸ್ತುತ ಸಂದರ್ಭದಲ್ಲಿ ಮನಗಾಣಬೇಕಿದೆ. ವಿಪರ್ಯಾಸವೆಂದರೆ ಅತಿ ಹೆಚ್ಚಿನ ಸಂಖ್ಯೆಯ ದಲಿತ ಶಾಸಕರು ಭಾಜಪದಿಂದ ಆಯ್ಕೆಯಾಗಿದ್ದಾರೆ. ಸಂಘಪರಿವಾರದ ಕಾರ್ಯಸೂಚಿಗಳ ಅನುಷ್ಠಾನದಲ್ಲಿ ದಲಿತ ಯುವಕರು ಕಾಲಾಳುಗಳಾಗುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸಂಘಟನಾತ್ಮಕವಾಗಿ ಸೃಷ್ಟಿಯಾಗಿದ್ದ ಶೂನ್ಯತೆಯನ್ನು ವಿವಿಧ ರಾಜಕೀಯ ಪಕ್ಷಗಳು ತಮ್ಮದೇ ಆದ ರೀತಿಯಲ್ಲಿ ಉಪಯೋಗಿಸಿಕೊಂಡಿವೆ. ಹಾಗಾಗಿ ದಲಿತ ಸಂಘಟನೆಗಳು ತಳಮಟ್ಟದಲ್ಲಿ

ನಾಲ್ಕು ದಶಕಗಳ ಪ್ರಬಲ ಚಳುವಳಿಯ ನಂತ ರವೂ ರಾಜ್ಯದ ದಲಿತ ಸಮುದಾಯದಲ್ಲಿ ಪ್ರತ್ಯೇಕ ರಾಜ ಕೀಯ ಪ್ರಜ್ಞೆ ಮೂಡದಿರುವುದೇ ದಲಿತ ಚಳುವಳಿಯ ಪ್ರಮುಖ ನ್ಯೂನತೆ ಎಂಬ ಅಂಶವನ್ನು ಪ್ರಸ್ತುತ ಸಂದರ್ಭ ದಲ್ಲಿ ಮನಗಾಣ ಬೇಕಿದೆ. ವಿಪರ್ಯಾಸವೆಂದರೆ ಅತಿಹೆಚ್ಚಿನ ಸಂಖ್ಯೆಯ ದಲಿತ ಶಾಸಕರು ಭಾಜಪದಿಂದ ಆಯ್ಕೆಯಾಗಿದ್ದಾರೆ.

ತಮ್ಮ ಅಸ್ಮಿತೆಯನ್ನೇ ಕಳೆದುಕೊಂಡಿವೆ. ದಲಿತರ ಜೀವನಾಡಿಯಾಗಿರುವ ಭೂಮಿಯ ಪ್ರಶ್ನೆ ಬಹುತೇಕ ನೇಪಥ್ಯಕ್ಕೆ ಸರಿದಿದೆ. ನವ ಉದಾರೀಕರಣ ನೀತಿಯಡಿ ಕಾರ್ಪೋರೇಟ್ ಉದ್ಯಮಿಗಳು ತಮ್ಮ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚುತ್ತಿರುವ ಸಂದರ್ಭದಲ್ಲಿ ದಲಿತ ಸಮುದಾಯಗಳು ಸುಲಭ ತುತ್ತಾಗಿ ಪರಿಣಮಿಸುತ್ತಿವೆ.

ಈ ವಿಷಮ ಸನ್ನಿವೇಶದಲ್ಲಿ ಐಕ್ಯತೆಯ ದಿಕ್ಕಿನಲ್ಲಿ ಮುನ್ನಡೆದಿರುವ ದಲಿತ ಸಂಘಟನೆಗಳು ತಮ್ಮದೇ ಆದ ಪ್ರತ್ಯೇಕ ರಾಜಕೀಯ–ಸಾಮಾಜಿಕ–ಸಾಂಸ್ಕೃತಿಕ–ಆರ್ಥಿಕ ಪ್ರಣಾಳಿಕೆಯನ್ನು ರೂಪಿಸದೆ ಹೋದಲ್ಲಿ ಇತಿಹಾಸದ ಪುನರಾವರ್ತನೆಯಾಗುವ ಸಾಧ್ಯತೆಗಳೇ ಹೆಚ್ಚು. ಹಾಗಾಗದಂತೆ ಎಚ್ಚರ ವಹಿಸುವ ಹೊಣೆಗಾರಿಕೆಯನ್ನು ಎಲ್ಲರೂ ಹೊರುವುದಾದರೆ ಮಾತ್ರ ಭವಿಷ್ಯದ ಹಾದಿ ಸುಗಮವಾಗಬಹುದು. ಕರ್ನಾಟಕದ ಮಟ್ಟಿಗಾದರೂ ರಾಜಕೀಯ ವಿದ್ಯಮಾನಗಳಲ್ಲಿ ತಮ್ಮದೇ ಆದ ಪ್ರಭಾವಳಿಯನ್ನು ನಿರ್ಮಿಸುವ ಗುರುತರ ಜವಾಬ್ದಾರಿ ದಲಿತ ಸಂಘಟನೆಗಳ ಮೇಲಿದೆ. ಮುಖ್ಯವಾಹಿನಿಯ ರಾಜಕೀಯ ಪಕ್ಷಗಳ ವೈಫಲ್ಯದಿಂದ ರಾಜ್ಯದಲ್ಲಿ ಉದ್ಭವಿಸಿರುವ ಆತಂಕಕಾರಿ ಸನ್ನಿವೇಶ ಮತ್ತು ರಾಜಕೀಯ–ಸಾಮಾಜಿಕ ಪ್ರಕ್ಷುಬ್ಧತೆಯ ಸಂದರ್ಭದಲ್ಲಿ ಒಂದು ವಿಭಿನ್ನ ರಾಜಕೀಯ ಬೆಳವಣಿಗೆಯ ಅವಶ್ಯಕತೆಯನ್ನೂ ದಲಿತ ಸಂಘಟನೆಗಳು ಮನಗಾಣಬೇಕಿದೆ. ಫ್ಯಾಸಿಸ್ಟ್ ಶಕ್ತಿಗಳ ಕೈವಶವಾಗಿರುವ ದಲಿತ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ಕರೆತಂದು ಪ್ರಗತಿಪರ ಚಳುವಳಿಗಳ ನೇತೃತ್ವ ವಹಿಸುವಂತೆ ಮಾಡುವ ಹೊಣೆಗಾರಿಕೆಯೂ ದಲಿತ ಸಂಘಟನೆಗಳ ಮೇಲಿದೆ.

ಈ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವ ಧೀ ಶಕ್ತಿ ದಲಿತ ಸಮುದಾಯದಲ್ಲಿದೆ. ಆದರೆ ಆ ಸುಪ್ತ ಶಕ್ತಿಯನ್ನು ಹೊರಗೆಳೆಯುವ ಕೆಲಸವನ್ನು ದಲಿತ ಸಂಘಟನೆಗಳು ಮಾಡಬೇಕಿದೆ. ಆಗಲೇ ಕರ್ನಾಟಕದಲ್ಲಿ ಒಂದು ಪ್ರಜಾಸತ್ತಾತ್ಮಕ, ಸೆಕ್ಯುಲಾರ್, ಪ್ರಗತಿಪರ ಜನಾಂದೋಲನವನ್ನು ರೂಪಿಸಲು ಸಾಧ್ಯ. ಈ ಬೆಳವಣಿಗೆಯ ನೇತೃತ್ವವನ್ನು ನೀಡುವುದಾದಲ್ಲಿ ಏಕೀಕೃತ ದಲಿತ ಸಂಘಟನೆಯ ಪ್ರಯತ್ನಗಳೂ ಸಾರ್ಥಕತೆ ಪಡೆಯುತ್ತವೆ. □

ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ

ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು

* ಶಿಕ್ಷಣ
* ಉದ್ಯೋಗ ಮತ್ತು ತರಬೇತಿ
* ಪುನರ್ವಸತಿ
* ಸಾಮಾಜಿಕ ಭದ್ರತೆ
* ವಿದ್ಯಾರ್ಥಿ ವೇತನ
* ಶ್ರವ್ಯ ಗ್ರಂಥಾಲಯ ಸ್ಥಾಪನೆ
* ಸ್ವಯಂ ಉದ್ಯೋಗ
* ದೂರವಾಣಿ ಬೂತ್ ಸೌಲಭ್ಯ
* ಸಾಲ ಸೌಲಭ್ಯ
* ವಿಮಾ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆ (ರೂ.೪೦೦\-)
* ಉದ್ಯೋಗದಲ್ಲಿ ಶೇಕಡ ೩ರಷ್ಟು ಮೀಸಲು
* ವಿಶೇಷ ವಾಹನ
* ರಿಯಾಯಿತಿ ಬಸ್‌ಪಾಸ್
* ಅಂಗವಿಕಲರಿಗಾಗಿ ಶಾಲೆಗಳು

ಕರ್ನಾಟಕ ವಾರ್ತೆ
Karnataka Information

ಉದಾಸೀನತೆ ಬಿಡಿ–ಉತ್ತೇಜನ ನೀಡಿ

ರಾಜ್ಯದಲ್ಲಿ ಖಾಸಗಿ ವಿ.ವಿ.ಗಳ ಸ್ಥಾಪನೆ ಶಿಕ್ಷಣ ಮಾರಾಟದ ಹುನ್ನಾರ

ಹೆಚ್.ಆರ್. ನವೀನ್ ಕುಮಾರ್

ಇತ್ತೀಚೆಗೆ ಮುಕ್ತಾಯಗೊಂಡ ರಾಜ್ಯ ವಿಧಾನ ಮಂಡಲಗಳ ಅಧಿ ವೇಶನದಲ್ಲಿ ರಾಜ್ಯ ಸರ್ಕಾರ ಸಾಕಷ್ಟು ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆದಿದ್ದು, ಇವುಗಳಲ್ಲಿ ಕೆಲವು ಮಸೂದೆಗಳು ಸಮಾ ಜದ ಮೇಲೆ ಬಹಳ ಅಪಾಯಕಾರಿಯಾದ2 ಪರಿಣಾಮಗಳನ್ನು ಬೀರಲಿವೆ. ಅದರಲ್ಲಿ ಮುಖ್ಯವಾಗಿ ಶಿಕ್ಷಣ ಕ್ಷೇತ್ರದ ಮೇಲೆ ಖಾಸಗಿ ಒಡೆತನವನ್ನು ಸ್ಥಾಪಿಸುವ " ಅಜೀಂ ಪ್ರೇಂಜಿ ವಿಶ್ವವಿದ್ಯಾನಿಲಯ ವಿಧೇಯಕ 2010" – "ಅಲಯನ್ಸ್ ವಿಶ್ವವಿದ್ಯಾನಿಲಯ ವಿಧೇಯಕ 2010" ಎಂಬ ಎರಡು ಮಸೂದೆಯಲ್ಲಿರುವ ಜನವಿರೋಧಿ ನಿಲುವುಗಳನ್ನು ತೆರೆದಿಡುವ ಪ್ರಯತ್ನ ಇದಾಗಿದೆ. ಮೊದಲಿಗೆ ಈ ಎರಡು ವಿಶ್ವವಿದ್ಯಾನಿಲಯಗಳು ಸಂಪೂರ್ಣ ಖಾಸಗಿ ವಿ.ವಿಗಳಾಗಿದ್ದು, ಇವುಗಳನ್ನು ಖಾಸಗಿ ಕಂಪನಿಗಳಾದ ಅಜೀಂ ಪ್ರೇಂಜಿ ಪ್ರತಿಷ್ಠಾನ ಮತ್ತು ಅಲಯನ್ಸ್ ಬಿಸಿನೆಸ್ ಸ್ಕೂಲ್‌ಗಳು ಪ್ರಾರಂಭಿಸಲು ರಾಜ್ಯಸರ್ಕಾರ ಈಗಾಗಲೇ ಒಪ್ಪಿಗೆ ನೀಡಿದ್ದು, ಅಜೀಂ ಪ್ರೇಂಜಿ ವಿ.ವಿ. ಮಸೂದೆ ಧ್ವನಿ ಮತದ ಮೂಲಕ ಯಾವುದೇ ಚರ್ಚೆಯಿಲ್ಲದೆ ವಿಧಾನಸಭೆಯಲ್ಲಿ ಅಂಗೀಕಾರವಾಗಿದೆ ಮತ್ತು ಅಲಿಯನ್ಸ್ ವಿ.ವಿ. ಮಸೂದೆಯನ್ನು ಸದನ ಸಮಿತಿಗೆ ಒಪ್ಪಿಸಲಾಗಿದೆ. ಈ ಎರಡು ಖಾಸಗಿ ವಿ.ವಿ.ಗಳಿಗೆ ಸಂಬಂಧಿಸಿದಂತೆ ಗುರುತಿಸಬೇಕಾದ ಕೆಲವು ಅಂಶಗಳು.

ಅಜೀಂ ಪ್ರೇಂಜಿ ವಿ.ವಿ.ಯ ಘೋಷಿತ ಧ್ಯೇಯೋದ್ದೇಶಗಳು:

ಈ ವಿ.ವಿ.ಯು ಪ್ರಾಥಾಮಿಕ ಶಿಕ್ಷಣ, ಪ್ರೌಢಶಿಕ್ಷಣ, ಶಾಲಾ ಗುಣಮಟ್ಟದ ಚೌಕಟ್ಟುಗಳು, ಬೋಧನೆ-ಕಲಿಕೆ, ಬೋಧಕರ ಶಿಕ್ಷಣ; ಅಭಿವೃದ್ಧಿಯ ಇತರ ಸಂಬಂಧ ಪಟ್ಟ ಕ್ಷೇತ್ರಗಳನ್ನು ಒಳಗೊಂಡ ಶಿಕ್ಷಣದಲ್ಲಿನ ತಂತ್ರಜ್ಞಾನ ಮತ್ತು ವಿಜ್ಞಾನಗಳು, ಸಮಾಜ ವಿಜ್ಞಾನಗಳು, ಮಾನಸಿಕ ವಿಜ್ಞಾನಗಳು ಮತ್ತು ಆಡಳಿತ ವಿಜ್ಞಾನ ಈ ರಂಗಗಳಲ್ಲಿ ವಿವಿಧ ವಿಭಾಗಗಳಲ್ಲಿ ಶಿಕ್ಷಣ, ಬೋಧನೆ, ತರಬೇತಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಒದಗಿಸುವುದು ಮತ್ತು ಈ ರಂಗಗಳಲ್ಲಿ ಸಂಶೋಧನೆ, ಜ್ಞಾನ ಸಂವರ್ಧನೆ ಹಾಗೂ ಪ್ರಸಾರಕ್ಕೆ ಏರ್ಪಾಡುಗಳನ್ನು ಮಾಡುವುದು ಇವುಗಳ ಜೊತೆ ಮುಖ್ಯವಾಗಿ ಬೋಧಕರಿಗೆ, ಬೋಧಕರಿಗೆ ಶಿಕ್ಷಣ ನೀಡುವವರಿಗೆ, ಉನ್ನತ ಶಿಕ್ಷಣ ಮತ್ತು ವೃತ್ತಿ ಶಿಕ್ಷಣಗಳಲ್ಲಿನ ಬೋಧಕರಿಗೆ, ಆಡಳಿತಗಾರರಿಗೆ ಮತ್ತು ಭಾರತದ ವಿವಿಧ ರಾಜ್ಯಗಳು ಮತ್ತು ವಿದೇಶಗಳಲ್ಲಿ ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ಕಾರ್ಯನಿರ್ವ ಹಿಸುತ್ತಿರುವಾಗ ಅಭಿವೃದ್ಧಿ ವೃತ್ತಿಗಾರರಿಗೆ ಉನ್ನತ ಗುಣಮಟ್ಟದ ತರಬೇತಿ, ಸಾಮರ್ಥ್ಯ ನಿರ್ಮಾಣ ಪ್ರಕ್ರಿಯೆ ಮತ್ತು ಅಭಿವೃದ್ಧಿ ವಚಯ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸಿ ಒದಗಿಸುವುದು.

ಇದರಲ್ಲಿ ಅಡಗಿರುವ ಅಪಾಯಕಾರಿ ಅಂಶವೆಂದರೆ. ಈ ವಿ.ವಿ. ಈಗಾಗಲೇ ರಾಜ್ಯದಲ್ಲಿರುವ ಸರ್ಕಾರಿ ವಿ.ವಿ.ಗಳಲ್ಲಿ ಬೋಧನೆ ಮಾಡುವ ವಿಷಯಗಳಲ್ಲದೆ ಬೋಧನೆ ಮಾಡುವ ಶಿಕ್ಷಕ, ಉಪನ್ಯಾಸಕರಿಗೆ, ಅವರಿಗೆ ಬೋಧನೆ ಮಾಡುವ ಬೋಧಕರಿಗೆ ತರಬೇತಿ ನೀಡುವ ಉದ್ದೇಶವನ್ನು ಹೊಂದಿದೆ. ಅಂದರೆ ರಾಜ್ಯದಲ್ಲಿರುವ ಎಲ್ಲಾ ಶಿಕ್ಷಕ ತರಬೇತಿ ಶಾಲಾ ಕಾಲೇಜುಗಳನ್ನು ಈ ವಿವಿಯ ಕಂಪನಿಯ ಆಲೋಚನೆಗಳಿಗೆ ತಕ್ಕಂತೆ ತರಬೇತಿಗೊಳಿಸುವ ಅಪಾಯವಿದೆ. ಜೊತೆಗೆ ಈಗ ರಾಜ್ಯದಲ್ಲಿ ಶಿಕ್ಷಕರಿಗೆ ತರಬೇತಿ ನೀಡುತ್ತಿರುವ ಸರ್ಕಾರಿ ಸಂಸ್ಥೆಗಳು ಮುಂದೆ ಮುಚ್ಚಿಕೊಳ್ಳುವ ಅಪಾಯವಿದೆ.

ಈ ವಿಧೇಯಕರ ಪ್ರಕಾರ ರಾಜ್ಯದ ಘನತೆವೆತ್ತ ರಾಜ್ಯಪಾಲರು ಕೇವಲ ಈ ವಿ.ವಿ.ಯ ಸಂದರ್ಶಕರಾಗಿದ್ದು. (ವಿಸಿಟರ್)ಅವರು ಪದವಿ ಪ್ರಧಾನ ಸಾಮಾರಂಭಗಳಲ್ಲಿ ಅಧ್ಯಕ್ಷತೆಯನ್ನು ವಹಿಸುವವರು ಮಾತ್ರ ವಾಗಿದ್ದಾರೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಕುಲಾದಿ ಪತಿಗಳಾಗಿ (ಚಾನ್ಸಲರ್) ರಾಜ್ಯಪಾಲರು ನೇಮಕಗೊಂಡಿರುತ್ತಾರೆ. ಆದರೆ ಈ ಮಸೂದೆ ಪ್ರಕಾರ ಕುಲಾಧಿಪತಿಗಳಾಗಿ ವಿವಿಯನ್ನು ಸ್ಥಾಪಿಸಲು ಮುಂದಾಗಿರುವ ಕಂಪನಿಯ ಹಾಲಿ ಅಧ್ಯಕ್ಷರಾದ ಅಜೀಂ ಪ್ರೇಂಜಿಯವರು ಇರುತ್ತಾರೆ, ಅಷ್ಟೇ ಅಲ್ಲದೆ ಇವರು ಜೀವನ

ಮಸೂದೆ ಪ್ರಕಾರ ವಿ.ವಿ.ಯ ಒಟ್ಟು ಸ್ಥಾನಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಕೇವಲ ಶೇ.೨೫ ರಷ್ಟು ಸ್ಥಾನಗಳಿಗೆ ಮಾತ್ರ ಪ್ರವೇಶಾವ ಕಾಶವನ್ನು ಕಲ್ಪಿಸಲಾಗಿದ್ದು. ಇವರುಗಳು ಪ್ರವೇಶಕ್ಕೆ ಇರುವ ಎಲ್ಲ ಮಾನ ದಂಡಗಳನ್ನು ಪೂರೈಸಬೇಕು. ಇಲ್ಲದಿದ್ದರೆ ಉಳಿಯುವ ಸೀಟುಗಳನ್ನು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳ ಲಾಗುವುದು. ಇದರಿಂದ ವಿದ್ಯಾರ್ಥಿಗ ಳಿಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಇದು ಹೊರರಾಜ್ಯದ ಹೊರದೇಶದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಹಣ ಸುಲಿಗೆ ಮಾಡಿ ಲಾಭ ಮಾಡುವ ಏಕೈಕ ಉದ್ದೇಶ ದಿಂದ ಪ್ರಾರಂಭವಾಗುತ್ತಿದೆ. ಇದರಲ್ಲಿಯಾವುದೇ ರೀತಿಯ ಮೀಸಲಾತಿಗಳ ಬಗ್ಗೆ ಪ್ರಸ್ತಾಪಿಸದೆ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿಡಲಾಗಿದೆ.

ಪರ್ಯಂತ ಕುಲಾಧಿಪತಿಗಳಾಗಿರುತ್ತಾರೆ. ಜೊತೆಗೆ ವಿವಿಧ ಸಮಿತಿಗಳನ್ನು ನೇಮಕ ಮಾಡುವ, ವಿ.ವಿ.ಗಳಿಗೆ ಸಂಬಂಧಿಸಿದಂತೆ ಪ್ರವೇಶ, ಶುಲ್ಕನಿಗದಿ, ಪಠ್ಯಕ್ರಮ ಆಡಳಿತ ಉಳಿದ ಎಲ್ಲ ವಿಚಾರಗಳಿಗೂ ಅಜೀಂ ಪ್ರೇಂಜಿಯವರಿಗೆ ಪರಮಾಧಿಕಾರವನ್ನು ನೀಡಲಾಗಿದೆ. ಇದನ್ನು ಯಾರು ಪ್ರಶ್ನಿಸುವಂತಿಲ್ಲ. ಇವರೆ ಕುಲಪತಿ (ವಿ.ಸಿ.)ಮತ್ತು ಕುಲಸಚಿವರನ್ನು (ರಿಜಿಸ್ಟಾರ್) ನೇಮಕ ಮಾಡುವುದು.

ರಾಜ್ಯದ ವಿದ್ಯಾರ್ಥಿಗಳಿಗೆ ಮೋಸ

ಈ ಮಸೂದೆ ಪ್ರಕಾರ ವಿ.ವಿ.ಯ ಒಟ್ಟು ಸ್ಥಾನಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಕೇವಲ ಶೇ.25ರಷ್ಟು ಸ್ಥಾನಗಳಿಗೆ ಮಾತ್ರ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದ್ದು. ಇವರುಗಳು ಪ್ರವೇಶಕ್ಕೆ ಇರುವ ಎಲ್ಲ ಮಾನದಂಡಗಳನ್ನು ಪೂರೈಸಬೇಕು. ಇಲ್ಲದಿದ್ದರೆ ಉಳಿಯುವ ಸೀಟುಗಳನ್ನು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಂದ ಭರ್ತಿಮಾಡಿ ಕೊಳ್ಳಲಾಗುವುದು. ಹಾಗಾಗಿ ಇದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಇದು ಹೋರರಾಜ್ಯದ ಮತ್ತು ಹೊರ ದೇಶದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಹಣ ಸುಲಿಗೆಮಾಡಿ ಲಾಭ ಮಾಡುವ ಏಕೈಕ ಉದ್ದೇಶದಿಂದ ಪ್ರಾರಂಭವಾಗುತ್ತಿದೆ. ಮತ್ತು ಇದರಲ್ಲಿ ಯಾವುದೇ ರೀತಿಯ ಮೀಸಲಾತಿಗಳ ಬಗ್ಗೆ ಪ್ರಸ್ಥಾಪಿಸದೆ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ಇಡಲಾಗಿದೆ.

ಲೂಟಿಗೆ ಮುಕ್ತ ಅವಕಾಶ

ಈ ಮಸೂದೆ ಪ್ರಕಾರ ಆಡಳಿತ ಮಂಡಳಿಯ ವಿವೇಚನೆಯಂತೆ ಶುಲ್ಕ ನಿಗದಿ ಮತ್ತು ಸಂಗ್ರಹ, ವಿದ್ಯಾರ್ಥಿಗಳಿಂದ ವಂತಿಗೆ ಮತ್ತು ಅಭಿವೃದ್ಧಿ ಶುಲ್ಕಗಳನ್ನು ವಸೂಲಿ ಮಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ವಂತಿಗೆ ನಿಷೇಧಕಾಯ್ದೆ ಜಾರಿಯಲ್ಲಿದ್ದು ಅದಕ್ಕೆ ತದ್ವಿರುದ್ದವಾಗಿ ವಂತಿಗೆಯನ್ನು (ಡೊನೇಷನ್) ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾಗುವುದು ಮತ್ತು ಎಲ್ಲ ಶುಲ್ಕಗಳನ್ನು ಆಡಳಿತ ಮಂಡಳಿಯ ವಿವೇಚನೆಗೆ ತಕ್ಕಂತೆ ನಿಗದಿಪಡಿಸಲು ಅವಕಾಶ ಗಳಿರುವುದರಿಂದ ಅಲ್ಲಿ ಸಾಮಾನ್ಯ ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಸಾಧ್ಯವೇ ಇಲ್ಲ.

ಈ ಕಾಯ್ದೆ ಪ್ರಕಾರ ಸಂಬಂಧಿಸಿದ ಖಾಸಗಿ ವಿ.ವಿ.ಯ ಆಡಳಿತ ಮಂಡಳಿಯು ವಿ.ವಿ.ಯ ಕಟ್ಟಡವನ್ನು ಎಲ್ಲಿ ಬೇಕಾದರೂ ನಿರ್ಮಾಣ ಮಾಡಬಹುದು ಮತ್ತು ವಿಶ್ವವಿದ್ಯಾಲಯವು ರಾಜ್ಯದಲ್ಲಿ ತನಗೆಸೂಕ್ತವೆನಿಸುವಂತಹ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಮುಕ್ತ ಅವಕಾಶ ಕಲ್ಪಿಸಿಕೊಡಲಾಗಿದೆ. ಇದರಿಂದ ಯಾವುದೇ ಒಂದು ವಿಶ್ವವಿದ್ಯಾಲಯಕ್ಕೆ ಇರಬೇಕಾದ ಅಗತ್ಯ ಶೈಕ್ಷಣಿಕ ವಾತಾವರಣ ಇಲ್ಲವಾಗಿ ವಿ.ವಿ.ಯನ್ನು ವಾಣಿಜ್ಯ ಸಂಕೀರ್ಣವನ್ನಾಗಿ ಪರಿವರ್ತಿಸಿ ತಮ್ಮ ಉದ್ಯಮದ ಲಾಭಕ್ಕೆ ಪೂರಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳಿವೆ.

ವಿಧೇಯಕದ ಪ್ರಕಾರ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದಡಿಯಲ್ಲಿ ಯಾವುದೇ ಅಧಿಸೂಚನೆ ಅಥವಾ ಆದೇಶಗಳನ್ನು ಹೊರಡಿಸುವಂತಿಲ್ಲ. ಅಂದರೆ ಈ ಖಾಸಗಿ ವಿ.ವಿ.ಯ ಮೇಲೆ ಈಗಾಲೇ ಸರ್ಕಾರದ ಯಾವ ರೀತಿಯ ಹಿಡಿತವೂ ಇಲ್ಲದಿರುವುದರಿಂದ ಇದು ಸ್ಥಾಪನೆಯಾದ ಮೂರು ವರ್ಷಗಳ ನಂತರವಂತೂ ಅದು ಏನುಮಾಡಿದರೂ ಪ್ರಶ್ನಿಸುವಂತಿಲ್ಲ.

ಹಿಂದುಳಿದ ಮತ್ತು ಅಲ್ಪಸಂಖ್ಯಾತರನ್ನು ಉನ್ನತ ಶಿಕ್ಷಣದಿಂದ ಮತ್ತಷ್ಟು ದೂರತಳ್ಳುವುದು ಬಿಟ್ಟರೆ ಬೇರೇನೂ ಸಾಧನೆಯಾ ಗುವುದಿಲ್ಲ. ರಾಜ್ಯದಲ್ಲಿ ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ವಿಶ್ವ ವಿದ್ಯಾಲಯಗಳು ಹಣಕಾಸಿನ ಕೊರತೆಯಿಂದ ಅಗತ್ಯ ಮೂಲಭೂತ ಸೌಲಭ್ಯಗಳಿಲ್ಲದೆ ಬಹು ತೇಕ ವಿಭಾಗಗಳಿಗೆ ಉಪನ್ಯಾಸಕರಿಲ್ಲದೆ ನರಳುತ್ತಿರುವ ಸಂದರ್ಭದಲ್ಲಿ ತೋರಿಕೆಗೆ ವಿಶ್ವವಿದ್ಯಾಲಯಗಳ ಸಂಖ್ಯೆಗಳನ್ನು ಹೆಚ್ಚಿಸುವ, ಜಿಲ್ಲೆಗೊಂದರಂತೆ ವಿ.ವಿ,ಗಳನ್ನು ತೆರೆಯುವ ಹಿಂದಿರುವ ಯಾವ ಉದ್ದೇಶವು ಸಾರ್ಥಕವಾ ಗುವುದಿಲ್ಲ. ಬದಲಾಗಿ ಇರುವ ಸರ್ಕಾರಿ ವಿ.ವಿ.ಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಅನು ದಾನವನ್ನು ಕೊಡುವ ಮೂಲಕ ಅವುಗಳನ್ನು ಅಭಿವೃದ್ಧಿ ಪಡಿಸಿ ಅಲ್ಲಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡದಿದ್ದರೆ ಉನ್ನತ ಶಿಕ್ಷಣದ ಮೇಲೆ ಇರುವ ಭರವಸೆ ಕಡಿಮೆಯಾಗಿ ಮುಂದೊಂದು ದಿನ ಸರ್ಕಾರಿ ವಿಶ್ವ ವಿದ್ಯಾಲಯಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಗಣನಯವಾಗಿ ಕಡಿಮೆಯಾಗಿ ಎಲ್ಲ ಸರ್ಕಾರಿ ವಿ.ವಿ.ಗಳನ್ನು ಮುಚ್ಚುವ ಅಪಾಯವಿದೆ.

ಅಲಯನ್ಸ್ ವಿಶ್ವವಿದ್ಯಾಲಯ ವಿಧೇಯಕವು ಬಹುತೇಕ ಅಜೀಂ ಪ್ರೇಂಜಿ ವಿ.ವಿಯ ರೀತಿಯಲ್ಲೇ ಎಲ್ಲ ಗುಣಲಕ್ಷಣಗಳು, ಆಡಳಿತ ವ್ಯವಸ್ಥೆಯನ್ನು ಹೊಂದಿದ್ದು ಬೋಧನೆಯ ವಿಷಯದಲ್ಲಿ ಮಾತ್ರ ಸ್ವಲ್ಪ ಬದಲಾವಣೆ ಇದೆ. ಅಲಯನ್ಸ್ ವಿ.ವಿ.ಯನ್ನು ಬೆಂಗಳೂರಿನ ಬಿಸಿನೆಸ್ ಸ್ಕೂಲ್ ಎಂಬ ಖಾಸಗಿ ಸಂಸ್ಥೆಯು ಸ್ಥಾಪಿಸಲಿದೆ. ಇಲ್ಲಿ ವ್ಯವಹಾರ ಆಡಳಿತ ಮತ್ತು ವ್ಯವಸ್ಥಾಪನೆ, ಸಾರ್ವಜನಿಕ ನೀತಿ ಮತ್ತು ಆಡಳಿತ ತಂತ್ರಜ್ಞಾನ, ಆರೋಗ್ಯ ವಿಜ್ಞಾನ ಪರಿಸರ ಮತ್ತು ಹವಾಮಾನ ಬದಲಾವಣೆ ಜಾಗತೀಕರಣ ಮತ್ತು ರಾಷ್ಟ್ರ ಸೀಮಾತೀತ ಸಂಬಂಧಗಳೂ ಸೇರಿದಂತೆ ಜೀವವಿಜ್ಞಾನಲಾಳಂಥ ವಿಷಯಗಳಲ್ಲಿ, ಲಿಂಗ, ಮೂಲಾಂಶ, ಜನಾಂಗ, ಮಯೋಮಾನ, ಸಾಮಾಜಿಕ ಮತ್ತು ಆರ್ಥಿಕ ಒಕ್ಕೂಟಗಳು ಈ ವಿಷಯಗಳ ಬಗ್ಗೆ ಬೋಧಿಸುವ ಮತ್ತು ಸಂಶೋಧನೆ ನಡೆಸುವ ಉದ್ದೇಶವನ್ನು ಹೊಂದಿದ್ದು, ಈ ವಿ.ವಿ.ಯಲ್ಲಿಯ ಸಂಸ್ಥೆಯ ಹಾಲಿ ಅಧ್ಯಕ್ಷರೇ ಕುಲಾಧಿಪತಿಗಳಾಗಿದ್ದು(ಚಾನ್ಸಲರ್)ಅವರದೆ ಪರಮಾಧಿಕಾರುವಿತ್ತದೆ.

ಒಟ್ಟಾರೆಯಾಗಿ ರಾಜ್ಯದಲ್ಲಿ ಈ ರೀತಿಯ ಖಾಸಗಿ ವಿ.ವಿ.ಗಳನ್ನು ಸ್ಥಾಪಿಸುವ ಹಿಂದೆ ಇಡೀ ಶಿಕ್ಷಣವನ್ನು ಅದರಲ್ಲೂ ಮುಖ್ಯವಾಗಿ ಉನ್ನತ ಶಿಕ್ಷಣವನ್ನು ಮಾರಾಟದ ಸರಕನ್ನಾಗಿ ಪರಿವರ್ತಿಸಿ ಖಾಸಗಿ ಕಂಪನಿಗಳ ಲಾಭಕ್ಕೆ ಅನುವು ಮಾಡಿಕೊಡುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಜೊತೆಗೆ ರಾಜ್ಯ ಸರ್ಕಾರ ಶಿಕ್ಷಣ ನೀಡುವ ತನ್ನ ಪ್ರಾಥಮಿಕ ಜವಾಬ್ದಾರಿಯನ್ನು ಖಾಸಗಿಯವರಿಗೆ ವರ್ಗಾಯಿಸುವ ಮೂಲಕ ಇಡೀ ಶಿಕ್ಷಣ ರಂಗವನ್ನು ಖಾಸಗೀಕರಣ ಮಾಡಲು ಹೊರಟಿದೆ.

ಈಕಾಯ್ದೆಯಲ್ಲಿ ರಾಜ್ಯದ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ರಾಜ್ಯದಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವವರ ಸಂಖ್ಯೆಕೇವಲ ಶೇಕಡ 11.5 ರಷ್ಟಿರುವುದರಿಂದ ಇದನ್ನು ಹೆಚ್ಚಿಲು ಖಾಸಗಿ ವಿ.ವಿ.ಗಳಿಗೆ ಅನುಮತಿ ನೀಡುತ್ತಿದ್ದೇವೆಂದು ಘೋಷಿಸಿಕೊಂಡಿದ್ದಾರೆ. ಇಂತಹ ಶಿಕ್ಷಣ ಸಚಿವರನ್ನು ಹೊಂದಿರುವ ರಾಜ್ಯ ಧನ್ಯೋಸ್ಮಿ? ಇದುವರೆಗೂ ಇರುವ ಸರ್ಕಾರಿ ವಿ.ವಿ.ಗಳಲ್ಲೇ ಉನ್ನತ ಶಿಕ್ಷಣವನ್ನು ಪಡೆಯಲಾಗದಂತಹ ಸ್ಥಿತಿ ರಾಜ್ಯದ ವಿದ್ಯಾರ್ಥಿ ಯುವಜನರಿಗಿರುವಾಗ ಮನಸೋ ಇಚ್ಛೆಶುಲ್ಕ, ವಂತಿಗೆ ವಸೂಲಿಮಾಡಿ ಲಾಭಮಾಡುವ ಉದ್ದೇಶದಿಂದಲೇ ಪ್ರಾರಂಭವಾಗುತ್ತಿರುವ ಖಾಸಗಿ ವಿ.ವಿ.ಗಳಲ್ಲಿ ಯಾರಿಗೆ ಶಿಕ್ಷಣ ಸಿಗುತ್ತದೆ? ಅದರಿಂದ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗುತ್ತದೆ ಎಂಬ ಪ್ರಶ್ನೆ ಎದುರಾಗುತ್ತದೆ. ಇದರಿಂದ ಸಾಮಾನ್ಯ ಬಡ, ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರನ್ನು ಉನ್ನತ ಶಿಕ್ಷಣದಿಂದ ಮತ್ತಷ್ಟು ದೂರತಳ್ಳುವುದು ಬಿಟ್ಟರೆ ಬೇರೇನೂ ಸಾಧನೆಯಾಗುವುದಿಲ್ಲ.

ರಾಜ್ಯದಲ್ಲಿ ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳು ಹಣಕಾಸಿನ ಕೊರತೆಯಿಂದ ಅಗತ್ಯ ಮೂಲಭೂತ ಸೌಲಭ್ಯಗಳಿಲ್ಲದೆ ಬಹುತೇಕ ವಿಭಾಗಗಳಿಗೆ ಉಪನ್ಯಾಸಕರಿಲ್ಲದೆ ನರಳುತ್ತಿರುವ ಸಂದರ್ಭದಲ್ಲಿ ತೋರಿಕೆಗೆ ವಿಶ್ವವಿದ್ಯಾಲಯಗಳ ಸಂಖ್ಯೆಗಳನ್ನು ಹೆಚ್ಚಿಸುವ, ಜಿಲ್ಲೆಗೊಂದರಂತೆ ವಿ.ವಿ.ಗಳನ್ನು ತೆರೆಯುವ ಹಿಂದಿರುವ ಯಾವ ಉದ್ದೇಶವು ಸಾರ್ಥಕವಾಗುವುದಿಲ್ಲ. ಬದಲಾಗಿ ಇರುವ ಸರ್ಕಾರಿ ವಿ.ವಿ.ಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನವನ್ನು ಕೊಡುವ ಮೂಲಕ ಅವುಗಳನ್ನು ಅಭಿವೃದ್ಧಿ ಪಡಿಸಿ ಅಲ್ಲಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡದಿದ್ದರೆ ಉನ್ನತ ಶಿಕ್ಷಣದ ಮೇಲೆ ಇರುವ ಭರವಸೆ ಕಡಿಮೆಯಾಗಿ ಮುಂದೊಂದು ದಿನ ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಎಲ್ಲ ಸರ್ಕಾರಿ ವಿ.ವಿ.ಗಳನ್ನು ಮುಚ್ಚುವ ಅಪಾಯವಿದೆ.

ನಮ್ಮ ಬೌದ್ಧಿಕ ಸ್ವಾವಲಂಬನೆಗೆ ಸವಾಲಾಗಿರುವ ನಮ್ಮ ನೆಲ, ಜಲ, ಭಾಷೆ, ಸಂಸ್ಕೃತಿ, ಜನರ ಜೀವನದ ಬಗ್ಗೆ ಅಧ್ಯಯನ ನಡೆಸದ ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ಅಪಾಯಗಳ ಬಗ್ಗೆ ಎಲ್ಲ ವಿ.ವಿ.ಗಳಲ್ಲಿ, ಶಿಕ್ಷಣ ಪ್ರೇಮಿಗಳ ನಡುವೆ ಚರ್ಚೆ ನಡೆಸುವ ಮೂಲಕ ಇವುಗಳನ್ನು ವಿರೋಧಿಸಲು ಬೃಹತ್ ಜನಾಂದೋಲನವನ್ನು ಕಟ್ಟಿ ಬೆಳೆಸುವ ತುರ್ತು ಅವಶ್ಯಕತೆ ಇದೆ. □

ಕನ್ನಡ ಶಾಸ್ತ್ರ ಭಾಷೆಯೋ? ಶಾಸ್ತ್ರೀಯ ಭಾಷೆಯೋ?

ಮೇಟಿ ಮಲ್ಲಿಕಾರ್ಜುನ

ಕನ್ನಡಕ್ಕೆ 'ಶಾಸ್ತ್ರೀಯ ಭಾಷೆ'ಯ ಸ್ಥಾನಮಾನ ಸಿಕ್ಕಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಇದರಿಂದ ಕನ್ನಡದ ಘನತೆಯನ್ನು ಹೇಗೆ ಹೆಚ್ಚಿಸಬೇಕು ಎಂಬುದು ಕೂಡ ಅಷ್ಟೇ ಗಮನಾರ್ಹವಾದ ಸಂಗತಿ. ಹಾಗಾದರೆ ಇಂತಹ ಸ್ಥಾನಮಾನದಿಂದ ಕನ್ನಡಕ್ಕೆ ಏನು ಲಾಭ ಎನ್ನುವ ಭಾವನೆ ಯಾರಿಗಾದರೂ ಬರದೇ ಇರಲಾರದು. ಕನ್ನಡದ ವಿದ್ವತ್ ಪ್ರಪಂಚವು ತನ್ನ ಸಮುದಾಯದ ಏಳ್ಗೆಯನ್ನು ಗಮನದಲ್ಲಿಟ್ಟುಕೊಂಡು, ಶಾಸ್ತ್ರೀಯ ಭಾಷೆಯ ಅಡಿಯಲ್ಲಿ ಈಗ ಹಲವಾರು ಯೋಜನೆಗಳನ್ನು ರೂಪಿಸಬೇಕಿದೆ. ಈ ಎಲ್ಲಾ ಯೋಜನೆಗಳು ಎಷ್ಟರಮಟ್ಟಿಗೆ ಕನ್ನಡಕ್ಕೆ ಕನ್ನಡದ್ದೇ ಜ್ಞಾನ-ಸಂಪನ್ಮೂಲವನ್ನು ಹಾಗೂ ಆಲೋಚನಕ್ರಮವನ್ನು ಒದಗಿಸಿಕೊಡಬಲ್ಲವು ಎಂಬುದು ಬಹುಮುಖ್ಯವಾಗಿ ಚರ್ಚಿಸಬೇಕಾದ ವಿಷಯ. ಈ ಜವಾಬ್ದರಿಯು ಕನ್ನಡದ ವಿದ್ವತ್ ವಲಯಕ್ಕೆ ಸೇರಿರುವುದು ವಿಶೇಷ. ಇಂತಹ ಜವಾಬ್ದರಿಯನ್ನು ನಿಭಾಯಿಸುಲು ಬೇಕಾದ ತಯ್ಯಾರಿಯೂ ಆಗಬೇಕಿದೆ. ಎರಡು ಸಹಸ್ರಮಾನಕ್ಕಿಂತ ಹೆಚ್ಚು ಕಾಲ ಸಾಂಸ್ಕೃತಿಕ-ಚಾರಿತ್ರಿಕ ಪರಂಪರೆಯನ್ನು ಹೊಂದಿರುವ ಕನ್ನಡದ ಆಧ್ಯತೆಗಳೇನು ಎಂಬುದನ್ನು ಮತ್ತೊಮ್ಮೆ ಕನ್ನಡಿಗರೆಲ್ಲರೂ ಮನವರಿಕೆ ಮಾಡಿಕೊಳ್ಳಬೇಕಿದೆ.

ಕನ್ನಡವು ಒಂದು ಶಾಸ್ತ್ರಭಾಷೆಯಾಗಬೇಕು ಹಾಗೂ ಅಂತಹ ಶಾಸ್ತ್ರಗಳ ಆಲೋಚನಕ್ರಮವನ್ನೂ ರೂಪಿಸುವ ಭಾಷೆಯೂ ಆಗಬೇಕು. ಇದಕ್ಕೆ ಈಗ ಸೂಕ್ತ ಅವಕಾಶ ಸಿಕ್ಕಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನದ ಅಡಿಯಲ್ಲಿ ಕೇಂದ್ರ ಸರಕಾರವು ಕೊಡವ ಆರ್ಥಿಕ ಅನುಧಾನವನ್ನು, ಕನ್ನಡವನ್ನು ಒಂದು ಶಾಸ್ತ್ರಭಾಷೆಯನ್ನಾಗಿ ರೂಪಿಸುವುದಕ್ಕೆ ವಿನಿಯೋಗಿಸಬೇಕಾಗಿದೆ. ಶಾಸ್ತ್ರೀಯ ಭಾಷಾ ಯೋಜನೆಗಳನ್ನು ಕೇವಲ ಪ್ರಾಚೀನ ಕನ್ನಡ ವ್ಯಾಕರಣ, ಛಂದಸ್ಸು, ಸಾಹಿತ್ಯ ಪ್ರಕಾರಗಳನ್ನು ಕುರಿತು ಯೋಚಿಸುವ ಯೋಜನೆಗಳು ಮಾತ್ರವಾಗದೆ, ಪ್ರಾಚೀನ ಕನ್ನಡದಲ್ಲಿ ಅಡಕಗೊಂಡಿರುವ ಜ್ಞಾನಸಂಪತ್ತು ಹಾಗೂ ತತ್ವಶಾಸ್ತ್ರೀಯ ನೆಲೆಗಳು, ಇಂದಿನ ಕನ್ನಡಕ್ಕೆ ಜ್ಞಾನ-ಸಂಪನ್ಮೂಲವಾಗಿ ದಕ್ಕಬೇಕು. ಆಧುನಿಕ ಕನ್ನಡದ ಬೆಳವಣಿಗೆಗೆ ಇದು 'ಜ್ಞಾನ-ಖನಿಜ'ವಾಗಿ ರೂಪಗೊಳ್ಳಬೇಕು. ಕನ್ನಡದಲ್ಲಿ ರೂಪಿಸುವ ಯಾವುದೇ ಬಗೆಯ ಶಾಸ್ತ್ರ ಅಥವಾ ತತ್ವಶಾಸ್ತ್ರಕ್ಕೆ ಇದು ಜ್ಞಾನದ ಮೂಲವಾಗಬೇಕು. ಶಾಸ್ತ್ರೀಯ ಭಾಷೆ ಹಾಗೂ ಆಧುನಿಕ ಕನ್ನಡಭಾಷೆ ಇವು ಬೇರೆ ಬೇರೆ ಎಂದು ಪ್ರತ್ಯೇಕಿಸಿ ನೋಡುವುದೇ ಅಪಾಯಕಾರಿ ಧೋರಣೆ. ಇಂತಹ ನಿಲುವು ಗಳಿಂದಲೇ, ಶಾಸ್ತ್ರೀಯ ಭಾಷೆಯಿಂದ ಕನ್ನಡಿ ಗರಿಗೆ ಯಾವುದೇ ಲಾಭವಿಲ್ಲ ಎನ್ನುವ ವಾದವೊಂದು ಮುಂಚೂಣಿಗೆ ಬಂದಿತ್ತು. ಇಂತಹ ಸ್ಥಾನಮಾನಗಳಿಂದ ಕೆಲವೇ ಕೆಲವು ವಿದ್ವಾಂಸರಿಗೆ ಲಾಭ ಆಗಬಹುದೇ ಹೊರತು ಎಲ್ಲಾ ಕನ್ನಡಿಗರಿಗಲ್ಲ ಎನ್ನುವ ಭಾವನೆಯೂ ಹುಟ್ಟುತ್ತದೆ. ಆದ್ದರಿಂದ ಕನ್ನಡ ಶಾಸ್ತ್ರೀಯ ಭಾಷೆಯ ಅಡಿಯಲ್ಲಿ ಸಿದ್ಧಪಡಿಸುವ ಯೋಜನೆಗಳು ಇವತ್ತೀನ ಕನ್ನಡದ ಬೆಳವಣಿಗೆಯನ್ನು ಗುರಿಯಾಗಿಸಿಕೊಂಡು ರೂಪಗೊಳ್ಳಬೇಕಾದ ಜರೂರಿದೆ.

ಇವತ್ತೀನ ಕನ್ನಡವನ್ನು ಸಮವೃದ್ಧಿಗೊಳಿಸುವ ವಿವೇಕಕ್ಕಿಂತ ಹೆಚ್ಚಾಗಿ ಶಾಸ್ತ್ರೀಯ ಭಾಷೆಯ ಕಾಲಮಾನವನ್ನು ಎಲ್ಲಿಂದ ಎಲ್ಲಿಯವರಗೆ ನಿರ್ಧರಿಸಬೇಕು ಎಂಬ ನೇತಾತ್ಮಕ ಹಠದ ಪ್ರಮಾಣವೇ ಹೆಚ್ಚಾಗಿರುವಂತೆ ತೋರುತ್ತದೆ. ಇಂತಹ ಹಠಮಾರಿತನವು ಬರೀ ಭಾಷೆಯ ಕುರಿತ ಪ್ರಶ್ನೆ ಯಾಗಿರದೇ, ಸಾಮಾಜಿಕ ಮನೋಧರ್ಮಕ್ಕೂ ಸಂಬಂಧಪಟ್ಟ ಪ್ರಶ್ನೆ ಆಗಿದೆ. ಇವತ್ತೀನ ಕನ್ನಡ ಸಮುದಾಯವು ಎದುರಿಸುತ್ತಿರುವ ಸವಾಲುಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವು ಹೇಗೆ ಮುಖಾಮುಖಿಯಾಗಬೇಕು ಅನ್ನುವ ನಿಲುವುಗಳೇ ಇವರ ಚಿಂತನೆಗಳಲ್ಲಿ ಕಳೆದು ಹೋಗಿರುವುದು ನಿಚ್ಚಳವಾಗಿದೆ. ಪ್ರತಿಯೊಂದು ಸಾಂಸ್ಕೃತಿಕ ಕ್ರಿಯೆಯು, ಇಡೀ ಸಮು ದಾಯವನ್ನು ಆವರಿಸಿಕೊಳ್ಳಬೇಕೆಂಬ ವಿವೇಕ ಮರುಹುಟ್ಟು ಪಡೆಯ ಬೇಕೆಂದು ಕಾಣುತ್ತದೆ. ಅದಕ್ಕಾಗಿ ಸಾಂಸ್ಕೃತಿಕ

ಕನ್ನಡವು ಒಂದು ಶಾಸ್ತ್ರ ಭಾಷೆಯಾಗಬೇಕು ಹಾಗೂ ಅಂತಹ ಶಾಸ್ತ್ರಗಳ ಆಲೋಚನ ಕ್ರಮವನ್ನೂ ರೂಪಿಸುವ ಭಾಷೆಯೂ ಆಗಬೇಕು. ಇದಕ್ಕೆ ಈಗ ಸೂಕ್ತ ಅವಕಾಶ ಸಿಕ್ಕಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನದ ಅಡಿಯಲ್ಲಿ ಕೇಂದ್ರ ಸರಕಾರವು ಕೊಡವ ಆರ್ಥಿಕ ಅನುಧಾನವನ್ನು, ಕನ್ನಡವನ್ನು ಒಂದು ಶಾಸ್ತ್ರಭಾಷೆಯನ್ನಾಗಿ ರೂಪಿಸುವುದಕ್ಕೆ ವಿನಿಯೋಗಿಸಬೇಕಾಗಿದೆ. ಶಾಸ್ತ್ರೀಯ ಭಾಷಾ ಯೋಜನೆಗಳನ್ನು ಕೇವಲ ಪ್ರಾಚೀನ ಕನ್ನಡ ವ್ಯಾಕರಣ, ಛಂದಸ್ಸು, ಸಾಹಿತ್ಯ ಪ್ರಕಾರಗಳನ್ನು ಕುರಿತು ಯೋಚಿಸುವ ಯೋಜನೆಗಳು ಮಾತ್ರವಾಗದೆ, ಪ್ರಾಚೀನ ಕನ್ನಡದಲ್ಲಿ ಅಡಕಗೊಂಡಿರುವ ಜ್ಞಾನ ಸಂಪತ್ತು ಹಾಗೂ ತತ್ವ ಶಾಸ್ತ್ರೀಯ ನೆಲೆಗಳು, ಇಂದಿನ ಕನ್ನಡಕ್ಕೆ ಜ್ಞಾನ-ಸಂಪನ್ಮೂಲವಾಗಿ ದಕ್ಕಬೇಕು. ಆಧುನಿಕ ಕನ್ನಡದ ಬೆಳವಣಿಗೆಗೆ ಇದು 'ಜ್ಞಾನ-ಖನಿಜ'ವಾಗಿ ರೂಪಗೊಳ್ಳಬೇಕು.



ರಾಜಕಾರಣವು ಸಮು ದಾಯದ ಆಶೋತ್ತರಗಳನ್ನು ಈಡೇರಿಸುವ ಕ್ರಮವಾಗಿಯೇ ಜನ್ಮ ತಾಳಬೇಕು ಎನ್ನುವುದು ಹಲವಾರು ಚಿಂತಕರ ಆಶಯವಾಗಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಬೇಡ ಎನ್ನುವ ಇವರ ಉದ್ದೇಶದ ಹಿಂದಿನ ಗುರಿಯೂ ಇದೇ ಆಗಿತ್ತು ಎಂಬುದು ವಿಶೇಷ.

ಕನ್ನಡಕ್ಕೆ ಎರಡು ಸಾವಿರಕ್ಕಿಂತ ಹೆಚ್ಚು ವರ್ಷಗಳಷ್ಟು ಇತಿಹಾಸವನ್ನು ಕಲ್ಪಿಸಲಾಗಿದೆ. ಇಷ್ಟೊಂದು ದೊಡ್ಡ ಪರಂಪರೆ ಇರುವ ಭಾಷೆಗೆ, ಯಾವುದೆ ಅನುಭವ/ಗ್ರಹಿಕೆಯನ್ನು ಅಬಿವ್ಯಕ್ತಿಸಲು ಸಾಧ್ಯವಿಲ್ಲ ಎಂಬ ತೀರ್ಮಾನವನ್ನೂ ಮಾಡಲಾಗಿದೆ. ಕನ್ನಡಕ್ಕೆ ಇಂತಹ ಕೊರತೆಗಳಿವೆ ಎಂದು ನಿರ್ಧರಿಸಿದವರು, ಅವುಗಳನ್ನು ನೀಗಿಸಿಕೊಳ್ಳಲು ಸಂಸ್ಕೃತವನ್ನು ನೆಚ್ಚಿಕೊಳ್ಳುವಂತೆ ಮಾಡಿದ್ದು ದಿಟ. ಸಾಹಿತ್ಯಿಕ-ಸಾಂಸ್ಕೃತಿಕವಾಗಿ ದೊಡ್ಡ ಪರಂಪರೆಯನ್ನೇ ಹೊಂದಿರುವ ಕನ್ನಡಕ್ಕೆ ಇಂತಹದೊಂದು ಬಿಕ್ಕಟ್ಟು ಎದುರಾದದ್ದಾದರೂ ಹೇಗೆ? ಎಂಬ ಪ್ರಶ್ನೆಯು ಕನ್ನಡಪರ ಕಾಳಜಿ ಇರುವ ಯಾರನ್ನಾದರೂ ಕಾಡದೇ ಇರಲಾರದು. ಕನ್ನಡವನ್ನು ಕಟ್ಟಿ ಬೆಳಸಿದ ಅಥವಾ ಅಂತಹ ಜವಾಬ್ದರಿಯ ಮುಂದಾಳು ತನವನ್ನು ವಹಿಸಿದವರು, ಕನ್ನಡಕ್ಕೆ ಇಂತಹದೊಂದು ಬಿಕ್ಕಟ್ಟನ್ನು ಸೃಷ್ಟಿಸಿದರೇ? ಅಥವಾ ಕನ್ನಡಿ ಗರೆಲ್ಲರೂ ಸೇರಿ ಈ ಬಿಕ್ಕ ಟ್ಟನ್ನು ಸೃಷ್ಟಿಸಿಕೊಂಡರೇ? ಈ ಸಂಶಯವನ್ನು ಬಗೆಹರಿಸಿಕೊಳ್ಳಲು ಚಾರಿತ್ರಿಕ ದಾಖಲೆಗಳನ್ನು ಬಿಡಿಸಿ ನೋಡಬೇಕಾದ ಅಗತ್ಯವಿದೆ. ಈ ಬಿಕ್ಕಟ್ಟಿಗೆ ಕಾರಣಗಳು ಸಿಗದೇ ಇರಲಾರವು ಎಂಬುದನ್ನು ಖಚಿತವಾಗಿ ಹೇಳಬಹುದು.

ಕನ್ನಡವನ್ನು ಕಟ್ಟಿ ಬೆಳಸುವ ಪ್ರಕ್ರಿಯೆಯಲ್ಲಿ, ಸಂಸ್ಕೃತವನ್ನೇ ಇಡೀಯಾಗಿ ನೆಚ್ಚಿಕೊಂಡಿದ್ದು ಇಂತಹ ಬಿಕ್ಕಟ್ಟಿಗೆ ಕಾರಣ ಇರಬಹುದು. ಸಾಂಸ್ಕೃತಿಕ-ಭಾಷಿಕ ಕೊಡು-ಪಡೆಯುವ ಬಗೆಯನ್ನು ನಾನು ಪ್ರಶ್ನಿಸುತ್ತಿಲ್ಲ. ಅಂತಹ ಕ್ರಮಗಳು ಅನುಸರಿಸಿದ ಮಾದರಿಗಳನ್ನು ಮರು ಪ್ರಶ್ನೆ ಮಾಡಬೇಕಿದೆ. ಸಂಸ್ಕೃತ ಕಾವ್ಯ ಮೀಮಾಂಸೆ ಹಾಗೂ ವ್ಯಾಕರಣ ಮಾದರಿಯ ಯಥಾಸ್ಥಿತಿಯನ್ನೇ ಕನ್ನಡಕ್ಕೆ ಒಗ್ಗಿಸಿಕೊಂಡ ಪರಿಣಾಮದಿಂದ, ಬೇರೆ ಯಾವ ಬಗೆಯ ಶಾಸ್ತ್ರ/ ತತ್ವಶಾಸ್ತ್ರಗಳನ್ನು ರೂಪಿಸುವ ಹೊಣೆಗಾರಿಕೆಯನ್ನು ಕನ್ನಡಕ್ಕೆ ಒದಗಿಸಲೇ ಇಲ್ಲ. ಸಾರಸಗಟಾಗಿ, ಎಲ್ಲರನ್ನೂ ಇಂತಹ ಒಂದು ಆರೋಪಕ್ಕೆ ಗುರಿಯಾಗಿಸುವುದು ಸಾಧುವಲ್ಲ. ವೈಯಕ್ತಿಕ ನೆಲೆಯಲ್ಲಿ ಸಣ್ಣ ಪುಟ್ಟ ಪ್ರಯತ್ನಗಳು ನಡದಿವೆ.

ಇದಕ್ಕೆ ಪೂರಕವಾಗಿ ಪ್ರೊ. ಡಿ.ಎನ್.ಎಸ್. ಭಟ್ ಹಾಗೂ ಪ್ರೊ. ಕೆ.ವಿ. ನಾರಾಯಣ ಅವರ ಭಾಷಿಕ ಚಿಂತನೆಗಳನ್ನು ಗಮನಿಸಬಹುದು. ಇವರು ಕನ್ನಡದ ಮೇಲಿನ ಸಂಸ್ಕೃತ ವ್ಯಾಕರಣದ ಹೇರಿಕೆಯನ್ನು ನಿರ್ನಾಮ ಮಾಡುವ ಬಗೆಗಳನ್ನು ಹುಟ್ಟುಹಾಕಿದ್ದಾರೆ. ಈ ಮಾದರಿಯ ಚಿಂತನೆಗಳು ಕನ್ನಡಕ್ಕೆ ಕನ್ನಡದ್ದೇ ಆಲೋಚನಕ್ರಮವನ್ನು ರೂಪಿಸುವುದಕ್ಕೆ ಒತ್ತಾಸೆಯಾಗಿವೆ. ಪ್ರೊ ಡಿ. ಎನ್. ಶಂಕರಭಟ್ ಅವರ ಮಾತುಗಳಿಂದ ಇದನ್ನು ಇನ್ನೂ ಸ್ಪಷ್ಟಪಡಿಸಬಹುದು. "ಕನ್ನಡಕ್ಕೂ ಕೂಡ ಯಾವ ರೀತಿಯ ಆಶಯವನ್ನು ಬೇಕಿದ್ದರೂ ಸ್ಪಷ್ಟವಾಗಿ ತಿಳಿಸಬಲ್ಲ ಪದಸಂಪತ್ತು ಮತ್ತು ಪದರಚನೆಯ ವಿಧಾನ ಕನ್ನಡದಲ್ಲಿದೆ. ಮೇಲ್ನೋಟಕ್ಕೆ ಸಂಸ್ಕೃತ ಈ ವಿಷಯದಲ್ಲಿ ಹೆಚ್ಚು ಶ್ರೀಮಂತವಾದ ಭಾಷೆಯೆಂಬುದಾಗಿ ಅನಿಸಬಹುದು. ಈ ಶ್ರೀಮಂತಿಕೆ ಹೆಚ್ಚು ಗೊಂದಲ ಮತ್ತು ಕ್ಲಿಷ್ಟತೆಯನ್ನು ತಂದು ಹಾಕುತ್ತದೆ ಎಂದು ಹೇಳುತ್ತಾರೆ. ಈ ಮಾತುಗಳು ಆಧುನಿಕ ಕನ್ನಡವನ್ನು ಒಂದು ಶಾಸ್ತ್ರ ಭಾಷೆಯಾಗಿ ರೂಪಿಸುವಲ್ಲಿ ಮುಖ್ಯವಾಗುತ್ತವೆ.

ಆಧುನಿಕ ಚಿಂತನೆಗಳು ನಮ್ಮ ಆಲೋಚನಕ್ರಮವನ್ನೇ ಬದಲಿಸಿವೆ. ಇವು ಚಾರಿತ್ರಿಕ ದಾಖಲೆ ಹಾಗೂ ಪಠ್ಯಗಳನ್ನು ಬಿಡಿಸಿ ನೋಡುವ ಕಣ್ನೋಟಗಳ ಮೇಲೆ ಪ್ರಭಾವ ಬೀರಿವೆ.

ಕನ್ನಡ ಭಾಷೆಯು ವಿಜ್ಞಾನ-ತಂತ್ರಜ್ಞಾನ, ಔಷಧಿ, ಮಾನವಿಕಶಾಸ್ತ್ರ ಮುಂತಾದ ಗಂಭೀರ ಅಧ್ಯಯನಶಿಸ್ತುಗಳನ್ನು ಯಥೇಚವಾಗಿ ಕಲಿಯಲು-ಕಲಿಸಲು ಸಾಧ್ಯವಾಗಿಸಬೇಕಿದೆ. ಸಾಮನ್ಯ ಮನುಷ್ಯನಿಗೆ ಪ್ರತಿಯೊಂದು ತಿಳುವಳಿಕೆಯು ಅವನದೇ ಭಾಷೆ-ಪರಿಭಾಷೆಯಲ್ಲಿ ದಕ್ಕುವಂತೆ ಮಾಡಬೇಕಾದ ಅಗತ್ಯವಿದೆ. ಇಂತಹ ಯೋಜನೆಗಳು ಕಾರ್ಯಗತಗೊಳ್ಳಲು ಕನ್ನಡವನ್ನು ಹೇಗೆ ಸಜ್ಜುಗೊಳಿಸಬೇಕು ಎಂಬುದನ್ನು ಈಗಲಾದರೂ ಕನ್ನಡವನ್ನು ನಾವೇ ಮುನ್ನೆಡಸುತ್ತೇವೆ ಎಂದು ಬೀಗುವ ವಿದ್ವಾಂಸರು ಅರಿತುಕೊಳ್ಳಬೇಕು.

ಅಲಕ್ಷಿತ ಹಾಗೂ ದೇಶೀ ಭಾಷೆ ಮತ್ತು ಸಂಸ್ಕೃತಿಗಳ ಉದ್ಧಾರವನ್ನೇ ಗುರಿಯಾಗಿಸಿಕೊಂಡು ಅವತರಿಸಿದ ಈ ಚಿಂತನೆಗಳನ್ನು ಗುಮಾನಿಯಿಂದ ನೋಡುವ ಅಗತ್ಯವಿಲ್ಲ. ಹಾಗಾಗಿ, ಕನ್ನಡದ್ದೇ ಆಲೋಚನಕ್ರಮವನ್ನು ರೂಪಿಸುವ ಆಕರ ಗ್ರಂಥಗಳು ಅಥವಾ ಸಾಮಗ್ರಿಗಳು ಯಾವವು ಎಂಬುದನ್ನು ತುಂಬಾ ಜಾಗೂರುಕತೆಯಿಂದ ನಿರ್ಧರಿಸಬೇಕು. ಉದಾ: ಶೆಲ್ಡನ್ ಪೊಲಾಕ್‌ಅವರ 'ವಿಶ್ವಾತ್ಮಕ ದೇಶಭಾಷೆ' ಎಂಬಂತಹ ಆಕರ ಗ್ರಂಥಗಳು, ಕನ್ನಡದ ಅನನ್ಯತೆಯನ್ನು ಕುರಿತು ವಿವರಿಸುವುದಕ್ಕಿಂತ ಹೆಚ್ಚಾಗಿ, ಸಂಸ್ಕೃತ ಭಾಷೆಯ ವ್ಯಾಪಕತೆಯನ್ನು ವಿವರಿಸಿ ಹೇಳುತ್ತದೆ. ಹಾಗೂ ಸಂಸ್ಕತವು ಹೇಗೆ ಒಂದು ಶಾಸ್ತ್ರ ಭಾಷೆಯಾಗಿ, ಕನ್ನಡ ಅಥವಾ ಕನ್ನಡದಂತಹ ಇತರೆ ದೇಶೀ ಭಾಷೆಗಳನ್ನು ಸಾಕಿ ಬೆಳಸಿದೆ ಎಂಬ ಚಿಂತನೆಗಳನ್ನು ಹುಟ್ಟುಹಾಕುತ್ತದೆ.

ಇಂತಹ ಚಿಂತನೆಗಳ ಫಲಿತವೇನೆಂದರೆ, ಕನ್ನಡದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪಠ್ಯಗಳು ಸಂಸ್ಕೃತದ ನಕಲುಗಳು ಮಾತ್ರವೆಂಬ ಭ್ರಮೆಯನ್ನು ಹುಟ್ಟಿಸುತ್ತವೆ. ಇದು ಕೇವಲ ಆರೋಪವಲ್ಲ. ಏಕೆಂದರೆ, ಕವಿರಾಜಮಾರ್ಗ ಕೃತಿಯು ದಂಡಿ ಕಾವ್ಯದರ್ಶಿಯ ನಕಲುಪ್ರತಿಯೆಂಬ ತಿಳುವಳಿಕೆಯು ಜಾರಿಯಲ್ಲಿದೆ. ಆದ್ದರಿಂದ, ಪೊಲಾಕ್ ಅವರು ಒದಗಿಸುವ ಆಕರ ಸಾಮಗ್ರಿಗಳು ಕನ್ನಡದ ಸಾಂಸ್ಕೃತಿಕ ಸೋಪಜ್ಞತೆ, ಚೈತನ್ಯ ಹಾಗೂ ಅನನ್ಯತೆಯನ್ನು ನಾಶಗೊಳಿಸುತ್ತವೆ. ಪಂಪನಂತಹ ಮಹಾಕವಿಗಳು ಸಂಸ್ಕೃತದ 'ಚಂಪೂ' ಶೈಲಿಯಲ್ಲಿ ತಮ್ಮ ಕಾವ್ಯಗಳನ್ನು ರಚಿಸಿದ್ದರೂ, ಕನ್ನಡದ ಚಹರೆಗಳನ್ನು ಬಿಂಬಿಸುವ ವಿಶಿಷ್ಟತೆಯನ್ನು ಈ ಕಾವ್ಯಗಳು ಪಡೆದುಕೊಂಡಿವೆ. ಅದಕ್ಕಾಗಿಯೇ ಪಂಪನು "ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು" ಎಂಬ ಧ್ಯೇಯವಾಕ್ಯವನ್ನು ತನ್ನ ಕಾವ್ಯದ ಉದ್ದೇಶವನ್ನಾಗಿಸಿಕೊಂಡಿದ್ದಾನೆ. ಇಂತಹ ಸೃಜನಶೀಲ ಪಠ್ಯಗಳನ್ನೂ ಸಂಸ್ಕೃತದ ತದ್ರೂಪಿ ಪಠ್ಯಗಳೆಂದು ವಾದಿಸುವ ಷಡ್ಯಂತ್ರವೂ ನಡೆಯುತ್ತಲೇ ಇರುವುದು ವಿಪರ್ಯಾಸವೇ ಸರಿ.

ಕನ್ನಡ ಭಾಷೆಯು ವಿಜ್ಞಾನ-ತಂತ್ರಜ್ಞಾನ, ಔಷಧಿ, ಮಾನವಿಕಶಾಸ್ತ್ರ ಮುಂತಾದ ಗಂಭೀರ ಅಧ್ಯಯನಶಿಸ್ತುಗಳನ್ನು ಯಥೇಚವಾಗಿ ಕಲಿಯಲು-ಕಲಿಸಲು ಸಾಧ್ಯವಾಗಿಸಬೇಕಿದೆ. ಸಾಮನ್ಯ ಮನುಷ್ಯನಿಗೆ ಪ್ರತಿಯೊಂದು ತಿಳುವಳಿಕೆಯು ಅವನದೇ ಭಾಷೆ-ಪರಿಭಾಷೆಯಲ್ಲಿ ದಕ್ಕುವಂತೆ ಮಾಡಬೇಕಾದ ಅಗತ್ಯವಿದೆ. ಇಂತಹ ಯೋಜನೆಗಳು ಕಾರ್ಯಗತಗೊಳ್ಳಲು ಕನ್ನಡವನ್ನು ಹೇಗೆ ಸಜ್ಜುಗೊಳಿಸಬೇಕು ಎಂಬುದನ್ನು ಈಗಲಾದರೂ ಕನ್ನಡವನ್ನು ನಾವೇ ಮುನ್ನೆಡಸುತ್ತೇವೆ ಎಂದು ಬೀಗುವ ವಿದ್ವಾಂಸರು ಅರಿತುಕೊಳ್ಳಬೇಕು. ಇಂತಹ ಯೋಜನೆಗಳನ್ನು ಸಾಕಾರಗೊಳಿಸಲು, ವಿವಿಧ ಬಗೆಯ ಪಾರಿಭಾಷಿಕ ಪದಕೋಶ ಹಾಗೂ ನಿಘಂಟುಗಳನ್ನು ರೂಪಿಸುವ ಅಗತ್ಯವಿದೆ. ಕನ್ನಡವು ತಂತ್ರಜ್ಞಾನದ ಭಾಷೆಯಾಗಬೇಕು. ತಂತ್ರಜ್ಞಾನದ ಎಲ್ಲ ಸಾಧ್ಯತೆಗಳನ್ನು ರೂಢಿಸಿಕೊಳ್ಳುವಂತೆ ಕನ್ನಡವನ್ನು ಪಳಗಿಸಬೇಕು. ಕನ್ನಡದ ತಿಳುವಳಿಕೆಯು ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಬೇಕು. ಕನ್ನಡಕ್ಕೆ ಹಲವು ಬಗೆಯ ತಿಳುವಳಿಕೆಯನ್ನೂ ಅನುವಾದಗೊಳಿಸಬೇಕಾದ ಸಾಧ್ಯತೆಯನ್ನು ಕಲ್ಪಿಸಬೇಕು. ಇದನ್ನು ಕೇವಲ ಕನ್ನಡ ಅಧ್ಯಯನ ಪೀಠಗಳು ಮಾಡಲು ಸಾಧ್ಯವಿಲ್ಲ. ಇಂಗ್ಲಿಶ್ ಹಾಗೂ ಬೇರೆ ಬೇರೆ ಭಾಷೆಗಳು ಮತ್ತು ಮಾನವಿಕ ವಿಜ್ಞಾನಗಳ ಸಹಯೋಗದಿಂದ ಇದನ್ನು ಸಾಧಿಸಬಹುದು.

ಇವತ್ತು ಭಾಷೆಗಳ ಉದ್ಧಾರ ಕೇವಲ ಸಾಹಿತ್ಯದಿಂದ ಮಾತ್ರ ಸಾಧ್ಯವಿಲ್ಲ. ಸಾಹಿತ್ಯಕ್ಕೆ ಮಾತ್ರ ಸೀಮಿತಗೊಳಿಸಿ ಯಾವುದೇ ಭಾಷೆಯ ಏಳ್ಗೆಯನ್ನು ಕುರಿತು ಚಿಂತಿಸುವ ಬಗೆಯೇ ಸಂಕುಚಿತವಾದದ್ದು. ಪ್ರತಿಯೊಂದು ಭಾಷೆಯು ಕೂಡ ಶಾಸ್ತ್ರ ಭಾಷೆಯಾಗಿ ರೂಪಗೊಳ್ಳಬೇಕಿದೆ. ಯಾವುದೇ ಅನುಭವ, ತಿಳುವಳಿಕೆಯನ್ನೂ ಕಟ್ಟಿಕೊಡುವ ಹಾಗೂ ಅಂತಹ ಅರಿವಿನ ಆಲೋಚನಕ್ರಮಗಳನ್ನು ರೂಪಿಸುವ ಭಾಷೆ ಕನ್ನಡವಾಗಬೇಕು. ಎಂತಹದೇ ಗಹನವಾದ ಶಾಸ್ತ್ರವನ್ನಾದರೂ ವಿವರಿಸುವ ಬಗೆಯಲ್ಲಿ ಕನ್ನಡವನ್ನು ಪಳಗಿಸಬೇಕು. ಇಂತಹ ಶಕ್ತಿಯನ್ನು ಕನ್ನಡಕ್ಕೆ ಸಿದ್ಧಿಸಬೇಕೆಂದರೆ, ಇದಕ್ಕೆ ಪೂರಕವಾದ ಹಲವಾರು ಭಾಷಾ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಭಾರತದ ಆಧುನಿಕ ಭಾಷೆಗಳನ್ನು ತಂತ್ರಜ್ಞಾನದಲ್ಲಿ ಅಳವಡಿಸುವ ಇಂತಹದೇ ಒಂದು ಯೋಜನೆಯನ್ನು ಕೇಂದ್ರ ಸರಕಾರದ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ರೂಪಿಸಿತ್ತು.

ಕಳೆದ ಶತಮಾನದ ತೊಂಭತ್ತರ ದಶಕದಲ್ಲಿ ಭಾರತ ಸರಕಾರದ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯು "ನ್ಯಾಚುರಲ್ ಲಾಂಗ್ವೇಜ್ ಪ್ರಾಸೆಸ್‌ಸಿಂಗ್" ಎಂಬ ಯೋಜನೆಯ ಅಡಿಯಲ್ಲಿ, ಭಾರತೀಯ ಎಲ್ಲ ಆಧುನಿಕ ಭಾಷೆಗಳನ್ನು ತಂತ್ರಜ್ಞಾನಕ್ಕೆ ಒಗ್ಗಿಸಿ ಹಾಗೂ ಆ ಎಲ್ಲ ಭಾಷೆಗಳನ್ನು ತಂತ್ರಜ್ಞಾನದಲ್ಲಿ ಪಳಗಿಸುವ ಉದ್ದೇಶವನ್ನು ಇರಿಸಿಕೊಂಡಿತ್ತು. ಈ ಉದ್ದೇಶವನ್ನು ಈಡೇರಿಸುವುದಕ್ಕೆ ಭಾರತದ ಎಷ್ಟೋ ವಿಶ್ವವಿದ್ಯಾನಿಲಯಗಳಿಗೆ, ಭಾರತೀಯ ತಂತ್ರಜ್ಞಾನ ಸಂಸ್ಥೆ [ಐ.ಐ.ಟಿ]ಗಳಿಗೆ ಹಾಗೂ ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಇವರುಗಳಿಗೆ ದೊಡ್ಡ ಮೊತ್ತದ ಆರ್ಥಿಕ ಅನುಧಾನವನ್ನು ಕೊಟ್ಟಿತ್ತು. ಎರಡು ದಶಕಗಳೇ ಕಳೆದರೂ, ವಿವಿಶಷವಾಗಿ, ಕನ್ನಡದ ಮಟ್ಟಿಗೆ ಹೇಳುವುದಾದರೆ ಇದರ ಫಲಶೃತಿ ಶೂನ್ಯ. ಆದರೆ ತೆಲುಗು, ಹಿಂದಿ, ತಮಿಳು ಹಾಗೂ ಬಂಗಾಳಿ ಮುಂತಾದ ಭಾಷೆಗಳು ನಿರೀಕ್ಷಿತ ಫಲಿತವನ್ನು ಕಾಣದಿದ್ದರೂ, ಅಲ್ಪ ಸ್ವಲ್ಪು ಏನನ್ನಾದರೂ ಸಾಧಿಸಿವೆ ಎಂದು ಹೇಳಬಹುದು.

ಈ ಯೋಜನೆಯಿಂದ ಏನಾದರೂ ಫಲಿತವನ್ನು ಸಿಕ್ಕಿದ್ದರೆ, ಆಧುನಿಕತೆ ಹಾಗೂ ಜಾಗತೀಕರಣದಂತಹ ಪ್ರಕ್ರಿಯೆಗಳು ಒಡ್ಡುವ ಸವಾಲುಗಳಿಗೆ, ನಮ್ಮ ಭಾಷೆಗಳು ಎದುರಾಗವ ಬಗೆಗಳು ಯಾವವು ಎಂಬುದನ್ನು ಈ ಯೋಜನೆಯಿಂದ ಪಡೆದುಕೊಳ್ಳುವುದಕ್ಕೆ ಸಾಧ್ಯವಿತ್ತು. ಇಂಗ್ಲಿಶ್ ಹಾಗೂ ಸಂಸ್ಕೃತದಂತಹ ಭಾಷೆಗಳ ಪ್ರಾಬಲ್ಯವನ್ನು

(45 ನೇ ಪುಟಕ್ಕೆ)

ನಾಟಕ ಅವಲೋಕನ

ರಂಗದ ಮೇಲೆ 'ಮದುಮಗಳು'

ಡಿ.ಎಸ್.ನಾಗಭೂಷಣ

ಮೈಸೂರಿನ ರಂಗಾಯಣಕ್ಕಾಗಿ ಖ್ಯಾತ ರಂಗ ನಿರ್ದೇಶಕ ಸಿ.ಬಸವಲಿಂಗಯ್ಯನವರು ನಿರ್ಮಿಸಿರುವ 'ಮಲೆಗಳಲ್ಲಿ ಮದುಮಗಳು' ನಾಟಕವನ್ನು ಏಪ್ರಿಲ್ 29 ರಂದು ನಾನು ನೋಡಿದೆ. ಅದು, ಈ ಹಿಂದಿನ ಎರಡು ಪ್ರಯೋಗಗಳು ಮಳೆಯ ಕಾಟದಿಂದಾಗಿ ಸ್ವಲ್ಪ ಅಸ್ತವ್ಯಸ್ತ ಗೊಂಡಿದ್ದವಾದ್ದರಿಂದ, ಮೊದಲ ಅಬಾಧಿತ ಪ್ರಯೋಗ ವೆನಿಸಿತು. ನಾಟಕದ ಮೊದಲು ಸಿಕ್ಕಿದ್ದ ಬಸವಲಿಂಗಯ್ಯ ನವರು, ಒಂಬತ್ತು ತಾಸುಗಳ ನಾಟಕವನ್ನು ಯಾರು ನೋಡುತ್ತಾರೆ, ನೋಡಿದರೆ ಅದರ ನಿರ್ದೇಶಕರೇ ನೋಡ ಬೇಕೆಂದು ಮೈಸೂರಿನ ಕೆಲವು ರಂಗಾಸಕ್ತರು ಕಿಚಾಯಿ ಸದ್ದರ ಬಗ್ಗೆ ಸ್ವಲ್ಪ ಸಿಟ್ಟಿನಿಂದಲೇ ನೆನಪಿಸಿಕೊಂಡು, ನಾಟಕ ನೋಡಲು ಹೊರಗಿನಿಂದಲೇ ಹೆಚ್ಚು ಜನ ಬರುತ್ತಿರುವು ದನ್ನು ಹೆಮ್ಮೆಯಿಂದ ಹೇಳಿಕೊಂಡರು. ನಾನು ನಾಟಕ ನೋಡಿದ ದಿನವೂ ಮೈಸೂರಿನ ಪ್ರೇಕ್ಷಕರಷ್ಟೇ ಹೊರಗಿನ ವರೂ ಇದ್ದುದು ನಿಜ. ಈ ಎಲ್ಲರೂ ಯಾವ ಗೊಣಗಾ ಟವೂ ಇಲ್ಲದೆ, ಸ್ವಲ್ಪ ಕುತೂಹಲದಿಂದಲೇ, ಮೂರು ತಾಸುಗಳಿಗೊಮ್ಮೆ ಬದಲಾಗುತ್ತಿದ್ದ ಒಟ್ಟು ನಾಲ್ಕು ರಂಗಸ್ಥಳ ಗಳಿಗೆ ತಮ್ಮ ಜಾಗಗಳನ್ನು ಬದಲಾಯಿಸಿದರು.

ಹೆಚ್ಚೂ ಕಡಿಮೆ ಪ್ರತಿ ದೃಶ್ಯಕ್ಕೂ ಚಪ್ಪಾಳೆ ತಟ್ಟಿ ದರು.(ಒಂದಿಬ್ಬರು 'ಚಪ್ಪಾಳೆ! ಚಪ್ಪಾಳೆ!!' ಎಂದು ಕೂಗಿ ಚಪ್ಪಾಳೆ ತಟ್ಟಿಸುತ್ತಿದ್ದುದೂ ಉಂಟು!) ಹಾಗೇ, ಹಾಸ್ಯ ಸನ್ನಿ ವೇಶಗಳಲ್ಲಿ, ಚುರುಕಾದ ಸಂಭಾಷಣೆಗಳ ಮಧ್ಯೆ ಪಡ್ಡೆ ಹುಡುಗರ ಗುಂಪೊಂದು 'ಹೋ' ಎಂದು ಏರಿದ ಧ್ವನಿಗ ಳಲ್ಲಿ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದುದೂ ಉಂಟು. ಬೆಳಗಿನ ಝಾವ ನಾಲ್ಕರ ಹೊತ್ತಿಗೆ ಒಂದಿಬ್ಬರು ಪ್ರೇಕ್ಷಕರು ಕೂತಲ್ಲೇ ಉರುಳಿಕೊಂಡು ಅರೆ ನಿದ್ದೆಯಲ್ಲೇ ನಾಟಕ ನೋಡಲು ಯತ್ನಿಸಿ, ಕುತೂಹಲ ತಾಳಲಾರದೆ ಮತ್ತೆ ಎದ್ದು ಕೂತು ನಾಟಕ ನೋಡಿದರು!

ಈ ನಾಟಕವನ್ನು ಯಶಸ್ವಿ ಪ್ರಯೋಗ ವೆಂದೇ ಹೇಳಬೇಕು. ಏಕೆಂದರೆ, ಜನರಿಗೆ ಬಿಡುವೇ ಇಲ್ಲದ ಈ ದಿನಗಳಲ್ಲಿ ಪಟ್ಟ ಣದ, ಅದೂ ಮಧ್ಯಮ ವರ್ಗದ ಜನ ರನ್ನು ಒಂಭತ್ತು ತಾಸು ಕೂರಿಸುವುದು–ಅದೂ 19ನೇ ಶತಮಾನದ ಮಲೆನಾಡಿನ ಕುಗ್ರಾಮವೊಂದರ ಕಥೆ ಹೇಳುತ್ತಾ–ಸಾಹ ಸದ ಕೆಲಸವೇ ಸರಿ. ಈ ದೃಷ್ಟಿಯಿಂದ ಬಸವಲಿಂಗಯ್ಯ ಬಹು ದೊಡ್ಡ ಮತ್ತು ಅಪರೂಪದ ಸಾಹಸ ಮಾಡಿದ್ದಾರೆಂದೇ ಹೇಳಬೇಕು. ಈ ಸಾಹಸದ ಯಶಸ್ಸು ಹಲವು ನೆಲೆಗಳಿಂದ ಬಂದಿದೆ. ಮೊದಲ ನೆಯದು, ಕುವೆಂಪು ಅವರ ಮಹಾ ಕಾದಂಬರಿಯನ್ನು ರಂಗಕ್ಕೆ ಅಳವಡಿಸಿ ರುವ ಕೆ.ವೈ ನಾರಾಯಣಸ್ವಾಮಿ ಯವ ರದ್ದು. ನಂತರ ರಂಗ ಕಲ್ಪನೆ ಮತ್ತು ನಿರ್ಮಾಣ ಹಾಗೂ ಬೆಳಕು ನಿರ್ವಹಣೆಯವರದ್ದು.

ಅಷ್ಟರ ಮಟ್ಟಿಗೆ ಈ ನಾಟಕವನ್ನು ಯಶಸ್ವಿ ಪ್ರಯೋಗವೆಂದೇ ಹೇಳಬೇಕು. ಏಕೆಂದರೆ, ಜನರಿಗೆ ಬಿಡುವೇ ಇಲ್ಲದ ಈ ದಿನಗಳಲ್ಲಿ ಪಟ್ಟಣದ, ಅದೂ ಮಧ್ಯಮ ವರ್ಗದ ಜನರನ್ನು ಒಂಭತ್ತು ತಾಸು ಕೂರಿಸು ವುದು–ಅದೂ 19ನೇ ಶತಮಾನದ ಮಲೆನಾಡಿನ ಕುಗ್ರಾಮ ವೊಂದರ ಕಥೆ ಹೇಳುತ್ತಾ–ಸಾಹಸದ ಕೆಲಸವೇ ಸರಿ. ಈ ದೃಷ್ಟಿಯಿಂದ ಬಸವಲಿಂಗಯ್ಯ ಬಹು ದೊಡ್ಡ ಮತ್ತು ಅಪ ರೂಪದ ಸಾಹಸ ಮಾಡಿದ್ದಾರೆಂದೇ ಹೇಳಬೇಕು. ಈ ಸಾಹಸದ ಯಶಸ್ಸು ಹಲವು ನೆಲೆಗಳಿಂದ ಬಂದಿದೆ. ಮೊದಲನೆಯದು, ಕುವೆಂಪು ಅವರ ಮಹಾ ಕಾದಂಬರಿ ಯನ್ನು ರಂಗಕ್ಕೆ ಅಳವಡಿಸಿರುವ ಕೆ.ವೈ ನಾರಾಯಣಸ್ವಾಮಿ ಯವರದ್ದು. ನಂತರ ರಂಗ ಕಲ್ಪನೆ ಮತ್ತು ನಿರ್ಮಾಣ ಹಾಗೂ ಬೆಳಕು ನಿರ್ವಹಣೆಯವರದ್ದು. ರಂಗಾಯಣದ ಪರಿಸರದಲ್ಲಿನ ಸಾಮಾನ್ಯ ಮರಗಿಡಗಳನ್ನೇ ಬಳಸಿಕೊಂಡು ಈ ಬೃಹತ್ ನಾಟಕದ ರಂಗಸ್ಥಳಕ್ಕೆ ಬೇಕಾದ ದೂರ ಮತ್ತು ಆಳಗಳೊಂದಿಗೆ ಮಲೆನಾಡಿನ ಆವರಣವೂ ದನ್ನು(ವಿಶೇಷವಾಗಿ ಮೊದಲನೆಯ ಭಾಗದ್ದು.

ಆದರೆ ನಾಲ್ಕನೆಯ ಭಾಗದ ರಂಗ ಸ್ಥಳ ವಿಪರೀತ ಜಟಿಲವಾಗಿದ್ದು, ಅಲ್ಲಿ ನಾಟಕದ ಬಹುಭಾಗ ರಂಗ ಕಟ್ಟೋಣಗಳ ಮರೆಯಲ್ಲೇ ನಡೆದುಹೋಗುತ್ತದೆ!) ಸೃಷ್ಟಿಸ ಲಾಗಿದೆ. ಮೂರನೆಯದ್ದು ಎಲ್ಲ ನಟ ನಟಿಯರ ಶ್ರಮ ಮತ್ತು ಪ್ರತಿಭೆಯದ್ದು. ಆದರೆ ನನಗೆ ಇಷ್ಟವಾಗದ, ನಿಜ ವಾಗಿ ಹೇಳಬೇಕೆಂದರೆ, ನಾಟಕದ ತುಂಬಾ ಕಿರಿಕಿರಿ ಉಂಟು ಮಾಡಿದ ಅಂಶವೆಂದರೆ, ಸಂಗೀತ. ವಿಶೇಷ ವಾಗಿ, ಜನಪ್ರಿಯ ಶೈಲಿಯಲ್ಲಿ ಬರೆದ ಸುಲಭ ಗೀತೆಗಳು ಹಾಗೂ ಜನಪ್ರಿಯಲಯಗಳಲ್ಲಿ ಮಾಡಿರುವ ಅವುಗಳ



ರಾಗ ಸಂಯೋಜನೆ. ಇದು ಅಲ್ಲಲ್ಲಿ ಹರಡಿ ಹೋಗುವ ನಾಟಕವನ್ನು ಒಗ್ಗೂಡಿಸುವ ಬದಲು ಒಡೆಯುತ್ತಾ ಹೋಗುತ್ತದೆ. ಹಾಗೇ, ಕಾದಂಬರಿಯ ಪಾತ್ರಗಳು ಮತ್ತು ಪ್ರಸಂಗಗಳು ಸೃಷ್ಟಿಸುವ ದಟ್ಟ ಅನುಭವವನ್ನು ಜನಪ್ರಿಯ ಮಾದರಿಗಳ ಎರಕದಲ್ಲಿ ಸರಳೀಕರಿಸುತ್ತಾ ಹೋಗುತ್ತದೆ.

ಇದು ರಂಗ ಪ್ರಯೋಗದ ಬಗ್ಗೆ ಆಡಬಹುದಾದ ಸಾರ್ವತ್ರಿಕ ಮಾತುಗಳು. ಆದರೆ, 'ಮಲೆಗಳಲ್ಲಿ ಮದುಮಗಳು'ವಿಗೆ ಕನ್ನಡ ಸಾಹಿತ್ಯ-ಸಂಸ್ಕೃತಿ ಸಂಕಥನಗಳ ಮಧ್ಯೆ ಇರುವ ಸ್ಥಾನವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಈ ರಂಗ ಪ್ರಯೋಗ ಹಲವು ಅಸಮಧಾನಗಳನ್ನು ಹುಟ್ಟಿಸುತ್ತವೆ. ಈ ಕಾದಂಬರಿ ಎಷ್ಟು ಪರಿಪೂರ್ಣ ಎಂದರೆ, ಎಷ್ಟು ಸೂಕ್ಷ್ಮ ಹದದಲ್ಲಿದೆ ಎಂದರೆ, ಇದನ್ನು ಯಾವುದೇ ರೀತಿಯಲ್ಲಿ ಮನರೂಪಿಸುವ ಪ್ರಯತ್ನ ಮಾಡುವುದೇ ಆ ಕಾದಂಬರಿಗೆ ಮಾಡುವ ಅನ್ಯಾಯವೆನಿಸಿಬಿಡುತ್ತದೆ. ನಾರಾಯಣಸ್ವಾಮಿ ಮತ್ತು ಬಸವಲಿಂಗಯ್ಯನವರ ಸದುದ್ದೇಶಗಳೇನೇ ಇರಲಿ, ಅವರ ಶ್ರಮ-ಸಾಹಸಗಳ ಪ್ರಾಮಾಣಿಕತೆಗಳೇನೇ ಇರಲಿ, ಕಾದಂಬರಿ ಇಲ್ಲಿ ಎಲ್ಲ ಸಂಕೀರ್ಣತೆಯನ್ನೂ, ಆ ಮೂಲಕ ತನ್ನ ಸಮಗ್ರತೆಯನ್ನೂ ಕಳೆದುಕೊಂಡು; ನುರಿತ ನಿರ್ದೇಶಕರ ಎಲ್ಲ ರಂಗ ಕೌಶಲ್ಯಗಳಿಗೆ ಒದಗಿಬಿಡಬಲ್ಲ ಒಂದು ಸಗಟು ಸಗಟಾದ ಕಥೆ ಮಾತ್ರವೆನಿಸಿಕೊಂಡುಬಿಡುತ್ತದೆ ಎಂಬುದು ಇಲ್ಲಿನ ಬಹು ದೊಡ್ಡ ವಿಷಾದದ ಸಂಗತಿ. ಇದರ ಪರಿಣಾಮವೆಂದರೆ, ಎರಡು ಮೂರು ಪ್ರಕಾರಗಳ ಜನಪದ ಕಥಾ ನಿರೂಪಕರು ಕಥೆಯನ್ನು 'ಉಂಗುರುಂಗುರ'ವಾಗಿ ಹೇಳಲು ಅಳವಡಿಸಿಕೊಂಡಿರುವ ಅನಗತ್ಯವೆನಿಸುವ 'ಬೌದ್ಧಿಕ' ತಂತ್ರ, ಇಡೀ ಕಾದಂಬರಿಯನ್ನು ಕಟ್ಟಿರುವ ಸ್ನಿಗ್ಧ ಮುಗ್ಧತೆಯನ್ನು ಹಾಳು ಮಾಡಿದೆ.

ಕಾದಂಬರಿಯ ಹೃದಯ ಭಾಗಗಳೆನಿಸಿರುವ ಹುಲಿಕಲ್ಲು ನೆತ್ತಿ ಮೇಲಿನ ಅನೇಕ ಪ್ರಸಂಗಗಳು-ಅವನ್ನು ರಂಗ ಪಠ್ಯ ಮಾಡಿರುವ ನಾರಾಯಣ ಸ್ವಾಮಿಯವರು ಕೈಬಿಡದೆ, ಅವುಗಳ ಮಹತ್ವವನ್ನರಿತು ಉಳಿಸಿಕೊಂಡಿರುವುದನ್ನು ಮೆಚ್ಚಬಹುದಾದರೂ-ಕೃತಕ ರಂಗ ತಂತ್ರಗಳಿಗೆ ಸಿಕ್ಕಿ ತಮ್ಮ ಅರ್ಥಪೂರ್ಣತೆ ಕಳೆದುಕೊಂಡು, 'ಅಣಕ'ದ ಮಟ್ಟಕ್ಕೆ ಇಳಿದುಬಿಟ್ಟಿವೆ. ಉದಾ: ಹುಲಿಕಲ್ಲು ನೆತ್ತಿಯಲ್ಲಿನ ಬೆಳಗು, ಹುಲಿಯನ ಮೇಲೆ ಬರ್ಕನ ದಾಳಿ, ಮಿಣುಕುಹುಳುಗಳು ಸೃಷ್ಟಿಸುವ ದೃಶ್ಯಾವಳಿ, ಮಧ್ಯ ರಾತ್ರಿಯಲ್ಲಿ ತಿಮ್ಮಿ ಕಾಣುವ 'ದರ್ಶನ' ಇತ್ಯಾದಿ. ಇವುಗಳೆಲ್ಲದರ ಮಧ್ಯೆ, ಸುಬ್ಬಣ್ಣ ಹೆಗ್ಗಡೆಯವರ ಸ್ಮೃತಿ ಚಾರಣದ ಪ್ರಸಂಗದ ನೇರ ಹಾಗೂ ಸರಳ ನಿರೂಪಣೆ ಇಡೀ ನಾಟಕಕ್ಕೆ ಒಂದು melancholy ಒದಗಿಸಿ, ನಾಟಕವು ರಂಗ ತಂತ್ರಗಳ ಭಾರದ ಅಡಿಯಲ್ಲಿ ಕುಸಿದು ಹೋಗದಂತೆ ರಕ್ಷಿಸಿದೆ ಎಂಬುದು ಸಮಾಧಾನಕರ ಸಂಗತಿ. ಇದರಲ್ಲಿ ಸುಬ್ಬಣ್ಣ ಹೆಗ್ಗಡೆ ಪಾತ್ರವಹಿಸಿರುವ ಪ್ರಶಾಂತ್ ಅವರ ಪ್ರಬುದ್ಧ ಅಭಿನಯದ ಪಾಲೂ ಇದೆ ಎಂಬುದನ್ನು ಇಲ್ಲಿ ಹೇಳಲೇಬೇಕು.

ಆದರೆ ಅದೇ ಸಮಯದಲ್ಲಿ, ಇಡೀ ಕಾದಂಬರಿ ಎತ್ತಿ ಹಿಡಿಯುವ ಸೃಷ್ಟಿಯ ಹೆಣ್ತನದ ವಿರಾಟ್ ಸ್ವರೂಪವನ್ನು ಅನಾವರಣ ಗೊಳಿಸುವ ಸಣ್ಣ ಬೀರನಿಗೆ ಬೀಳುವ ಹೊನ್ನಾಳಿ ಹೊಡೆತಗಳಿಗೆ ಪ್ರತಿಯಾಗಿ ಸೇಸಿಯ ತಾಯ್ತನ ಸ್ಫೋಟಗೊಳ್ಳುವ ಪ್ರಸಂಗ ಬರೀ ದಾರುಣವಾಗಿ, ರೂಕ್ಷವಾಗಿ ಪ್ರಸ್ತುತ ಗೊಂಡು, ನಿರ್ದೇಶಕರು ಕಥೆಯನ್ನು ಜನರಿಗೆ ಮುಟ್ಟಿಸುವ ಆತುರದಲ್ಲಿ ಅದರ ಒಟ್ಟು ಸಂವೇದನೆಯ ಸೂಕ್ಷ್ಮತೆಗಳಿಗೆ ಚ್ಯುತಿ ತಂದಿದ್ದಾರೇನೋ ಎನಿಸಿಬಿಡುತ್ತದೆ. ಬಸವಲಿಂಗಯ್ಯ ಯೋಚಿಸಬೇಕಾದ ಬಹು ಮುಖ್ಯ ವಿಚಾರವಿದು. ಏಕೆಂದರೆ, ರಂಗಸ್ಥಳದಲ್ಲಿ ಗುಂಪು ಗದ್ದಲ ಎಬ್ಬಿಸಿ-ಇದ ರಲ್ಲಿ ನಾಯಿ, ಹಂದಿ ಇತ್ಯಾದಿ ಪ್ರಾಣಿ ಪಾತ್ರಗಳೂ ಸೇರಿದ ರಂತೂ ಮುಗಿದೇ ಹೋಯಿತು-ನಾಟಕೀಯಪರಿಣಾಮ ಉಂಟುಮಾಡುವುದರಲ್ಲಿ ಬಸವಲಿಂಗಯ್ಯ ಸಿದ್ಧ ಹಸ್ತರು ಎಂಬುದು ಈ ನಾಟಕದ ಹಲವುಕಡೆ ಎದ್ದು ಕಾಣುತ್ತದೆ. ಹೀಗಾಗಿ ತಮ್ಮ ಶಕ್ತಿಯೇ ತಮ್ಮ ದೌರ್ಬಲ್ಯವೂ ಆಗದಂತೆ ಅವರು ಎಚ್ಚರ ವಹಿಸುವುದು ಒಳ್ಳೆಯದು.



ಚಿತ್ರ- ಅನಿಲ್ ರಮೇಶ್

ಕಾದಂಬರಿಯ ಹೃದಯ ಭಾಗಗಳೆನಿಸಿರುವ ಹುಲಿಕಲ್ಲು ನೆತ್ತಿ ಮೇಲಿನ ಅನೇಕ ಪ್ರಸಂಗಗಳು-ಅವನ್ನು ರಂಗ ಪಠ್ಯ ಮಾಡಿರುವ ನಾರಾಯಣ ಸ್ವಾಮಿಯವರು ಕೈಬಿಡದೆ, ಅವುಗಳ ಮಹತ್ವವನ್ನರಿತು ಉಳಿಸಿಕೊಂಡಿರುವುದನ್ನು ಮೆಚ್ಚಬಹುದಾದರೂ-ಕೃತಕ ರಂಗ ತಂತ್ರಗಳಿಗೆ ಸಿಕ್ಕಿ ತಮ್ಮ ಅರ್ಥಪೂರ್ಣತೆ ಕಳೆದುಕೊಂಡು, 'ಅಣಕ'ದ ಮಟ್ಟಕ್ಕೆ ಇಳಿದುಬಿಟ್ಟಿವೆ. ಉದಾ: ಹುಲಿಕಲ್ಲು ನೆತ್ತಿಯಲ್ಲಿನ ಬೆಳಗು, ಹುಲಿಯನ ಮೇಲೆ ಬರ್ಕನ ದಾಳಿ, ಮಿಣುಕುಹುಳುಗಳು ಸೃಷ್ಟಿಸುವ ದೃಶ್ಯಾವಳಿ, ಮಧ್ಯ ರಾತ್ರಿಯಲ್ಲಿ ತಿಮ್ಮಿ ಕಾಣುವ 'ದರ್ಶನ' ಇತ್ಯಾದಿ. ಇವುಗಳೆಲ್ಲದರ ಮಧ್ಯೆ, ಸುಬ್ಬಣ್ಣ ಹೆಗ್ಗಡೆಯವರ ಸ್ಮೃತಿ ಚಾರಣದ ಪ್ರಸಂಗದ ನೇರ ಹಾಗೂ ಸರಳ ನಿರೂಪಣೆ ಇಡೀ ನಾಟಕಕ್ಕೆ ಒಂದು melancholy ಒದಗಿಸಿ, ನಾಟಕವು ರಂಗ ತಂತ್ರಗಳ ಭಾರದ ಅಡಿಯಲ್ಲಿ ಕುಸಿದು ಹೋಗದಂತೆ ರಕ್ಷಿಸಿದೆ ಎಂಬುದು ಸಮಾಧಾನಕರ ಸಂಗತಿ.

ಇನ್ನು ಎಲ್ಲ ಪಾತ್ರಗಳನ್ನೂ, ಪ್ರಸಂಗಗಳನ್ನೂ ಕಾಲದ ಮಿತಿಯಿಂದ ರಂಗದ ಮೇಲೆ ತರಲು ಸಾಧ್ಯವಾಗದೇ ಹೋಗಿರುವುದರಿಂದ(ಹೀಗೆ ಒಟ್ಟು ಐವತ್ತೆಂಟು ದೃಶ್ಯಗಳನ್ನು ರಂಗ ಪ್ರಯೋಗದಿಂದ ಕೈಬಿಡಲಾಗಿದೆ ಎಂದು ನಾರಾಯಣಸ್ವಾಮಿ ನಾಟಕದ ನಂತರ ನನಗೆ ತಿಳಿಸಿದರು) ಕಥೆಯ-ಪ್ರಕೃತಿ, ಪ್ರಾಣಿಗಳು, ಮನುಷ್ಯರು ಮತ್ತು ಈ ಮೂರರ ಪರಸ್ಪರ ಸಂಬಂಧಗಳಲ್ಲಿ ಕಟ್ಟಿಕೊಳ್ಳುವ-ಹಲವಾರು (ತಾತ್ವಿಕ)ಧಾರೆಗಳು ಒಗ್ಗೂಡದೆ, ಬಿಡಿ ಬಿಡಿಯಾಗಿ ಉಳಿದು ಕಥಾ ಸಂವಿಧಾನದಲ್ಲಿ ಗೊಂದಲವೂ ಉಂಟಾಗುತ್ತದೆ. ಕಾದಂಬರಿಯಲ್ಲಿ ಕಾಣುವ ಮಕ್ಕಳ ಅದ್ಭುತ ಪ್ರಪಂಚ ಇಲ್ಲಿ ಕಳೆದೇ ಹೋಗಿದೆ. ಪ್ರಾಣಿ ಪ್ರಪಂಚವನ್ನು ಇಲ್ಲಿ ಮನುಷ್ಯರೇ (ವೇಷಧಾರಿಗಳಾಗಿ) ಕಟ್ಟಿರುವುದರಿಂದ-ಅದು ಅನಿವಾರ್ಯವೂ ಹೌದು ಮತ್ತು ಇಲ್ಲಿ ಅದು ಸಾಕಷ್ಟು ರೋಚಕ - ಸ್ವಾರಸ್ಯಕರವಾಗಿಯೇ ಪ್ರಸ್ತುತಗೊಂಡಿದೆಯಾದರೂ-ಅದು ಇಲ್ಲಿ ಹೆಚ್ಚೆಂದರೆ ಕಥಾ ನಿರೂಪಣೆಯ ಸ್ವಾರಸ್ಯಕ್ಕಾಗಿ ಮೂಡಿದಂತಿದೆಯೇ ಹೊರತು, ಕುವೆಂಪು ಕಾಣಿಸುವ ಪ್ರಕೃತಿಯ ಅಖಂಡತೆಯ ದರ್ಶನದ ಭಾಗವಾಗಿ ಒಡಮೂಡಲಾಗಿಲ್ಲ.

ಹಾಗೇ ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣವನ್ನು ಅತಿ ನಾಟಕೀಯವಾಗಿ ಪ್ರಸ್ತುತಪಡಿಸಿರುವ ನಿರ್ದೇಶಕರು(ಅಥವಾ ರಂಗಪಠ್ಯ ರಚನಕಾರರು) ಇದರೊಂದಿಗೆ ಸಾವಯವ ಸಂಬಂಧ ಪಡೆದಿರುವ ಗಡ್ಡದಯ್ಯನ ಪ್ರಸಂಗವನ್ನು ಕೈಬಿಟ್ಟಿರುವುದು, ಮತ್ತೆ ಈ ರಂಗ ಪ್ರಯೋಗ ಕುವೆಂಪು ಅವರ ವಿರಾಟ್ ದರ್ಶನದ ಬಿಡಿ ವಿವರಗಳ ಆಕರ್ಷಣೆಗಳಲ್ಲೇ ಕಳೆದುಹೋಗಿರುವುದನ್ನು ಶ್ರುತಪಡಿಸುವಂತಿದೆ. ಈ ಪ್ರಸಂಗದಲ್ಲಿ ಗಡ್ಡದಯ್ಯ ವಿವೇಕಾನಂದರ ಪ್ರತಿನಿಧಿಯಾಗಿ ಆಡುವ ಸ್ಥಳೀಯ ದೇವತೆಗಳನ್ನು ಜಾಗೃತಗೊಳಿಸುವ ಮಾತು ಇಡೀ ಕಾದಂಬರಿಯ ಮುಖ್ಯ ಧ್ವನಿಯಾಗಿದೆ ಎಂಬುದು ನಿರ್ದೇಶಕರ ಗಮನಕ್ಕೆ ಬಾರದೇ ಹೋದಂತಿದೆ. ಹಾಗೇ ನಿರ್ದೇಶಕರು, ನಾಯಕ-ನಾಯಕಿಯರೇ ಇಲ್ಲದ ಈ ಕಥೆಗೆ, ಗುತ್ತಿಯನ್ನು ನಾಯಕನನ್ನಾಗಿ ಮಾಡುವ ಚಪಲಕ್ಕೆ ಸಿಕ್ಕಿಯೋ ಏನೋ ಕಥನ ಕ್ರಮದಲ್ಲೇ ಬದಲಾವಣೆಮಾಡಿ, ಇಡೀ ಕಾದಂಬರಿಯ ಶಿಖರ ರೂಪವನ್ನೇ ಸವರಿ ಹಾಕಿಬಿಟ್ಟಿದ್ದಾರೆ. ಇದರಿಂದಾಗಿ, ಆಧುನಿಕತೆ ಮತ್ತು ಪರಂಪರೆಗಳ ಮುಖಾ

(41ನೇ ಪುಟಕ್ಕೆ)

'ಜನ ಭಾಷೆ ಪ್ರಭುತ್ವ ಭಾಷೆಗಳ ಸಂಘರ್ಷ' ಒಂದು ಮೌಲ್ಯಯುತ ಅಪರೂಪದ ಅಧ್ಯಯನ

ಪುಸ್ತಕ ಅವಲೋಕನ



ಲೇ : ಡಾ. ರಂಗನಾಥ ಕಂಟನಕುಂಟೆ

ಬೆಲೆ : 250 ರೂ./–

ಪ್ರಕಾಶನ : ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಮೂರನೇ ತಿರುವು, 8 ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು

ಭರತ್ ರಾಜ್

ಕನ್ನಡದಲ್ಲಿ ನಡೆದಿರುವ ಅಪರೂಪದ ಅಧ್ಯಯನವೆಂದೇ ಇದನ್ನು ಪರಿಗಣಿಸಬೇಕು. ಇದನ್ನು ಅಭಿಪ್ರಾಯ ದಾಖಲಿಸಿದವರು ಒಪ್ಪಿಕೊಂಡಿದ್ದಾರೆ. ಬಾಷಾ ಬೆಳವಣಿಗೆ, ಭಾಷಾ ಮೇಲಾಧಿಪತ್ಯ, ಭಾಷಾ ಹೇರಿಕೆ, ಭಾಷಾ ಸಂಘರ್ಷ, ಭಾಷಾ ಧುರಬಿಮಾನಗಳ ಹಿನ್ನೆಲೆಗಳನ್ನು ಸಮಾಜೋ ಆರ್ಥಿಕ ಹಾಗೂ ರಾಜಕೀಯಗಳ ಬೆಳವಣಿಗೆಗಳ ದೃಷ್ಟಿಕೋನದಲ್ಲಿ ನೋಡಿ ವಿಶ್ಲೇಷಣೆ ಮಾಡಲಾಗಿದೆ. ಇದು ಅಧ್ಯಯನದ ಸರಿಯಾದ ವೈಜ್ಞಾನಿಕ ವಿಧಾನ. ಕನ್ನಡದಲ್ಲಿ ಈ ವಿದಾನ ಅಳವಡಿಸಿ ನಡೆಸಿದ ಅಧ್ಯಯನಗಳು ಬಹಳ ಅಪರೂಪವೆನ್ನಬಹುದು.

ಪ್ರಸ್ತಾವನೆಯಲ್ಲಿ ಹೇಳಿಕೊಂಡಿರುವರಿತೆ ಈ ಅಧ್ಯಯನ ಭಾಷೆಯನ್ನು ಸಮಾಜ, ಪ್ರಭುತ್ವ, ಮಾರುಕಟ್ಟೆ, ಹಣಕಾಸು ವ್ಯವಹಾರ, ರಾಜಕೀಯಗಳ ನೆಲೆಗಟ್ಟುಗಳಲ್ಲಿ ವಿಶ್ಲೇಷಿಸುತ್ತದೆ. ಸಮಾಜದ ಅಂದರೆ ಜನಸಾಮಾನ್ಯರ ಬದುಕಿನೊಂದಿಗೆ ಅನುಸಂದಾನ ಮಾಡುತ್ತದೆ. ಅಂದರೆ ಭಾಷೆ ಸಮಾಜದಲ್ಲಿನ ಎಲ್ಲಾ ಆಗುಹೋಗುಗಳಿಂದ ಪ್ರತ್ಯೇಕವಾಗಿ ಇರುವುದಿಲ್ಲ. ಅದು ಅವೆಲ್ಲದರೊಂದಿಗೆ ನೇರ ಸಂಬಂಧ ಹೊಂದಿದೆ. ಸಮಾಜದ ಸಂಪತ್ತಿನ ಮೇಲೆ ಹಿಡಿತ ಸಾಧಿಸಿರುವವರು ಭಾಷೆಯನ್ನು ಹಿಡಿತಕ್ಕೆ ತಗೆದುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಸಮಾಜವನ್ನು ಇಲ್ಲವೇ ಒಂದು ಸಮುದಾಯವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಭಾಷೆಯನ್ನು ಬಳಸಲಾಗುತ್ತದೆ.

ಈ ಅಧ್ಯಯನ ಭಾಷೆಯನ್ನು ಸಮಾಜ, ಪ್ರಭುತ್ವ, ಮಾರುಕಟ್ಟೆ, ಹಣಕಾಸು ವ್ಯವಹಾರ, ರಾಜಕೀಯಗಳ ನೆಲೆಗಟ್ಟುಗಳಲ್ಲಿ ವಿಶ್ಲೇಷಿಸುತ್ತದೆ. ಸಮಾಜದ ಅಂದರೆ ಜನಸಾಮಾನ್ಯರ ಬದುಕಿನೊಂದಿಗೆ ಅನುಸಂದಾನ ಮಾಡುತ್ತದೆ. ಅಂದರೆ ಭಾಷೆ ಸಮಾಜದಲ್ಲಿನ ಎಲ್ಲಾ ಆಗುಹೋಗುಗಳಿಂದ ಪ್ರತ್ಯೇಕವಾಗಿ ಇರುವುದಿಲ್ಲ. ಅದು ಅವೆಲ್ಲದರೊಂದಿಗೆ ನೇರ ಸಂಬಂಧ ಹೊಂದಿದೆ.

ಖಾಸಗಿ ಆಸ್ತಿ, ಪ್ರಭುತ್ವಗಳ ಉಗಮವಾದ ಕಾಲಘಟ್ಟದಿಂದಲೂ ಆರಂಭವಾಗಿ ರಾಜಪ್ರಭುತ್ವಗಳಿಂದ ಹಿಡಿದು ವಸಾಹತು ಮತ್ತು ವಸಾಹತೋತ್ತರ ವ್ಯವಸ್ಥೆಗಳಲ್ಲೂ ನಾವಿದನ್ನು ಕಾಣಬಹುದಾಗಿದೆ. ಇಂದು ಸಾಮ್ರಾಜ್ಯಶಾಹಿ ಯುಗದಲ್ಲಿ ಜಾಗತೀಕರಣದ ಮಾರುಕಟ್ಟೆಯ ಹಿತಾಸಕ್ತಿಗಳಲ್ಲಿ ಭಾಷಾ ರಾಜಕಾರಣ ಮುನ್ನೆಡೆದಿದೆ. ಅಂದರೆ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಅಗತ್ಯವಾಗಿರುವ ಭಾಷೆಯನ್ನು ಪ್ರೋತ್ಸಾಹಿಸಲಾಗುತ್ತದೆ. ಹೇರಲಾಗುತ್ತದೆ, ಅದಕ್ಕಾಗಿ ಜನಭಾಷೆಗಳನ್ನು ತುಳಿಯಲಾಗುತ್ತದೆ. ಹಾಗಾಗಿ ಭಾಷೆ ಎಂಬುದು ಅಂತಿಮವಾಗಿ ಜನರ ಬದುಕು, ಆರ್ಥಿಕತೆ, ಸಂಸ್ಕೃತಿ, ರಾಷ್ಟ್ರೀಯ ಆಶೋತ್ತರ, ಪ್ರಜಾತಾಂತ್ರಿಕ ಹಕ್ಕು, ರಾಜಕೀಯ ಅಧಿಕಾರಗಳ ಪ್ರಶ್ನೆಯೇ ಆಗಿದೆ. ಅಖಂಡ ಭಾರತ ಮಾರುಕಟ್ಟೆಯನ್ನು ಹಿಡಿತದಲ್ಲಿಟ್ಟುಕೊಳ್ಳಲು, ರಾಷ್ಟ್ರೀಯ ಆಶೋತ್ತರಗಳನ್ನು ಮೆಟ್ಟಿ ನಿಲ್ಲುವ ಹಿನ್ನೆಲೆಯಲ್ಲಿ ಭಾರತದಲ್ಲಿ ಹಿಂದಿ ಹೇರಿಕೆಯನ್ನು ನಾವು ನೋಡಬೇಕು.

ಅಮೇರಿಕ ಬ್ರಿಟನ್ ನೇತೃತ್ವದ ಕಂಪನಿಗಳ ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ಇಂಗ್ಲೀಷ್ ಹೇರಿಕೆಯನ್ನು ಗ್ರಹಿಸಬೇಕು. ಹಾಗೆಂದಾಗ ಹಿಂದಿ ಹೇರಿಕೆಯು ಇಂಗ್ಲೀಷ್ ಹೇರಿಕೆಯ ವಿರುದ್ಧ ನಡೆ ಎಂದಲ್ಲ. ಬದಲಿಗೆ ಪರಸ್ಪರ ಪೂರಕವಾದ ನಡೆಗಳೇ ಆಗಿವೆ. ಹಿಂದಿ ಹಾಗೂ ಇಂಗ್ಲೀಷ್ ಕಲಿಕೆ ವಿದ್ಯಾರ್ಥಿಗಳ ಬದುಕು ರೂಪಿಸಿಕೊಳ್ಳಲು ಅನಿವಾರ್ಯ ಎಂಬಂತಹ ಪರಿಸ್ಥಿತಿ ನಿರ್ಮಾಣ ಮಾಡಲಾಗಿದೆ. ಸಾಮ್ರಾಜ್ಯಶಾಹಿ ಶಕ್ತಿಗಳ ಹಾಗೂ ದೇಶದ ಆಳುವ ವರ್ಗಗಳ ಆರ್ಥಿಕ ಹಾಗೂ ರಾಜಕೀಯ ಹಿತಾಸಕ್ತಿಗಳಿಗೆ ಅಗತ್ಯವಾಗಿರುವುದರಿಂದ ಹಾಗೆ ಮಾಡಲಾಗುತ್ತದೆ. ಬದಲಿಗೆ ಅದು ಸಹಜವಾದುದೂ ಅಲ್ಲ, ಬಹುಸಂಖ್ಯಾತರಿಗೆ ಅದು ನಿಜವಾದ ಅನಿವಾರ್ಯತೆಯೂ ಅಲ್ಲ. ಭ್ರಮಾತ್ಮಕವಾದ, ಕೃತಕವಾದ ಒಂದು ಪರಿಸ್ಥಿತಿಯ ನಿರ್ಮಾಣ. ಅಂದರೆ ಅಂತಹ ಒಂದು ಪರಿಸ್ಥಿತಿಯ ಬಲತ್ಕಾರದ ಹೇರಿಕೆ. ಅಭಿವೃದ್ಧಿ ಎಂದರೆ ಅದು ಒಂದು ದೇಶದ ಬಹುಸಂಖ್ಯಾತ ಜನರ ಬದುಕು, ಆರ್ಥಿಕತೆ, ಭಾಷೆ, ಶಿಕ್ಷಣ, ಸಂಸ್ಕೃತಿ ಹೀಗೆ ಒಟ್ಟು ಮೊತ್ತದಲ್ಲಿನ ಅಭಿವೃದ್ಧಿಯಾಗಬೇಕು. ಆ ದಿಕ್ಕಿನಲ್ಲಿ ಅದು ಮುನ್ನೆಡೆಯುವಂತಿರಬೇಕು. ಆಗ ಮಾತ್ರ ಅಭಿವೃದ್ಧಿ ಎನ್ನಲು ಸಾಧ್ಯ. ಅದು ಭದ್ರವಾಗಿ ನಿಂತು ಬೆಳೆಯಲು ಸಾಧ್ಯ. ಇಲ್ಲದಿದ್ದಲ್ಲಿ ಕುಸಿತ ಎಂಬುದು ಅನಿವಾರ್ಯ. ಅದು ಅದರಲ್ಲೇ ಅಂತರ್ಗತವಾಗಿ ಬೆಳೆಯುತ್ತಿರುತ್ತದೆ. ಅದನ್ನು ಐ.ಟಿ ಕುಸಿತ, ಈಗಿನ ಆರ್ಥಿಕ ಬಿಕ್ಕಟ್ಟುಗಳ ಹಿನ್ನೆಲೆಯಲ್ಲೂ ಅರ್ಥ ಮಾಡಿಕೊಳ್ಳಬಹುದು.

ಇಂಗ್ಲೀಷ್ ಅನ್ನು ಪ್ರಧಾನವಾಗಿ ಬಳಸದ, ತಮ್ಮದೇ ಭಾಷೆಗಳನ್ನು ಪ್ರಧಾನವಾಗಿ ಬಳಸಿಕೊಂಡ ಜಪಾನು, ಜರ್ಮನಿ, ಫ್ರಾನ್ಸ್, ಮೊದಲಾದ ದೇಶಗಳು ಬಂಡವಾಳಶಾಹಿ ದೇಶಗಳಾಗಿ ಅಭಿವೃದ್ಧಿಯಾದ ಉದಾಹರಣೆಗಳೂ ಈಗ ಕುಸಿತಕ್ಕೊಳಗಾಗಿರುವ ಉದಾಹರಣೆಗಳೂ ನಮ್ಮ ಮುಂದಿವೆ. ರಷ್ಯ, ಚೀನ ದೇಶಗಳು ಇಂಗ್ಲೀಷ್ ಅನ್ನು ಬಳಸದೇ ಬಾಹ್ಯ ಬೆಂಬಲವೂ ಇಲ್ಲದೇ ದೇಶೀಯ ಭಾಷೆಗಳ ಅಭಿವೃದ್ಧಿ ಸೇರಿದಂತೆ ಸರ್ವತೋಮುಖ ಎನ್ನಬಹುದಾದ ಸಮಾಜವಾದಿ ಅಭಿವೃದ್ಧಿಯಲ್ಲಿ ಸಾಗಿತ್ತು. ವಿಶ್ವ ಸಮಾಜದ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು ಎನ್ನಬಹುದಾದ ಸಾಧನೆ ಮಾಡಿ ನಂತರ ಬಂಡವಾಳಶಾಹಿ ಬೆಳವಣಿಗೆ ತಡೆಗಟ್ಟುವಲ್ಲಿ ವಿಫಲವಾಗಿ ಈಗ ಕುಸಿತ ಕಾಣುತ್ತಿರುವುದನ್ನೂ ನಾವೂ ನೋಡಬಹುದಾಗಿದೆ.

ಈಗ ಈ ಎಲ್ಲಾ ದೇಶಗಳಲ್ಲಿ ಜಾಗತಿಕ ಮಾರುಕಟ್ಟೆಯ(ಮುಖ್ಯವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ) ಪಾಲುದಾರಿಕೆ ಇಲ್ಲವೆ ಏಕಸ್ವಾಮ್ಯಕ್ಕಾಗಿ ಇಂಗ್ಲೀಷ್ ಭಾಷೆಯ ಕಲಿಕೆ ಹಾಗು ಬಳಕೆ ಹೆಚ್ಚಾಗುತ್ತಿರುವುದನ್ನು ಗಮನಿಸಬೇಕು. ಇದರಲ್ಲಿ ಹೇರಿಕೆ ಕೂಡ ಇದೆ. ಇದು ವಿಶ್ವ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ಭಾಗ ಮತ್ತು ಪರಿಣಾಮ ಕೂಡ ಹೌದು. ಆದರೆ ಭಾರತದಂತಹ ತೃತೀಯ ಜಗತ್ತಿನ ದೇಶಗಳ ಮಟ್ಟದಲ್ಲಿ ನಡೆಯುತ್ತಿಲ್ಲ. ಅದರ ಅಗತ್ಯವೂ ಅವರಿಗೆ ಸದ್ಯಕ್ಕೆ ಇಲ್ಲ.

ಈ ನಿಟ್ಟಿನಲ್ಲಿ ನೋಡಿದಾಗ ರಂಗನಾಥ ಕಂಟನಕುಂಟೆ ಕನ್ನಡದ ಸಂಧರ್ಭದಲ್ಲಿ ಸಾಕಷ್ಟು ಆಳವಾಗಿ ಹಾಗೂ ವಿಸ್ತಾರವಾಗಿ ಭಾಷಾ ರಾಜಕಾರಣ, ಕಲಿಕೆಯಲ್ಲಿನ ಗಂಭೀರ ತೊಡಕುಗಳು, ಪ್ರಭುತ್ವ ಭಾಷೆಗಳೊಂದಿಗಿನ ಸಂಘರ್ಷವನ್ನು, ಭಾಷಾ ಹೇರಿಕೆ ಇಲ್ಲವೇ ದಮನಕ್ಕೂ ಮಾರುಕಟ್ಟೆ ಹಿತಾಸಕ್ತಿಗಳಿಗೂ ಇರುವ ಸಂಬಂಧವನ್ನು

ವಿಶ್ಲೇಷಿಸಿದ್ದಾರೆ. ಸಾಮಾಜಿಕ ಅಸ್ಮಿತೆ, ಸಾಮಾಜಿಕ ಅಸಮಾನತೆ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಗಡಿ ಸಮಸ್ಯೆ, ಸ್ವಾಭಿಮಾನ, ದುರಭಿಮಾನ, ಕೋಮುವಾದ, ಸಂಸ್ಕೃತಿ, ಆಧಿಪತ್ಯ, ಜನಸಮುದಾಯದ ಮಾನಸಿಕ ನಿಯಂತ್ರಣ, ಮೇಲಾಳ್ವಿಕೆಗಳನ್ನು ಭಾಷಾ ಸಂಬಂಧದೊಂದಿಗೆ ಗಂಭೀರವಾಗಿ ನೋಡಿದ್ದಾರೆ. ಅವರು ಅಧ್ಯಯನವನ್ನು ಆವಾಹಿಸಿಕೊಂಡಂತೆ ಕೆಲಸ ಮಾಡಿದ್ದಾರೆ ಎನಿಸುತ್ತದೆ. ಸಮಸ್ಯೆಯ ಗುರುತು ಮಾಡುವಿಕೆ ಮತ್ತು ಕಾರಣಗಳ ವಿಶ್ಲೇಷಣೆಯ ವಿಚಾರದಲ್ಲಿ ಒಂದು ಉತ್ತಮವಾದ ವಸ್ತುನಿಷ್ಠ ಅಧ್ಯಯನ ಇದಾಗಿದೆ. ಸಾಕಷ್ಟು ಸರಳವಾಗಿ ಶಿಸ್ತುಬದ್ಧವಾಗಿ ಇಂತಹ ಸಂಕೀರ್ಣ ಹಾಗೂ ಗಂಭೀರವಾದ ವಿಚಾರವನ್ನು ಓದಿಸಿಕೊಂಡು ಹೋಗುವಂತೆ ಮಂಡಿಸಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಅಧ್ಯಯನಗಳು ಬಹುತೇಕವಾಗಿ ಉಪಯೋಗಕ್ಕೆ ಬಾರದ, ಗಂಭೀರತೆ ಇಲ್ಲದ, ಪದವಿ; ಭಡ್ತಿ; ಹುದ್ದೆ; ಸಂಬಳ; ಫೆಲೋಶಿಪ್‌ಗಾಗಿ ಮಾಡುವ, ಯಾರಿಂದಲೋ ಬರೆಸಿ ತಮ್ಮದೆಂದು ಹೇಳಿಕೊಳ್ಳುವ, ಇತರರಿಂದ ಕದ್ದು ಅಲ್ಪ ಸ್ವಲ್ಪ ಬದಲಾವಣೆ ಮಾಡಿ ತಮ್ಮದೆಂದು ಮಂಡಿಸುವ ಇಂದಿನ ಹೇಸಿಗೆ ಹುಟ್ಟಿಸುವ ಸಂದರ್ಭದಲ್ಲಿ ಕಂಟನಕುಂಟೆಯಂತಹವರು ಅಪರೂಪವಾಗಿ ಆಪ್ತರಾಗಿ ಕಾಣುತ್ತಾರೆ.

ಸಾಮೂಹಿಕ ಗ್ರಹಿಕೆ ಹಾಗೂ ಸಾಮಾಜಿಕ ಚಳುವಳಿಯ ಹಿನ್ನೆಲೆ ಮತ್ತು ಗ್ರಹಿಕೆ ಇಲ್ಲದವರಿಗೆ ಈ ಮಟ್ಟದ ಗಂಭೀರತೆ ಹಾಗೂ ಸ್ಪಷ್ಟತೆಯಿಂದ ಮಂಡಿಸಲು ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ.

ಭಾಷಾ ರಾಜಕಾರಣ, ಸಂಘರ್ಷಗಳ ಸಮಸ್ಯೆ ಹಾಗೂ ಕಾರಣಗಳನ್ನು ಬಹಳ ಚೆನ್ನಾಗೇ ವಿಶ್ಲೇಷಣೆ ಮಾಡುವ ರಂಗನಾಥ್‌ರು ಪರಿಹಾರದ ಬಗ್ಗೆ ಆ ಗಂಭೀರತೆ ತೋರುವುದಿಲ್ಲ. ಅವರ ಅಧ್ಯಯನ ಆ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. ಅದು ಕೇವಲ ಅಮೂರ್ತ ಆಶಯಗಳ ಮಟ್ಟದಲ್ಲಿ ಅಲ್ಲಲ್ಲಿ ಕಾಣುತ್ತದೆ. ಕೊನೆಯಲ್ಲಿ ಆಳುವ ವರ್ಗಗಳ ಮತ್ತು ಪ್ರಭುತ್ವದಲ್ಲಿನ ಸಮಸ್ಯೆಗಳನ್ನು ಮೊದಲು ಪರಿಹರಿಸಬೇಕೆನ್ನಿಸುತ್ತದೆ ಎಂದು ಒಂದು ವಾಕ್ಯದ ಅನಿಸಿಕೆಯ ಮಟ್ಟಕ್ಕೆ ಪರಿಹಾರವನ್ನು ಇಳಿಸಿಬಿಟ್ಟು ಕೊನೆಗೊಳಿಸುತ್ತಾರೆ.

ಗತಿತರ್ಕ ಎಂಬ ಪದವನ್ನು ಅನಗತ್ಯವಾಗಿ ಹಲವಾರು ಕಡೆ ಬಳಸಿದ್ದಾರೆ. ಅದು ಆ ಸಂದರ್ಭಕ್ಕೆ ತಕ್ಕಂತೆ ಎಲ್ಲಾ ಓದುಗರಿಗೂ ಅರ್ಥವಾಗುವುದಿಲ್ಲ. ಅದರ ವಿವರಣೆ ಕೂಡ ಕಾಣುವುದಿಲ್ಲ. ಅದೇ ವೇಳೆಯಲ್ಲಿ ಪರಿಹಾರಗಳ ವಿಚಾರದಲ್ಲಿ ಅವರೇ ಗತಿತಾರ್ಕಿಕವಾಗಿ ಅಧ್ಯಯನ ಮಾಡಿ ಮಂಡಿಸುವ ಗೋಜಿಗೆ ಹೋಗಿಲ್ಲ ಯಾಕೆ ಎಂಬ ಪ್ರಶ್ನೆ ಈ ಗ್ರಂಥ ಓದಿದಾಗ ಬರುತ್ತದೆ. ವಿಶ್ವದಲ್ಲಿ ಇಂತಹ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯೋಗಗಳು, ಪ್ರಯತ್ನಗಳು ನಡೆದಿವೆ. ಅವರು ಅಧ್ಯಯನಕ್ಕೆ ಮಾರ್ಕ್ಸ್‌ವಾದಿ ದೃಷ್ಟಿಕೋನ ಅಳವಡಿಸಿಕೊಂಡಿದ್ದರೂ ಮಾರ್ಕ್ಸ್‌ವಾದಿ ಗ್ರಹಿಕೆಯ ಬಲು ಮುಖ್ಯ ವಿಚಾರವಾಗಿರುವ ಪರಿಹಾರದ ಬಾಗವಾಗುವ ದಿಕ್ಕು ಕಾಣುವುದಿಲ್ಲ. ಅವರು ಕೊನೆಯಲ್ಲಿ ಪೂರಕವಾಗಿರುವ ಹಲವು ಅಧ್ಯಯನಗಳ ಅಗತ್ಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಆದರೆ ಅಲ್ಲಿಯೂ ಕೂಡ ಪರಿಹಾರದ ಬಗೆಗಿನ ಅಧ್ಯಯನ ಪ್ರಸ್ತಾಪ ಮಾಡುವುದಿಲ್ಲ.

ಇನ್ನು ಈ ಗ್ರಂಥದ 42 ನೇ ಪುಟದ ಮೊದಲ ಪ್ಯಾರದಲ್ಲಿ 'ಕನ್ನಡವನ್ನು ಪ್ರಾಮಾಣೀಕರಿಸುವ ಸಂದರ್ಭದಲ್ಲಿ ಶಿಷ್ಟಮಾದರಿಯ ಕನ್ನಡಕ್ಕೆ ಆದ್ಯತೆ ನೀಡಬೇಕೆಂದು ವಾದಿಸುವುದು ಸರಿ, ಎಂದು ಹೇಳುತ್ತಾ ಪ್ರಮಾಣೀಕರಣಗೊಂಡ ಕನ್ನಡ ಇತರೆ ಭಾಷಿಕ ಪ್ರಭೇದಗಳನ್ನು ಕೀಳಾಗಿ ಕಾಣುವ ಪರಿಸ್ಥಿತಿ ಇದೆ ಅದು ಸರಿಯಲ್ಲವೆಂದು ಹೇಳುತ್ತಾರೆ. ಇದು ಪರಸ್ಪರ ವಿರುದ್ಧಾತ್ಮಕವಾದುದು. ಶಿಷ್ಟ ಎಂಬ ಪರಿಗಣನೆಯ ಮಾನದಂಡವೇನು? ಸಾಮಾನ್ಯವಾಗಿ ಅದು ಒಂದು ವರ್ಗ ಇಲ್ಲವೇ ಜಾತಿಯ ಆಧಿಪತ್ಯದ ಭಾಷೆ ಆಗಿರುತ್ತದೆ. ಅದು ಕೂಡ ಸಾಮಾನ್ಯವಾಗಿ ಮೇಲು ವರ್ಗ ಹಾಗೂ ಮೇಲು ಜಾತಿ ಆಗಿರುತ್ತದೆ. ಅದು ಪ್ರಜಾತಾಂತ್ರಿಕವಾಗುವುದಾದರೂ ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಅದೇ ರೀತಿ ಕರ್ನಾಟಕದಲ್ಲಿನ ಕನ್ನಡದ ಬೇರೆ ಬೇರೆ ಪ್ರಕಾರಗಳ ಬಗ್ಗೆ ಇರುವ ಕೀಳು ಮನೋಬಾವದ ಬಗ್ಗೆ ವಿಶ್ಲೇಷಣೆ ಇಲ್ಲ. ಉದಾ ಉತ್ತರ ಕರ್ನಾಟಕ, ಅದರಲ್ಲೂ ಮುಖ್ಯವಾಗಿ ಹೈದರಾಬಾದ್ ಕರ್ನಾಟಕದ ಭಾಷೆಯ ಬಗ್ಗೆ ದಕ್ಷಿಣ ಕರ್ನಾಟಕದಲ್ಲಿ ಇರುವ ಭಾವನೆ. ಹುಬ್ಬಳ್ಳಿ ಬಾಗದ ಮೇಲುಜಾತಿ ಮೇಲುವರ್ಗದ ಬಳಕೆಯ ಭಾಷೆಯ ಬಗ್ಗೆ ಆದರಣೆ ಇದ್ದರೆ ಇತರ ಭಾಗದ ಭಾಷಾ ರೂಪಗಳ ಬಗ್ಗೆ ಕೀಳು ಭಾವನೆ ಇದೆ. ಕನ್ನಡದ ವಿಚಾರದಲ್ಲಿ ದಕ್ಷಿಣ, ಅದರಲ್ಲೂ ಮೈಸೂರು ಕರ್ನಾಟಕದ ಮೇಲುಜಾತಿ ಮೇಲು ವರ್ಗದ ಜನರು ಬಳಸುವ ಭಾಷೆಯನ್ನು ಶಿಷ್ಟ ಎಂದು ಬಾವಿಸಲಾಗುತ್ತಿದೆ. ಅದೇ ಬರಹ ಭಾಷೆಯಾಗಿ ಚಾಲ್ತಿಯಲ್ಲಿದೆ. ಭಾಷಾ ಪ್ರಬೇದ, ಬಳಕೆ, ರೂಪಗಳನ್ನು ಜಾತಿ ಸೂಚಕವಾಗಿ ಗುರುತಿಸುವ ಪರಿಪಾಟ ಇದೆ. ತುಳು, ಕೊಂಕಣಿ ಇತ್ಯಾದಿ ಭಾಷೆಯ ವಿಚಾರದಲ್ಲೂ ಇದನ್ನು ಕಾಣಬಹುದು. ನಮ್ಮ ಸಾಮಾಜಿಕ ಬೆಳವಣಿಗೆಯ ಪರಿಣಾಮದ ಹಿನ್ನೆಲೆಯಲ್ಲೆ ಗ್ರಹಿಸಬೇಕು.

ಗತಿತರ್ಕ ಎಂಬ ಪದವನ್ನು ಅನಗತ್ಯವಾಗಿ ಹಲವಾರು ಕಡೆ ಬಳಸಿದ್ದಾರೆ. ಅದು ಆ ಸಂದರ್ಭಕ್ಕೆ ತಕ್ಕಂತೆ ಎಲ್ಲಾ ಓದುಗರಿಗೂ ಅರ್ಥವಾಗುವುದಿಲ್ಲ. ಅದರ ವಿವರಣೆ ಕೂಡ ಕಾಣುವುದಿಲ್ಲ. ಅದೇ ವೇಳೆಯಲ್ಲಿ ಪರಿಹಾರಗಳ ವಿಚಾರದಲ್ಲಿ ಅವರೇ ಗತಿತಾರ್ಕಿಕವಾಗಿ ಅಧ್ಯಯನ ಮಾಡಿ ಮಂಡಿಸುವ ಗೋಜಿಗೆ ಹೋಗಿಲ್ಲ ಯಾಕೆ ಎಂಬ ಪ್ರಶ್ನೆ ಈ ಗ್ರಂಥ ಓದಿದಾಗ ಬರುತ್ತದೆ. ವಿಶ್ವದಲ್ಲಿ ಇಂತಹ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯೋಗಗಳು, ಪ್ರಯತ್ನಗಳು ನಡೆದಿವೆ. ಅವರು ಅಧ್ಯಯನಕ್ಕೆ ಮಾರ್ಕ್ಸ್‌ವಾದಿ ದೃಷ್ಟಿಕೋನ ಅಳವಡಿಸಿಕೊಂಡಿದ್ದರೂ ಮಾರ್ಕ್ಸ್‌ವಾದಿ ಗ್ರಹಿಕೆಯ ಬಲು ಮುಖ್ಯ ವಿಚಾರವಾಗಿರುವ ಪರಿಹಾರದ ಬಾಗವಾಗುವ ದಿಕ್ಕು ಕಾಣುವುದಿಲ್ಲ. ಅವರು ಕೊನೆಯಲ್ಲಿ ಪೂರಕವಾಗಿರುವ ಹಲವು ಅಧ್ಯಯನಗಳ ಅಗತ್ಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಆದರೆ ಅಲ್ಲಿಯೂ ಕೂಡ ಪರಿಹಾರದ ಬಗೆಗಿನ ಅಧ್ಯಯನ ಪ್ರಸ್ತಾಪ ಮಾಡುವುದಿಲ್ಲ.

ಇದೇ ಗ್ರಂಥದ 209ನೇ ಪುಟ 2ನೇ ಪ್ಯಾರ 6ನೇ ಸಾಲಿನಲ್ಲಿ ಪ್ರಭುತ್ವ ಯಾವ ವರ್ಗವನ್ನು ಪ್ರತಿನಿಧಿಸುತ್ತದೆಯೋ, ಅದು ಯಾರ ಹಿತಾಸಕ್ತಿಗಾಗಿ ದುಡಿಯುತ್ತದೆಯೋ, ಅದು ಆ ಸಮಾಜದ ಪ್ರದಾನ ಮೌಲ್ಯವಾಗುತ್ತದೆ ಎಂದು ಹೇಳಲಾಗಿದೆ. ಇದು ಸರಿಯಾದುದಲ್ಲ ಅದನ್ನು ಆ ರೀತಿ ಬಿಂಬಿಸಲಾಗುತ್ತದೆ ಅಷ್ಟೆ, ಆದರೆ ವಾಸ್ತವದಲ್ಲಿ ಬಹುಸಂಖ್ಯಾತ ಜನರು ಯಾವ ರೀತಿಯಲ್ಲಿ ಇರುತ್ತಾರೋ ಆ ರೀತಿ ಸಮಾಜ–ಮೌಲ್ಯಗಳು ಇರುತ್ತವೆ. ಅದೇ ಪ್ರಧಾನವಾಗುತ್ತದೆ. ಆದರೆ ಅದು ಬಿಂಬಿಸಲ್ಪಡುವುದಿಲ್ಲ ಅಷ್ಟೆ. ಯಾಕೆಂದರೆ ಅದು ಆಳುವ ವರ್ಗಕ್ಕೆ ಬೇಡ ಹಾಗಾಗಿ.

ಈ ರೀತಿಯಾದ ಕೆಲವು ವಿಚಾರಗಳು ವಾಸ್ತವಕ್ಕಿಂತ ಹೊರತಾಗಿ ಹೇಳಲಾಗಿದೆ. ಮುದ್ರಣ ದೋಷದ ಬಗ್ಗೆ ಇನ್ನಷ್ಟು ಗಮನ ಹರಿಸಿದ್ದರೆ ಓದುವಾಗಿನ ಕೆಲವು ಶ್ರಮ ತಪ್ಪುತ್ತಿತ್ತು. ಬೆಲೆಕೂಡ ಸ್ವಲ್ಪಕಡಿಮೆ ಇಡಬಹುದಿತ್ತು.

ನಿಜವಾದ ಕನ್ನಡಪರ ಕಾಳಜಿ ಉಳ್ಳವರು ಎಂದುಕೊಳ್ಳುವವರು ಚಳವಳಿಯಲ್ಲಿ ಭಾಗವಹಿಸದೇ ತಮ್ಮದೇ ಆದ ಅನುಕೂಲಸ್ಥ ಕೋಣೆಗಳಲ್ಲಿ ನಿರಮ್ಮಳವಾಗಿರುವುದೇ ಇದಕ್ಕೆ ಕಾರಣ ಹಾಗಾಗಿ ಚಳುವಳಿಗಾರರನ್ನು ದೂರುವುದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಮಾರ್ಗವೂ ಆಗಬಹುದು ಎಂದು ಪುಟ 93, 2ನೇ ಪ್ಯಾರದ ಕೊನೆಯಲ್ಲಿ ಹೇಳಿದ್ದಾರೆ. ಇದು ವಾಸ್ತವಕ್ಕೆ ಹಿಡಿದ ಕನ್ನಡಿಯೂ ಹೌದು ಎನಿಸುತ್ತದೆ. ದಲಿತರು ಇಂಗ್ಲೀಷ್ ಶಿಕ್ಷಣ ಹೊಂದಿದರೆ ಅದು ಬಿಡುಗಡೆಯ ಹಾದಿ ಎಂಬ ಪ್ರಚಲಿತ ಚರ್ಚೆಯ ಸತ್ಯಾ ಸತ್ಯತೆಯ ಮೇಲೂ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.

ಕನ್ನಡ ಮನಸ್ಸುಗಳು, ಭಾಷಾ ಹೇರಿಕೆ ಹಾಗೂ ಮೇಲಾಧಿಪತ್ಯಗಳನ್ನು ವಿರೋಧಿಸುವವರು, ಪ್ರಜಾತಾಂತ್ರಿಕ ಚಿಂತಕರು, ಕಲಿಕೆಯಲ್ಲಿ ಸಮಸ್ಯೆಗಳಿಂದ ನರಳುತ್ತಿರುವವರು, ನಿಜವಾದ ಕನ್ನಡ ಹೋರಾಟಗಾರರು, ಕನ್ನಡ ರಾಷ್ಟ್ರೀಯತೆಯ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆ ನಡೆಸುವವರು, ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಈ ಅಧ್ಯಯನ ಗ್ರಂಥವನ್ನು ಅವಶ್ಯವಾಗಿ ಓದಬೇಕು. ಈ ಗ್ರಂಥದ ವಿಚಾರಗಳು ನಾಡು ನುಡಿಯ ಹಿತ ದೃಷ್ಟಿಯಿಂದ ಆರೋಗ್ಯಕರವಾಗಿ ಚರ್ಚೆಗೆ ಒಳಗಾಗಬೇಕು. ಪರಿಹಾರದತ್ತ ಸಾಮೂಹಿಕ ಸಂಘಟಿತ ಪ್ರಯತ್ನದ ಮೂಲಕ ಹೊರಳುವಂತಾಗಬೇಕು

ಒಟ್ಟಿನಲ್ಲಿ ರಂಗನಾಥ್ ಕಂಟನೆಕುಂಟೆಯವರು ಬಹಳ ಶ್ರಮ ಹಾಕಿ ಕಾಳಜಿ ಹಾಗೂ ಶ್ರದ್ಧೆಗಳಿಂದ ಈ ಅಧ್ಯಯನವನ್ನು ಮಾಡಿ ಜನರ ಮುಂದೆ ಇಟ್ಟಿದ್ದಾರೆ. ಕಾಳಜಿ ಇದ್ದಲ್ಲಿ ಈಗಲೂ ವಿಶ್ವವಿದ್ಯಾನಿಲಯಗಳ ಅಧ್ಯಯನಗಳನ್ನು ಬಹುಸಂಖ್ಯಾತ ಜನರಿಗೆ ಉಪಯೋಗಕರವಾಗಿ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಅವರಿಗೆ ಹಾಗೂ ಅಧ್ಯಯನಕ್ಕೆ ಜೊತೆಗೂಡಿದ ಎಲ್ಲರಿಗೂ, ಪ್ರಕಟಣೆ ಮಾಡಿದವರಿಗೂ ಧನ್ಯವಾದಗಳು ಸಲ್ಲಬೇಕು.

ಈ ಗ್ರಂಥ ಬೇಕಾದವರು **080–23409512** ಅಥವಾ **98869 11486** ಗೆ ಸಂಪರ್ಕಿಸಬಹುದು. □

ಕೊಡಗು: ಐಡೆಂಟಿಟಿ ಹಾಗೂ ಹಳೆಯ ರಾಗ

ತೆಲಂಗಾಣ ಘೋಷಣೆ ನಂತರ ಭಾರತದ ಪ್ರಾಂತೀಯ ರಾಜಕಾರಣದ ಸಂಕಥನದಲ್ಲಿ ಮಹತ್ತರ ಬದಲಾವಣೆಯಾಗಿರುವುದು ಒಂದು ವಾಸ್ತವ. ಪ್ರಾಂತ್ಯ ಭಾರತೀಯ ರಾಜಕೀಯದ ಬಹುಮುಖ್ಯ ಅಂಶವಾಗಿ ರುವುದು ಕೂಡ ಅಷ್ಟೇ ಸತ್ಯ. ಪ್ರಾಂತ್ಯದ ರಾಜಕಾರಣ ಹೊಸತೇನಲ್ಲ.ಅದಕ್ಕೆ ಹೊಸತನ ದೊರೆತದ್ದು ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ, ಭಾಷೆಯಾಧಾರಿತವಾಗಿ ರಾಜ್ಯದ ರಚನೆಯಾಗಲು ಆರಂಭಗೊಂಡ ನಂತರವೆಂದೇ ಹೇಳಬೇಕು. ಅಂದಿನ ಸಂದರ್ಭದಲ್ಲಿ "ಭಾಷೆ" ಪ್ರಾಂತೀಯ ಐಡೆಂಟಿಟಿಯ ನಿರ್ಮಿತಿಗೆ ಅವಶ್ಯಕವಾದ ಅಂಶಗಳನ್ನು ಪೂರೈಸಿತ್ತು. ಇವತ್ತಿನ ಸಂದರ್ಭದಲ್ಲಿ "ಭಾಷೆ" ಗಿಂತಲೂ ಬಹುಮುಖಿ ವಿರೋಧಗಳು' ಪ್ರಾಂತ್ಯಗಳ ಐಡೆಂಟಿಟಿ ನಿರ್ಮಿತಿಯಲ್ಲಿ ಬಹುಮುಖ್ಯವಾಗಿರುತ್ತದೆ. ಬಹುಮುಖಿ ವಿರೋಧಗಳಲ್ಲಿ: ಅಭಿವೃದ್ಧಿ/ಅನಭಿವೃದ್ಧಿ, ಹಿಂದುಳಿದಿರುವಿಕೆ/ಮುಂದುವರಿದಿರುವಿಕೆ, ಅಂಚು/ ಬೆಳವಣಿಗೆ ಇತ್ಯಾದಿ. ಅದರೊಂದಿಗೆ ಜನಾಂಗೀಯತೆ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯಗಳೂಕೂಡ ಪ್ರಮುಖವಾಗುವುದನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ.

ಈ ಪ್ರಾಂತೀಯ ರಾಜಕಾರಣದ ಒಂದು ಪ್ರಮುಖವಾದ ಅಂಶವೆಂದರೆ ಅದು ರಾಜಕೀಯ ವ್ಯವಸ್ಥೆಯ ಮೇಲೆ ವಿವಿಧ ಬೇಡಿಕೆಗಳನ್ನು, ವಿವಿಧ ಘರ್ಷಣೆಗಳನ್ನು, ವಿವಿಧ ವಿರೋಧಗಳನ್ನು ತಂದಿತ್ತು. ಈ ಸಂದರ್ಭದಲ್ಲಿ ಕೆಲವು ವಿಶಿಷ್ಟವಾದ ರಾಜಕಾರಣವೂ ಬೆಳೆಯಿತು. ಅದರಲ್ಲಿ "ಬಲ ಪಂಥೀಯತೆ"ಯ ಬೆಳವಣಿಗೆ ಅಂಶವೂ ಸೇರಿಕೊಂಡಿದೆ. ಪಂಜಾಬಿನ ಸಂದರ್ಭದಲ್ಲಿ ಇದು ನಿಚ್ಚಳವಾಗಿ ಕಂಡುಬರುತ್ತದೆ. ಸಿಖ್ಖರ ರಾಜಕಾರಣವನ್ನು ವಿರೋಧಿಸಲು "ಬಲಪಂಥೀಯತೆ" ತೀವ್ರತರವಾಗಿ ಬೆಳೆದದ್ದು ಇಲ್ಲಿ ದಾಖಲಿಸಬೇಕು. ಇದರರ್ಥ ಪ್ರಾಂತೀಯತೆ ಏಕರೂಪಿಯಾಗಿ ಹೊರಹೊಮ್ಮಿತ್ತು ಎಂದರ್ಥವಲ್ಲ. ಕೆಲವೊಮ್ಮೆ ಜನಾಂಗೀಯ ರೂಪಿಯಾಗಿ, ಭಾಷಾವಾರು ರೂಪಿಯಾಗಿ, ಸ್ವತಂತ್ರ ರಾಜ್ಯದ ಬೇಡಿಕೆ ರೂಪಿಯಾಗಿ, ಅರೆ ಸ್ವಾಯತ್ತರೂಪಿಯಾಗಿ ಹೊರಹೊಮ್ಮಿತು.

ಈ ಸಂದರ್ಭದಲ್ಲಿ ಬಂದಿರುವ ವಿವಿಧ ಸಂಕಥನಗಳಲ್ಲಿ ಬಹಳ ಮುಖ್ಯವಾದ ವಿಸ್ಮೃತಿಯೊಂದಿದೆ: ಅದು ಮೂಲತ: ಅ ಕರ್ನಾಟಕದ ವಿವಿಧ ಪ್ರಾಂತೀಯಗಳ ರಾಜಕಾರಣ ಕುರಿತಾಗಿರುವುದು. ಇದಕ್ಕೆ ಕಾರಣವಿದೆ, ಬಹಳಷ್ಟು ಸಂಶೋಧಕರಿಗೆ ಕರ್ನಾಟಕವೆಂದರೆ ಯಾವುದೇ ತಕರಾರುಗಳಿಲ್ಲದ ರಾಜ್ಯ, "ಸಮಷ್ಟಿ ಸಮುದಾಯವಿರುವ"ಪ್ರಾಂತ್ಯ ಇತ್ಯಾದಿ. ಅದಕ್ಕಿಂತಲೂ ಬಹಳಮುಖ್ಯವಾಗಿ ಭಾರತದ ಇತಿಹಾಸ ಬರೆದವರು ಒಂದೋ ಬಂಗಾಳವನ್ನು ಕೇಂದ್ರೀಕರಿಸಿ ಬರೆದರು ಅಥವಾ ಉತ್ತರ ಭಾರತವನ್ನು ಕೇಂದ್ರೀಕರಿಸಿ ನಿರ್ಮಿಸಿದರು, ಅವರಿಗೆ ಕರ್ನಾಟಕ ಇತಿಹಾಸದ ಒಂದು ಮುಖ್ಯವಾದ ಭಾಗವಾಗಲೇ ಇಲ್ಲ. ಉತ್ತರ ಭಾರತಕ್ಕೆ ಕರ್ನಾಟಕದವರು "ಮದ್ರಾಸಿ"ಗಳಾದರು- ಅಂದರೆ ಕರ್ನಾಟಕಕ್ಕೆ ಸೀಮಿತಗೊಂಡ ಐಡೆಂಟಿಟಿಯನ್ನು ನಿರ್ಮಿಸಿದ ಸಂದರ್ಭದಲ್ಲಿ ಎಷ್ಟೋ ವಿಷಯಗಳು ವಿಸ್ಮೃತಿಯ ಭಾಗಗಳಾದವು-ಅವುಗಳಲ್ಲಿ ಕರ್ನಾಟಕದಲ್ಲಿ 1830ರಲ್ಲಿ ನಡೆದ ನಗರ ರೈತರ ಚಳುವಳಿ, "ಬ್ರಾಹ್ಮಣೇತರ ಚಳುವಳಿ", ಕರ್ನಾಟಕದ ಮೀಸಲಾತಿ ಇತಿಹಾಸ, ಉತ್ತರ ಕರ್ನಾಟಕದಲ್ಲಿ ನಡೆದ ಕಾಂಗ್ರೆಸ್ ರಾಷ್ಟ್ರೀಯ ಹೋರಾಟ ಇತ್ಯಾದಿಗಳನ್ನು ಗುರುತಿಸಬಹುದು.

ಈ ಸಂದರ್ಭದಲ್ಲಿ ಒಂದು ಪ್ರಾಂತ್ಯ ಇನ್ನೊಂದು ಪ್ರಾಂತ್ಯಕ್ಕಿಂತ ಹೇಗೆ ಹಾಗೂ ಯಾಕೆ ವಿಭಿನ್ನವಾದ ರಾಜಕಾರಣವನ್ನು ಮಾಡುತ್ತದೆ? ಯಾವ ಕಾರಣಕ್ಕಾಗಿ ಅವು ವಿಭಿನ್ನವಾದ ಸಂಕಥನಗಳನ್ನು ಮುಂದಿಡುತ್ತವೆ? ಪ್ರಾಂತೀಯತೆಯ ರಾಜಕಾರಣ ಅಂತಿಮವಾಗಿ ಯಾವ ತಾತ್ವಿಕತೆಯನ್ನು ಪ್ರತಿನಿಧಿ ಸುತ್ತದೆ? ಪ್ರಾಂತ್ಯದೊಳಗೆ ಪ್ರಾಂತ್ಯ ಒಂದು ಕಲ್ಪನೆಯೇ? ಅಲ್ಲದೇ ಈ ಪ್ರಾಂತ್ಯಯತೆ ಸೃಷ್ಟಿಸುತ್ತಿರುವ ಸಂಕಥನಗಳೇನು? ಅವು ನವ ರಾಷ್ಟ್ರೀಯತೆಗಳೇ? ಅಥವಾ ಸೀಮಿತ ಅಜೆಂಡಾಗಳನ್ನು ಇಟ್ಟುಕೊಂಡು ಮರುಹುಟ್ಟು ಪಡೆದಿರುವ ತಕರಾರುಗಳೇ? ಇತ್ಯಾದಿ ಪ್ರಶ್ನೆಗಳು ಸಹಜವಾಗಿ ಮೂಡುತ್ತದೆ.

ಕರ್ನಾಟಕದಲ್ಲಿ ಪ್ರಾಂತೀಯತೆಯ ಇತಿಹಾಸ ಇಲ್ಲವೆಂದಲ್ಲ. ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಇದ್ದಂತಹ ಪ್ರಾಂತೀಯತೆ ಇವತ್ತಿನ ಸಂದರ್ಭದಲ್ಲಿ ಹೊಸರೂಪವನ್ನು ಪಡೆಯುತ್ತಿರುವುದು ವಾಸ್ತವತೆ. ಏಕೀಕರಣ ಸಂದರ್ಭದಲ್ಲಿ ಸೂಕ್ಷ್ಮವಾಗಿ ನಾಲ್ಕು ಪ್ರಾಂತೀಯತೆ ಇದ್ದರೂ ಅದರ ಅಂತಿಮ ಗುರಿ ಒಂದು ವಿಶಾಲವಾದ "ಮೈಸೂರು"ಪ್ರಾಂತ್ಯವನ್ನು ನಿರ್ಮಿಸುವುದಾಗಿತ್ತು .ಕೆಲವು ಪ್ರಾಂತ್ಯಗಳಂತೂ ಯಾವುದೇ ತಕರಾರುಗಳಿಲ್ಲದೇ ಕರ್ನಾಟಕದ ಭಾಗಗಳಾದವು -ಅವುಗಳಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ದಕ್ಷಿಣ ಕನ್ನಡ ಒಂದು. ಕೆಲವು ಪ್ರಾಂತ್ಯಗಳಂತೂ ಹೊಸ ರಾಜ್ಯದ ಸ್ಥಾಪನೆಯನ್ನು ವಿರೋಧಿಸಲು ತಮ್ಮದೇ ಆದ ಸಂಕಥನವನ್ನು ಮುಂದಿಟ್ಟವು: "ಏಕೀಕರಣವೆನ್ನುವುದು ಒಂಧು ಕೃತಕ ನಿರ್ಮಿತಿ,""ಇದೊಂದು ವಸಾಹತನ್ನು ನಿರ್ಮಿಸುವ ಯತ್ನ" ಇತ್ಯಾದಿ. ಇದರಲ್ಲಿ ಕೊಡಗು ಮಂಚೂಣಿಯಲ್ಲಿತ್ತು ಎಂದರೂ ಸುಳ್ಳಲ್ಲ. ಈ ರೀತಿಯ ಸಂಕಥನಗಳು ಇಂದಿನ ಸಂದರ್ಭದಲ್ಲಿ ಬದಲಾಗಿವೆ. ಇವತ್ತು ಸಂಕಥನಗಳು ತಮ್ಮನ್ನು ತಾವು ವಿಶಿಷ್ಟ ರಾಷ್ಟ್ರೀಯತೆ ಎಂದು ಹೇಳಿಕೊಂಡರೂ ಅದು ಅಲ್ಲಿಗೆ ಸೀಮಿತಗೊಂಡಿಲ್ಲ- ತಮ್ಮನ್ನು ವಿಶಿಷ್ಟ ಸಾಂಸ್ಕೃತಿಕ-ಭಾಷಿಕ ಅಸ್ಮಿತೆಗಳು ಎಂದು ಗುರುತಿಸಿಕೊಳ್ಳುತ್ತವೆ.

ಬಹುಷ: ಇತ್ತೀಚಿನ ವರುಷಗಳಲ್ಲಿ ಅತೀ ಹೆಚ್ಚು ತಕರಾರುಗಳನ್ನು ಸೃಷ್ಟಿಸಿದ ಪ್ರಾಂತ್ಯಗ್ಗಳಲ್ಲಿ ಕೊಡಗು ಒಂದು. ತೆಲಂಗಾಣದ ಘೋಷಣೆಯ ನಂತರ ಭಾರತದ್ಯಂತ 30 ಹೆಚ್ಚು ಹೊಸ ರಾಜ್ಯಗಳ ಬೇಡಿಕೆಗಳ ಪಟ್ಟಿಯಲ್ಲಿ ಕೊಡಗು ಕೂಡ ಸೇರಿಸಲಾಗುತ್ತದೆ. ವಾಸ್ತವವಾಗಿ ಇದೊಂದು ಮಿಥ್ಯ. ಕೊಡಗು ಇವತ್ತು ಬೇಡಿಕೆ ಇಟ್ಟಿರುವುದು ಹೊಸ ರಾಜ್ಯಕ್ಕಾಗಿ ಅಲ್ಲ, ಹೊರತು, "ಸ್ವಾಯತ್ತ ಕೊಡಗು ಪ್ರಾಂತ್ಯಕ್ಕಾಗಿ"-ಅದರ ಬೇಡಿಕೆ ರಾಜಕಾರಣ ಇವತ್ತು ಬದಲಾಗಿದೆ. ಕೊಡಗಿನ ಬೇಡಿಕೆ, "ಪ್ರಾಂತ್ಯದೊಳಗೆ ಪ್ರಾಂತ್ಯಕ್ಕಾಗಿ" ಇರುವುದನ್ನು ಗಮನಿಸಬೇಕು. ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವಿದೆ. ಕೊಡಗಿನ ಚಳುವಳಿಗಾರರು ಆಗಾಗ ಬದಲಾಯಿಸುತ್ತಿರುವ ರಾಜಕಾರಣವನ್ನು ಗಮನಿಸಿದರೆ "ಸ್ವಾಯತ್ತ ಪ್ರಾಂತ್ಯ"ದ ಬೇಡಿಕೆ ಯಾವತ್ತೂ ಶಾಶ್ವತವಲ್ಲ-ಅವರು ಮತ್ತೊಮ್ಮೆ ಹಳೆಯ ರಾಗದ ತಗಾದೆಯನ್ನು ಎತ್ತಿದರೆ ಆಶ್ಚರ್ಯಪಡಬೇಕಾಗಿಲ್ಲ. ನೈಜವಾಗಿ ನೋಡುವುದಾದರೆ ಕೊಡಗಿನತಕರಾರು ಹೊಸತೇನಲ್ಲ. ಕೆಲವು ವರುಷದ

ಒಂದು ಪ್ರಾಂತ್ಯ ಇನ್ನೊಂದು ಪ್ರಾಂತ್ಯಕ್ಕಿಂತ ಹೇಗೆ ಹಾಗೂ ಯಾಕೆ ವಿಭಿನ್ನವಾದ ರಾಜಕಾರಣವನ್ನು ಮಾಡುತ್ತದೆ? ಯಾವ ಕಾರಣಕ್ಕಾಗಿ ಅವು ವಿಭಿನ್ನವಾದ ಸಂಕಥನಗಳನ್ನು ಮುಂದಿಡುತ್ತವೆ? ಪ್ರಾಂತೀಯತೆಯ ರಾಜಕಾರಣ ಅಂತಿಮವಾಗಿ ಯಾವ ತಾತ್ವಿಕತೆಯನ್ನು ಪ್ರತಿನಿಧಿ ಸುತ್ತದೆ? ಪ್ರಾಂತ್ಯದೊಳಗೆ ಪ್ರಾಂತ್ಯ ಒಂದು ಕಲ್ಪನೆಯೇ? ಅಲ್ಲದೇ ಈ ಪ್ರಾಂತ್ಯಯತೆ ಸೃಷ್ಟಿಸುತ್ತಿರುವ ಸಂಕಥನಗಳೇನು? ಅವು ನವ ರಾಷ್ಟ್ರೀಯತೆಗಳೇ? ಅಥವಾ ಸೀಮಿತ ಅಜೆಂಡಾಗಳನ್ನು ಇಟ್ಟುಕೊಂಡು ಮರುಹುಟ್ಟು ಪಡೆದಿರುವ ತಕರಾರುಗಳೇ? ಇತ್ಯಾದಿ ಪ್ರಶ್ನೆಗಳು ಸಹಜವಾಗಿ ಮೂಡುತ್ತದೆ.

ಹಿಂದೆ ಕೊಡಗಿನ ಗೋಡೆಗಳಲಿದ್ದ ಬರಹಗಳನ್ನು ಗಮನಿಸಿದರೆ ಪ್ರಾಂತೀಯತೆ ಒಂದು ಸಂದರ್ಭದಲ್ಲಿ ಹಾಗೂ ಕಾಲಘಟ್ಟದಲ್ಲಿ ಯಾವ ಹಂತಕ್ಕೆ ತಲುಪಿತ್ತು ಎಂಬುದು ಕಂಡುಬರುತ್ತದೆ.

"ಕೊಡಗುರಾಜ್ಯ ನಮ್ಮ ಆತ್ಮ ಗೌರವ", "ಕರ್ನಾಟಕ ಸರ್ಕಾರ ಇನ್ನುಸಾಕು. ಕೊಡಗು ಸರ್ಕಾರ ಇನ್ನೊಮ್ಮೆ ಬೇಕು, ಕೊಡಗು ಕರ್ನಾಟಕದ ಸಂಪತ್ತು ಸೃಷ್ಟಿಸುವ ವಸಾಹತುವಲ್ಲ". ಪ್ರಾತಿನಿಧಿಕವಾಗಿ ಕೊಡಗು ವಿರೋಧಗಳ ಸಂಕೇತದ ಪ್ರದೇಶವೆಂದರೆ ಅತಿಶಯೋಕ್ತಿಯಾಗಲಾರದು. ಒಂದೆಡೆ ಕೊಡಗು ಅತೀ ಹೆಚ್ಚು ರಾಜ್ಯಕ್ಕೆ ವರಮಾನವನ್ನು ನೀಡುವ ಪ್ರದೇಶ, ಅತೀಹೆಚ್ಚು ಆದಾಯವಿರುವ ಪ್ರದೇಶ, ಅತೀ ಹೆಚ್ಚು ಕಾಫಿ ಬೆಳೆಯುವ ಪ್ರದೇಶ, ಮತ್ತೊಂದೆಡೆ ಕೊಡಗಿನ ಅಭಿವೃದ್ಧಿ ರಾಜ್ಯದ ಸರಾಸರಿ ಅಭಿವೃದ್ಧಿಯಿಂದ ಕಡಿಮೆಯೆಂದೇ ಹೇಳಬೇಕು,ಇಲ್ಲಿ ಅತೀ ಕಡಿಮೆಸಂಖ್ಯೆಯ ಶಾಲಾ ಕಾಲೇಜುಗಳಿರುವುದು ಕೂಡ ಒಂದು ವಾಸ್ತವ.

ಕೊಡಗಿನಲ್ಲಿ "ಸ್ವಾಯತ್ತ ಪ್ರಾಂತ್ಯಕ್ಕಾಗಿ" ಅಥವಾ "ರಾಜ್ಯಕ್ಕಾಗಿ" ನಡೆಯುತ್ತಿರುವ ಹೋರಾಟಕ್ಕೆ ಒಂದು ಇತಿಹಾಸವಿದೆ. 1927 ರಲ್ಲಿ ಸೈಮನ್ ಕಮಿಷನ್ ಎದುರು ಅಂದಿನ ನಾಯಕರು ಈ ಬೇಡಿಕೆಯನ್ನು ಮುಂದಿಟ್ಟಿದ್ದರು. ಇದಕ್ಕಿಂತಲೂ ವಿಭಿನ್ನವಾದ ಹೋರಾಟಗಳು ಇಲ್ಲಿ ನಡೆದಿವೆ. 1958ರಲ್ಲಿ ಕೊಡಗು ಮತದಾರರ ವೇದಿಕೆ ಮೈಸೂರಿನ "ಮಲತಾಯಿ"ಧೋರಣೆಯನ್ನು ವಿರೋಧಿಸಿತ್ತು, ಇದರಲ್ಲಿ "ಆಣೆಕಟ್ಟು ವಿರೋಧಿ" ಧ್ವನಿಗಳು ಕೂಡ ಸೇರಿದ್ದವು. ಈ ವೇದಿಕೆ ಬಹಳ ಕಾಲ ಬದುಕಲಿಲ್ಲ.

ಈ ಸಂದರ್ಭದಲ್ಲಿ 'ಕಾವೇರಿ ಸೇನೆ"ಯ ಪ್ರಸ್ತಾವನೆ ಮುಖ್ಯ. ಈ ಸೇನೆ 1870ರ ದಶಕದಲ್ಲಿ 'ಕೊಡಗು ಕೊಡವರಿಗೆ"ಎಂಬ ವಾದವನ್ನು ಮುಂದಿಟ್ಟರೂ ಅದು ಹೆಚ್ಚು ಕಾಲ ಬಾಳಲಿಲ್ಲ. ಅದೇ ಸಂದರ್ಭದಲ್ಲಿ ಹುಟ್ಟಿದ"ಕೊಡಗು ಮೂಲ ನಿವಾಸಿಗಳ ಸಂಘ" ಅಣೆಕಟ್ಟು ವಿರೋಧಿ ಚಳುವಳಿಯನ್ನು ಎತ್ತಿಕೊಂಡಿತ್ತು. ಇದರ ಫಲಶ್ರುತಿ ಎಂದರೆ ಕದಂಬ ಕಡಕಟ್ಟೆಯ ನಿರ್ಮಾಣದ ತಡೆ. ಅದೇ ರೀತಿ ಬರಪೊಳೆ ವಿದ್ಯುತ್ ಸ್ಥಾವರವನ್ನು ವಿರೋಧಿಸಿದ್ದು "ಜನ ಜಾಗೃತಿ ಸಮಿತಿ", 1980ರಲ್ಲಿ ಪರಿಸರ ಉಳಿಸಲು ಹುಟ್ಟಿಕೊಂಡದ್ದು ಕೊಡಗು ಯುವಜನ ಸಂಘ. ಇವೆಲ್ಲ ಕೊಡಗಿನ ಪ್ರಸ್ತುತ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

ಬಹುಷ: 1990ರ ದಶಕ ಕೊಡಗಿನ ಸಂದರ್ಭದಲ್ಲಿ ಬಹಳ ಮುಖ್ಯ.ಜಾಗತೀಕರಣದ ಸಂದರ್ಭದಲ್ಲಿ ಕೊಡಗಿನ ಕಾಫಿಗೆ ಹೊಸ ಅಂತರರಾಷ್ಟ್ರೀಯ ಮಾರುಕಟ್ಟೆ ದೊರೆತ ಹಾಗೂ ನಿರ್ಮಿಸಿದ ದಶಕ ಎಂದು ಹೇಳಬಹುದು. ಒಂದೆಡೆ ಮಾರುಕಟ್ಟೆ ಆಧಾರಿತ ಶ್ರೀಮಂತಿಕೆ ಬಂದಿದ್ದರೆ, ಮತ್ತೊಂದೆಡೆ ಆರ್ಥಿಕತೆ ಡೋಲಾಯಮಾನವಾಯಿತು ಅಥವಾ ಅಲ್ಲೋಲ ಕಲ್ಲೋಲವಾಯಿತು. ಆರ್ಥಿಕವಾಗಿ ಸಮುದಾಯಗಳ ಐಡೆಂಟಿಟಿ ನಷ್ಟ ವಾಗುತ್ತಿದ್ದ ಕಾಲವೂ ಹೌದು. ಆದಕಾರಣ ಕೊಡಗಿನಲ್ಲಿ ನಡೆ ಯುತ್ತಿರುವ ಪ್ರತ್ಯೇಕತೆಯ ಸಂಕಥನ ಹಾಗೂ ಹೋರಾಟ ವನ್ನು ಆರ್ಥಿಕತೆಯ ಅಲ್ಲೋಲ ಕಲ್ಲೋಲತೆಯಲ್ಲಿ, ಜಾಗತೀ ಕರಣದ ಸಂದರ್ಭದಲ್ಲಿ ,ಐಡೆಂಟಿಟಿಗಳ ತಾಕಲಾಟದಲ್ಲಿ ನೋಡಬೇಕು. ದುರಂತವೆಂದರೆ ಚಳುವಳಿಗಾರರು ನೀಡುವ ಸಂಕಥನದಲ್ಲಿ ಇವುಗಳ ಪ್ರಾಸ್ತಾವನೆಯಾಗುವುದಿಲ್ಲ. ಅವುಗಳು ಮರೆಯಾಗು ತ್ತವೆ. ಇದಕ್ಕೆ ಪರ್ಯಾಯವಾಗಿ ಹೊಸ ಹೊಸ ಸಂಕಥನಗಳನ್ನು ಅದು ಸೃಷ್ಟಿಸುತ್ತದೆ.



1991ರಲ್ಲಿ ಕೊಡಗು ಏಕೀಕರಣ ರಂಗದ ಸ್ಥಾಪನೆಯಾಯಿತು. ಇದು ಹಲವು ಸಲ ತನ್ನ ಹೆಸರನ್ನು ಬದಲಾಯಿಸಿತು. ಕೊಡಗು ಲಿಬರೇಶನ್ ವಾರಿಯರ್ಸ್ , ಕೊಡಗು ರಾಜ್ಯ ಮುಕ್ತಿ ಮೋರ್ಚ (1995), ತದನಂತರ ಕೂರ್ಗ್ ನ್ಯಾಶನಲ್ ಕೌನ್ಸಿಲ್(1999), ಇದರ ಪ್ರಾತಿನಿಧಿತ್ವದ ಬಗ್ಗೆ ಬಹಳಷ್ಟು ಚರ್ಚೆಗಳಿದ್ದರೂ, ಅದರ ರಾಜಕಾರಣವನ್ನು

1991ರಲ್ಲಿ ಕೊಡಗು ಏಕೀಕರಣ ರಂಗದ ಸ್ಥಾಪನೆಯಾಯಿತು. ಇದು ಹಲವುಸಲ ತನ್ನಹೆಸರನ್ನು ಬದಲಾಯಿಸಿತು. ಕೊಡಗು ಲಿಬರೇಶನ್ ವಾರಿಯರ್ಸ್, ಕೊಡಗು ರಾಜ್ಯ ಮುಕ್ತಿ ಮೋರ್ಚ (1995), ತದನಂತರ ಕೂರ್ಗ್ ನ್ಯಾಶನಲ್ ಕೌನ್ಸಿಲ್ (1999), ಇದರ ಪ್ರಾತಿನಿಧಿತ್ವದ ಬಗ್ಗೆ ಬಹಳಷ್ಟು ಚರ್ಚೆಗಳಿದ್ದರೂ, ಅದರ ರಾಜಕಾಣ ವನ್ನು ಹಾಗೂ ಅದು ಎತ್ತಿರುವ ಪ್ರಶ್ನೆ ಗಳನ್ನು ವಿಮರ್ಶೆಗೆ ಒಳಪಡಿಸುವುದು ಇಂದಿನ ಸಂದರ್ಭದಲ್ಲಿ ಅವಶ್ಯಕ ಹಾಗೂ ಅನಿವಾರ್ಯ. ಕೂರ್ಗ್ ನ್ಯಾಶನಲ್ ಕೌನ್ಸಿಲ್ (ಸಿಎನ್‌ಸಿ) ರಾಜಕಾರಣದಲ್ಲಿ ಹಲವು ಮಜಲುಗಳಿವೆ. ಅದು ತನ್ನ ವಾದವನ್ನು ಪ್ರಸ್ತುತ ಸಂದರ್ಭದಲ್ಲಿ ಮುಂದಿಡುವಾಗ ಇತಿಹಾಸ ವನ್ನು ಕೆದಕುತ್ತದೆ. ಅಲ್ಲದೇ ತನ್ನದೇ ಆದ ಇತಿಹಾಸವನ್ನುನಿರ್ಮಿಸುತ್ತದೆ..ವಾಸ್ತವವಾಗಿ ಕೊಡಗಿನ ಕುರಿತು ಕಡಿಮೆ ಯೆಂದರೂ 17 ರೂಪದ ಇತಿಹಾಸವಿದೆ.

ಹಾಗೂ ಅದು ಎತ್ತಿರುವ ಪ್ರಶ್ನೆಗಳನ್ನು ವಿಮರ್ಶೆಗೆ ಒಳಪಡಿಸುವುದು ಇಂದಿನ ಸಂದರ್ಭದಲ್ಲಿ ಅವಶ್ಯಕ ಹಾಗೂ ಅನಿವಾರ್ಯ.

ಕೂರ್ಗ್ ನ್ಯಾಶನಲ್ ಕೌನ್ಸಿಲ್ (ಸಿಎನ್‌ಸಿ) ರಾಜಕಾರಣದಲ್ಲಿ ಹಲವು ಮಜಲುಗಳಿವೆ. ಅದು ತನ್ನ ವಾದವನ್ನು ಪ್ರಸ್ತುತ ಸಂದರ್ಭದಲ್ಲಿ ಮುಂದಿಡುವಾಗ ಇತಿಹಾಸ 'ವನ್ನು ಕೆದಕುತ್ತದೆ. ಅಲ್ಲದೇ ತನ್ನದೇ ಆದ ಇತಿಹಾಸವನ್ನು ನಿರ್ಮಿಸುತ್ತದೆ. ವಾಸ್ತವವಾಗಿ ಕೊಡಗಿನ ಕುರಿತು ಕಡಿಮೆ ಯೆಂದರೂ 17 ರೂಪದ ಇತಿಹಾಸವಿದೆ.ಕೆಲವು ಇತಿಹಾಸ ಕೊಡಗಿ ಅಥವಾ ಕೂರ್ಗಿಗ ಳನ್ನು ಮೂಲನಿವಾಸಿಗಳೆಂದು ವಾದಿಸುತ್ತವೆ. ಅಲ್ಲದೇ ಅವರನ್ನು ಕ್ಷತ್ರಿಯ ಜನಾಂಗದವರೆಂದು ಪ್ರತಿಬಿಂಬಿಸುತ್ತದೆ, ಇನ್ನೂ ಕೆಲವು ಇತಿಹಾಸಕಾರರು ಅವರನ್ನು ಎಸಿಯಾ ಮೈನರ್ ಭಾಗದವರೆಂದೂ, ಮಧ್ಯ ಇರಾನಿಯರೆಂದು ,ಅಲೆಕ್ಸಾಂಡರ್‌ನ ಪಾದಾಳು ಸೈನಿಕರೆಂದೂ ವಾದಿಸುತ್ತದೆ.

ಇದರಲ್ಲಿರುವ "ಮೂಲನಿವಾಸಿ" ಹಾಗೂ "ಹೊರಗಿನವರು"ಎಂಬ ವಿರೋಧಾತ್ಮಕ ಸಂಕಥನಗಳಲ್ಲಿ "ಹೊರಗಿನವರು" ಎಂಬವಾದವನ್ನು ಸಿಎನ್‌ಸಿ ವಿರೋಧಿಸುತ್ತದೆ. ಅದರ ಪ್ರಕಾರ ಕೊಡಗಿನವರು ಮೂಲತಃ ಆ ಪ್ರದೇಶದ ಮೂಲನಿವಾಸಿಗಳಲ್ಲದೇ ಅವರು ಅತೀ ಹಿಂದುಳಿದ ಬುಡಕಟ್ಟು ಜನಾಂಗದವರು. ಕೊಡವರುನಿ ಗ್ರೋಡ್ ವರ್ಣ, ಮಂಗೋ ಲೈಡ್ ವರ್ಣ ಅಥವಾ ದ್ರಾವಿಡರು ಎಂಬ ವಾದವನ್ನು ಕೂಡ ಅದು ವಿರೋಧಿಸುತ್ತದೆ. ಅಲ್ಲದೇ ತಾವು ಕನ್ನಡ ಭಾಷಿಕರು ಎಂಬುದನ್ನು ಕೂಡ ವಿರೋಧಿಸುತ್ತದೆ. ಈ ಎಲ್ಲಾಸಿದ್ಧಾಂತಗಳನ್ನು ವಿರೋಧಿಸಿದ ನಂತರ ಅದು ತನ್ನದೇ ಆದ ಐಡೆಂಟಿ ಟಿಯನ್ನು ನಿರ್ಮಿಸುತ್ತದೆ. ಅದರ ಪ್ರಕಾರ ಕೊಡಗಿಗಳು ವಿಶಿಷ್ಟವಾದ ರಾಷ್ಟ್ರೀಯತೆಯಾದ "ಕೊಡವ ಜನಾಂಗೋ ಸಾಂಸ್ಕೃತಿಕ ಗುಂಪುಗಳು".

ಕೊಡಗಿಗಳನ್ನು ಒಂದು ರಾಷ್ಟ್ರೀಯತೆ ಎಂದು ವಾದಿಸುವಾಗ ಅವರನ್ನು "ಅಲ್ಪಸಂಖ್ಯಾಕ ಜನಾಂಗೋ ಸಾಂಸ್ಕೃತಿಕ ರಾಷ್ಟ್ರೀಯತೆ" ಎಂದು ಪರಿಚಯಿಸುತ್ತದೆ. ಅದೇ ನಿಟ್ಟಿನಲ್ಲಿ ಅವುಗಳ ಜಾಗತೀಕ ಮನ್ನಣೆಯನ್ನು ಬಯಸುತ್ತದೆ. ಈ ನಿರ್ಮಿತಿಯ ಸಂದರ್ಭದಲ್ಲಿ ಕೊಡಗಿಗಳ ಕೆಲವು ವಿಶಿಷ್ಟ ಆಚರಣೆಗಳನ್ನು ಮುಂದಿಡುತ್ತದೆ: ಕೊಡಗಿಗಳಲ್ಲಿ ಸೆಕ್ಟ್ ಅಥವಾ ಉಪ ಸೆಕ್ಟ್ ಗಳಿಲ್ಲ,ಹೊರತು ಕ್ಲಾನ್‌ಗಳಿವೆ– ಅವುಗಳು ಹಿಂದುಗಳಲ್ಲಿ ಇರುವ ಗೋತ್ರ ಸಂಪ್ರದಾಯಕ್ಕೆ ಅತೀ ಹತ್ತಿರ ಎನ್ನಬಹುದು. ಹಿಂದುಗಳಲ್ಲಿ ಇರುವ ಸ್ವಗೋತ್ರ ಮದುವೆ ನಿಷೇಧ ಕೊಡಗಿಗಳಲ್ಲಿ ಇದೆ. ಕೊಡಗಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅವರು ತಮ್ಮ ಪೂರ್ವಿಕರನ್ನು ಪೂಜಿಸುತ್ತಾರೆ. ಆದಕಾರಣ ಎಲ್ಲರನ್ನು "ಕೂರ್ಗಿ" ಎಂಬ ಪರಿಕಲ್ಪನೆಯೊಳಗೆ ಅದು ಸೇರಿಸಿಕೊಳ್ಳುವುದಿಲ್ಲ.

ಅದರ ವ್ಯಾಖ್ಯಾನದೊಳಗೆ ಬರದೇ ಇರುವ ಸಮುದಾಯಗಳು ಇದೇ ಸಂದರ್ಭದಲ್ಲಿ 'ಬೇರೆ"ಯವರಾಗಿ ಬಿಡುತ್ತವೆ. ಯಾರೆಲ್ಲಾ "ಗುರುಕರೋಣ"ವನ್ನು, ಪೂರ್ವಿಕರನ್ನು ಪೂಜಿಸುತ್ತಾರೆಯೋ, ಸಾಂಪ್ರದಾಯಿಕ ವೈಯಕ್ತಿಕ ಕಾನೂನನ್ನು ಅನುಸರಿಸುತ್ತಾರೆಯೋ "ಒಕ್ಕಾ"ವನ್ನು ಅನುಸರಿಸುತ್ತಾರೆಯೋ,"ಗುರು" ಅಥವಾ "ಆದಂ" ಪರಂಪರೆಯನ್ನು ನಂಬು ತ್ತಾರೆಯೋ ಅವರು "ಕೊಡಗಿ"ಗಳು. ಇನ್ನಿತರರು ,ಉಳಿದವರು 'ಬೇರೆಯವರು" , "ಹೊರಗಿನವರು". ಅಂದರೆ ಕೊಡಗಿನಲ್ಲಿ ಶತಮಾನದುದ್ದಕ್ಕೂ ಬದುಕುತ್ತಿರುವ ಲಿಂಗಾಯತರು, ಗೌಡರು, ಒಕ್ಕಲಿಗರು, ಕುರುಬರು, ಮಾಪಿಳ್ಳೆಗಳು ಅದರ ವ್ಯಾಖ್ಯಾನೆಯಲ್ಲಿ ಎಂದಿಗೂ ಆ ಕಾರಣಕ್ಕಾಗಿ ಕೊಡಗಿನವರ ಚಳುವಳಿ ಅಥವಾ ಹೋರಾಟ ನಿರ್ದಿಷ್ಟ ಸಮುದಾಯ ಸೀಮಿತವಾಗಿ ಬಿಡುತ್ತದೆ–ಅದರಲ್ಲಿ ಗೌಡರಿಲ್ಲ, ಜೇನುಕುರುಬರಿಲ್ಲ, ಮಾಪಿಳ್ಳೆಗಳಿಲ್ಲ ಹೊರತು ಬರೇ "ಕೊಡಗಿ"ಗಳಿದ್ದಾರೆ.

ಸಿಎನ್‌ಸಿಯ ರಾಜಕೀಯ ಸಂಕಥನದಲ್ಲಿ ಎರಡು

ಹಂತದ ಇತಿಹಾಸವಿದೆ.: ಏಕೀಕರಣ ಪೂರ್ವದ ಇತಿಹಾಸ ಒಂದಾದರೆ, ಏಕೀಕರಣೋತ್ತರ ಇತಿಹಾಸ ಎರಡನೇ ಹಂತದ್ದು, ಮೊದಲನೇ ವಾದದಲ್ಲಿ ಐತಿಹಾಸಿಕ ಕೊಡಗಿನ ಸ್ವಾಯತ್ತ ಪ್ರಶ್ನೆ ನಿಚ್ಚಳವಾಗಿ ಕಂಡು ಬರುತ್ತದೆ– ಸಿಎನ್‌ಸಿ ಪ್ರಕಾರ ಇತಿಹಾಸದಲ್ಲಿ ಕೊಡಗು ಒಂದು ಸ್ವತಂತ್ರ "ರಾಷ್ಟ್ರ=ರಾಜ್ಯ"ವಾಗಿತ್ತು, ಅದಕ್ಕೆ ಸ್ವಂತವಾದ ರಾಜಕೀಯ ಚೌಕಟ್ಟು ಇತ್ತು, ಸ್ವತಂತ್ರವಾದ ಅಸೆಂಬ್ಲಿ ಇತ್ತು, ಅದೊಂದು ಇಡೀ ದೇಶಕ್ಕೆ "ಮಾದರಿ"ಯಾದ ಪ್ರಾಂತ್ಯವಾಗಿತ್ತು,ಅದರ ಇತಿಹಾಸದಲ್ಲಿ "ಮಾದರಿಯಾದ ಗ್ರಾಮೀಣ ಮಟ್ಟದ ಗಣರಾಜ್ಯಗಳಿದ್ದವು."

ಸಿಎನ್‌ಸಿ ಪ್ರಕಾರ ಪ್ರಾಚೀನ ಭಾರತದ 56 ಸ್ವತಂತ್ರ ರಾಷ್ಟ್ರಗಳಲ್ಲಿ "ಕೊಡಗು" ಒಂದಾಗಿತ್ತು, ಹಾಗೂ ಕೊಡಗಿನಲ್ಲಿ 45 "ನಾಡ" ಅಥವಾ "ತಕ್ಕ"ಗಳಿದ್ದವು ಈ ಇತಿಹಾಸವನ್ನು ನಿರ್ಮಿಸುವಾಗ ಅದು ವಾಲ್ಮೀಕಿ ರಾಮಾಯಣ, ಸಿಂಗಾರ ವೇಲು ಮೊದಲಿ ಯಾರ್‌ನ "ಅಭಿನ ದಾನ ಚಿಂತಾಮಣಿ"ದಂತಹ ಗ್ರಂಥಗಳನ್ನು ಉಲ್ಲೇಖಿಸುತ್ತದೆ. ಈ ವಾದಗಳಲ್ಲಿ ಇತಿಹಾಸವನ್ನು ಹಾಗೂ ಅದರೊಂದಿಗೆ ಸೇರಿದ ಐಡೆಂಟಿಟಿಯ ನಿರ್ಮಿತಿಯನ್ನು ನಾವು ನೋಡಬಹುದು. ಇಲ್ಲಿ ಕಲ್ಪನೆ ಹಾಗೂ ವಾಸ್ತವತೆಗಳ ಸಮ್ಮೀಳನವಿದೆ. ಈ ಸಂದರ್ಭದಲ್ಲಿ ಕೊಡಗಿನ ಸ್ವತಂತ್ರಕ್ಕೆ ಒಂದು ನಿರ್ದಿಷ್ಟವಾಗ ಕಾಲಘಟ್ಟವನ್ನು ಸೂಚಿಸುವುದನ್ನು ಇಲ್ಲಿ ಗಮನಿಸಬೇಕು.ಅದರ ಪ್ರಕಾರ ಕೊಡಗು 1633ರ ತನಕ ತನ್ನ ಸ್ವಾತಂತ್ರ್ಯ ಉಳಿಸಿಕೊಂಡಿತ್ತು.

1631ರಿಂದ1834ರ ತನಕ ಕೊಡಗು "ಪರಕೀಯ ಲಿಂಗಾಯತ" ಕೆಳದಿ ಅರಸರ ಆಡಳಿತಕ್ಕೊಳ ಪಟ್ಟಿತ್ತು.. 1830ರಿಂದ1857ರ ತನಕ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಕಮಿಷನರ್‌ನ ಆಳ್ವಿಕೆ, ತದನಂತರ ಮುಖ್ಯ ಕಮಿಷನರ್ ಮುಖಾಂತರ ಬ್ರಿಟಿಷ್ ಆಡಳಿತದ ನೇರ ಆಳ್ವಿಕೆಗೆಳಗಾಯಿತು. ಇಲ್ಲಿ ಕೊಡಗಿನ ರಾಜಕೀಯ ಐಡೆಂಟಿಟಿಯ ನಿರ್ಮಿತಿಗೆ ಒಂದೆರಡು ನಿದ್ಧರ್ಶನಗಳನ್ನು ಸಿಎನ್‌ಸಿ ಮುಂದಿಡುತ್ತದೆ. ಅದರಲ್ಲಿ 1935ರ ಇಂಡಿಯಾ ಕಾಯಿದೆ, ಹಾಗೂ ಭಾರತ ಸಂವಿಧಾನದ 242ನೇ ಪರಿಚ್ಛೆದ– ಅದು ಕೊಡಗನ್ನು "ಸಿ" ರಾಜ್ಯವನ್ನಾಗಿ ಗುರುತಿಸಿತಲ್ಲದೇ ಅದಕ್ಕೆ ರಾಜಕೀಯ ಐಡೆಂಟಿಯನ್ನು ಕೂಡನೀಡಿತ್ತು. ಈ ಐತಿಹಾಸಿಕ ರಾಜಕೀಯ ಐಡೆಂಟಿಯನ್ನು ಪುನರ್‌ಪಡೆಯುವುದೇ ಸಿಎನ್‌ಸಿ ರಾಜಕಾರಣದ ಒಂದು ಮಹತ್ವದ ಭಾಗವಾಯಿತು. ಇಲ್ಲಿರುವ ಎರಡನೇಯತ್ನವನ್ನು ಗಮನಿಸಬೇಕು: ಸಿಎನ್‌ಸಿ ಪ್ರಕಾರ ಕೊಡಗಿಗಳು ಅತ್ಯಂತ ಹಿಂದುಳಿದ ಬುಡಕಟ್ಟು ಕೂಡಹೌದು. ಅದರ ವಾದವನ್ನು ಗಮನಿಸಿ,

"Codavas as an ethnic tribe and group of human individuals belong to a primitive tribe exclusively making Codagu-Coorg as their habitation. The race has its own legendary mixed with historical existence, its traditional Laws, language, heritage coupled with distinctive physical features. As though to identify the entire tribal race with a determinative track of land, the now a district Coorg gained its nomenclature from the Codava ethnic tribe. Codagu is a grammatical derivative of Codavas. The etymological background of the word "Codagu' suggests that it is derivative of the words Kudunad or Kodimalainad meaning pyton place and the inhabitants of the pyton place or kodimalai nad are Codavas. In other words the tribes who made Kodimalai nad as their place of habitation called themselves as Codavas and they richly deserved to be classified as hill tribe people

"ಈಸಂದರ್ಭದಲ್ಲಿ ಕೊಡಗಿಗಳು ಯಾರಿಗಿಂತಲೂ ಕಡಿವೆಯಿಲ್ಲಾ ಎನ್ನುವ ವಾದವನ್ನು ಮುಂದಿಡುತ್ತದೆ– ಇಲ್ಲಿ ರಾಜ ಕೀಯದ ಹಾಗೂ ಜನಾಂಗೀಯತೆಯ ವಿಷಯವನ್ನು ಅದು ಬೆರೆಸುತ್ತದೆ. 'ನಾವೇನು ಪಂಜಾಬಿಗಳಿಗಿಂತಲೂ, ಭಾರತದಲ್ಲಿ ನೆಲೆಸಿರುವ ಟಿಬೆಟಿಯನ್ನರಿಗಿಂತಲೂ ಕಡಿವೆಯೇ ನಿಲ್ಲ, ನಾವೇನು ದೇಶದ ಗಡಿಯನ್ನು ರಕ್ಷಿಸಲಿಲ್ಲವೇ?ಇವತ್ತಿನ ಸಂದರ್ಭದಲ್ಲಿ ಅದರ ಬೇಡಿಕೆಯಲ್ಲಿ ಬದಲಾವಣೆಯಾಗಿ ರುವುದು ಸ್ಪಷ್ಟ. ಇದು ಅದರ ರಾಜಕಾರಣದ ಇನ್ನೊಂದು ಮಜಲನ್ನು ತೋರಿಸುತ್ತದೆ. ಸಿಎನ್‌ಸಿ ಆರಂಭಗೊಂಡಾಗ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹತ್ತು ಹಲವು ಹೋರಾಟಗಳನ್ನು ನಡೆಸಿತ್ತು. ಆರಂಭದ ದಿನಗಳಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಮಹತ್ತರ ಬೇಡಿಕೆ ಎನ್ನಬಹುದು.

ಈ ಬೇಡಿಕೆ ಬದಲಾಗಿದೆ– ಕರ್ನಾಟಕದೊಳಗೆ "ಕೊಡಗು ಸ್ವಾಯತ್ತ ಪ್ರಾಂತ್ಯ"ದ ಬೇಡಿಕೆ ಬಂದಿದೆ. "ಕೊಡಗು ಸ್ವಾಯತ್ತ ಪ್ರಾಂತ್ಯ" ಬೇಡಿಕೆಯೊಳಗೆ ಎರಡು ಬೇಡಿಕೆಗಳೂ ಸೇರಿ ಕೊಂಡಿದೆ: ಒಂದನೇದಾಗಿ "ವಿಶಾಲ ಕೊಡಗು"ಸ್ಥಾಪನೆ– ಅದು ಪ್ರಾಚೀನ 46 "ನಾಡು"ಗಳನ್ನು ಒಳಗೊಂಡಿರುತ್ತದೆ, ವಿಶಾಲ ಕೊಡಗು ಇಂದಿನ ದಕ್ಷಿಣ ಕನ್ನಡವನ್ನು ಕೂಡ ಒಳಗೊಂಡಿರುವ ಕಾರಣ ಅದು ಹೊಸ ರೂಪದ ಸಂಘ ರ್ಷಗಳಿಗೆ ದಾರಿಮಾಡಿ ಕೊಡುವ ಸಾಧ್ಯತೆ ಹೆಚ್ಚು, ಎರಡ ನೇದಾಗಿ ಈ ಬೇಡಿಕೆಯಲ್ಲಿ "ಸ್ವಯಂ ನಿರ್ಧಾರದ ಬೇಡಿಕೆ"ಯೂ ಸೇರಿಕೊಂಡಿದೆ, ಅದರಲ್ಲೂ ಆಂತರಿಕ ಆಳ್ವಿಕೆ ನಡೆಸಲು "ಸ್ವಯಂ ನಿರ್ಧಾರ" ಬೇಕೆಂಬವಾದ ಇಲ್ಲಿ ಉಲ್ಲೇಖಿಸಬೇಕು.

ಇಲ್ಲೊಂದು ವಿಚಿತ್ರಇದೆ. ಸಿಎನ್‌ಸಿ ಮಾರ್ಕ್ಸ್‌ವಾದದ ಬಹಳಷ್ಟು ಪರಿಕಲ್ಪನೆಗಳನ್ನು ಉಪಯೋಗಿಸುತ್ತದೆಯೋ ಎಂಬ ಸಂಶಯ ಬರುತ್ತದೆ, ಅದು ಉಪಯೋಗಿಸುವ ಪರಿಕಲ್ಪನೆಗಳನ್ನು ಗಮನಿಸಿ: "ಆತಂರಿಕ ವಸಾಹತುಶಾಹಿ","ಕೊಡಗು ರಾಷ್ಟ್ರೀಯತೆ",'ಆಳುವ ವರ್ಗ"ಇತ್ಯಾದಿ.. ಇಲ್ಲಿ ಸಿಎನ್ ಸಿತನ್ನ ಬೇಡಿಕೆಯನ್ನು ಬದಲಾಯಿಸುವಾಗ ಅದನ್ನು ತನ್ನ ಸೋಲೆಂದು ಒಪ್ಪಿಕೊಳ್ಳುವುದಿಲ್ಲ,ಹೋರತು ಇದೊಂದು ಸಾಧಾರಣ ರಾಜಕೀಯದ ಭಾಗವೆಂದು ವಾದಿಸುತ್ತದೆ– ಇದಕ್ಕೆ ಅದು ನೀಡುವ ಉದಾಹರಣೆ ಡಾರ್ಜಿಲಿಂಗ್ ಗೋರ್ಕಾ ಹಿಲ್ ಕೌನ್ಸಿಲ್, ಟಿಬೆಟ್ ಸ್ವಾಯತ್ತ ಪ್ರಾಂತ್ಯ, ಖುರ್ದಿಸ್ಥಾನ್ ಸ್ವಾಯತ್ತ ಪ್ರಾಂತ್ಯ ಇತ್ಯಾದಿ, ಈ ಬೇಡಿಕೆಗಳ ಸಂದರ್ಭದಲ್ಲಿ ಇನ್ನಿತರ ಬೇಡಿಕೆಗಳೂ ಕೂಡ ಸೇರಿದ್ದವು:

ಅವುಗಳಲ್ಲಿ ಕೊಡವರಿಗೆ ಭಾಷಿಕ ಬುಡಕಟ್ಟು ಸ್ಥಾನ, ಉಳಿದಬುಡಕಟ್ಟುಗಳಿಗೆ ನೀಡಿದ ಮೀಸಲಾತಿ ಕೊಡವರಿಗೂ ನೀಡುವುದು, ಜನ್ಮ ಭೂಮಿಯ ಕುರಿತು ವಿಶೇಷ ಸಂವಿಧಾನಿಕ ಗ್ಯಾರಂಟಿ, ಕೇಂದ್ರೀಯ ವಿಶ್ವವಿದ್ಯಾನಿಲಯದ ಸ್ಥಾಪನೆ ಇತ್ಯಾದಿ.

ಇವೆಲ್ಲವನ್ನು ಗಮನಿಸಿದರೆ ಕೊಡವ ಹೋರಾಟಕ್ಕೆ ವಿಶಾಲವಾದ ಸಾಮಾಜಿಕ ತಳಹದಿ ಇದೆಯೆ ಎಂಬ ಗುಮಾನಿ ಬರುತ್ತದೆ. ವಾಸ್ತವವಾಗಿ ಹೋರಾಟದ ತಳಹದಿ ಅತ್ಯಂತ ಸೀಮಿತವಾಗಿರುವುದು ಅಷ್ಟೇ ಸತ್ಯ ಇವತ್ತು ಕೊಡಗಿನಲ್ಲಿ ಕೊಡವರ ಸಂಖ್ಯೆ ಕಡಿವೆಯಾಗಿರುವುದು ಒಂದು ಅಂಶವಾದರೆ, ಇನ್ನೊಂದೆಡೆ ಸಿಎನ್‌ಸಿಯ ಕೊಡವ ಐಡೆಂಟಿಟಿಯ ವ್ಯಾಖ್ಯಾನ ಹತ್ತು ಹಲವು ಸಮುದಾಯಗಳನ್ನು ಹೋರಾಟದಿಂದ, ಬೇಡಿ ಕೆಯಿಂದ ವಿಮುಖರನ್ನಾಗಿಸಿದ್ದು ಅಷ್ಟೇ ಸತ್ಯ.

ಯಾಕೆಂದರೆ ಅದರ ವ್ಯಾಖ್ಯಾನೆಯಲ್ಲಿ ವಿವಿಧ ಸಮುದಾಯಗಳು "ಬೇರೆ"ಗಳಾಗಿ, ಪ್ರಾಥಮಿಕ, ದ್ವಿತೀಯ ವಿರೋಧಗಳಾಗಿ ಅಥವಾ ಮುಖಮುಖಿಗಳಾಗಿ ಪರಿವರ್ತಿತವಾದವು, ಈ ಸಂದರ್ಭದಲ್ಲಿ ಕೊಡಗು ಹೋರಾಟದಲ್ಲಿ ಐದು ಸಮಸ್ಯೆಗಳಿರುವುದು ಸ್ಪಷ್ಟ: ಒಂದನೇದಾಗಿ, ಎಲ್ಲರನ್ನು ಪ್ರತಿನಿಧಿಸುವ ಸಮಸ್ಯೆ, ಎರಡನೆದಾಗಿ, ತಳಹದಿಯ ಸಮಸ್ಯೆ. ಮೂರನೇದಾಗಿ ಎಲ್ಲರನ್ನು ಒಳಗೊಂಡು ಹೊಸತನದಿಂದ ಕೂಡಿದ ಕೊಡಗು ಐಡೆಂಟಿಟಿಯ ನಿರ್ಮಿತಿ.

ನಾಲ್ಕನೇದಾಗಿ ಜಾಗತೀಕರಣದ ಮಾರುಕಟ್ಟೆಯ ಅಲ್ಲೋಲ ಕಲ್ಲೋಲತೆಯ ಸಂದರ್ಭದಲ್ಲಿ ಯಾವುದು ಪ್ರಾಥಮಿಕ ವಿರೋಧ: ಜಾಗತೀಕರಣವೇ? ಸಮುದಾಯಗಳೇ? ಇಲ್ಲಿ ಇನ್ನೊಂದು ಸಮಸ್ಯೆಯಿದೆ–ಆರ್ಥಿಕತೆಯ ಅಲ್ಲೋಲ ಕಲ್ಲೋಲತೆಯಲ್ಲಿ, ಜಾಗತೀಕರಣದ ಸಂದರ್ಭದಲ್ಲಿ, ಐಡೆಂಟಿ ಟಿಗಳ ತಾಕಲಾಟಗಳನ್ನು ಅದು ಏಕೆ ಸ್ಪಷ್ಟಪಡಿಸುವುದಿಲ್ಲ. ಈ ರೀತಿಯ ಗೊಂದಲಗಳಿಂದಾಗಿ ಸಿಎನ್‌ಸಿಯ ಹೋರಾಟ ಕೆಲವೇ ವ್ಯಕ್ತಿಗಳ, ಒಂದು ಸಮುದಾಯದ ಹೋರಾಟವಾಗಿ ಅಭಿವ್ಯಕ್ತಗೊಳ್ಳುತ್ತದೆ. ಅಲ್ಲದೇ ಅದೊಂದು "ಬಲ ಪಂಥೀಯ", ತೀವ್ರತರ ಪ್ರಗತಿವಿರೋಧಿ ಹೋರಾಟವಾಗಿ ಕಂಡು ಬರುತ್ತದೆ. □

ರಂಗದ ಮೇಲೆ 'ಮದುಮಗಳು'

(35ನೇ ಪುಟದಿಂದ)

ಮುಖಿಯಲ್ಲಿ ಧರ್ಮ, ಜಾತಿ, ಪ್ರೇಮ ಮತ್ತು ವಿದ್ಯೆಗಳನ್ನು ಒಂದು ಕೇಂದ್ರಕ್ಕೆ ತಂದು, ಪ್ರೇಮ ಮತ್ತು ವಿದ್ಯೆಗಳೇ ಮನುಷ್ಯನ ಬಿಡುಗಡೆಯ ಶಕ್ತಿಗಳೆಂದು, ಕಾದಂಬರಿಯು ತನ್ನ ಒಡಲ ವಿನ್ಯಾಸದೊಳಗಿಂದಲೇ ಹೊಮ್ಮಿಸುವ ಆತ್ಯಂತಿಕ ತಾತ್ವಿಕ ದರ್ಶನ ನಾಟಕದಲ್ಲಿ ಮರೆಯಾಗಿ ಹೋಗಿದೆ. ಇದು ಅಕ್ಷಮ್ಯ.

ಇಷ್ಟಾದರೂ, ನಾಟಕವನ್ನು ಒಂಭತ್ತು ತಾಸು ಹಿಡಿದಿಟ್ಟಿರುವುದು, ಅದರ ಏಕಾಗ್ರತೆ ಪೂರ್ತಿ ಚದುರಿ ಹೋಗದಂತೆ ಕಾಪಾಡಿರುವುದು, ಸುಬ್ಬಣ್ಣ ಹೆಗ್ಗಡೆಯ ಪಾತ್ರ. ಪಾತ್ರವೆಂದರೆ ಪಾತ್ರ ಮಾತ್ರವಲ್ಲ; ಆ ಪಾತ್ರ ಕಟ್ಟಿಕೊಡುವ ವಿವಿಧ ಕಥಾ ನಾಟಕಗಳು. ಇವನ್ನು ಯಶಸ್ವಿಗೊಳಿಸುವಲ್ಲಿ ಪ್ರಶಾಂತ್ ಅವರೊಂದಿಗೆ ಪಾಲ್ಗೊಂಡಿರುವ ಎಲ್ಲ ನಟನಟಿಯರ ಪ್ರತಿಭೆಯ ಪಾತ್ರವೂ ಇದೆ. ಉಲ್ಲೇಖಾರ್ಹರೆಂದರೆ, ಚೀಂಕ್ರ, ದೇವಯ್ಯ, ವೆಂಕಟಣ್ಣ, ಜೀವರತ್ನಯ್ಯ, ದೊಡ್ಡಮ್ಮ ಹೆಗ್ಗಡತಿ, ರಂಗಮ್ಮ, ನಾಗತ್ತೆ, ತಿಮ್ಮಿ, ಪೀಂಚಲು, ಅಂತಕ್ಕನ ಪಾತ್ರಧಾರಿಗಳು. ಗುತ್ತಿ ಪಾತ್ರಧಾರಿಯ ಅಭಿನಯ ಪ್ರತಿಭೆಯಲ್ಲಿ ಕೊರತೆ ಕಾಣದಾದರೂ, ಯಾಕೋ ಆತ ಗುತ್ತಿಯೆಂದು ಅನಿಸುವುದೇ ಇಲ್ಲ! ಆತ ಹೊರ ರೂಪದಲ್ಲಿ ಪಟ್ಟಣದ ಹುಡುಗನಂತೆ ಕಾಣುವುದೇ ಇದಕ್ಕೆ ಕಾರಣವಿರಬಹುದು. ಗುತ್ತಿಯ ದೈಹಿಕ ಹೊರ ಚಹರೆಗಳನ್ನು ಕುವೆಂಪು ಸುಮ್ಮ ಸುಮ್ಮನೆ ಸವಿವರವಾಗಿ ವರ್ಣಿಸಿಲ್ಲ ಎಂದು ತೋರುತ್ತದೆ.

ಅದೇನೇ ಇರಲಿ, ಅವನ ಪಾತ್ರ ವಿಶೇಷತೆಯಾದ ಅದ್ಭುತ ಕಿಲಾಡಿತನ ನಾಟಕದಲ್ಲೆಲ್ಲೂ ಪರಿಣಾಮಕಾರಿಯಾಗಿ ಅನಾವರಣವಾಗದೆ, ನಿರ್ದೇಶಕರು ಪ್ರೇಕ್ಷಕರ ಬೇಸರ ಕಳೆಯಲು ಸಾಬರನ್ನೂ, ಸ್ವಾಮೀಜಿಗಳನ್ನೂ ಕುಣಿಸಿ ರಂಜನೆ ಒದಗಿಸಲು ಮುಂದಾಗಿದ್ದಾರೆ ಎಂದು ಏನು ಹೇಳುವುದು? ಅಲ್ಲದೆ, ಐತ ಮತ್ತು ತಿಮ್ಮಪ್ಪ ಹೆಗ್ಗಡೆ ಹಾಗೂ ಸ್ವಲ್ಪ ಮಟ್ಟಿಗೆ ದೇವಯ್ಯನ ಪಾತ್ರಗಳನ್ನು ಲಘು ವಿನೋದ ಶೈಲಿಯಲ್ಲಿ; ಮತ್ತು ರಂಗಪ್ಪ ಗೌಡರ ಪಾತ್ರವನ್ನು ಕಂಬಾರರ ನಾಟಕಗಳ ಊರ ಖಳ ಗೌಡರ ಶೈಲಿಯಲ್ಲಿ ಕಟ್ಟಿರುವುದು, ಈ ಕಾದಂಬರಿಯ ಕಸಬುದಾರಿಕೆಯ ಹದ ನಮ್ಮ ಇತರೆ ಆಧುನಿಕ ಕಥನಗಳ ಕಸಬುದಾರಿಕೆಯ ಹದಕ್ಕಿಂತ ಭಿನ್ನ ಎಂಬುದನ್ನೇ ನಿರ್ದೇಶಕರು ಗುರುತಿಸಿಲ್ಲವೇನೋ ಎಂಬ ಅನುಮಾನ ಹುಟ್ಟಿಸುತ್ತದೆ.

ಇಡೀ ಕಾದಂಬರಿ, ಕನ್ನಡ ನಾಡಿನ ಒಂದು ಸಾಂಸ್ಕೃತಿಕ ಪರ್ವಕಾಲದ ಹಿಂದಿನ ಸಂಚಲನ ಶಕ್ತಿಗಳನ್ನು, ಅವು ಕಟ್ಟುವ ನಾಟಕವನ್ನು–ಅವುಗಳ ಆವರಣಕ್ಕೆ ಸಜೀವವಾಗಿ ಕಚ್ಚಿಕೊಂಡಂತೇ–ದ್ರಷ್ಟಾರ ದೃಷ್ಟಿಯಿಂದ ಸಂಕಲಿಸಿ, ಅದನ್ನು ಒಂದು ಅಭೂತಪೂರ್ವ ಸೌಂದರ್ಯಾತ್ಮಕತೆಯೊಂದಿಗೆ ಪ್ರಸ್ತುತಪಡಿಸುತ್ತದೆ. ಹಾಗೆಂದೇ ಈ ಕಾದಂಬರಿಯನ್ನು ನಾನು ಹಿಂದೊಮ್ಮೆ ನನ್ನದೊಂದು ಲೇಖನದಲ್ಲಿ ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯ ಎಂದು ಕರೆದಿದ್ದೆ. ಈ ಹಿನ್ನೆಲೆಯಿಂದ ನಾಟಕ ನೋಡಿದ ನನಗೆ ಮೇಲೆ ಹೇಳಿದ ಕಾರಣಗಳಿಗಾಗಿ ನಿರಾಶೆಯಾಗಿರುವುದು ಸಹಜವೇ. ಆದರೆ ಈ ಕಾದಂಬರಿ ಓದದ ಅಥವಾ ಓದಿಯೂ ಅದರ ಸಾಂಸ್ಕೃತಿಕ ಮಹತ್ವದ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳದ ಜನ ನಾಟಕ ನೋಡಿ ಖಂಡಿತ ಖುಷಿ ಪಟ್ಟಿರುತ್ತಾರೆ.

ಆದರೆ ಖುಷಿ ಪಡಿಸುವುದಷ್ಟೇ ಬಸವಲಿಂಗಯ್ಯನವರಂತಹ ಪ್ರಜ್ಞಾವಂತ ನಿರ್ದೇಶಕರ ಉದ್ದೇಶವಾಗಿರಲಾರದು. ಏಕೆಂದರೆ, ಸ್ವತಃ ಬಸವಲಿಂಗಯ್ಯನವರೇ ನಾಟಕದ ಮುನ್ನ ನನ್ನೊಂದಿಗೆ ಮಾತನಾಡುತ್ತಾ, ಕುವೆಂಪು ಕನ್ನಡದ ಟಾಲ್‌ಸ್ಟಾಯ್ ಎಂದರು; ಈ ಕಾದಂಬರಿಯನ್ನು ಕನ್ನಡ ಜನತೆಯ ರಾಮಾಯಣ–ಮಹಾಭಾರತವೆಂದರು. ನಾಟಕದ ಕೊನೆಯಲ್ಲಿ ಪ್ರೇಕ್ಷಕರನ್ನುದ್ದೇಶಿಸಿ ಮಾತನಾಡುತ್ತಾ, ಪೀಟರ್ ಬ್ರೂಕ್‌ನನ್ನೂ, ಅವನ 'ಮಹಾಭಾರತ'ವನ್ನೂ ಗೇಲಿ ಮಾಡಿದರು. ಆದರೆ ಸ್ವತಃ ಅವರು ಕನ್ನಡ ಸಂಸ್ಕೃತಿಯ ಈ ರಾಮಾಯಣ–ಮಹಾಭಾರತವನ್ನುಏನು ಮಾಡಿದ್ದಾರೆ ಎಂದು ನೋಡಿದರೆ, ಬಸವಲಿಂಗಯ್ಯನವರ ರಂಗೋತ್ಸಾಹ ಮತ್ತು ರಂಗ ದಕ್ಷತೆಯ ಬಗ್ಗೆ ಭೇಷ್ ಅನಿಸುವಷ್ಟು ಅವರ ಸಾಹಿತ್ಯ ಗ್ರಹಿಕೆ ಮತ್ತು ಸಂಸ್ಕೃತಿ ದರ್ಶನ ಸಾಮರ್ಥ್ಯದ ಬಗ್ಗೆ ಭೇಷ್ ಅನಿ ಸುವುದಿಲ್ಲ.

ಇದಕ್ಕೆ ಮುಖ್ಯಕಾರಣ, ಬಸವಲಿಂಗಯ್ಯ ಅವರಲ್ಲಿನ ಪ್ರತಿಭೆಯ ಕೊರತೆಯಲ್ಲ. ಬದಲಿಗೆ ಅವರಿಗೆ, ತಾನೆಂತಹ ವಿರಾಟ್ 'ಯೋಜನೆ'ಯನ್ನು ಕೈಗೆತ್ತಿಕೊಂಡಿದ್ದೇನೆ, ಅದಕ್ಕಾಗಿ ಯಾವ ಯಾವ ನೆಲೆಗಳಿಂದ ಸಲಹೆ–ಸೂಚನೆ–ಸಹಕಾರಗಳ ಅಗತ್ಯವಿದೆ; ಇದಕ್ಕೆಲ್ಲ ಎಷ್ಟು ಕಾಲ ಬೇಕು, ಎಷ್ಟು ತರಬೇತಿ ಬೇಕು;ಅಂತಿಮ ರಂಗ ಪ್ರಯೋಗದ ಮುನ್ನ ಅದರ ಎಷ್ಟು ಮತ್ತು ಯಾರಾರಿಂದ ಅವಲೋಕನ–ಪುನರವಾಲೋಕನಗಳ ಅಗತ್ಯವಿದೆ ಎಂಬುದರ ಅರಿವೇ ಹತ್ತಿರ ಬಾರದಷ್ಟು ಅತೀವ 'ಆತ್ಮವಿಶ್ವಾಸ'ಕ್ಕೆ ಬಲಿಯಾಗಿರುವುದು. ನಾಟಕದ ನಂತರ ಅವರು ನನ್ನೊಡನೆ ಮಾತನಾಡುತ್ತಾ, ಕುವೆಂಪು ಅವರನ್ನು ಇಡಿಯಾಗಿ ಕನ್ನಡದ ಜನತೆಗೆ ಮುಟ್ಟಿಸುವುದೇ ತಮ್ಮ ಈ ಮಹಾ ಪ್ರಯೋಗದ ಉದ್ದೇಶವೆಂದೂ, ನಾಟಕ ನೋಡಲು ಬರುವ ಪ್ರತಿಯೊಬ್ಬರಿಗೂ ಕಾದಂಬರಿಯ ಪ್ರತಿಯೊಂದನ್ನು (ನೂರುರೂಪಾಯಿಗಳ) ಸುಲಭ ಬೆಲೆಯಲ್ಲಿ ನೀಡುವ ತಮ್ಮ ಪ್ರಯತ್ನ ಸಫಲವಾಗಲಿಲ್ಲವೆಂದೂ ಹೇಳಿದರು.

ನಾಟಕವನ್ನು ಒಂಭತ್ತು ತಾಸು ಹಿಡಿದಿಟ್ಟಿರುವುದು, ಅದರ ಏಕಾಗ್ರತೆ ಪೂರ್ತಿ ಚದುರಿ ಹೋಗದಂತೆ ಕಾಪಾಡಿರುವುದು, ಸುಬ್ಬಣ್ಣ ಹೆಗ್ಗಡೆಯ ಪಾತ್ರ. ಪಾತ್ರವೆಂದರೆ ಪಾತ್ರ ಮಾತ್ರವಲ್ಲ; ಆ ಪಾತ್ರ ಕಟ್ಟಿಕೊಡುವ ವಿವಿಧ ಕಥಾ ನಾಟಕಗಳು. ವನ್ನು ಯಶಸ್ವಿಗೊಳಿಸುವಲ್ಲಿ ಪ್ರಶಾಂತ್ ಅವರೊಂದಿಗೆ ಪಾಲ್ಗೊಂಡಿರುವ ಎಲ್ಲ ನಟ ನಟಿಯರ ಪ್ರತಿಭೆಯ ಪಾತ್ರವೂ ಇದೆ. ಉಲ್ಲೇಖಾರ್ಹ ರೆಂದರೆ, ಚೀಂಕ್ರ, ದೇವಯ್ಯ, ವೆಂಕಟಣ್ಣ, ಜೀವರತ್ನಯ್ಯ, ದೊಡ್ಡಮ್ಮ ಹೆಗ್ಗಡತಿ, ರಂಗಮ್ಮ, ನಾಗತ್ತೆ, ತಿಮ್ಮಿ, ಪೀಂಚಲು, ಅಂತಕ್ಕನ ಪಾತ್ರಧಾರಿಗಳು. ಗುತ್ತಿ ಪಾತ್ರ ಧಾರಿಯ ಅಭಿನಯ ಪ್ರತಿಭೆಯಲ್ಲಿ ಕೊರತೆ ಕಾಣದಾ ದರೂ, ಯಾಕೋ ಆತ ಗುತ್ತಿಯೆಂದು ಅನಿಸುವುದೇ ಇಲ್ಲ! ಆತ ಹೊರ ರೂಪದಲ್ಲಿ ಪಟ್ಟಣದ ಹುಡುನಂತೆ ಕಾಣುವುದೇ ಇದಕ್ಕೆ ಕಾರಣವಿರಬಹುದು.

ಅವರ ಈ ಪ್ರಯತ್ನ ಸಫಲವಾಗಿದ್ದಿದ್ದರೆ, ಅವರ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿಗಳ ವೆಚ್ಚದ ಈ ಮಹಾ ಪ್ರಯೋಗದ ಉದ್ದೇಶ ಪರೋಕ್ಷವಾಗಿಯಾದರೂ ಈಡೇರುತ್ತಿತ್ತೇನೋ! ಅಥವಾ ಮಹತ್ವಾಕಾಂಕ್ಷೆ ತೊರೆದು, ಕಾದಂಬರಿಯ ಸತ್ವವನ್ನಷ್ಟೇ ಸಮರ್ಥವಾಗಿ ಸಂಕ್ಷೇಪಿಸಿಕೊಂಡ ರಂಗಪಠ್ಯದೊಂದಿಗೆ ಅದನ್ನು ಇನ್ನಷ್ಟು ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಡಿಮೆ ವೆಚ್ಚದಲ್ಲಿ–ಉಳಿದ ಹಣವನ್ನು ಪ್ರೇಕ್ಷಕರಿಗೆ ಕಾದಂಬರಿಯ ಸುಲಭ ಬೆಲೆಯ ಆವೃತ್ತಿ ನೀಡಲು ಬಳಸಿ–ಪ್ರಸ್ತುತಪಡಿಸಬಹುದಾಗಿತ್ತೋ ಏನೋ!

ಹಾಗೇ, ಕೊನೆಯಲ್ಲಿ ಇನ್ನೊಂದು ಪ್ರಶ್ನೆ: ಕಾದಂಬರಿಗಳನ್ನೋ, ಕಥೆಗಳನ್ನೋ ನಾಟಕ ರೂಪಕ್ಕೆ ಅಳವಡಿಸುವ, ಇಂದು ಎಲ್ಲೆಲ್ಲೂ ಕಾಣುತ್ತಿರುವ ಈ ಚಪಲ ಅಥವಾ ಕೆಟ್ಟ ಹಠವೇಕೆ? ನಿಜ, ಇಂದು ಸಾಹಿತ್ಯ ರೂಪಗಳ ನಡುವಣ ಗೆರೆಗಳು ಅಳಿಸಿಹೋಗುತ್ತಿವೆ. ಅದು ಇಂದಿನ ಸಾಹಿತ್ಯದ–ಈ ಕಾಲದ ಒತ್ತಡಗಳ–ಗೋಳು. ಆದರೆ ಸಾಹಿತ್ಯ ರೂಪಗಳ ಅನನ್ಯತೆಯನ್ನು ಗೌರವಿಸಿ, ಅವುಗಳ ಮೀಮಾಂಸೆಯನ್ನು ಒಪ್ಪಿ ರಚಿತವಾದ ಈ ಹಿಂದಿನ ಕೃತಿಗಳ ರೂಪಾಂತರಗಳ ಇಂತಹ ಪಡಿಪಾಟಲುಗಳಾದರೂ ಏಕೆ? ಎಲ್ಲವೂ ಎಲ್ಲಕ್ಕೂ ಒಗ್ಗುವಂತಿದ್ದರೆ, ಸಾಹಿತ್ಯ ರೂಪಗಳು ಎಂಬ ಪರಿಕಲ್ಪನೆಯೇ ಇರುತ್ತಿರಲಿಲ್ಲ.

ರಾಮಾಯಣ–ಮಹಾಭಾರತಗಳೂ ನಮ್ಮಲ್ಲಿ ನಾಟಕಗಳಾಗಿ ರೂಪಾಂತರಗೊಂಡಿದ್ದು, ಅವು ಕಾಲ ದೇಶಗಳ ಪ್ರಭಾವಕ್ಕೆ ಸಿಕ್ಕಿ ಹಲವು ಪಠ್ಯಗಳಾಗಿ ಒಡೆದುಕೊಳ್ಳುವ ಮೂಲಕ ತಮ್ಮ ಮೂಲ ರೂಪಗಳನ್ನು ಕರಗಿಸಿಕೊಂಡು ಜನಪದೀಯ ಪಠ್ಯಗಳಾದ ಮೇಲೇ. ಈ ನಾಟಕದ ಬಗ್ಗೆಯೇ ಹೇಳುವುದಾದರೆ, ಪರಂಪರೆಯ ಗಾಢ ಅರಿವಿದ್ದ ಕುವೆಂಪು ಅದ್ಭುತ ನಾಟಕಕಾರರೂ ಹೌದು. ಇದು ನಾಟಕವೇ ಆಗಿ ಸಾರ್ಥಕಗೊಳ್ಳುವುದೆಂದು ಅವರಿಗನ್ನಿಸಿದ್ದಲ್ಲಿ, 'ಮಲೆಗಳಲ್ಲಿ ಮದುಮಗಳು' ಅವರಿಂದ ಕಾದಂಬರಿಯ ಬದಲಾಗಿ ನಾಟಕವಾಗಿಯೇ ಹೊರಹೊಮ್ಮುತ್ತಿತ್ತಲ್ಲವೇ? ಪ್ರಯೋಗ ಮಾಡುವುದು ಒಳ್ಳೆಯದೇ ಸರಿ. ಆದರೆ ಅದು ಮೂಲ ಕೃತಿಯನ್ನು ಬೆಳಸುವಂತಿರಬೇಕಲ್ಲವೇ? ಇಲ್ಲದಿದ್ದರೆ ಏಕೆ ಇಷ್ಟೆಲ್ಲ ಶ್ರಮ, ಪ್ರಚಾರ, ವೆಚ್ಚ? □

ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಸಮಾನತೆಯ ರಾಜಕಾರಣ



ಡಾ. ಟಿ.ಆರ್. ಚಂದ್ರಶೇಖರ್

ಹೈದರಾಬಾದ್ ನಿಜಾಮ್ ಪ್ರಾಂತದಿಂದ ೧೯೫೬ರಲ್ಲಿ ಕರ್ನಾಟಕ ಸೇರಿದ ಗುಲ್ಬರ್ಗ (ಅವಿಭಜಿತ), ಬೀದರ್, ರಾಯಚೂರು (ಅವಿಭಜಿತ) ಜಿಲ್ಲೆಗಳಲ್ಲಿ ಅಭಿವೃದ್ಧಿಯ ಗಂಧಗಾಳಿಯು ಬೀಸಿರಲಿಲ್ಲ ಮತ್ತು ಅವುಗಳಿಗೆ ವಸಾಹತುಶಾಹಿ ಆಡಳಿತದ ಅನುಕೂಲಗಳು ದೊರೆತಿರಲಿಲ್ಲ. ಅವು ಏಕೀಕರಣವಾದ ಸಂದರ್ಭದಲ್ಲಿ ತೀವ್ರ ದುಸ್ಥಿತಿಯನ್ನು ಅನುಭವಿಸುತ್ತಿದ್ದವು. ಮದರಾಸು ಪ್ರಾಂತದಲ್ಲಿದ್ದು ಏಕೀಕರಣದ ಸಂದರ್ಭದಲ್ಲಿ ಕರ್ನಾಟಕ ಸೇರಿದ ದಕ್ಷಿಣಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ವಿಭಿನ್ನವಾದ ಅಭಿವೃದ್ಧಿಯನ್ನು ಅನುಭವಿಸುತ್ತಿದ್ದವು. ಕರಾವಳಿಯ ಅನುಕೂಲ ಪಡೆದಿದ್ದ ದಕ್ಷಿಣಕನ್ನಡಕ್ಕೆ ೧೯೫೬ರ ನಂತರ ತೀವ್ರ ಗತಿಯ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಯಿತು.

ಪ್ರಸ್ತಾವನೆ

ಅಭಿವೃದ್ಧಿಗೆ ಸಂಬಂಧಿಸದಂತೆ ಪ್ರಾದೇಶಿಕ ಅಸಮಾನತೆಯು ಕರ್ನಾಟಕದಲ್ಲಿ ಅದರ ಹುಟ್ಟಿನಿಂದಲೇ ಕಾಡುತ್ತಾ ಬಂದಿರುವ ಬಾಲಗ್ರಹ ಪೀಡೆಯಾಗಿದೆ. ಅದರ ಏಕೀಕರಣದ ಸಂದರ್ಭದಲ್ಲಿ ಅಭಿವೃದ್ಧಿಯ ವಿವಿಧ ಮಟ್ಟಗಳಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳೆಲ್ಲ ಕೂಡಿದ್ದರಿಂದ ಅಂದು ಅಭಿವೃದ್ಧಿಯಲ್ಲಿ ಪ್ರದೇಶ ಸಂಬಂಧಿ ಅಸಮಾನತೆಗಳು ಅನಿವಾರ್ಯವಾಗಿದ್ದವು. ನಮ್ಮ ನಾಡು ಏಕೀಕರಣವಾದ 1956ರಲ್ಲಿ ಮೈಸೂರು ಪ್ರದೇಶ ಇಡೀ ದೇಶದಲ್ಲಿ ಮಾದರಿ ಪ್ರಾಂತವಾಗಿತ್ತು. ಕೊಡಗು ಪ್ರತ್ಯೇಕ ಸ್ಥಾನ ಹೊಂದಿತ್ತು ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಂದ ಸಂಪದ್ಭರಿತವಾದ ಪ್ರದೇಶವಾಗಿತ್ತು. ಮುಂಬೈ ಪ್ರಾಂತದಲ್ಲಿದ್ದುದರಿಂದ ಬೆಳಗಾವಿ, ಧಾರವಾಡ(ಅವಿಭಜಿತ), ಉತ್ತರ ಕನ್ನಡ ಮತ್ತು ವಿಜಾಪುರ(ಅವಿಭಜಿತ) ಜಿಲ್ಲೆಗಳು ವಸಾಹತುಶಾಹಿ ಅಭಿವೃದ್ಧಿ ಮತ್ತು ಆಡಳಿತದ ಅನುಕೂಲಗಳನ್ನು ಪಡೆದಿದ್ದವು.

ಆದರೆ ಹೈದರಾಬಾದ್ ನಿಜಾಮ್ ಪ್ರಾಂತದಿಂದ 1956ರಲ್ಲಿ ಕರ್ನಾಟಕ ಸೇರಿದ ಗುಲ್ಬರ್ಗಾ (ಅವಿಭಜಿತ), ಬೀದರ್, ರಾಯಚೂರು (ಅವಿಭಜಿತ) ಜಿಲ್ಲೆಗಳಲ್ಲಿ ಅಭಿವೃದ್ಧಿಯ ಗಂಧಗಾಳಿಯು ಬೀಸಿರಲಿಲ್ಲ ಮತ್ತು ಅವುಗಳಿಗೆ ವಸಾಹತು ಶಾಹಿ ಆಡಳಿತದ ಅನುಕೂಲಗಳು ದೊರೆತಿರಲಿಲ್ಲ. ಅವು ಏಕೀಕರಣವಾದ ಸಂದರ್ಭದಲ್ಲಿ ತೀವ್ರ ದುಸ್ಥಿತಿಯನ್ನು ಅನುಭವಿಸುತ್ತಿದ್ದವು. ಮದರಾಸು ಪ್ರಾಂತದಲ್ಲಿದ್ದು ಏಕೀಕರಣದ ಸಂದರ್ಭದಲ್ಲಿ ಕರ್ನಾಟಕ ಸೇರಿದ ದಕ್ಷಿಣಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ವಿಭಿನ್ನವಾದ ಅಭಿವೃದ್ಧಿಯನ್ನು ಅನುಭವಿಸುತ್ತಿದ್ದವು. ಕರಾವಳಿಯ ಅನುಕೂಲ ಪಡೆದಿದ್ದ ದಕ್ಷಿಣಕನ್ನಡಕ್ಕೆ 1956ರ ನಂತರ ತೀವ್ರ ಗತಿಯ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಯಿತು. ಆದರೆ ಪ್ರಾಕೃತಿಕ ಸಂಪನ್ಮೂಲಗಳಿಂದ(ಗಣಿಗಾರಿಕೆಯು ಸಮೃದ್ಧವಾಗಿ ಅಂದು ಬೆಳೆದಿರಲಿಲ್ಲ) ಬರಡಾಗಿದ್ದ ಬಳ್ಳಾರಿ ಜಿಲ್ಲೆಯು ಆರ್ಥಿಕವಾಗಿ ತೀವ್ರ ಹಿಂದುಳಿದಿತ್ತು ಮತ್ತು ದುಸ್ಥಿತಿಯನ್ನು ಅನುಭವಿಸುತ್ತಿತ್ತು.

ಏಕೀಕರಣಕ್ಕೆ ಭಾಷೆ ಒಂದನ್ನು ಕಾರಣ ಮಾಡುವ ಕ್ರಮ ರೂಢಿಯಲ್ಲಿದೆ. ಇದು ಸ್ವಲ್ಪ ಮಟ್ಟಿಗೆ ನಿಜವಿರಬಹುದು. ಆದರೆ ಏಕೀಕರಣಕ್ಕೆ ಅನೇಕ ಇತರೆ ಕಾರಣಗಳು ಇದ್ದವು. ಕರ್ನಾಟಕ ಏಕೀಕರಣದ ರುವಾರಿಗಳಲ್ಲಿ ಒಬ್ಬರಾಗಿದ್ದ ಮತ್ತು ಪ್ರಸಿದ್ಧ ಕಥೆಗಾರರಾಗಿದ್ದ ಶ್ರೀಕೃಷ್ಣಕುಮಾರ್ ಕಲ್ಲೂರ್ ಅವರು ಇದರ ಬಗ್ಗೆ 1956ರಲ್ಲಿ ಹೀಗೆ ಬರೆದಿದ್ದಾರೆ– "ಸಂಯುಕ್ತ ಕರ್ನಾಟಕದ ಬೇಡಿಕೆಯು ಹೊರಹೊರಗೆ ಭಾಷಾತ್ಮಕವಾಗಿದ್ದರೂ, ನಿಜವಾಗಿ ಅದು ಆರ್ಥಿಕ ದೃಷ್ಟಿಯಿಂದ ಹಿಂದುಳಿದವರ ಕೂಗಾಗಿತ್ತು. ಆದುದರಿಂದ ಈಗ ಒಂದಾಗಿರುವ ಸಂಯುಕ್ತ ಕರ್ನಾಟಕವು ಹಿಂದುಳಿದ ಪ್ರದೇಶಗಳದೇ ಒಂದು ಸಂಯುಕ್ತ ರಾಜ್ಯವೆಂತಲೂ, ಭಾಷೆ ಒಂದಾಗಿರುವುದು ಒಂದು ಹೆಚ್ಚಿನ ಅನುಕೂಲವೆಂದೂ ಭಾವಿಸಿಕೊಳ್ಳಬೇಕು. ಆದುದರಿಂದ ಭಾಷೆ, ಸಾಹಿತ್ಯಗಳ ಬೆಳವಣಿಗೆಗಿಂತಲೂ, ಹಿಂದುಳಿದ ಪ್ರದೇಶಗಳ ಬೆಳವಣಿಗೆಯೇ ಕರ್ನಾಟಕದ ಗುರಿ ಎಂದು ಬಗೆಯಬೇಕು. ಈ ವಿಷಯದಲ್ಲಿ ಮೈಸೂರು ಸಂಸ್ಥಾನದಲ್ಲೂ, ಬೆಂಗಳೂರು, ಮೈಸೂರು ಪರಿಸರದಲ್ಲಿ ಮಾತ್ರ ಸಾಕಷ್ಟು ಬೆಳವಣಿಗೆಯಾಗಿದೆಯೇ ಹೊರತು, ಮಿಕ್ಕ ಹಲಭಾಗ ಸಾಕಷ್ಟು ಹಿಂದುಳಿದಿದೆ. ಇದನೆಲ್ಲಾ ನೋಡಿದರೆ, ನಿಜ ಕರ್ನಾಟಕ ಕೊಡಗು, ಕನ್ನಡ ಜಿಲ್ಲೆ, ಶಿವಮೊಗ್ಗ, ಚಿತ್ರದುರ್ಗ, ವಿಜಾಪುರ, ಗುಲ್ಬರ್ಗಾ, ಪ್ರದೇಶದಲ್ಲಿರುವುದಲ್ಲದೆ ಬೆಂಗಳೂರು, ಮೈಸೂರು, ಮಂಗಳೂರು ನಗರಗಳಲ್ಲಲ್ಲ ಎಂಬುಬು ತಿಳಿಯುತ್ತದೆ. ಇದನ್ನು ಮನದಟ್ಟಾಗುವಂತೆ ಅರಿತಾಗ ಮಾತ್ರ ನಾವು ನಮ್ಮ ನಾಡಿಗೆ (ಕರ್ನಾಟಕ ಸರ್ಕಾರ, 'ಮೈಸೂರು ರಾಜ್ಯ' 1956)'.

ಅಂದರೆ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಬಗ್ಗೆ ಜನರಿಗೆ 1956ರಲ್ಲಿ ಖಚಿತವಾದ ಅರಿವು ಇತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕಳೆದ ಐವತ್ನಾಕು ವರ್ಷಗಳಲ್ಲಿ (1956–2010) ನಾಡನ್ನು ಕಾಡುತ್ತಾ ಬಂದಿರುವ ಸಮಸ್ಯೆಯನ್ನು ನಾವು ಎಷ್ಟರಮಟ್ಟಿಗೆ ನಿವಾರಿಸಿಕೊಂಡಿದ್ದೇವೆ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಈ ಸಮಸ್ಯೆಯನ್ನು ನಮಗೆ ನಿವಾರಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಈ ದಿಶೆಯಲ್ಲಿ ನಾವು ಗಂಭೀರ ಪ್ರಯತ್ನವನ್ನೂ ಮಾಡುತ್ತಿಲ್ಲ. ನಮ್ಮನ್ನು ಆಳಿದ ಮತ್ತು ಆಳುತ್ತಿರುವ ಸರ್ಕಾರಗಳಿಗೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ದುಸ್ಥಿತಿಯ ಗಂಭಿರತೆಯು ಅರ್ಥವಾಗಿದೆ ಎಂಬುದರ ಬಗ್ಗೆ ನನಗೆ ಅನುಮಾನಗಳಿವೆ. ಈ ಸಂಗತಿಯ ಬಗ್ಗೆ ಚರ್ಚಿಸುವಾಗ ಸಾಮಾನ್ಯವಾಗಿ ಹಿಂದುಳಿದ ಪ್ರದೇಶಗಳ ಹಿಂದುಳಿದ ಜನರ, ದುಸ್ಥಿತಿಯನ್ನು ಅನುಭವಿಸುತ್ತಿರುವ ಜನರ ನೆಲೆಯಿಂದ ಸಮಸ್ಯೆಯನ್ನು ಪರಿಭಾವಿಸಿಕೊಳ್ಳುವುದು ಕಂಡುಬರುತ್ತಿಲ್ಲ.

ಈ ಪತ್ರಿಕೆಯ ಹಿಂದಿನ ಸಂಚಿಕೆಗಳಲ್ಲಿ ನಾನು ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಾದ ಬಳ್ಳಾರಿ. ರಾಯಚೂರು ಮತ್ತು ವಿಜಾಪುರ ಜಿಲ್ಲೆಗಳಲ್ಲಿನ ದುಸ್ಥಿತಿಯ ಸ್ವರೂಪವನ್ನು ವಿವರವಾಗಿ ಚರ್ಚಿಸಿದ್ದೇನೆ (ನೋಡಿ: ಸಂವಾದ ಆಗಸ್ಟ್, ಸೆಪ್ಟೆಂಬರ್ ಮತ್ತು ನವೆಂಬರ್, 2009). ಪ್ರಸ್ತುತ ಲೇಖನದಲ್ಲಿ ಈ ಸಮಸ್ಯೆಯ ಮೂಲ ಸ್ವರೂಪ ಮತ್ತು ಸಮಸ್ಯೆಯ ಬಹುಮುಖಿ ನೆಲೆಗಳನ್ನು ಚರ್ಚಿಸಲು ಪ್ರಯತ್ನಿಸಿದ್ದೇನೆ. ಇಲ್ಲಿ ಅಂಕಿ–ಅಂಶಗಳನ್ನು ನಾನು ಹೆಚ್ಚಾಗಿ ಬಳಸಿದ್ದೇನೆ. ಅವುಗಳನ್ನು ಬಿಟ್ಟು ಲೇಖನವನ್ನು ಸಹೃದಯಿಗಳು ಅಧ್ಯಯನ ಮಾಡಬಹುದು (ಕೆಲವರಿಗೆ ಅಕ್ಷರಕಂಡರೆ ಪ್ರೀತಿ ಅಂಕಿಗಳನ್ನು ಕಂಡರೆ ಭೀತಿ' ಅನ್ನುವ ಮಾತೊಂದಿದೆ).

ಅಭಿವೃದ್ಧಿ–ದುಸ್ಥಿತಿಯ ನಿರ್ವಚನ

ವರಮಾನದ ಏರಿಕೆಯಲ್ಲಿ ಅಭಿವೃದ್ಧಿಯನ್ನು ಮತ್ತು ವರಮಾನದ ಕೊರತೆಯಲ್ಲಿ ದುಸ್ಥಿತಿಯನ್ನು ಮಾಪನ ಮಾಡುವ ಕ್ರಮ ಅರ್ಥಶಾಸ್ತ್ರದಲ್ಲಿ ಮತ್ತು ಅಭಿವೃದ್ಧಿ ಅಧ್ಯಯನಗಳಲ್ಲಿ ರೂಢಿಯಲ್ಲಿದೆ. ಇಂದು ಸರ್ಕಾರಗಳು ಇದೇ ನೀತಿಯನ್ನು ಅನುಸರಿಸುತ್ತಿವೆ.

ಇದು ಅತ್ಯಂತ ಸಿಮೀತವಾದ ದೃಷ್ಟಿಕೋನವೆಂಬುದನ್ನು ವಿದ್ವಾಂಸರು ಬಹಳ ಹಿಂದಿನಿಂದಲೂ ಟೀಕಿಸುತ್ತಾ ಬಂದಿದ್ದಾರೆ. ಇಷ್ಟಾದರೂ ಇಂದಿಗೂ ನಮ್ಮ ದುರೀಣರಿಗೆ ವರಮಾನದಲ್ಲಿ ವಾರ್ಷಿಕ ಬೆಳವಣಿಗೆಯ ಪ್ರಮಾಣವೇ ಅಭಿವೃದ್ಧಿಯ ಅಳತೆಗೋಲಾಗಿದೆ.

ನಮ್ಮ ಪ್ರಧಾನಮಂತ್ರಿಗಳು ನಮ್ಮ ರಾಷ್ಟ್ರೀಯ ವರಮಾನದ ವಾರ್ಷಿಕ ಏರಿಕೆ ಪ್ರಮಾಣ ಎರಡಂಕಿಯಾಗಬೇಕೆಂದು ಮತ್ತೆ ಮತ್ತೆ ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಬಜೆಟ್ಟಿನ ಗಾತ್ರವನ್ನು ಮುಂದಿನ ಎರಡು ವರ್ಷಗಳಲ್ಲಿ 'ನೂರು ಲಕ್ಷ ಕೋಟಿ' ಮಾಡುವುದಾಗಿ ಹೇಳಲಾಗುತ್ತಿದೆ. ಇಂದು ಕಂಪನಿಗಳು ಮೊದಲ ಮೂರು ತಿಂಗಳಲ್ಲಿ ಲಾಭದ ಪ್ರಮಾಣ ಏರುತ್ತಿರುವುದನ್ನು ದೊಡ್ಡ ಸಾಧನೆಯಾಗಿ ಕೂಗಿ ಕೂಗಿ ಹೇಳುತ್ತಿವೆ. ಸೆನ್ಸೆಕ್ಸ್ 12000 ಗಡಿ ದಾಟಿತು, 15000 ಗಡಿ ತಲುಪಿತು ಎಂದೆಲ್ಲಾ ಸುದ್ದಿ ಮಾಧ್ಯಮಗಳಲ್ಲಿ ಚೀರಾಡಲಾಗುತ್ತಿದೆ. ಈ ಯಾವ ಏರಿಕೆಯಿಂದಾಗಲಿ ಅಥವಾ ವರ್ಧನೆಯಿಂದಾಗಲಿ ಬಡವರ, ವಂಚಿತರ ಮತ್ತು ಪರಿಶಿಷ್ಟರ ಬದುಕು ಉತ್ತಮಗೊಳ್ಳುವುದು ಖಾತ್ರಿಯಿಲ್ಲ.

ಆದರೆ ಇಂದು ಅಭಿವೃದ್ಧಿ ಮತ್ತು ದುಸ್ಥಿತಿಗಳನ್ನು ವರಮಾನವನ್ನು ಸೇರಿಸಿಕೊಂಡು ವಿಸ್ತೃತ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವನ್ನು ಅಮರ್ತ್ಯಸೇನ್ ಮತ್ತು ಮೆಹಬೂಬ್ ಉಲ್ ಹಕ್ ಕಲಿಸಿಕೊಟ್ಟಿದ್ದಾರೆ. ಅವರ ಪ್ರಕಾರ ವರಮಾನವು ಅಭಿವೃದ್ಧಿಯ ಸಾಧನವೆ ವಿನಾ ಅದರಲ್ಲಿನ ಏರಿಕೆಯೇ ಅಭಿವೃದ್ಧಿಯಲ್ಲ. ಅದು ವರಮಾನದ ಜೊತೆಯಲ್ಲಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ, ಆಹಾರದ ಹಕ್ಕು, ಘನತೆಯಿಂದ ಬದುಕುವ ಪರಿಮುಂತಾದ ಸಂಗತಿಗಳನ್ನು ಒಳಗೊಳ್ಳುತ್ತದೆ ಎಂಬುದು ಅವರಿಬ್ಬರ ವಾದವಾಗಿದೆ. ಇಂದು ವರಮಾನವನ್ನು ಆಧರಿಸಿ ಅಭಿವೃದ್ಧಿಯನ್ನು ಅಳೆಯುವ ಜಿಡಿಪಿಗೆ ಪ್ರತಿಯಾಗಿ ಸೆನ್-ಹಕ್ ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ) ಎಂಬ ಅಳತೆಗೋಲನ್ನು ರೂಪಿಸಿದ್ದಾರೆ. ಜನರು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಲಭ್ಯವಿರುವ ಅವಕಾಶಗಳಲ್ಲಿ ತಮಗೆ ನ್ಯಾಯೋಚಿತವೆಂದು ಕಂಡು ಬಂದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳನ್ನು ಮಾನವ ಅಭಿವೃದ್ಧಿಯೆಂದು ಕರೆಯಲಾಗಿದೆ.

ಈ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳ ವರ್ಧನೆಯೇ ಮಾನವ ಅಭಿವೃದ್ಧಿ. ಇಲ್ಲಿ ಅಭಿವೃದ್ಧಿಯ 'ಸಾಧನ'ಗಳಿಗಿಂತ ಅಭಿ ವೃದ್ಧಿಯ 'ಸಾಧ್ಯ'ವು ಮುಖ್ಯವಾಗಿದೆ. ಅಭಿವೃದ್ಧಿಯ ಸಾಧ್ಯ ಯಾವುದೆಂದರೆ ಜನರ ಬದುಕು. ಇದನ್ನು ಜನರನ್ನು ಮುಖ್ಯ ಧಾತುವನ್ನಾಗಿ ಮಾಡಿಕೊಂಡ ಅಭಿವೃದ್ಧಿ ಪ್ರಣಾಳಿಕೆಯೆಂದು ತಿಳಿಯಲಾಗಿದೆ. ಈ ಅಭಿವೃದ್ಧಿ ಪ್ರಣಾಳಿಕೆಯ ಬಹುಮುಖ್ಯ ಸಂಗತಿಯೆಂದರೆ ಅದರ ಲಿಂಗ ಸಂವೇದಿಗುಣ. ಅಭಿವೃದ್ಧಿಯಲ್ಲಿ ಮಹಿಳೆಯರು ಪಡೆಯುತ್ತಿರುವ ಪಾಲನ್ನು ಅಳತೆ ಮಾಡಲು ಯುಎನ್‌ಡಿಪಿಯು 1995ರಲ್ಲಿ ಪ್ರಕಟಿಸಿದ ಮಾನವ ಅಭಿವೃದ್ಧಿ ವರದಿಯಲ್ಲಿ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವೆಂಬ(ಜಿಡಿಐ) ಮಾಪನವನ್ನು ರೂಪಿಸಿತು. ಅಭಿವೃದ್ಧಿಯ ಮತ್ತು ದುಸ್ಥಿತಿಯ ಲಿಂಗ ಸಂಬಂಧಿ ಆಯಾಮಗಳನ್ನು ಇಲ್ಲಿ ಹಿಡಿದಿಡಲು ಸಾಧ್ಯವಿದೆ. ಸಾಂಪ್ರದಾಯಿಕ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಇಂತಹ ಲಿಂಗ ಸಂಬಂಧಿ ವಿಶ್ಲೇಷಣೆಯು ಸಾಧ್ಯವಿಲ್ಲ. ಅವು ಲಿಂಗ ನಿರಪೇಕ್ಷ ಸಿದ್ಧಾಂತಗಳು. ಅಭಿವೃದ್ಧಿಯೆನ್ನುವುದು ಕೇವಲ ವರಮಾನಕ್ಕೆ, ಬಂಡವಾಳಕ್ಕೆ, ಉಳಿತಾಯಕ್ಕೆ, ಕೈಗಾರಿಕೋದ್ಯಮಕ್ಕೆ ಸಂಬಂಧಿಸಿದ ಸಂಗತಿ ಮಾತ್ರವಲ್ಲ. ಸರೀಕರೊಂದಿಗೆ ಸರಸಮವಾಗಿ ಘನತೆಯಿಂದ ಸಹಭಾಗಿಗಳಾಲು ಸಾಧ್ಯವಾಗುನ ಜನರ ಸಾಮರ್ಥ್ಯ-ಸ್ವಾತಂತ್ರ್ಯವನ್ನು ಸೆನ್ ಅಭಿವೃದ್ಧಿಯೆಂದು ಕರೆಯುತ್ತಾನೆ.



> **ವರಮಾನದ ಏರಿಕೆಯಲ್ಲಿ ಅಭಿವೃದ್ಧಿಯನ್ನು ಮತ್ತು ವರಮಾನದ ಕೊರತೆಯಲ್ಲಿ ದುಸ್ಥಿತಿಯನ್ನು ಮಾಪನ ಮಾಡುವ ಕ್ರಮ ಅರ್ಥಶಾಸ್ತ್ರದಲ್ಲಿ -ಅಭಿವೃದ್ಧಿ ಅಧ್ಯಯನಗಳಲ್ಲಿ ರೂಢಿಯಲ್ಲಿದೆ. ಇಂದು ಸರ್ಕಾರಗಳು ಇದೇ ನೀತಿಯನ್ನು ಅನುಸರಿಸುತ್ತಿವೆ.**

ಈ ಬಗೆಯ ವಿಸ್ತೃತವಾದ ಮತ್ತು ಜನರನ್ನು ಆಧಾರವಾಗಿಟ್ಟುಕೊಂಡ ಅಭಿವೃದ್ಧಿ ಮತ್ತು ದುಸ್ಥಿತಿಗಳ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ಇಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ವರಮಾನದಲ್ಲಿನ ಅಸಮಾನತೆ

ವರಮಾನಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯನ್ನು ತೋರಿಸುವ ಕ್ರಮವೆಂದರೆ ರಾಜ್ಯದ ಒಟ್ಟು ವರಮಾನದಲ್ಲಿ ಹಿಂದುಳಿದ ಪ್ರದೇಶಗಳು ಪಡೆದಿರುವ ಪಾಲನ್ನು ಅವು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪಡೆದಿರುವ ಪಾಲಿಗೆ ಹೋಲಿಸಿ ಅಲ್ಲಿನ ಅಂತರವನ್ನು ಲೆಕ್ಕ ಹಾಕುವುದು. ಅದರ ಪ್ರಕಾರ ರಾಜ್ಯದ ಹಿಂದುಳಿದ ವಿಜಾಪುರ, ಬಾಗಲಕೋಟೆ, ಬೀದರ್, ಗುಲಬರ್ಗಾ, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು ರಾಜ್ಯದ ಜನಸಂಖ್ಯೆಯಲ್ಲಿ 2007-08ರಲ್ಲಿ ಪಡೆದಿದ್ದ ಪಾಲು ಶೇ24. 92. ಆದರೆ ಅವು ರಾಜ್ಯದ ವರಮಾನದಲ್ಲಿ ಪಡೆದಿದ್ದ ಪಾಲು ಮಾತ್ರ ಕೇವಲ ಶೇ 16.87. ಈ ಏಳು ಜಿಲ್ಲೆಗಳ ಸರಾಸರಿ ಒಟ್ಟು ಆಂತರಿಕ ತಲಾ ಉತ್ಪನ್ನ ರೂ29113 ರಷ್ಟಾಗುತ್ತದೆ. ಇದು ರಾಜ್ಯದ ಸರಾಸರಿ ತಲಾ ವರಮಾನದ ಶೇ69.48ರಷ್ಟಾಗುತ್ತದೆ.

ಹೀಗೆ ವರಮಾನದ ದೃಷ್ಟಿ ಯಿಂದಲೂ ಈ ಏಳು ಜಿಲ್ಲೆಗಳು ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿವೆ. ಹಾಗೆ ನೋಡಿದರೆ ಈ ಏಳು ಜಿಲ್ಲೆಗಳು 1999-2000ದಲ್ಲಿ ರಾಜ್ಯದ ವರಮಾನದಲ್ಲಿ ಶೇ 18.61 ಪಾಲು ಪಡೆದಿದ್ದವು. ಅಂದರೆ ರಾಜ್ಯದ ವರಮಾನ ದಲ್ಲಿ ಹಿಂದುಳಿದ ಏಳು ಜಿಲ್ಲೆಗಳು ಪಡೆದಿದ್ದ ಪಾಲು 1999 -2000 ನಿಂದ 2007-2008ರ ಅವಧಿಯಲ್ಲಿ ಶೇ 18.61 ರಿಂದ ಶೇ 16.87ಕ್ಕಿಳಿದಿದೆ. ಇದು ಆತಂಕಕಾರಿಯಾದ ಸಂಗತಿಯಾಗಿದೆ. ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆಯು ಉಲ್ಬಣಗೊಳ್ಳುತ್ತಾ ನಡೆದಿದೆ. ಅಂದು ಅವುರಾಜ್ಯದ ಜನಸಂಖ್ಯೆಯಲ್ಲಿ ಪಡೆದಿದ್ದ ಪಾಲು ಶೇ24.52.

ಹಿಂದುಳಿದ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿ

ವರಮಾನದ ದೃಷ್ಟಿಯಿಂದ ಹಿಂದುಳಿದ ಜಿಲ್ಲೆಗಳು ಯಾವ ಬಗೆಯ ದುಸ್ಥಿತಿಯನ್ನು ಅನುಭವಿಸುತ್ತಿವೆ ಎಂಬುದನ್ನು ಚರ್ಚಿಸಲಾಗಿದೆ. ಈಗ ಮಾನವ ಅಭಿವೃದ್ಧಿಯ ಸೂಚಿಗಳಾದ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ, ಪರಿಶಿಷ್ಟರ ಅಭಿವೃದ್ಧಿ ಸ್ಥಿತಿಗತಿ ಮುಂತಾವುಗಳ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ಪರಿಶೀಲಿಸಬಹುದಾಗಿದೆ. ನಮ್ಮ ರಾಜ್ಯದ ಹಿಂದುಳಿದ ಏಳು ಜಿಲ್ಲೆಗಳಲ್ಲಿ ಸಾಕ್ಷರತೆಯ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ. ಅದರಲ್ಲೂ ಮಹಿಳೆಯರ ಸಾಕ್ಷರತೆಯ ಪ್ರಮಾಣ ನಿಕೃಷ್ಟವಾಗಿದೆ. ಈ ಏಳು ಹಿಂದುಳಿದ ಜಿಲ್ಲೆಗಳಲ್ಲಿ 1991ರಲ್ಲಿ ಒಟ್ಟು ಅಕ್ಷರಸ್ಥರ ಸಂಖ್ಯೆ 39.63 ಲಕ್ಷ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಅವರ ಪಾಲು ಶೇ18.87. ಆದರೆ 2001ರಲ್ಲಿ ಈ ಜಿಲ್ಲೆಗಳಲ್ಲಿದ್ದ ಅಕ್ಷರಸ್ಥರ ಸಂಖ್ಯೆ 53.84 ಲಕ್ಷ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಈ ಜಿಲ್ಲೆಗಳ ಅಕ್ಷರಸ್ಥರ ಪಾಲು 2001ರಲ್ಲಿ ಶೇ 17.69. ಇದು ಏನನ್ನು ಸೂಚಿಸುತ್ತದೆ? ಪ್ರಾದೇಶಿಕ ಅಸಮಾನತೆಯು ಉಲ್ಬಣಗೊಳ್ಳುತ್ತಾ ನಡೆದಿರುವುದನ್ನು ಇದು ಸೂಚಿಸುತ್ತಿದೆ. ರಾಜ್ಯಮಟ್ಟದಲ್ಲಿ ಏಳುಜಿಲ್ಲೆಗಳ ಸ್ಥಾನ ಅಕ್ಷರಸ್ಥರಿಗೆ ಸಂಬಂಧಿಸಿದಂತೆ ಕುಸಿದಿದೆ. ವರಮಾನಕ್ಕೆ ಸಂಬಂಧಿಸಿದಂತೆ ಕಡಿಮೆಯಾಗಿದೆ.

ಈ ಜಿಲ್ಲೆಗಳಲ್ಲಿ ಸಾಕ್ಷರತೆಯು 1991ರಲ್ಲಿ ಶೇ 45

ಕ್ಕಿಂತ ಕಡಿಮೆಯಿತ್ತು. ರಾಯಚೂರು-ಗುಲ್ಬರ್ಗ ಜಿಲ್ಲೆಗಳಲ್ಲಿ ಅದು ಶೇ38ಕ್ಕಿಂತ ಕಡಿಮೆಯಿತ್ತು. ಈ ಸ್ಥಿತಿಯು 2001 ರಲ್ಲಿ ತುಂಬಾ ಸುಧಾರಿಸಲಿಲ್ಲ. ಏಕೆಂದರೆ 1991 ರಿಂದ 2001ರ ಅವಧಿಯಲ್ಲಿ ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಾಗಲೇ ಇಲ್ಲ. ರಾಯಚೂರು ಜಿಲ್ಲೆಯಲ್ಲಿ ಅದು 2001ರಲ್ಲಿ ಶೇ48 ದಾಟಲಿಲ್ಲ. ಮಹಿಳೆಯರ ಸಾಕ್ಷರತೆಯ ಬಗ್ಗೆ ಏನನ್ನು ಹೇಳದಿರುವುದೇ ಲೇಸು. ಮಹಿಳಾ ಸಾಕ್ಷರತೆಯು 2001ರಲ್ಲಿ ರಾಯಚೂರು, ಕೊಪ್ಪಳ-ಗುಲ್ಬರ್ಗಾ ಜಿಲ್ಲೆಗಳಲ್ಲಿ ಶೇ40 ದಾಟಲಿಲ್ಲ. ಶೈಕ್ಷಣಿಕ ಸೂಚ್ಯಂಕವು 2001ರಲ್ಲಿ ರಾಜ್ಯಮಟ್ಟದಲ್ಲಿ 0.700 ದಾಟಿದ್ದರೆ ಹಿಂದುಳಿದ ಗುಲ್ಬರ್ಗಾ, ಕೊಪ್ಪಳ ರಾಯಚೂರು ಜಿಲ್ಲೆಗಳಲ್ಲಿ ಅದು 0.600ಕ್ಕಿಂತ ಕಡಿಮೆಯಿದೆ. ಬಳ್ಳಾರಿ, ಬಾಗಲಕೋಟೆ, ವಿಜಾಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಅದು 0.630 ದಾಟಲಿಲ್ಲ. ಬೀದರ್ ಜಿಲ್ಲೆಯಲ್ಲಿ ಮಾತ್ರ ಅದು 0.680 ರಷ್ಟಿದೆ. ಸಾಕ್ಷರತೆಯ ದೃಷ್ಟಿಯಿಂದ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದರೆ (ಅನಕ್ಷರತೆಯ ಕೂಪಗಳು) ಶಹಾಪುರ (ಶೇ38.53), ಯಾದಗೀರ್ (ಶೇ37.43) ಮತ್ತು ದೇವದುರ್ಗ (ಶೇ39. 56). ಇವು ಕ್ರಮವಾಗಿ ಗುಲ್ಬರ್ಗಾ, ಯಾದಗೀರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿವೆ. ಈ ಜಿಲ್ಲೆಗಳಲ್ಲಿ ಅನಕ್ಷರತೆ ಪ್ರಮಾಣ ಅಧಿಕ ಮತ್ತು ಶಾಲೆಯನ್ನು ಸೇರದ ಮಕ್ಕಳ ಪ್ರಮಾಣವು ಅಧಿಕ.

ಶಾಲೆ ಸೇರದ ಮಕ್ಕಳು.

ಮಾನವ ಅಭಿವೃದ್ಧಿಯ ಸೂಕ್ಷ್ಮ ಸೂಚಿಯೆಂದರೆ ಶಾಲಾ ದಾಖಲಾತಿ ಮತ್ತು ಶಾಲೆಯನ್ನು ಸೇರದ ಮಕ್ಕಳ ಪ್ರಮಾಣ. ಶಿಕ್ಷಣ ಇಲಾಖೆಯು 2010ರಲ್ಲಿ ನಡೆಸಿದ ಮಕ್ಕಳ ಗಣತಿ ಪ್ರಕಾರ ರಾಜ್ಯದಲ್ಲಿ ಶಾಲೆ ಸೇರದ ಮಕ್ಕಳ ಸಂಖ್ಯೆ 1.09ಲಕ್ಷ. ಇವರಲ್ಲಿ ಗುಲ್ಬರ್ಗಾ ವಿಭಾಗದ ಐದು ಜಿಲ್ಲೆಗಳ ಪಾಲು 40936(ಶೇ37.71). ಈ ವಿಭಾಗವು ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿರುವ ಪಾಲು ಶೇ 18. ಗುಲ್ಬರ್ಗಾ, ರಾಯಚೂರು ಮತ್ತು ವಿಜಾಪುರ ಜಿಲ್ಲೆಗ ಳಲ್ಲಿ ಸಮಸ್ಯೆಯು ಉಲ್ಬಣಾವಸ್ಥೆಯಲ್ಲಿದೆ. ಶಾಲೆ ಸೇರದ ಮಕ್ಕಳ ಸಂಖ್ಯೆಯ ದೃಷ್ಟಿಯಿಂದ ಈ ಮೂರು ಜಿಲ್ಲೆಗಳು ರಾಜ್ಯದಲ್ಲಿ ಕ್ರಮವಾಗಿ ಪ್ರಥಮ ಮೂರು ಸ್ಥಾನಗಳಲ್ಲಿವೆ. ಈ ಮೂರು ಜಿಲ್ಲೆಗಳು 2010ರ ರಾಜ್ಯದ ಜನಸಂಖ್ಯೆಯಲ್ಲಿ ಶೇ12.66 ರಷ್ಟು ಪಾಲು ಪಡೆದಿವೆ. ಆದರೆ ಶಾಲೆ ಸೇರದ ಮಕ್ಕಳಲ್ಲಿ ಅವುಗಳ ಪಾಲು ಶೇ 24.78 ರಷ್ಟಿದೆ.

ರಾಜ್ಯಮಟ್ಟದಲ್ಲಿ ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಹತ್ತನೆಯ ತರಗತಿ ಓದುತ್ತಿರುವ ಮಕ್ಕಳ ಸಂಖ್ಯೆ 107 ರಷ್ಟಿದ್ದರೆ ಗುಲ್ಬರ್ಗಾ ವಿಭಾಗದಲ್ಲಿ ಅದು 75 ರಷ್ಟಿದೆ. ರಾಜ್ಯದಲ್ಲಿ ಮತ್ತು ಎಲ್ಲ ಜಿಲ್ಲೆಗಳಲ್ಲಿ ಶೇ 100 ರಷ್ಟು ಶಾಲಾ ದಾಖಲಾತಿಯನ್ನು ಸಾಧಿಸಿಕೊಳ್ಳಲಾಗಿದೆ. ಆದರೆ ಅದು ಏಳನೆಯ ತರಗತಿಯಲ್ಲಿ ಅಥವಾ ಹತ್ತನೆಯ ತರಗತಿಯಲ್ಲಿ ಕಡಿಮೆಯಿದೆ. ಇದು ಆತಂಕಕ್ಕೆ ಕಾರಣವಾಗಿರುವ ಸಂಗತಿಯಾಗಿದೆ. ಆದರೆ ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದ ಇಂತಹ ಸಂಗತಿಗಳು ಸರ್ಕಾರದ ಮತ್ತು ಸಂಬಂಧಿಸಿದವರ ಗಮನಕ್ಕೆ ಬರುತ್ತಿಲ್ಲ. ಅವುಗಳ ನಿವಾರಣೆಗೆ ಪ್ರದೇಶ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಈ ವಿಷಯದಲ್ಲಿ ವಿಶೇಷ ಕ್ರಮಗಳಿಲ್ಲದಿದ್ದರೆ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ? ಈ ಕಾರಣಕ್ಕೆ ಹೇಳಿದ್ದು ನಮ್ಮ ಸರ್ಕಾರಗಳಿಗೆ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯು ಗಂಭೀರ ಸಂಗತಿಯಾಗಿಲ್ಲ. ಥಳಥಳನೆ ಹೊಳೆಯು ರಸ್ತೆಗಳು, ವಿಮಾನ ನಿಲ್ದಾಣಗಳು, 'ಉದ್ದಿಮೆಗಳಿಗೆ ಜಮೀನುನೀಡಿರಿ ಸಮೃದ್ಧವಾಗಿ ಉದ್ಯೋಗ ಪಡೆಯಿರಿ' ಎಂಬ ಘೋಷಣೆ, ಬಜೆಟ್ಟಿನ ಗಾತ್ರವನ್ನು ಒಂದು ಲಕ್ಷ ಕೋಟಿಗೇರಿಸುವುದು, ಬಂಡವಾಳವೇ ಅಭಿವೃದ್ಧಿಗೆ ಸಿದ್ಧೌಷದ ಎನ್ನುವುದು, ಬಂಡವಾಳಿಗರಿಗೆ ಕೆಂಪು ಹಾಸನ್ನು ಹಾಸುವುದು ಮುಂತಾದವು ಇಲ್ಲಿ ಆದ್ಯತೆಗಳಾಗಿವೆ.

ಪರಿಶಿಷ್ಟರ ಬವಣೆ

ದಲಿತರು, ಮಹಿಳೆಯರು ಮತ್ತು ಹಿಂದುಳಿದವರು ಇಂದು ಎಲ್ಲ ರೀತಿಯ ದುಸ್ಥಿತಿಗೆ ಒಳಗಾಗಿದ್ದಾರೆ. ದಲಿತರಿಗಾಗಿ ಮೀಸಲಿಡುವ ಶೇ 18 ರಷ್ಟು ಬಜೆಟ್ಟಿನ ಹಣವನ್ನು ಇಲಾಖೆಗಳು ಖರ್ಚು ಮಾಡುತ್ತಿಲ್ಲ. ದಲಿತರು – ಹಿಂದುಳಿದ ನೌಕರರು ಅಧಿಕವಾಗಿರುವ ಸಂಸ್ಥೆಗಳು ಇಂದು ಎಲ್ಲ ಬಗೆಯ ಟೀಕೆಗಳನ್ನು ಎದುರಿಸಬೇಕಾಗಿದೆ. ರಾಜ್ಯದ ಒಟ್ಟು ಪರಿಶಿಷ್ಟ ಜನಸಂಖ್ಯೆಯಲ್ಲಿ ಈ ಏಳು ಜಿಲ್ಲೆಗಳ ಪಾಲು ಶೇ 31.83. ರಾಜ್ಯದ ಒಟ್ಟು ಪರಿಶಿಷ್ಟ ಅಕ್ಷರಸ್ಥರಲ್ಲಿ ಏಳು ಜಿಲ್ಲೆಯಗಳ ಪಾಲು ಕೇವಲ ಶೇ23.84. ಪರಿಶಿಷ್ಟರನ್ನೇ ತೆಗೆದುಕೊಂಡರೆ ಅವರಲ್ಲಿ ಹಿಂದುಳಿದ ಜಿಲ್ಲೆಯಲ್ಲಿನ ಪರಿಶಿಷ್ಟರ ಬದುಕು ಹೆಚ್ಚು ದುಸ್ಥಿತಿಯಲ್ಲಿರುವುದು ತಿಳಿಯುತ್ತದೆ. ಈ ಸಂಗತಿಯು ನಮ್ಮ ಗಮನವನ್ನು ಅಷ್ಟಾಗಿ ಸೆಳೆದಂತೆ ಕಾಣುತ್ತಿಲ್ಲ.

ಮಹಿಳೆಯರ ಮೇಲಿನ ಹಿಂಸೆ ದಿನೇ ದಿನೆ ಅಧಿಕವಾಗುತ್ತಿದೆ. ಕರ್ನಾಟಕ ಮಹಿಳಾ ಆಯೋಗಕ್ಕೆ ಒಬ್ಬರು ಮುಖ್ಯಸ್ಥರನ್ನು ನೇಮಿಸುವುದು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅತ್ಯಾಚಾರಕ್ಕೆ ಒಳಗಾದ ಮಹಿಳೆಯೇ ಅತ್ಯಾಚಾರವನ್ನು ಪೊಲೀಸರ ಮುಂದೆ ಮತ್ತು ನ್ಯಾಯಾಲಯದಲ್ಲಿ ಸಿದ್ಧಮಾಡಿ ತೋರಿಸಬೇಕಾದ ಸ್ಥಿತಿಯು ನಿರ್ಮಾಣವಾಗಿಬಿಟ್ಟಿದೆ. ಮಹಿಳೆಯರ ಮೇಲೆ ನಡೆದ ಹಿಂಸೆಯ ಸಂದರ್ಭದಲ್ಲಿ ಅಪರಾಧವೆಸಗಿದವರ ಪರವಾಗಿ ಜನರು ಹೆಚ್ಚು ಹೆಚ್ಚು ನಿಲ್ಲುತ್ತಿದ್ದಾರೆ ಮತ್ತು ಹಿಂಸೆಯಿಂದ ನೊಂದವರ ಬಗ್ಗೆ ಲಘುವಾಗಿ ಜವಾಬುದಾರಿ ಸ್ಥಾನದಲ್ಲಿರುವವರು ಮಾತನಾಡ ತೊಡಗಿದ್ದಾರೆ. ಈಗಾಗಲೆ ಇದೇ ಅಂಕಣದಲ್ಲಿ ತೋರಿಸಿರುವಂತೆ ಅಭಿವೃದ್ಧಿಗೆ ಪರಿಶಿಷ್ಟರು ನೀಡುವ ಪರಿಶ್ರಮ ಅಧಿಕ. ಆದರೆ ಅಭಿವೃದ್ಧಿಯಿಂದ ಅವರು ಪಡೆದು ಕೊಳ್ಳುತ್ತಿರುವ ಪ್ರತಿಫಲ ಕಡಿಮೆ.

ರಾಜ್ಯಮಟ್ಟದಲ್ಲಿ ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಹತ್ತನೆಯ ತರಗತಿ ಓದುತ್ತಿರುವ ಮಕ್ಕಳ ಸಂಖ್ಯೆ 107 ರಷ್ಟಿದ್ದರೆ ಗುಲ್ಬರ್ಗಾ ವಿಭಾಗದಲ್ಲಿ ಅದು 75ರಷ್ಟಿದೆ. ರಾಜ್ಯದಲ್ಲಿ ಮತ್ತು ಎಲ್ಲ ಜಿಲ್ಲೆಗಳಲ್ಲಿ ಶೇ 100 ರಷ್ಟು ಶಾಲಾ ದಾಖಲಾತಿಯನ್ನು ಸಾಧಿಸಿಕೊಳ್ಳಲಾಗಿದೆ. ಆದರೆ ಅದು ಏಳನೆಯ ತರಗತಿಯಲ್ಲಿ ಅಥವಾ ಹತ್ತನೆಯ ತರಗತಿ ಯಲ್ಲಿ ಕಡಿಮೆಯಿದೆ. ಇದು ಆತಂಕಕ್ಕೆ ಕಾರಣವಾಗಿರುವ ಸಂಗತಿಯಾಗಿದೆ. ಆದರೆ ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದ ಇಂತಹ ಸಂಗತಿಗಳು ಸರ್ಕಾರದ ಮತ್ತು ಸಂಬಂಧಿಸಿದವರ ಗಮನಕ್ಕೆ ಬರುತ್ತಿಲ್ಲ.ಅವುಗಳ ನಿವಾರಣೆಗೆ ಪ್ರದೇಶ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ.

ವಲಸೆಗಾರರ ಪಡಿಪಾಟಲು

ಒಂದೆರಡು ತಿಂಗಳುಗಳಹಿಂದೆ ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲ್ಲೂಕಿನ ಕೂಲಿಕಾರರು ದುಡಿಮೆಗಾಗಿ ಪಕ್ಕದ ಮಹಾರಾಷ್ಟ್ರಕ್ಕೆ ಗುಳೆ ಹೋಗುವಾಗ ಅವರು ಸಾಗುತ್ತಿದ್ದ ಲಾರಿಯು ಅಪಘಾತಕ್ಕೆ ಒಳಗಾಗಿ ಅನೇಕ ಕೂಲಿಕಾರರು ಅಸು ನೀಗಿದರು. ಇದೇ ವರ್ಷದ ಜನವರಿಯಲ್ಲಿ ಬಳ್ಳಾರಿ ನಗರದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿದ್ದ ಕಟ್ಟಡ ಕುಸಿದು ಅದರ ಅವಶೇಷಗಳಡಿಯಲ್ಲಿ ಸಿಕ್ಕಿ ಅಸು ನೀಗಿದ ಕೂಲಿಕಾರರು ವಲಸೆ ಬಂದವರಾಗಿದ್ದರು. ಇದೀಗ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಬಂಡೆಬಸಾಪುರದ ಕೂಲಿಕಾರರು ದೂರದ ಮಂಡ್ಯ ಜಿಲ್ಲೆಗೆ ಹೋಗಿ ಏಳೆಂಟು ತಿಂಗಳು ಅಲ್ಲಿನ ಕಬ್ಬಿನ ಗದ್ದೆಗಳಲ್ಲಿ ಬೆವರು, ಕಣ್ಣೀರು, ರಕ್ತ ಹರಿಸಿ ದುಡಿದು ಸಂಪಾದಿಸಿದ್ದ ಹಣವನ್ನು ತುಂಬಿಕೊಂಡು ವಾಪಸ್ಸಾಗುತ್ತಿದ್ದಾಗ ಅವರು ಪ್ರಯಾಣಿಸುತ್ತಿದ್ದ ಲಾರಿಯು ಅಘಘಾತಕ್ಕೆ ಒಳಗಾಗಿ ಹನ್ನೊಂದು ಕೂಲಿಕಾರರು ಜೀವ ಕಳೆದುಕೊಂಡರು. ವಲಸೆಯು ಇಂದು ಬಡವರಿಗೆ ವರವಾಗುವುದಕ್ಕೆ ಪ್ರತಿಯಾಗಿ ಶಾಪವಾಗುತ್ತಿದೆ. ಬಸ್ಸಿನಲ್ಲಿ ಪ್ರಯಾಣಿಸಿದರೆ ಹಣ ಹೆಚ್ಚು ಖರ್ಚಾಗುವುದೆಂದು ಇವರೆಲ್ಲ ಲಾರಿಯಲ್ಲಿ ಪ್ರಯಾಣಿಸುತ್ತಾರೆ. ಈ ರೀತಿಯಲ್ಲಿ ದುಡಿಯುವ ಅಸಂಘಟಿತ ದುಡಿಮೆಗಾರರಿಗೆ ನಾವು ಯಾವ ಬಗೆಯ ಭದ್ರತೆಯನ್ನು ಒದಗಿಸುತ್ತಿದ್ದೇವೆ? ಅಭಿವೃದ್ಧಿಯ ಹೆಸರಿನಲ್ಲಿ ಜನರ ಜಮೀನನ್ನು ಕಬಳಿಸಿ ಅವರನ್ನು ಬೀದಿಗೆ ಬೀಳುವಂತೆ ಮಾಡಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮಾಡುತ್ತಿರುವ ನೀರಾವರಿ ಯೋಜನೆ ಗಳಾಗಿರಬಹುದು, ಕೈಗಾರಿಕೆಗಳಾಗಿರಬ ಹುದು, ಶಾಖೊ ತ್ಪನ್ನ ಸ್ಥಾವರಗಳು ಆಗಿರಬಹುದು- ಇವೆಲ್ಲ ಯಾರಿಗೆ ವರವಾಗಿ ಪರಿಣಮಿಸಿವೆ? ಅವುಗಳಿಂದಾಗಿ ಜಮೀನು ಕಳೆದು ಕೊಂಡವರು ಸುಖವಾಗಿದ್ದಾರೆಯೇ? ಸರ್ಕಾರ ನೀಡಿದ ಪರಿಹಾರ, ಜಮೀನನ್ನು ಪಡೆದ ಖಾಸಗಿ ಕಂಪನಿಗಳು ನೀಡುವ ಹಂಗಾಮಿ ಉದ್ಯೋಗಗಳು ಎಷ್ಟು ದಿನ ಜನರನ್ನು ಸಾಕ ಬಲ್ಲವು? 'ಜಮೀನು ನೀಡಿರಿ ಉದ್ಯೋಗ ಪಡೆಯಿರಿ' ಎಂಬ ಘೋಷಣೆ ಮಾಡುವವರಿಗೆ ಖಾಸಗಿ ಕಂಪನಿಗಳು ಅನುಸರಿಸುತ್ತಿರುವುದು 'ಹೈರ್ ಅಂಡ್ ಫೈರ್' ಉದ್ಯೋಗ ನೀತಿ ಎಂಬುದು ತಿಳಿದಿಲ್ಲವೇನು? ತಿಳಿದೂ ತಿಳಿದೂ ಮುಗ್ಧ ಜನರನ್ನು ಯಾಕೆ ಸರ್ಕಾರ ತಪ್ಪು ದಾರಿಗೆಳೆಯಬೇಕು?

ದುಡಿಮೆಗಾರರ ಅಳಲು

ಕರ್ನಾಟಕದ ಒಟ್ಟು ದುಡಿಮೆಗಾರರಲ್ಲಿ ದಿನಗೂಲಿ ಮಾಡುತ್ತಿರುವವರ ಪ್ರಮಾಣ ಶೇ26. ಆದರೆ ಹಿಂದುಳಿದ ಜಿಲ್ಲೆಗಳಲ್ಲಿ ಬೆವರು, ಕಣ್ಣೀರು – ರಕ್ತ ಬಸಿದು ದುಡಿಮೆ ಮಾಡುತ್ತಿರುವವರ ಪ್ರಮಾಣ ಶೇ40. ಬಡತನದ ಭಾರವನ್ನು ಹೆಚ್ಚಿಗೆ ಯಾವ ಪ್ರದೇಶದಲ್ಲಿನ ಜನರು ಅನುಭವಿಸುತ್ತಿದ್ದಾರೆಂಬುದು ಇದರಿಂದ ತಿಳಿಯುತ್ತದೆ. ಈ ದಿನಗೂಲಿ ದುಡಿಮೆಗಾರರಲ್ಲಿ ಸಾಮಾನ್ಯವಾಗಿ ಶೇ 40 ರಿಂದ ಶೇ 50 ರಷ್ಟು ಪರಿಶಿಷ್ಟರಿರುತ್ತಾರೆ. ಮತ್ತೊಂದು ಕುತೂಹಲದ ಸಂಗತಿಯೆಂದರೆ ಎಲ್ಲಿ ಉದ್ಯೋಗವು ಕಾಯಮಾಗಿ

ರುತ್ತದೋ ಮತ್ತು ಎಲ್ಲಿ ಉದ್ಯೋಗ ಸಂಘಟಿತವಾಗಿರುತ್ತದೋ ಅಲ್ಲಿ ಪುರುಷರ ಪ್ರಮಾಣ ಅಧಿಕವಾಗಿರುತ್ತದೆ ಮತ್ತು ಉಳಿದಂತೆ ಮಹಿಳೆಯರ ಪ್ರಮಾಣ ಅಧಿಕವಾಗಿರುತ್ತದೆ. ಉದಾಹರಣೆಗೆ ದಿನಗೂಲಿಗಳಲ್ಲಿ ಮಹಿಳೆಯರ ಪ್ರಮಾಣ ಶೇ 60ರಷ್ಟಿದ್ದರೆ ಸಂಘಟಿತ ಕ್ಷೇತ್ರಗಳಲ್ಲಿನ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ಅತ್ಯಂತ ಕಡಿಮೆಯಿರುತ್ತದೆ. ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ತೋರಿಸಿರುವಂತೆ ದುಸ್ಥಿತಿಯು ಎಲ್ಲಿ ತೀವ್ರವಾಗಿರುತ್ತದೋ ಅಲ್ಲಿ ಲಿಂಗ ಅಸಮಾನತೆಯು ತೀವ್ರವಾಗಿರುತ್ತದೆ. ರಾಜ್ಯದ ಹಿಂದುಳಿದ ಪ್ರದೇಶದ ಜಿಲ್ಲೆಗಳಲ್ಲಿ ಲಿಂಗ ಅಸಮಾನತೆಯು ಅಧಿಕವಾಗಿದೆ.

ಮುಂದಿನದಾರಿ ಯಾವುದು?

ಈ ಪ್ರಬಂಧದಲ್ಲಿ ನಾನು ಅಗಾಧ ಪ್ರಮಾಣದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ನೀಡಿದ್ದೇನೆ. ನಮಗೆಲ್ಲ ತಿಳಿದಿರುವಂತೆ ಅವು ತಮ್ಮಷ್ಟಕ್ಕೆ ತಾವು ಏನನ್ನು ಹೇಳುವುದಿಲ್ಲ. ಅವುಗಳನ್ನು ನಾವು ಹೇಗೆ ಚರ್ಚೆಗೆ ಒಳಪಡಿಸುತ್ತೇವೆ, ಅವುಗಳ ಜೊತೆಯಲ್ಲಿ ಹೇಗೆ ಅನುಸಂಧಾನ ನಡೆಸುತ್ತೇವೆ ಎಂಬುದು ಮುಖ್ಯ. ಅಂಕಿ-ಅಂಶಗಳಿಂದ ಏನೂ ಪ್ರಯೋಜನವಿಲ್ಲ ಎನ್ನುವ ಒಂದು ಅಭಿಪ್ರಾಯ ವಿದ್ವಾಂಸರಲ್ಲಿದೆ. ಅದು ಒಂದು ಹಂತದ ವರೆಗೆ ಸರಿ. ಆದರೆ ಅವುಗಳನ್ನು ಸೂಕ್ತವಾದ ವಿಶ್ಲೇಷಣೆಗೆ ಒಳಪಡಿಸಿದಾಗ ನಮಗೆ ಹೊಸ ಕಿರಣವೊಂದು ಅಲ್ಲಿ ಕಾಣಬಹುದು. ಈ ಬಗೆಯ ಸಂಗತಿವೊಂದನ್ನು ನಾನು ಸಂವಾದದ ಮೇ ತಿಂಗಳ ಅಂಕಣದಲ್ಲಿ ಪರಿಶಿಷ್ಟರ ಸಾಕ್ಷರತೆಯನ್ನು ಮಾಪನ ಮಾಡುವ ಕ್ರಮದ ಬಗ್ಗೆ ವಿವರಿಸಿದ್ದೇನೆ.

ಪ್ರಾದೇಶಿಕ ಅಸಮಾನತೆಯು ಮುಖ್ಯವಾಗ ಬೇಕಾದರೆ ನಾವು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಪರಿಯಲ್ಲಿ ಪರಿವರ್ತನೆಯಾಗಬೇಕು. ಸರಕು-ಸರಂಜಾಮು ದೃಷ್ಟಿಕೋನದಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮವನ್ನು ಬಿಡಬೇಕು. ಜನರ ನೆಲೆಯಿಂದ ಅದನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಆಗ ಅಲ್ಲಿ ಪರಿಶಿಷ್ಟರ ಬದಣೆ ಮುಖ್ಯವಾಗುತ್ತದೆ. ಅಲ್ಲಿ ಮಹಿಳೆಯರ ಸಂಗತಿಗಳು ಆದ್ಯತೆಯಾಗುತ್ತವೆ. ಹಿಂದುಳಿದ ಪ್ರದೇಶದ ಸಮಸ್ಯೆಗಳು ಮುಂಚೂಣಿಗೆ ಬರುತ್ತವೆ. ಥಳಥಳನೆ ಹೊಳೆಯುವ ರಸ್ತೆಗಳು ಮುಖ್ಯವಾಗುವುದಕ್ಕೆ ಪ್ರತಿಯಾಗಿ ಎಲ್ಲಿ ರಸ್ತೆಗಳಿಲ್ಲ ಅಲ್ಲಿ ರಸ್ತೆ ನಿರ್ಮಿಸುವುದು ಮುಖ್ಯವಾಗುತ್ತದೆ. ಜನರ ವಲಸೆಯು ಅನಿವಾರ್ಯವಾಗದಂತೆ ಮಾಡುವುದರ ಬಗ್ಗೆ ಯೋಜಿಸುವಂತಾಗುತ್ತದೆ. ಒಂದು ವೇಳೆ ವಲಸೆ ಹೋದರೂ ಅವರನ್ನು ಶೋಷಣೆಯಿಂದ, ಅಪಘಾತಗಳಿಂದ ರಕ್ಷಿಸುವುದು ಹೇಗೆ ಎಂಬುದು, ಅವರಿಗೆ ಭದ್ರತೆಯನ್ನು ನೀಡುವುದು ಹೇಗೆ ಎಂಬುದು ನೀತಿಯಾಗುತ್ತದೆ. ಮೊದಲು ನಾವು ಬೆಂಗಳೂರು ಮಾತ್ರವೇ ಕರ್ನಾಟಕ ಎಂಬ ಭ್ರಮೆಯಿಂದ ಹೊರ ಬರಬೇಕು.

ಜನರು ಹಿಂದುಳಿದ ಪ್ರದೇಶದಲ್ಲೂ ಬದುಕುತ್ತಿದ್ದಾರೆ ಎಂಬುದು ನಮ್ಮನ್ನು ಆಳುವವರಿಗೆ ಮನವರಿಕೆಯಾಗಬೇಕು. ಅದಕ್ಕಾಗಿ ನಾವು ಪ್ರಾದೇಶಿಕ ಅಸಮಾನತೆಯನ್ನು ರಾಜಕೀಕರಣಗೊಳಿಸ ಬೇಕು. ರಾಜಕೀಕರಣವೆಂದರೆ ಪಕ್ಷ ರಾಜಕಾರಣವಲ್ಲ. ಜನರು ತಮ್ಮ ಅಧಿಕಾರವನ್ನು ಒತ್ತಾಯಿಸುವ ಕ್ರಮವನ್ನು, ಅಭಿವೃದ್ಧಿಯಲ್ಲಿ ಜನರು ತಮ್ಮ ಪಾಲನ್ನು ಒತ್ತಾಯಿಸುವ ಪ್ರವೃತ್ತಿಯನ್ನು ಇಲ್ಲಿ ರಾಜಕೀಕರಣವೆಂದು ಕರೆಯಲಾಗಿದೆ. ಈ ಅಸಮಾನತೆಯನ್ನು ಸರಿಪಡಿಸುವುದು ಸರ್ಕಾರದ ಆದ್ಯತೆಯಾಗಬೇಕು. ಅಭಿವೃದ್ಧಿಯೆಂಬುದು ಹಂಗಿನ ಸಂಗತಿಯಾಗುವುದಕ್ಕೆ ಪ್ರತಿಯಾಗಿ ಅದು ಹಕ್ಕಿನ ಸಂಗತಿಯಾ ಗಬೇಕು. ಅದಕ್ಕೆ ಜನರ ಧಾರಣಾ ಸಾಮರ್ಥ್ಯವು ವಿಸ್ತೃತ ಗೊಳ್ಳಬೇಕು. ಈ ಧಾರಣಾ ಸಾಮರ್ಥ್ಯವು ಅಕ್ಷರದಿಂದ, ಆಹಾರದ ಹಕ್ಕಿನಿಂದ, ಆರೋಗ್ಯದಿಂದ, ಲಿಂಗ ಸಮಾನ ತೆಯಿಂದ, ಸ್ವಾತಂತ್ರ್ಯದಿಂದ ಪ್ರಾಪ್ತವಾಗುತ್ತದೆ.

ಕೊನೆಯ ಕಟಕಿ!

ಕರ್ನಾಟಕದಲ್ಲಿ ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆಯ ಲೇಖನದಲ್ಲಿ ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಬಗ್ಗೆ ಏನನ್ನು ಹೇಳದೆ ಅದು ಹೇಗೆ ಮುಗಿಯುತ್ತದೆ ಎಂಬ ಪ್ರಶ್ನೆಯನ್ನು ಯಾರೂ ಕೇಳಬಹುದು. ಪ್ರಾದೇಶಿಕ ಅಸಮಾನತೆ ಕುರಿತ ಪ್ರಸ್ತುತ ಪ್ರಬಂಧದಲ್ಲಿ ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಬಗ್ಗೆ ಏನನ್ನು ಹೇಳಿಲ್ಲ. ಅದು ಉದ್ದೇಶಪೂರ್ವಕವಾದ ತೀರ್ಮಾನವಾಗಿದೆ. ಏನನ್ನು ಬರೆಯಬೇಕು? ಅದರ ಪ್ರಮುಖ ಶಿಫಾರಸಾದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು 2007-08ರಲ್ಲಿ ಅನುಷ್ಠಾನಗೊಳಿಸಿತೆಂದು ಹೇಳಬೇಕೆ? ಅದಕ್ಕೆ ಸರ್ಕಾರ ಬಜೆಟ್ಟಿನಲ್ಲಿ 'ಹೆಚ್ಚುವರಿ'ಯಾಗಿ ಹಣ ನೀಡಬೇಕೆಂದು ಸಮಿತಿಯು ಹೇಳಿದ್ದರೂ ಸರ್ಕಾರವು ಬಜೆಟ್ಟಿನಲ್ಲಿ ಹಣವನ್ನು ಹೆಚ್ಚುವರಿಯಾಗಿ ತೆಗೆದಿಟ್ಟಿಲ್ಲವೆಂಬುದನ್ನು ಚರ್ಚಿಸಬೇಕೆ? ಈ ಯೋಜನೆಯಲ್ಲಿ ಹಿಂದುಳಿದಿರುವ ತಾಲ್ಲೂಕು, ಜಿಲ್ಲೆ, ವಿಭಾಗಗಳ ನಡುವೆ ಅನುದಾನ ಹಂಚಿಕೆಗೆ ಸಮಿತಿಯು ಹೇಳಿದ ಸೂತ್ರವನ್ನು ಬಿಟ್ಟು ಸರ್ಕಾರ ತನ್ನದೆ ಅನುದಾನ ಹಂಚಿಕೆ ಸೂತ್ರವನ್ನು ಜಾರಿಗೊಳಿಸಿದ್ದನ್ನು, ಅದರಿಂದ ರಾಜ್ಯದಲ್ಲಿ ಅತ್ಯಂತ ಹಿಂದುಳಿದಿದ್ದ ಗುಲ್ಬರ್ಗಾ ವಿಭಾಗಕ್ಕೆ ಅನ್ಯಾಯವಾಗುತ್ತಿದ್ದುದನ್ನು, ನಂತರ ಅದರ ಬಗೆಗಿನ ನಮ್ಮ ಟೀಕೆಗಳಿಗೆ ತಲೆಬಾಗಿ ಮತ್ತೆ ಸಮಿತಿ ಸೂತ್ರಕ್ಕೆ ಸರ್ಕಾರ ಹಿಂತಿರುಗಿದ್ದನ್ನು ವಿವರಿಸಬೇಕೆ? ಯಾವುದರ ಬಗ್ಗೆ ಬರೆಯಬೇಕು? ಸಮಿತಿಯು ತಾಲ್ಲೂಕುಗಳನ್ನು ಅಭಿವೃದ್ಧಿಯ ಮೂಲ ಘಟಕಗಳಾಗಿ ಮಾಡಿಕೊಂಡು ತನ್ನ ಶಿಫಾರಸ್ಸುಗಳನ್ನು 114 ಹಿಂದುಳಿದ ತಾಲ್ಲೂಕುಗಳ ಬಗ್ಗೆ ಮಾಡಿದ್ದರೂ ಸರ್ಕಾರವು ವಿಶೇಷ ಯೋಜನೆಯಲ್ಲಿ ಅನುದಾನವನ್ನು ತಾಲ್ಲೂಕುವಾರು ನೀಡುತ್ತಿಲ್ಲವೆಂಬುದನ್ನು ಬಹಿರಂಗ ಪಡಿಸಬೇಕೆ?(ವಾಸ್ತವವಾಗಿ ಅದನ್ನು ಜಿಲ್ಲವಾರು ಕೂಡಾ ನೀಡುತ್ತಿಲ್ಲ!) ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದ ಮೇಲುಸ್ತುವಾರಿಗಾಗಿಯೇ ಸರ್ಕಾರವು ಒಂದು ಸಮಿತಿಯನ್ನು ನೇಮಿಸಿರುವುದನ್ನು ಮೆಚ್ಚಿ ಅದರ ಗುಣಗಾನ ಮಾಡಬೇಕೆ? ಅಥವಾ ಸರ್ಕಾರವು ಜರೂರಾಗಿ ತನ್ನ 'ಪ್ರಾದೇಶಿಕ ಅಭಿವೃದ್ಧಿ ನೀತಿ' ಯನ್ನು ಘೋಷಿಸಬೇಕೆಂದು ಸಮಿತಿಯು ಮಾಡಿರುವ ಶಿಫಾರಸ್ಸನ್ನು ಸರ್ಕಾರವು ಅನುಷ್ಠಾನಗೊಳಿಸಿಲ್ಲ ಎಂಬುದನ್ನು ತಿಳಿಸಬೇಕೆ?.

ಒಟ್ಟಾರೆ ಸರ್ಕಾರಗಳು ಪ್ರಾದೇಶಿಕ ಅಸಮಾನತೆ ನಿವಾರಣೆಯಲ್ಲಿ ಆಸಕ್ತಿ ತಳೆದಿಲ್ಲ ಎಂಬುದು ಸ್ಪಷ್ಟವಾಗಿದೆ. ಇದಕ್ಕೆ ಆ ಸರ್ಕಾರ ಅಥವಾ ಈ ಸರ್ಕಾರ ವೆಂಬ ಭೇದವಿಲ್ಲ. ಅದಕ್ಕಾಗಿ ಪ್ರತಿಭಟನೆಯ ರೂಪದಲ್ಲಿ ನನ್ನ ಲೇಖನದಲ್ಲಿ ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ಬಗ್ಗೆ ಏನನ್ನು ಚರ್ಚಿಸಿಲ್ಲ. ಬೇರೆ ಸಂದರ್ಭಗಳಲ್ಲಿ ಆ ಸಮಿತಿ ವರದಿಯ ಬಗ್ಗೆ ನಾನು ಸಾಕಷ್ಟು ಬರೆದಿದ್ದೇನೆ. □

ಕನ್ನಡ ಶಾಸ್ತ್ರ ಭಾಷೆಯೋ? ಶಾಸ್ತ್ರೀಯ ಭಾಷೆಯೋ?

(33ನೇ ಪುಟದಿಂದ)

ಎಷ್ಟೇ ಆರ್ಥಿಕ ನೆರವು ಸಿಕ್ಕರೂ ಕನ್ನಡಕ್ಕೆ ಆಗುವ ಪ್ರಯೋಜನವೂ ಅಷ್ಟೇ ಎಂಬ ಅಭಿಪ್ರಾಯ ಮೂಡಲಕ್ಕೂ ಸಾಧ್ಯ.

ಮೊಟಕುಗೊಳಿಸಲೂ ಇದು ಒತ್ತಾಸೆಯಾಗಿರುತ್ತಿತ್ತು ಎಂಬುದು ಗಮನಾರ್ಹ. ಭಾರತದ ಎಲ್ಲಾ ಭಾಷೆಗಳ ಬಳಕೆಯ ವಲಯಗಳನ್ನು ವಿಸ್ತರಿಸುವದಕ್ಕೂ ಈ ಯೋಜನೆ ಸಹಕಾರಿಯಾಗಿರುತಿತ್ತು. ತಂತ್ರಜ್ಞಾನದ ವಿವಿಧ ಸಾಧ್ಯತೆಗಳನ್ನು ನಮ್ಮ ದೇಶೀ ಭಾಷೆಗಳಿಗೆ ಕಲ್ಪಿಸುವುದೇ ಈ ಯೋಜನೆಯ ಉದ್ದೇಶವಾಗಿತ್ತು. ಉದಾ.ಗೆ ದತ್ತ-ಖನಿಜ, ಮಷಿನ್‌ಟ್ರಾನ್ಸಲೇಶನ್, ಆನ್‌ಲೈನ್ ಪದಕೋಶಗಳು, ಜನಬಳಕೆಯ ಭಾಷೆ ಹಾಗೂ ನುಡಿಗಟ್ಟುಗಳನ್ನು ಆಧರಿಸಿ ಸಿದ್ಧಪಡಿಸಿದ ಪದಕೋಶ, ವ್ಯಾಕರಣ ಹಾಗೂ ಇತರೆ ಮುಂತಾದ ಯೋಜನೆಗಳನ್ನು ಕನ್ನಡದಲ್ಲೂ ಸಾಧಿಸಬಹುದಿತ್ತು. ಇದು ಇವತ್ತಿನ ಕನ್ನಡ ಸಮುದಾಯದ ಅಗತ್ಯಗಳನ್ನು ಈಡೇರಿಸುವದಕ್ಕೆ ಕನ್ನಡವನ್ನು ಸಜ್ಜುಗೊಳಿಸಬಹುದಿತ್ತು ಎಂಬುದು ವಿಶೇಷ.

ಈಗ ಮತ್ತೊಮ್ಮೆ ಕರ್ನಾಟಕ ಸರಕಾರವು 'ಕನ್ನಡ ಭಾಷಾ ಅಭಿವೃದ್ಧಿ'ಗೆಂದು ಪ್ರತಿ ವಿಶ್ವವಿದ್ಯಾನಿಲಯಗಳಿಗೆ ಇತ್ತೀಚೆಗೆ ಎರಡು ಕೋಟಿ ರೂಪಾಯಿ ಆರ್ಥಿಕ ನೆರವು ನಿಡುವುದಾಗಿ ಆದೇಶ ಹೊರಡಿಸಿತ್ತು. ಇದಕ್ಕೆ ಅನುಗುಣವಾಗಿ ಈಗಾಗಲೇ ಒಂದು ಕೋಟಿ ರೂಪಾಯಿ ಆರ್ಥಿಕ ನೆರವು ಕೊಡಲಾಗಿದೆ. ಕನ್ನಡವನ್ನು ಶಾಸ್ತ್ರಭಾಷೆಯಾಗಿ ಹಾಗೂ ಆಲೋಚನಕ್ರಮದ ಭಾಷೆಯಾಗಿ ರೂಪಿಸುವ ನಿಟ್ಟಿನಲ್ಲಿ, ಎಷ್ಟು ವಿಶ್ವವಿದ್ಯಾನಿಲಯಗಳು ರಚನಾತ್ಮಕ ಯೋಜನೆಗಳನ್ನು ರೂಪಿಸಿ ಕೊಟ್ಟವೋ ಆ ತಾಯಿ ಭುವನೇಶ್ವರಿಗೆ ಗೊತ್ತು. ಕನ್ನಡ ಭಾಷೆಯ ಅಭಿವೃದ್ಧಿ ಕೇವಲ ಕನ್ನಡ ಅಧ್ಯಯನ ಪೀಠಗಳಿಂದ ಮಾತ್ರ ಸಾಧ್ಯವೆಂಬುದು ಎಂತಹ ಅಪಾಯಕಾರಿ ಧೋರಣೆ ಎಂಬುದನ್ನು ಮನಗಾಣಬೇಕಿದೆ. ಇದು ಕೇವಲ ಭಾಷಾ ವಿಭಾಗಗಳ ಪಾಲ್ಗೊಳ್ಳುವಿಕೆಯಿಂದ ಮಾತ್ರ ಸಾಧ್ಯವಿಲ್ಲ. ಎಷ್ಟೇ ಆರ್ಥಿಕ ನೆರವು ಸಿಕ್ಕರೂ ಕನ್ನಡಕ್ಕೆ ಆಗುವ ಪ್ರಯೋಜನವೂ ಅಷ್ಟೇ ಎಂಬ ಅಭಿಪ್ರಾಯ ಮೂಡಲಕ್ಕೂ ಸಾಧ್ಯ. ಕನ್ನಡ ಭಾಷಾ ಅಭಿವೃದ್ಧಿಗೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳು ಗುರುತರ ಕೊಡುಗೆ ನೀಡಬಹುದಾದ ಅಂಶವನ್ನು ಮನಗಂಡು, ಹಾಗೂ ಕನ್ನಡದ ಸಮಗ್ರ ಅಭಿವೃದ್ಧಿಯನ್ನೂ ಗಮನದಲ್ಲಿಟ್ಟುಕೊಂಡು, ಸರಕಾರವು ಇಂತಹ ಆರ್ಥಿಕ ನೆರವಿನ ಯೋಜನೆಗಳನ್ನು ಜಾರಿಗೊಳಿಸಬೇಕಿತ್ತು. ಅನುವಾದ, ಶಿಕ್ಷಣ ಮಾಧ್ಯಮದ ಪ್ರಶ್ನೆ, ಮಾನವಿಕ, ವೈಜ್ಞಾನಿಕಶಾಸ್ತ್ರ ಹಾಗೂ ತಾಂತ್ರಿಕ-ವೈಜ್ಞಾನಿಕ ವಲಯಗಳಲ್ಲಿ ಕನ್ನಡವನ್ನು ಪಳಗಿಸುವುದಕ್ಕೆ ಬೇಕಾದ ಕಸುವು ಕೇವಲ ಕನ್ನಡ ವಿಭಾಗಗಳಿಂದ ರೂಪಿಸಿ ಕೊಡಲು ಸಾಧ್ಯವಿಲ್ಲ. ಹಾಗಾಗಿ ಕನ್ನಡ ಭಾಷಾ ಅಭಿವೃದ್ಧಿಯನ್ನು ರೂಪಿಸುವ ಬಗೆಯೇ ಪ್ರಶ್ನಾರ್ಹವಾಗಿದೆ. ಮತ್ತೆ ಇದೆ ಬಗೆಯ ಕಾರ್ಯಕ್ರಮಗಳನ್ನು ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯ ಅಡಿಯಲ್ಲಿ ಅನುಷ್ಠಾನಗೊಳ್ಳುವುದಾದರೆ ಇದರಿಂದ ಕನ್ನಡಕ್ಕಾಗಲಿ ಹಾಗೂ ಕನ್ನಡ ಸಮುದಾಯಕ್ಕಾಗಲಿ ಏನೂ ಪ್ರಯೋಜನವಿಲ್ಲ ಅನ್ನುವುದು ನಿಚ್ಚಳವಾಗಿ ಕಾಣುತ್ತದೆ □

ಎವರೆಸ್ಟ್ ಎತ್ತರಕ್ಕೆ ಏರಿದ ಜಗತಾಪ್

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಇತ್ತೀಚೆಗೆ ನಾಮದೇವ್ ಕೃಷ್ಣಾಜಿ ಜಗತಾಪ್ ಅವರನ್ನು ಭೇಟಿ ಮಾಡಿದ ನಂತರ ಒಂದು ಪುಣ್ಯಕ್ಷೇತ್ರಕ್ಕೆ ಹೋಗಿ ಬಂದ ಅನುಭವವಾಯಿತು. ದಲಿತರು ತಯಾರಿಸಿದ ಉತ್ಪನ್ನಗಳು ಅತ್ಯುತ್ತಮವಾದುದೆಂದು ಜನ ಕೊಂಡಾಡುವುದನ್ನು ನೋಡಲು ನಾನು ಬಹಳ ವರ್ಷಗಳಿಂದ ಕಾದಿದ್ದೆ. ಆ ಕನಸು ಈಗ ನನಸಾಗಿದೆ. ನನ್ನ ಕನಸನ್ನು ನನಸು ಮಾಡಿದ ಉತ್ಪನ್ನ ಚರಂಡಿಗಳಲ್ಲಿ ಬಳಸುವ ಸಿಮೆಂಟ್ ಪೈಪ್ ಎವರೆಸ್ಟ್, ಮುಂಬೈ, ಪುಣೆ ಹಾಗೂ ಮಹಾರಾಷ್ಟ್ರದ ಮತ್ತಿತರ ನಗರಗಳಲ್ಲಿ ಎವರೆಸ್ಟ್ ಪೈಪ್, ಕಟ್ಟಡ ಕಾಮಗಾರಿ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಎಲ್ಲರ ಮನ್ನಣೆಗೆ ಪಾತ್ರವಾದ ಬ್ರ್ಯಾಂಡ್ಆಗಿ ಹೊರಹೊಮ್ಮಿದೆ. ಈವಿಚಾರ ತಿಳಿದು ರೋಮಾಂಚಿತನಾದ ನಾನು ಸಂಸ್ಥೆಯ ಒಡೆಯರಾದ ಜೀವಂತ ದಂತಕಥೆ ನಾಮದೇವ್ ಅವರ ಪುಣೆಯ ಬಂಗಲೆಗೆ ಭೇಟಿ ನೀಡಿದೆ.

77 ವರ್ಷದ ಜಗತಾಪ್ ಇವತ್ತಿಗೂ ಉದ್ಯಮದಲ್ಲಿ ಸಕ್ರಿಯರಾಗಿದ್ದಾರೆ. "ಸಂಸ್ಥೆಯ ಗುಣಮಟ್ಟ ನಿಯಂತ್ರಣ ವಿಭಾಗವನ್ನು ಈಗಲೂ ತಂದೆಯವರು ನೋಡಿಕೊಳ್ಳುತ್ತಾರೆ" ಎಂದು ಹಿರಿಯ ಮಗ ಅವಿನಾಶ್ ಜಗತಾಪ್ ಹೇಳುತ್ತಾರೆ. "ಅತ್ಯುತ್ತಮ ಗುಣಮಟ್ಟದ ಪೈಪ್‌ಗಳ ಉತ್ಪಾದನೆಯೇ ಅವರ ಯಶಸ್ಸಿಗೆ ಕಾರಣ" ಎನ್ನುತ್ತಾರೆ ಅವಿನಾಶ್.

1980ರಲ್ಲಿ ಆರಂಭವಾದ ಎವರೆಸ್ಟ್ ಸ್ಪನ್ ಪೈಪ್ ಇಂಡಸ್ಟ್ರಿ ಈಗ ಸುಮಾರು 180 ದಶಲಕ್ಷ ರೂ. ವಹಿವಾಟು ನಡೆಸುವ ಸಂಸ್ಥೆಯಾಗಿದೆ. ಮುಂಬೈ ಮತ್ತು ಪುಣೆಯ ಬಿಲ್ಡರ್‌ಗಳು ತಮ್ಮ ಗ್ರಾಹಕರಿಗೆ ಎವರೆಸ್ಟ್ ಪೈಪ್ ಬಳಸಲು ಶಿಫಾರಸ್ಸು ಮಾಡುವುದು ಸಾಮಾನ್ಯ. ಏಳು ಎಕರೆ ಜಮೀನಿನಲ್ಲಿ ವಿಸ್ತರಿಸಿರುವ ಸಂಸ್ಥೆಯ ಕಾರ್ಖಾನೆಯಲ್ಲಿ ಬೃಹತ್ ಪೈಪ್‌ಗಳನ್ನು ಕಾರ್ಮಿಕರು ತಯಾರಿಸುವುದನ್ನು ನೋಡುವುದಕ್ಕೇ ಚೆಂದ. ಕಾರ್ಖಾನೆಗೆ ಹೊಂದಿಕೊಂಡಂತೆ ಇರುವ ಕಚೇರಿ ಕಾರ್ಪೊರೇಟ್ ಶೈಲಿಯಲ್ಲಿದ್ದು, ಅತಿಥಿಗೃಹವನ್ನು ಒಳಗೊಂಡಿದೆ. ಕಾರ್ಖಾನೆಯ ಆವರಣದಲ್ಲಿ ಎಂಟು ಬೃಹತ್ ಟ್ರಕ್‌ಗಳು ಮತ್ತು ಹಲವು ಕ್ರೇನ್‌ಗಳು, ಟ್ರ್ಯಾಕ್ಟರ್‌ಗಳು ಉದ್ಯಮದ ಕಾರ್ಯಚಟುವಟಿಕೆಗೆ ಸಾಕ್ಷಿಯಾಗಿ ನಿಂತಿದ್ದವು. ಜಗತಾಪ್ ಅವರ ಎವರೆಸ್ಟ್ ಸಂಸ್ಥೆ 100 ಎಂಎಂ ಸುತ್ತಳತೆಯಿಂದ 1800 ಎಂಎಂ ಸುತ್ತಳತೆಯ ಸಿಮೆಂಟ್ ಪೈಪ್‌ಗಳನ್ನು ಉತ್ಪಾದಿಸುತ್ತದೆ.

ಸಂಸ್ಥೆಯ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ "ಸುಮಾರು 150 ದಶಲಕ್ಷ ರೂ. ವೆಚ್ಚದಲ್ಲಿ ನಾವು ಜರ್ಮನಿಯಿಂದ ಸ್ವಯಂಚಾಲಿತ ಪೈಪ್ ಉತ್ಪಾದನಾ ಯಂತ್ರವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ" ಎಂದು ಅವಿನಾಶ್ ಹೇಳುತ್ತಾರೆ. "ನಾವು ಇವತ್ತಿಗೆ ಆರ್ಡರ್ ಸ್ವೀಕರಿಸುವುದನ್ನು ನಿಲ್ಲಿಸಿದರೂ ಕೂಡ ಇನ್ನೂ ನಾಲ್ಕು ವರ್ಷಗಳಿಗಾಗುವಷ್ಟು ಆರ್ಡರ್ ನಮ್ಮ ಬಳಿ ಇವೆ." ಅತಿ ವೇಗವಾಗಿ ಪೈಪ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯವಿರುವ ಯಂತ್ರೋಪಕರಣವನ್ನು ಹುಡುಕಲು ಅವಿನಾಶ್ ಮತ್ತು ಅವರ ಕಿರಿಯ ಸಹೋದರ ಚೀನಾ, ಇಟಲಿ – ಜರ್ಮನಿ ದೇಶಗಳಿಗೆ ಭೇಟಿ ನೀಡಿದ್ದರು. ಕೊನೆಗೆ ಜರ್ಮನಿಯ ಸಂಸ್ಥೆಯೊಂದನ್ನು ಆಯ್ಕೆ

ಮಾಡಿಕೊಂಡಿರು. ನೀವು ಈಗಾಗಲೇ ಮಾರುಕಟ್ಟೆಯಲ್ಲಿ ಮೇಲುಗೈಯಲ್ಲಿದ್ದೀರಾ. ಹೀಗಿರುವಾಗ ಸ್ವಯಂಚಾಲಿತ ಯಂತ್ರೋಪಕರಣ ಯಾಕೆ? ಬದಲಿಗೆ ಹೆಚ್ಚು ಕಾರ್ಮಿಕರಿಗೆ ಉದ್ಯೋಗ ನೀಡಿ ಉತ್ಪಾದನೆಯ ಮಟ್ಟ ಹೆಚ್ಚಿಸಬಹುದಲ್ಲವೇ?" ಎಂಬ ನನ್ನ ಪ್ರಶ್ನೆಗೆ, "ಪುಣೆಯಲ್ಲಿ ಕಾರ್ಖಾನೆಗೆ ಭೂಮಿ ಮತ್ತು ಕಾರ್ಮಿಕರನ್ನು ಹೊಂದಿಸುವುದು ಬಹುದೊಡ್ಡ ಸಮಸ್ಯೆ" ಎನ್ನುತ್ತಾರೆ ಅವಿನಾಶ್. "45 ನಿಮಿಷಗಳಲ್ಲಿ ಉತ್ಪಾದಿಸಬಹುದಾದ ಪೈಪ್ ಒಂದನ್ನು ಜರ್ಮನಿಯ ತಂತ್ರಜ್ಞಾನ ಬಳಸಿ 2.5 ನಿಮಿಷದಲ್ಲಿ ಉತ್ಪಾದಿಸಬಹುದು. ಕಾರ್ಮಿಕ ವರ್ಗವನ್ನು ನೋಡಿಕೊಳ್ಳುವುದು ಸ್ವಲ್ಪ ಕಷ್ಟ. ಜೊತೆಗೆ ಕಾರ್ಖಾನೆಯ ಸುತ್ತಲಿನ ಭೂಮಿ ಖರೀದಿಸುವುದು ಕೂಡ ಕಷ್ಟ" ಹೀಗಾಗಿ ಯಂತ್ರೋಪಕರಣಗಳ ಮೊರೆ ಹೋಗಬೇಕಿದೆ ಎನ್ನುತ್ತಾರೆ.

ಹಲವಾರು ಐಷೋರಾಮಿ ಕಾರುಗಳನ್ನು ಹೊಂದಿರುವ ನಾಮದೇವ್ ಕೃಷ್ಣಾಜಿ ಜಗತಾಪ್ ತಮ್ಮ ಮೂವರು ಗಂಡು ಮಕ್ಕಳಿಗೆ ಪ್ರತ್ಯೇಕವಾಗಿ ಮೂರು ಬಂಗಲೆಗಳನ್ನು ಕಟ್ಟಿಸಿದ್ದಾರೆ. ಜಗತಾಪ್ ಅವರು ವಾಸಿಸುವ ಬಂಗಲೆ ಮತ್ತು ಅವರ ಬಳಿಯಿರುವ ಗೃಹೋಪಯೋಗಿ ಉತ್ಪನ್ನಗಳ ಬಗ್ಗೆ ಒಂದು ಗಂಟೆಯ ಸಾಕ್ಷ್ಯಚಿತ್ರವನ್ನೇ ಚಿತ್ರಿಸಬಹುದು!

ನಾಮದೇವರ ಯಶಸ್ಸಿನ ಈ ಪಯಣ ಯಾರಿಗಾದರೂ ಸತ್ಯಕಥೆ ಎನಿಸುವುದಿಲ್ಲ. ಬಡತನದ ಕಾರಣದಿಂದಾಗಿ ನಾಮದೇವರ ತಂದೆ ಎರಡನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತು. ಶಾಲೆ ಬಿಟ್ಟ ನಂತರ ಅವರು ಕಾರ್ಖಾನೆಯ ಕಾರ್ಮಿಕನಾಗಿ ಕೆಲಸಕ್ಕೆ ಸೇರಿಕೊಂಡರು. ನಾಮದೇವರ ತಾತ ಅನಕ್ಷರಸ್ಥ ಕೃಷಿ ಕಾರ್ಮಿಕರಾಗಿದ್ದರು. ಅವರು ಹಳ್ಳಿಯಲ್ಲಿ ಸತ್ತ ಜಾನುವಾರುಗಳನ್ನು ಸಾಗಿಸುವ ಕೆಲಸ ಕೂಡ ಮಾಡುತ್ತಿದ್ದರು. ಇನ್ನು ನಾಮದೇವ್ ಏಳನೆಯ ತರಗತಿ ಉತ್ತೀರ್ಣರಾದ ನಂತರ ಚರಂಡಿ ಪೈಪ್ ಉತ್ಪಾದಿಸುವ ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದರು. ನಂತರ ಪೈಪ್ ಜೋಡಿಕೆಯ ಸೂಕ್ಷ್ಮ ಕೆಲಸದಲ್ಲಿ ನೈಪುಣ್ಯತೆ ಸಾಧಿಸಿದರು. ಕಾರ್ಖಾನೆಗೆ ಸೇರುವುದಕ್ಕೆ ಮುಂಚೆ ಬೀದಿ ಬದಿಯಲ್ಲಿ ಪುಸ್ತಕಗಳನ್ನು ಮಾರಾಟ ಮಾಡುವ, ಮರದ ಚೌಕಟ್ಟಿನ ಕನ್ನಡಿಯನ್ನು ತಯಾರಿಸಿ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದರು.

ನೀವು ಬಡತನವನ್ನು ಅನುಭವಿಸಿದ್ದೀರಾ ಎಂಬ ನನ್ನ ಪ್ರಶ್ನೆಗೆ, "ನಾನೂ ಕೂಡ ಜೀವನದಲ್ಲಿ ಕಷ್ಟ ಪಟ್ಟಿದ್ದೇನೆ. ಆಗ ನನಗೆ ದಿನಕ್ಕೆ ಎರಡು ಹೊತ್ತಿನ ಊಟ ಸಿಗುವುದು ಕೂಡ ಕಷ್ಟವಾಗಿತ್ತು" ಎಂದು ನಾಮದೇವ್ ಉತ್ತರಿಸಿದರು. ನಾಮದೇವ್ ಬೂಟ್ ಮತ್ತು ಚಪ್ಪಲಿಗಳನ್ನು ಜೀವಮಾನದಲ್ಲಿ ಮೊಟ್ಟಮೊದಲಿಗೆ ಧರಿಸಿದ್ದು ತಮ್ಮ 22ನೆಯ ವಯಸ್ಸಿನಲ್ಲಿ. ಜಟಕಾಬಂಡಿಯಲ್ಲಿ ಮದುವೆ ದಿಬ್ಬಣ ಹೊರಟಿತ್ತು ಎಂದು ಅವರು ತಮ್ಮ ಜೀವನದ ಕೆಲವು ಮರೆಯಲಾಗದ ಘಟನೆಗಳನ್ನು ನೆನೆಯುತ್ತಾರೆ.

ಸೋಫಾದಲ್ಲಿ ಮಹಾರಾಜನಂತೆ ಕುಳಿತಿದ್ದ ನಾಮದೇವ್ ಅವರಿಗೆ ನಾನು ಮೂಲಭೂತ ಪ್ರಶ್ನೆಯನ್ನು ಕೇಳಿದೆ. "ಈ ಸಂಸ್ಥೆಯನ್ನು ಸ್ಥಾಪಿಸಲು ಕಾರಣವೇನು?" "ಈ ಪೈಪ್‌ಗಳನ್ನು ನೀನು ಯಾಕೆ ಉತ್ಪಾದಿಸಬಾರದು ಎಂದು ಒಮ್ಮೆ ನನ್ನ ಸ್ನೇಹಿತ ಕೇಳಿದ್ದೇ ನನಗೆ ಪ್ರೇರಣೆಯಾಯಿತು" ಎಂದು ನಾಮದೇವ್ ಉತ್ತರಿಸುತ್ತಾರೆ.

ತಮ್ಮ ಎವರೆಸ್ಟ್ ಸ್ಪನ್ ಪೈಪ್ ಮೂಲಕ ನಾಮದೇವ್

> **ಸಂಸ್ಥೆಯ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ "ಸುಮಾರು ೧೫೦ ದಶಲಕ್ಷ ರೂ. ವೆಚ್ಚದಲ್ಲಿ ನಾವು ಜರ್ಮನಿಯಿಂದ ಸ್ವಯಂಚಾಲಿತ ಪೈಪ್ ಉತ್ಪಾದನಾ ಯಂತ್ರವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ" ಎಂದು ಅವಿನಾಶ್ ಹೇಳುತ್ತಾರೆ. "ನಾವು ಇವತ್ತಿಗೆ ಆರ್ಡರ್ ಸ್ವೀಕರಿಸುವುದನ್ನು ನಿಲ್ಲಿಸಿದರೂ ಕೂಡ ಇನ್ನೂ ನಾಲ್ಕು ವರ್ಷಗಳಿಗಾಗುವಷ್ಟು ಆರ್ಡರ್ ನಮ್ಮ ಬಳಿ ಇವೆ." ಅತಿ ವೇಗವಾಗಿ ಪೈಪ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯವಿರುವ ಯಂತ್ರೋಪಕರಣವನ್ನು ಹುಡುಕಲು ಅವಿನಾಶ್ ಮತ್ತು ಅವರ ಕಿರಿಯ ಸಹೋದರ ಚೀನಾ, ಇಟಲಿ - ಜರ್ಮನಿ ದೇಶಗಳಿಗೆ ಭೇಟಿ ನೀಡಿದ್ದರು. ಕೊನೆಗೆ ಜರ್ಮನಿಯ ಸಂಸ್ಥೆ ಯೊಂದನ್ನು ಆಯ್ಕೆ ಮಾಡಿ ಕೊಂಡರು.**

'ಪುಣೆಯ ಇಲಿಗಳ ರಾಜ'

ಎವರೆಸ್ಟ್‌ನಷ್ಟೇ ಎತ್ತರಕ್ಕೆ ಬೆಳೆದಿದ್ದಾರೆ ಅತಿಶಯೋಕ್ತಿಯಾಗಲಾರದು. ಇವರ ಸಂಸ್ಥೆ ಯಲ್ಲಿ ಮರಾಠರು ಮತ್ತು ಬ್ರಾಹ್ಮಣರು ಕೂಡ ಕೆಲಸ ಮಾಡುತ್ತಿದ್ದಾರೆ. ಇದು ಓರ್ವ ದಲಿತನಿಂದ ಸಾಧ್ಯವಾದ ಸಾಮಾಜಿಕ ಕ್ರಾಂತಿ ಎಂದರೆ ತಪ್ಪಾಗುವುದಿಲ್ಲ. ಶತಮಾನಗಳಿಂದ ದಲಿತರು ಉದ್ಯೋಗಾಕಾಂಕ್ಷಿಗಳಾಗಿಯೇ ಇದ್ದಾರೆ. ಆದರೆ ನಾಮದೇವ್, ಕಲ್ಪನಾ ಸರೋಜ್ ಅವರಂತಹವರ ಮೂಲಕ ದಲಿತರು ಉದ್ಯೋಗ ನೀಡುವವರಾಗಿ ಬೆಳೆದಿರುವುದು ನಿಜವಾಗಲೂ ಮನುಧರ್ಮಕ್ಕೆ ಆಘಾತ ನೀಡುವ ಬೆಳವಣಿಗೆ. ಭಾರತ ಸರ್ಕಾರ ನಾಮದೇವ್ ಅವರಂತಹ ದಲಿತ ಸಾಧಕರಿಗೆ ಪದ್ಮ ಪ್ರಶಸ್ತಿ ಯಾಕೆ ನೀಡಬಾರದು?

ಪುಣೆ ಮೂಲದ ರಾಜೇಂದ್ರ ಗಾಯಕ್ವಾಡ್ ಅವರನ್ನುಭೇಟಿ ಮಾಡಿದ್ದೇ ನನ್ನ ಪಾಲಿಗೆ ಒಂದು ಸಾಧನೆ. ಯಾಕೆಂದರೆ ಇಡೀ ದಲಿತ ಸಮೂಹ ಹೆಮ್ಮೆ ಪಡುವ ಸಾಧನೆ ಮಾಡಿದ್ದಾರೆ ಗಾಯಕ್ವಾಡ್. ನಂಬಲಾಗುತ್ತಿಲ್ಲವೇ? ಹಾಗಾದರೆ ಇದನ್ನು ಓದಿ. ಇವರ ಒಡೆತನದ ಜಿ. ಟಿ ಪೆಸ್ಟ್ ಕಂಟ್ರೋಲ್ ಪ್ರೈವೆಟ್ ಲಿಮಿಟೆಡ್ ಈಗ ಬಹುರಾಷ್ಟ್ರೀಯ ಸಂಸ್ಥೆಯಾಗಿದ್ದು, ಸಿಂಗಪೂರ್‌ನಲ್ಲಿ ಕೂಡ ಕಾರ್ಯಚಟುವಟಿಕೆಯನ್ನು ವಿಸ್ತರಿಸಿದೆ. ಕೀಟ ನಿಯಂತ್ರಣ ಉದ್ಯಮದಲ್ಲಿ ಅಗ್ರಗಣ್ಯವಾಗಿರುವ ಸಂಸ್ಥೆ ಭಾರತದ ಆರು ನಗರಗಳಲ್ಲಿ– ಪುಣೆ, ಮುಂಬೈ, ಅಹಮದಾಬಾದ್, ದೆಹಲಿ ಮತ್ತು ಗೋವಾ– ಶಾಖೆಗಳನ್ನು ಹೊಂದಿದೆ.

ಭಾರತದ ಮುಂಚೂಣಿಯ ಸಂಸ್ಥೆಗಳಿಗೆ ಹಾಗೂ ಭಾರತ ಸರ್ಕಾರದ ಕೆಲವು ಇಲಾಖೆಗಳಿಗೆ ಎಲ್ಲ ರೀತಿಯ ಕೀಟನಿಯಂತ್ರಣ ಹಾಗೂ ಅತ್ಯುತ್ತಮ ಗುಣಮಟ್ಟದ ಕೀಟ ನಾಶಕ ಸಿಂಪಡಿಕೆಯ ಸೇವೆಯನ್ನು ರಾಜೇಂದ್ರ ಅವರ ಸಂಸ್ಥೆ ಒದಗಿಸುತ್ತದೆ. ಇವರ ಸಿಂಗಪೂರ್ ಶಾಖೆ ಅತ್ಯುತ್ತಮ ಗುಣಮಟ್ಟದ ಕೀಟನಾಶಕ ಸಿಂಪಡಿಕೆಯ ಸೇವೆಯನ್ನು ಅಲ್ಲಿನ ಕಾರ್ಪೊರೆಟ್ ಸಂಸ್ಥೆಗಳಿಗೆ ಒದಗಿಸುತ್ತದೆ. ರಾಜೇಂದ್ರ ಅವರ ಸಂಸ್ಥೆಯಲ್ಲಿ ಚೀನಾದ ಕಾರ್ಮಿಕರು ಕೂಡ ಕೆಲಸ ಮಾಡುತ್ತಾರೆ. ಓರ್ವದಲಿತ ಚೀನಾದ ನಾಗರಿಕರಿಗೆ ವೇತನ ನೀಡುವುದು ಹೆಮ್ಮೆಯ ವಿಷಯವಲ್ಲವೇ? ನಾಲ್ಕು ಜನ ಸದಸ್ಯರಿರುವ ರಾಜೇಂದ್ರ ಅವರ ಕುಟುಂಬದಲ್ಲಿ ಐದು ಕಾರುಗಳು ಮತ್ತು ಹಲವಾರು ವಾಹನಗಳಿವೆ. ಕೀಟನಿಯಂತ್ರಣ ಉದ್ಯಮದಲ್ಲಿ ಬಳಸಲಾಗುವ ಅತ್ಯಾಧುನಿಕ ಸಲಕರಣೆಗಳನ್ನು ಕೂಡ ಇವುಗಳಲ್ಲಿ ಅಳವಡಿಸಲಾಗಿದೆ.

ಉತ್ತಮ ಹಾಸ್ಯಪ್ರಜ್ಞೆಯನ್ನು ಹೊಂದಿರುವ ರಾಜೇಂದ್ರ ಯಾವಾಗಲೂ ಸ್ಫೂರ್ತಿಸೆಲೆಯಾಗಿ ಲವಲವಿಕೆಯಿಂದಿರುತ್ತಾರೆ. "ನನ್ನ ಮದುವೆಗೆ ನಾನೇ ಆಟೋ ಓಡಿಸಿಕೊಂಡು ಬಂದಿದ್ದ" ಎಂದು ಜೋರಾಗಿ ನಗುವ ಗಾಯಕ್ವಾಡ್, ತಾವು ಕೆಲವು ಸಮಯ ಆಟೋರಿಕ್ಷಾ ಚಾಲಕರಾಗಿ ಕೆಲಸ ಮಾಡಿದ್ದಾಗಿ ಹೇಳುತ್ತಾರೆ. ಪುಣೆಯಲ್ಲಿ ನನ್ನನ್ನು ಜನರು "ರ್‍ಯಾಟ್ ಕಿಂಗ್" ಎಂದು ಕರೆಯುತ್ತಾರೆ. ಮರಾಠಿ ಪತ್ರಿಕೆಯೊಂದರಲ್ಲಿ ಬಂದಿದ್ದ "ಪುಣೆಯ ಇಲಿಗಳ ರಾಜ" ಎಂಬ ಅಂಕಣದ ಪ್ರತಿಯನ್ನು ರಾಜೇಂದ್ರ ಗಾಯಕ್ವಾಡ್ ನನಗೆ ಓದಲು ಕೊಟ್ಟರು. ಇವರ ಯಶಸ್ಸಿನ ಪಯಣ ಕೂಡ ಚಲನಚಿತ್ರವೊಂದರ ಕಥೆಯಂತೆ ಇದೆ. ರಾಜೇಂದ್ರ ಅವರ ತಂದೆ ತಾಯಿ ಅನಕ್ಷರಸ್ಥರು. ತಂದೆ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇವರ ತಾತಕೃಷಿ ಕಾರ್ಮಿಕರಾಗಿದ್ದರು.

ಕುಟುಂಬ ವನ್ನು ನಡೆಸಲು ಸಹಾಯವಾಗಲೆಂದು ರಾಜೇಂದ್ರ ಪ್ರೌಢ ಶಾಲೆಯಲ್ಲಿದ್ದಾಲೇ ಕೀಟ ನಿಯಂತ್ರಣ ಸಂಸ್ಥೆಯಲ್ಲಿ ಹೊಗೆ ಯಂತ್ರ ನಿರ್ವಾಹಕನಾಗಿ ಕೆಲಸಕ್ಕೆ ಸೇರಿಕೊಂಡರು. ಹೊಗೆಸಿಂಪಡಿಕೆಯ ಈ ಕೆಲಸ ಆರೋಗ್ಯಕ್ಕೆ ಮಾರಕವಾ ಗಿದ್ದು ಕೆಲಸಗಾರರು ಯಾವಾಗಲೂ ಮುಖಗವುಸುಗಳನ್ನು ಹಾಕಿಕೊಳ್ಳಬೇಕಿತ್ತು. ಬಹಳಷ್ಟು ಮಂದಿ ಇಷ್ಟ ಪಡದ ಈ ಕೆಲಸವನ್ನು ರಾಜೇಂದ್ರ ಮಾಡುತ್ತಿದ್ದರು.

ಈ ಮಧ್ಯೆ ಇಲಿಗಳ ಕಾಟದಿಂದ ರೋಸಿಹೋಗಿದ್ದ ಕೋಳಿಫಾರಂನ ಮಾಲೀಕನೋರ್ವ ಈ ಸಮಸ್ಯೆಯಿಂದ ಮುಕ್ತಿ ಪಡೆಯಲು ಸೂಕ್ತ ವಿಧಾನಗಳನ್ನು ಹುಡುಕುತ್ತಿದ್ದರು. ಕೋಳಿಫಾರಂನ ಮಾಲೀಕ ರಾಜೇಂದ್ರ ಕೆಲಸ ಮಾಡುವ ಕೀಟ ನಿಯಂತ್ರಣ ಸಂಸ್ಥೆಯ ಬಳಿ ಪರಿಹಾರ ಹುಡುಕಿಕೊಂಡು ಬಂದಾಗ ಸಂಸ್ಥೆ ಇಲಿ ಹಿಡಿಯುವ ಕೆಲಸವನ್ನು ನಿರಾಕರಿಸಿತ್ತು. ಹೆಚ್ಚುವರಿ ಹಣ ಗಳಿಕೆಯ ಉದ್ದೇಶದಿಂದ ರಾಜೇಂದ್ರ ವೈಯುಕ್ತಿಕವಾಗಿ ಈ ಕೆಲಸ ಮಾಡುವುದಾಗಿ ಒಪ್ಪಿಕೊಂಡರು.

ಭಾರತದ ಮುಂಚೂಣಿಯ ಸಂಸ್ಥೆಗಳಿಗೆ ಹಾಗೂ ಭಾರತ ಸರ್ಕಾರದ ಕೆಲವು ಇಲಾಖೆಗಳಿಗೆ ಎಲ್ಲ ರೀತಿಯ ಕೀಟ ನಿಯಂತ್ರಣ ಹಾಗೂ ಅತ್ಯುತ್ತಮ ಗುಣ ಮಟ್ಟದ ಕೀಟ ನಾಶಕ ಸಿಂಪಡಿಕೆಯ ಸೇವೆಯನ್ನು ರಾಜೇಂದ್ರ ಅವರ ಸಂಸ್ಥೆ ಒದಗಿಸುತ್ತದೆ. ಇವರ ಸಿಂಗಪೂರ್ ಶಾಖೆ ಅತ್ಯು ತ್ತಮ ಗುಣಮಟ್ಟದ ಕೀಟ ನಾಶಕ ಸಿಂಪಡಿಕೆಯ ಸೇವೆಯನ್ನು ಅಲ್ಲಿನ ಕಾರ್ಪೊರೆಟ್ ಸಂಸ್ಥೆಗಳಿಗೆ ಒದ ಗಿಸುತ್ತದೆ. ರಾಜೇಂದ್ರ ಅವರ ಸಂಸ್ಥೆಯಲ್ಲಿ ಚೀನಾದ ಕಾರ್ಮಿಕರು ಕೂಡ ಕೆಲಸ ಮಾಡುತ್ತಾರೆ. ಓರ್ವದಲಿತ ಚೀನಾದ ನಾಗರಿಕರಿಗೆ ವೇತನ ನೀಡುವುದು ಹೆಮ್ಮೆಯ ವಿಷಯವ ಲ್ಲವೇ? ನಾಲ್ಕು ಜನ ಸದಸ್ಯರಿರುವ ರಾಜೇಂದ್ರಅವರ ಕುಟುಂಬ ದಲ್ಲಿ ಐದು ಕಾರುಗಳು ಮತ್ತು ಹಲವಾರು ವಾಹನಗಳಿವೆ.

ಹೀಗೆ 500 ರೂ. ಗೆ ತಮ್ಮ ಮೊದಲ ಉದ್ಯಮದ ಗುತ್ತಿಗೆ ಪಡೆದ ರಾಜೇಂದ್ರ ತಿಂಗಳಲ್ಲಿ ನಾಲ್ಕು ಬಾರಿ ಕೋಳಿ ಫಾರಂಗೆ ಭೇಟಿ ನೀಡಿ ಅದನ್ನು ಇಲಿಗಳಿಂದ ಮುಕ್ತಗೊಳಿಸುತ್ತಿದ್ದರು. ಇದೇ ಸಮಸ್ಯೆಯನ್ನು ಎದುರಿಸುತ್ತಿದ್ದ ಮತ್ತೋರ್ವ ಕೋಳಿಫಾರಂನ ಮಾಲೀಕ ಪರಿಹಾರಕ್ಕಾಗಿ ರಾಜೇಂದ್ರ ಅವರ ಬಳಿ ಬಂದಾಗ, ಆ ಕೆಲಸವನ್ನು ಕೂಡ ಒಪ್ಪಿಕೊಂಡ ರಾಜೇಂದ್ರ ಕೆಲವೇ ವರ್ಷಗಳಲ್ಲಿ ಕೋಳಿಫಾರಂಗಳನ್ನು ಇಲಿಗಳಿಂದ ಮುಕ್ತಗೊಳಿಸುವ 'ಪುಣೆಯ ಇಲಿಗಳ ರಾಜ' ಎಂಬ ಖ್ಯಾತಿ ಗಳಿಸಿದರು.

ಆದರೆ ಇಷ್ಟಕ್ಕೇ ತೃಪ್ತರಾಗದ ರಾಜೇಂದ್ರ ಗಾಯಕ್ವಾಡ್ ಅವರ ಒಳಗಿನ ಉದ್ಯಮಿ, ಹೂವಿನ ನರ್ಸರಿ ನಡೆಸುತ್ತಿದ್ದ ಸ್ನೇಹಿತನ ಜಾಗದಲ್ಲಿ ರಸ್ತೆ ಬದಿಗೆ "ಜಿ. ಟಿ ಕೀಟ ನಿಯಂತ್ರಣ" ಎಂಬ ಬೋರ್ಡ್ ಹಾಕುತ್ತಾರೆ. ಅಲ್ಲಿಂದ ರಾಜೇಂದ್ರ ಹಿಂದಿರುಗಿ ನೋಡಿದ್ದೇ ಇಲ್ಲ. ನಂತರದ ದಿನಗಳಲ್ಲಿ ಜಿ. ಟಿ ಕೀಟ ನಿಯಂತ್ರಣ ಸಂಸ್ಥೆ ಭಾರತದ ನೆಚ್ಚಿನ ಕೀಟ ನಿಯಂತ್ರಣ ಉದ್ಯಮ ಸಂಸ್ಥೆಯಾಗಿ ಬೆಳೆಯಿತು.

"ನಿಷ್ಠೆ, ಗುಣಮಟ್ಟದ ಸೇವೆ ಮತ್ತು ಗ್ರಾಹಕರ ಸಂತೃಪ್ತಿ ನಮ್ಮ ಯಶಸ್ಸಿನ ಗುಟ್ಟು" ಎಂದು ರಾಜೇಂದ್ರ ಹೆಮ್ಮೆಯಿಂದ ಹೇಳುತ್ತಾರೆ. "ನಾನು ಗ್ರಾಹಕರಿಂದ ಹೆಚ್ಚಿನ ಹಣ ಅಪೇಕ್ಷಿಸಲಿಲ್ಲ. ಅವರ ಅಂಗಳವನ್ನು ನನ್ನ ಅಡುಗೆಮನೆಯನ್ನು ಶುಭ್ರಗೊಳಿಸುವ ರೀತಿ ಶುಚಿಗೊಳಿಸಿದೆ." ಕ್ಲೈಂಟ್‌ಗಳಿಗೆ ತಮ್ಮ ಜಾತಿಯ ಬಗ್ಗೆ ಗೊತ್ತಿದೆಯೇ ಎಂಬ ನನ್ನ ಪ್ರಶ್ನೆಗೆ, "ಈ ಉದ್ಯಮದಲ್ಲಿ ಗುಣಮಟ್ಟದ ಸೇವೆ ಮುಖ್ಯ, ಜಾತಿಯಲ್ಲ" ಎಂದು ಗಾಯಕ್ವಾಡ್ ಉತ್ತರಿಸುತ್ತಾರೆ. "ತಂತ್ರಜ್ಞಾನದ ಆಧುನೀಕರಣ ಕೂಡ ನಮಗೆ ಸಹಾಯಕವಾಗಿದೆ."

ದಲಿತ ಸಮುದಾಯಕ್ಕೆ ನಿಮ್ಮ ಕೊಡುಗೆ ಏನು ಎಂಬ ಪ್ರಶ್ನೆಗೆ, "ನನ್ನ ಬಳಿ ಕೆಲಸ ಕೇಳಿಕೊಂಡು ಬಂದ ನನ್ನ ಬಹಳಷ್ಟು ಮಂದಿ ಸಂಬಂಧಿಕರಿಗೆ ತರಬೇತಿ ನೀಡಿ ಅವರು ಇತರರಿಗೆ ಕೆಲಸ ನೀಡುವಂತೆ ಮಾಡಿದ್ದೇನೆ" ಎಂದು ಉತ್ತರಿಸಿದರು. "ಇಷ್ಟೇ ಅಲ್ಲದೆ ನಮ್ಮ ಸಂಸ್ಥೆಯಲ್ಲಿ ಎಲ್ಲ ಜಾತಿಯ ಜನರು ಕೂಡ ಕೆಲಸ ಮಾಡುತ್ತಿದ್ದಾರೆ." ದಲಿತ ಸಮುದಾಯಕ್ಕಷ್ಟೇ ಅಲ್ಲ, ಒಟ್ಟಾರೆ ಸಮಾಜಕ್ಕೆ ಇದಕ್ಕಿಂತ ಮತ್ತೊಂದು ಸೇವೆ ಬೇರೆ ಎನು ಬೇಕಿದೆ?

ರಾಜೇಂದ್ರ ಗಾಯಕ್ವಾಡ್ ಅವರಂತಹ ಮಾದರಿ ವ್ಯಕ್ತಿತ್ವಗಳ ಯಶೋಗಾಥೆಗಳನ್ನು ಪ್ರೇರಕ ಅಂಶಗಳಾಗಿ ದಲಿತ ಚಳವಳಿಗಳು ಯಾಕೆ ಬಳಸಿಕೊಳ್ಳುವುದಿಲ್ಲ? ದಲಿತ ಸಮುದಾಯವನ್ನು ಉದ್ಯಮದ ಕಡೆಗೆ ಕರೆತರುವ ಪ್ರಯತ್ನವನ್ನು ಯಾಕೆ ಮಾಡುವುದಿಲ್ಲ? ಎಲ್ಲ ತೊಡಕುಗಳ ನಡುವೆಯೂ ರಾಜೇಂದ್ರ ಗಾಯಕ್ವಾಡ್ ಯಶಸ್ಸು ಸಾಧಿಸಲು ಸಾಧ್ಯವಾದರೆ, ಇತರ ದಲಿತರಿಗೂ ಕೂಡ ಇದು ಖಂಡಿತ ಸಾಧ್ಯ.

ಸುಮಾರು 35 ವರ್ಷ ವಯೋಮಾನದ ಸುಕೇಶ್ ರಾಜನ್ ಅವರ ಯಶೋಗಾಥೆ ಎಷ್ಟು ರೋಮಾಂಚ ಕವಾಗಿದೆಯೆಂದರೆ ಇವರ ಕಥೆ ಕೇಳಿದರೆ, ಎಂಥವರಿಗೂ ಜೀವನದಲ್ಲಿ ಉತ್ಸಾಹ ಚಿಮ್ಮುವುದಲ್ಲಿ ಸಂಶಯವಿಲ್ಲ.

ಸುಕೇಶ್ ರಾಜನ್‌ರ ಔದ್ಯಮಿಕ ಯಶಸ್ಸು

ಉತ್ತರಪ್ರದೇಶದ ಬಲಿಯಾ ಜಿಲ್ಲೆಯ ಬಡ ದಲಿತ ಕುಟುಂಬದಲ್ಲಿ ಜನಿಸಿದ ಸುಕೇಶ್ ಐಎಎಸ್ (ಭಾರತೀಯ ಆಡಳಿತಸೇವೆ) ಸೇರಬೇಕೆಂಬ ಹಂಬಲವಿರಿಸಿಕೊಂಡಿದ್ದರು. ಎರಡು ಬಾರಿ ಸಂದರ್ಶನದವರೆಗೆ ಬಂದ ರಾಜನ್ ಐಎಎಸ್‌ಗೆ ಆಯ್ಕೆಯಾಗುವಲ್ಲಿ ವಿಫಲರಾದರು. ಆದರೆ ರಾಜನ್ ಅವರ ಕೆಲವು ಸ್ನೇಹಿತರು ಆಯ್ಕೆಯಾದರು. ಈ ಆಘಾತದಿಂದ ಜೀವನದಲ್ಲಿ ಸೋತು ಹೋದ ರಾಜನ್ ಐಎಎಸ್‌ನಷ್ಟೇ ಆಕರ್ಷಕವಾದ ಕೆಲಸವನ್ನು ಅರಸಿ ದೆಹಲಿಗೆ ಬಂದು ಟಾಟಾ-ಎಐಜಿ ಖಾಸಗಿ ಸಂಸ್ಥೆಗೆ ಸೇರಿಕೊಂಡರು. ಕಠಿಣ ಪರಿಶ್ರಮವಹಿಸಿ ದುಡಿದ ಸುಕೇಶ್ 2000ನೇ ವರ್ಷದಲ್ಲಿ ತಿಂಗಳಿಗೆ 30,000 ಸಾವಿರ ರೂ. ವೇತನ ಪಡೆಯುತ್ತಿದ್ದರು.

"ಈ 30,000 ರೂ. ಎಲ್ಲಿಯವರೆಗೆ ಸಾಲುತ್ತದೆ?" ಎಂದು ಚಿಂತಿಸುತ್ತಿದ್ದ ಸುಕೇಶ್ ಯಾವುದೇ ವೃತ್ತಿಪರ ಕೋರ್ಸ್ ಮಾಡಿರಲಿಲ್ಲ. ತಮ್ಮ ಈಗಿನ ವೃತ್ತಿ ಐಎಎಸ್‌ಗೆ ಯಾವುದೇ ರೀತಿಯಲ್ಲಿ ಸರಿಸಾಟಿಯಿಲ್ಲ ಎಂದು ನಿರ್ಧರಿಸಿದ ಸುಕೇಶ್ 2002ರಲ್ಲಿ ಕೆಲಸ ತೊರೆದರು. "ನಾನು ಕೆಲಸ ಬಿಟ್ಟಾಗ ಕುಟುಂಬದವರು ನನ್ನ ಮೇಲೆ ಕೋಪಗೊಂಡಿದ್ದರು. ನಾನು ಹೊಸ ಉದ್ಯಮವನ್ನು ಆರಂಭಿಸಬೇಕೆಂದಿರುವುದರ ಬಗ್ಗೆ ಹೇಳಿದಾಗ ಎಲ್ಲರೂ ನನಗೆ ಹುಚ್ಚು ಹಿಡಿದಿದೆ ಎಂದು ತಿಳಿದುಕೊಂಡಿದ್ದರು"

ಲಕ್ನೋಗೆ ಹಿಂದಿರುಗಿದ ಸುಕೇಶ್ 40,000ರೂ.ಗೆ ಎರಡು ಗ್ರೈಂಡರ್ ಮತ್ತು ಒಂದು ಪ್ಯಾಕೇಜಿಂಗ್ ಯಂತ್ರವನ್ನು ಖರೀದಿಸಿದರು. ಇಬ್ಬರು ಸಹಾಯಕರೊಂದಿಗೆ ಸುಕೇಶ್, ದನಿಯಾ, ಅರಿಶಿನ ಮತ್ತು ಕೆಂಪು ಮೆಣಸಿನಕಾಯಿ ಪುಡಿಗಳನ್ನು ಪ್ಯಾಕೇಜ್ ಮಾಡಲು ಆರಂಭಿಸಿದರು. ತಾವು ತಯಾರಿಸಿದ ಪುಡಿಗಳನ್ನು ಸ್ವಯಂ ಲಕ್ನೋದ ಕಿರಾಣಿ ಅಂಗಡಿಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದರು. ಈ ಮಧ್ಯೆ ಒಮ್ಮೆ ಸಾಂಬಾರು ಪದಾರ್ಥ ಸಂಸ್ಥೆಯೊಂದರಲ್ಲಿ ಕೆಲಸ ಮಾಡುವ ಮಾರುಕಟ್ಟೆ ಏಜೆಂಟ್‌ನ ಪರಿಚಯವಾಯಿತು. "ನನ್ನ ಉತ್ಪನ್ನವನ್ನು ಲಕ್ನೋದ ತುಂಬ ಜನಪ್ರಿಯಗೊಳಿಸುವುದಾಗಿ ಆತ ಭರವಸೆ ನೀಡಿದ." "ಆತ ಹೇಳಿದ ಹಾಗೆ ಉತ್ಪನ್ನವನ್ನು ಜನಪ್ರಿಯಗೊಳಿಸಿದ್ದೇನೋ ನಿಜ. ಆದರೆ, ಜೊತೆಗೆ ಅಂಗಡಿಗಳಿಂದ ನನಗೆ ಬರಬೇಕಾಗಿದ್ದ ಹಣವನ್ನು ಪಡೆದು ಒಮ್ಮೆಲೇ ನಾಪತ್ತೆಯಾದ. ಸಾಮಾನ್ಯವಾಗಿ ಕಿರಾಣಿ ಅಂಗಡಿಯವರು ಹಣ ನೀಡಲು ಎರಡುವಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಿ ಸುಕೇಶ್‌ರನ್ನು ಆತ ನಂಬಿಸಿದ್ದ.

"ಆ ಕ್ಷಣ ನನಗೆ ಜೀವನವೇ ಬೇಡ ಅನ್ನಿಸಿತ್ತು. ಯಾರಬಳಿ ಹೋಗಬೇಕು ಎಂದು ತಿಳಿದಿರಲಿಲ್ಲ." ಕುಟುಂಬದವರ ಬಳಿ ಹೇಳಿಕೊಳ್ಳುವಂತಿರಲಿಲ್ಲ. ಆದರೂ ಧೃತಿಗೆಡದ ಸುಕೇಶ್ ಸ್ಥಳೀಯ ಫೈನಾನ್ಷಿಯರ್‌ರಿಂದ ಹೆಚ್ಚಿನ ಬಡ್ಡಿಗೆ 50,000 ರೂ. ಹಣ ಸಾಲ ಪಡೆದರು. ಮತ್ತೆ ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು. ಸ್ವಯಂ ತಾವೇ ಮಾರುಕಟ್ಟೆಯ ಮೇಲ್ವಿಚಾರಣೆ ವಹಿಸಿಕೊಂಡು ಕಿರಾಣಿ ಅಂಗಡಿಗಳ ಮಾಲೀಕರು ಮತ್ತು ಗ್ರಾಹಕರ ವಿಶ್ವಾಸಕ್ಕೆ ಪಾತ್ರರಾದರು.

ಉತ್ತರಪ್ರದೇಶದ ಬಲಿಯಾ ಜಿಲ್ಲೆಯ ಬಡ ದಲಿತ ಕುಟುಂಬದಲ್ಲಿ ಜನಿಸಿದ ಸುಕೇಶ್ ಐಎಎಸ್ (ಭಾರತೀಯ ಆಡಳಿತಸೇವೆ) ಸೇರಬೇಕೆಂಬ ಹಂಬಲವಿರಿಸಿಕೊಂಡಿದ್ದರು. ಎರಡು ಬಾರಿ ಸಂದರ್ಶನದವರೆಗೆ ಬಂದ ರಾಜನ್ ಐಎಎಸ್‌ಗೆ ಆಯ್ಕೆಯಾಗುವಲ್ಲಿ ವಿಫಲರಾದರು. ಆದರೆ ರಾಜನ್ ಅವರ ಕೆಲವು ಸ್ನೇಹಿತರು ಆಯ್ಕೆಯಾದರು. ಈ ಆಘಾತದಿಂದ ಜೀವನದಲ್ಲಿ ಸೋತು ಹೋದ ರಾಜನ್ ಐಎಎಸ್‌ನಷ್ಟೇ ಆಕರ್ಷಕವಾದ ಕೆಲಸವನ್ನು ಅರಸಿ ದೆಹಲಿಗೆ ಬಂದು ಟಾಟಾ-ಎಐಜಿ ಖಾಸಗಿ ಸಂಸ್ಥೆಗೆ ಸೇರಿಕೊಂಡರು. ಕಠಿಣ ಪರಿಶ್ರಮವಹಿಸಿ ದುಡಿದ ಸುಕೇಶ್ 2000ನೇ ವರ್ಷದಲ್ಲಿ ತಿಂಗಳಿಗೆ 30,000 ಸಾವಿರ ರೂ. ವೇತನ ಪಡೆಯುತ್ತಿದ್ದರು."ಈ 30,000 ರೂ. ಎಲ್ಲಿಯವರೆಗೆ ಸಾಲುತ್ತದೆ?"ಎಂದು ಚಿಂತಿಸುತ್ತಿದ್ದ ಸುಕೇಶ್ ಯಾವುದೇ ವೃತ್ತಿಪರ ಕೋರ್ಸ್ ಮಾಡಿರಲಿಲ್ಲ. ತಮ್ಮ ಈಗಿನ ವೃತ್ತಿ ಐಎಎಸ್‌ಗೆ ಯಾವುದೇ ರೀತಿಯಲ್ಲಿ ಸರಿಸಾಟಿಯಿಲ್ಲ ಎಂದು ನಿರ್ಧರಿಸಿದ ಸುಕೇಶ್ 2002ರಲ್ಲಿ ಕೆಲಸ ತೊರೆದರು. "ನಾನು ಕೆಲಸ ಬಿಟ್ಟಾಗ ಕುಟುಂಬದವರು ನನ್ನ ಮೇಲೆ ಕೋಪಗೊಂಡಿದ್ದರು. ನಾನು ಹೊಸ ಉದ್ಯಮವನ್ನು ಆರಂಭಿಸಬೇಕೆಂದಿರುವುದರ ಬಗ್ಗೆ ಹೇಳಿದಾಗ ಎಲ್ಲರೂ ನನಗೆ ಹುಚ್ಚು ಹಿಡಿದಿದೆ ಎಂದು ತಿಳಿದುಕೊಂಡಿದ್ದರು" ಲಕ್ನೋಗೆ ಹಿಂದಿರುಗಿದ ಸುಕೇಶ್ 40,000ರೂ.ಗೆ ಎರಡು ಗ್ರೈಂಡರ್ ಒಂದು ಪ್ಯಾಕೇಜಿಂಗ್ ಯಂತ್ರವನ್ನು ಖರೀದಿಸಿದರು. ಇಬ್ಬರು ಸಹಾಯಕ'ರೊಂದಿಗೆ ಸುಕೇಶ್, ದನಿಯಾ, ಅರಿಶಿನ ಕೆಂಪು ಮೆಣಸಿನ ಕಾಯಿ ಪುಡಿಗಳನ್ನು ಪ್ಯಾಕೇಜ್ ಮಾಡಲು ಆರಂಭಿಸಿದರು.

'ಸಟ್ಟು' ಎಂಬ ಹೊಸ ಉತ್ಪನ್ನದ ಮೂಲಕ ಸುಕೇಶ್ ಉದ್ಯಮದಲ್ಲಿ ಜನಪ್ರಿಯತೆ ಪಡೆದುಕೊಂಡರು. ಉತ್ತರಪ್ರದೇಶದ ಪೂರ್ವ ಭಾಗ ಮತ್ತು ಬಿಹಾರದಲ್ಲಿ ಜನಪ್ರಿಯವಾಗಿರುವ ಸಟ್ಟು ಪುಡಿಯನ್ನು ನೀರು ಮತ್ತು ಉಪ್ಪಿನ ಜೊತೆಗೆ ಕುಡಿಯಬಹುದು. "ಸಟ್ಟು ಪುಡಿಯನ್ನು ಮೊಟ್ಟಮೊದಲಿಗೆ ನನ್ನ ಸಂಸ್ಥೆಯೇ ಪ್ಯಾಕೇಜ್‌ಮಾಡಿದ್ದು." ಗ್ರಾಹಕರಿಗೆ ಹುಚ್ಚು ಹಿಡಿಸಿದ ಸಟ್ಟು ದಿನಬೆಳಗಾದಂತೆ ಎಲ್ಲರ ಮನೆಮಾತಾಯಿತು. ಇಂದು ಸುಕೇಶ್ ಒಂದು ದಿನಕ್ಕೆ 10 ಮೆಟ್ರಿಕ್ ಟನ್ ಸಟ್ಟು ಉತ್ಪಾದಿಸುತ್ತಾರೆ.

ಈಗಾಗಲೇ ಸಾಂಬಾರು ಪದಾರ್ಥಗಳ ಮಾರಾಟದಲ್ಲಿ ಯಶಸ್ಸು ಸಾಧಿಸಿರುವ ನೀವು ಬಹುರಾಷ್ಟ್ರೀಯ ಸಂಸ್ಥೆಗಳೇ ತುಂಬಿರುವ ಮಿನರಲ್ ವಾಟರ್ ಉದ್ಯಮಕ್ಕೆ ಯಾಕೆ ಕಾಲಿರಿಸಿದಿರಿ ಎಂಬ ನನ್ನ ಪ್ರಶ್ನೆಗೆ, ಜನ ನನ್ನನ್ನು 'ಸಟ್ಟು ಸುಕೇಶ್' ಎಂದು ಗುರುತಿಸುವುದು ನನಗೆ ಇಷ್ಟವಿರಲಿಲ್ಲ. ಬೃಹತ್ ಸಂಸ್ಥೆಗಳು ಕೂಡ ಹಿಂದೇಟು ಹಾಕುವ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸುವ ಛಲ ನನಗೆ" ಎಂದು ಉತ್ತರಿಸುತ್ತಾರೆ. ಪೆಪ್ಸಿ ಮತ್ತು ಕೋಕ್‌ನಂತಹ ಸಂಸ್ಥೆಗಳೊಂದಿಗೆ ಸ್ಪರ್ಧಿಸುವ ಸುಕೇಶ್‌ರ ಸಂಸ್ಥೆ ದಿನಕ್ಕೆ 50,000 ಬಾಟಲಿ ನೀರನ್ನು ಉತ್ಪಾದಿಸುತ್ತದೆ. "ನೀರಿನ ಬೇಡಿಕೆ'ಯನ್ನು ಪೂರೈಸಲು ನನಗೆ ಸಾಧ್ಯವಾಗುತ್ತಿಲ್ಲ" ಎನ್ನುತ್ತಾರೆ ಸುಕೇಶ್.ಕೋಟ್ಯಾಧಿಪತಿ ಸುಕೇಶ್ ತಮ್ಮ ವೊಲ್ಕ್ಸ್‌ವಾಗನ್ ಕಾರಿನಲ್ಲಿ ಲಕ್ನೋದಲ್ಲಿರುವ ತಮ್ಮ ಅತ್ಯಾಧುನಿಕ ಮಿನರಲ್ ವಾಟರ್ ಪ್ಲ್ಯಾಂಟ್‌ಗೆ ಕರೆದೊಯ್ದರು. "ಭಾರತದಲ್ಲಿಯೇ ಅತ್ಯಂತ ಶುದ್ಧವಾದ ನೀರು ನನ್ನ ಸಂಸ್ಥೆಯದು" ಎಂದು ಹೆಮ್ಮೆಯಿಂದ ಹೇಳುತ್ತಾರೆ ಸುಕೇಶ್. ವಿಶ್ವ ಆರೋಗ್ಯ ಸಂಸ್ಥೆ ಪರೀಕ್ಷೆ ನಡೆಸಿ ಭಾರತದ ಅತ್ಯುತ್ತಮ ಬಾಟಲ್ಡ್ ನೀರು ಎಂದು ಪ್ರಮಾಣಪತ್ರ ನೀಡಿರುವುದನ್ನು ತಮ್ಮ ಮಾತಿಗೆ ಪುರಾವೆಯಾಗಿ ತೋರಿಸುತ್ತಾರೆ.

ಅಪಾಯ ವಿಶ್ಲೇಷಣೆ ಮತ್ತು ವಿಮರ್ಶಾತ್ಮಕ ನಿಯಂತ್ರಣ ಸೂಚಕ (ಎಚ್‌ಎಸಿಸಿಪಿ) ಪ್ರಮಾಣ ಪತ್ರದ ಪ್ರಕಾರ ಬಿಸ್ಲೇರಿಯ ನಂತರದ ಸ್ಥಾನ ಸುಕೇಶ್ ಅವರ ಪ್ಯಾಕೇಜ್ಡ್ ನೀರಿಗೆ ಸಲ್ಲುತ್ತದೆ. ಇದರ ಜೊತೆಗೆ ಭಾರತೀಯ ಮಾಪಕ ಬ್ಯೂರೋ(ಬಿಐಎಸ್) ಮತ್ತು ಐಎಸ್‌ಒ 9001 ಪ್ರಮಾಣಪತ್ರ ಕೂಡ ಇದೆ. ಅರ್ಧಕ್ಕೆ ಕಾಲೇಜು ಬಿಟ್ಟ ಬಿಲ್ ಗೇಟ್ಸ್‌ರಂತೆ, ಅರ್ಧಕ್ಕೆ ಐಎಎಸ್ ಪ್ರಯತ್ನ ಬಿಟ್ಟ ಸುಕೇಶ್ ರಾಜನ್ ಸ್ವಂತ ಹಣದಿಂದ ತಮ್ಮ ಸಂಸ್ಥೆಯನ್ನು ಆರಂಭಿಸಿದರು. ನನಗೆ ಅಧಿಕಾರವಿದ್ದಿದ್ದರೆ, ಸುಕೇಶ್ ಅವರ ಕಾರ್ಖಾನೆಯನ್ನು ಎಲ್ಲ ದಲಿತರು ಭೇಟಿ ನೀಡಲೇಬೇಕಾದ ಪುಣ್ಯಕ್ಷೇತ್ರವಾಗಿ ಘೋಷಿಸುತ್ತಿದ್ದೆ. ಐಎಎಸ್‌ಗೆ ಆಯ್ಕೆಯಾ ಗಲು ವಿಫಲರಾಗಿದ್ದ ಸುಕೇಶ್ ಈಗ ಒಂದು ಡಜನ್ ಐಎಎಸ್ ಅಧಿಕಾರಿಗಳಿಗೆ ಕೆಲಸ ಕೊಡುವಷ್ಟು ಎತ್ತರಕ್ಕೆ ಬೆಳೆದಿದ್ದಾರೆ.

ಬೃಹತ್ ನಗರಗಳಿಗೆ ಹಳ್ಳಿಗಳಿಂದ ವಲಸೆ ಬಂದ ಬಹಳಷ್ಟು ಮಂದಿ ತಮ್ಮ ಗುರುತನ್ನು ಸಾಬೀತು ಮಾಡಲು ವಿಫಲರಾಗುತ್ತಾರೆ. ಇಪ್ಪತ್ತರ ಆಸುಪಾಸಿನ ಯುವಕರು ಹಳ್ಳಿಯ ಜೀವನಕ್ಕೆ ರೋಸಿಹೋಗಿ ನಗರಗಳಿಗೆ ಬಂದು ತಮ್ಮದೇ ನಾಡಿನಲ್ಲಿ "ಅನ್ಯ" ರಾಗಿ

ಹೋಗುತ್ತಾರೆ. ಅನಕ್ಷರಸ್ಥರು, ಶಾಲೆಬಿಟ್ಟವರು, ಹೀಗೆ ನನ್ನ ಹಳ್ಳಿಯ ಬಹಳಷ್ಟು ಮಂದಿ ನನ್ನ ಬಳಿ ಬಂದು ಒಂದು ಸೆಲ್‌ಫೋನ್ ಸಿಮ್ ಕಾರ್ಡ್‌ಗಾಗಿ ಅಂಗಲಾಚುತ್ತಾರೆ. ಇವರು ಸೆಲ್‌ಫೋನ್‌ಗಳನ್ನೇನೋ ಖರೀದಿಸುತ್ತಾರೆ. ಆದರೆ ತಮ್ಮ ವಾಸಸ್ಥಳದ ಗುರುತನ್ನು ನೀಡಲು ವಿಫಲರಾಗಿ ಸಿಮ್‌ಕಾರ್ಡ್‌ಗಳನ್ನು ಖರೀದಿಸಲು ಹರಸಾಹಸ ಪಡುತ್ತಾರೆ.

ಫರೀದಾಬಾದ್, ಗಾಜಿಯಾಬಾದ್ ಮತ್ತು ಗುರ್ಗಾವ್‌ನಂತಹ ಕೆಲವು ನಗರಗಳಿಗೆ ಹೋಗುವ ವಲಸಿಗರು ಅಸಂಘಟಿತ ಕೈಗಾರಿಕಾ ವಲಯದಲ್ಲಿ ಕೆಲಸಕ್ಕೆ ಸೇರುತ್ತಾರೆ. ಕೌಶಲ್ಯವಿಲ್ಲದ ಕಾರ್ಮಿಕ ವರ್ಗಕ್ಕೆ ಉದ್ಯೋಗ ಒದಗಿಸುವ ಅಸಂಘಟಿತ ವಲಯ ಬಡ ಕಾರ್ಮಿಕರ ಪಾಲಿಗೆ ವರದಾನವಾಗಿದೆ. ಆದರೆ ಯಾವುದೇ ರೀತಿಯ ಶಿಕ್ಷಣವಿಲ್ಲದ ಅಸಂಘಟಿತ ಕಾರ್ಮಿಕ ವರ್ಗ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಕಾರ್ಮಿಕರಿಗೆ ಚೆಕ್ ಮೂಲಕ ವೇತನ ನೀಡಲಾಗುತ್ತಿಲ್ಲ.

ಸಣ್ಣ ಕೈಗಾರಿಕಾ ಸಂಸ್ಥೆಗಳು ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರ ದಾಖಲೆಗಳನ್ನು ಇಟ್ಟುಕೊಳ್ಳುವುದಿಲ್ಲ. ತಮ್ಮ ಕಾರ್ಮಿಕರಿಗೆ ಗುರುತಿನ ಕಾರ್ಡ್ ಕೂಡ ನೀಡುವುದಿಲ್ಲ. ಕಾರ್ಮಿಕ ಕಾಯ್ದೆಗಳ ಭಯದಿಂದ ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆಯ ಮಾಹಿತಿಯನ್ನು ಸಮರ್ಪಕವಾಗಿ ಒದಗಿಸುವುದಿಲ್ಲ. ಹೀಗಾಗಿ ನಗರಗಳಲ್ಲಿ ದಶಕಗಳಿಂದ ನೆಲೆಸಿದ್ದರೂ ಕೂಡ ಯಾವುದೇ ಗುರುತಿನ ಕಾರ್ಡ್ ಇಲ್ಲದ ಹಲವಾರು ಕಾರ್ಮಿಕರು ಇವತ್ತಿಗೂ ಇದ್ದಾರೆ.

ನಗರಗಳಲ್ಲಿ ನೆಲೆಸಿರುವ ವಲಸಿಗರಿಗೆ ಬ್ಯಾಂಕ್ ಅಕೌಂಟ್ ತೆರೆಯುವುದು ಒಂದು ಬಹು ದೊಡ್ಡ ಸಮಸ್ಯೆ. ವಾಸಸ್ಥಳದ ದಾಖಲೆಗಳಿಲ್ಲದೆ ಬ್ಯಾಂಕ್ ಅಕೌಂಟ್, ಸಿಮ್ ಕಾರ್ಡ್, ಮತದಾರರ ಗುರುತಿನ ಚೀಟಿ, ಮತ್ತು ಪಡಿತರ ಚೀಟಿ ಯಾವುದೂ ಸಿಗುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಸರ್ಕಾರದ ಹಲವಾರು ಯೋಜನೆಗಳ ಫಲವನ್ನು ಕೆಳವರ್ಗದವರು ಪಡೆಯುವುದಾದರೂ ಹೇಗೆ?

ಇನ್ನು ಮನೆಯ ವಿಚಾರಕ್ಕೆ ಬಂದರೆ ಬಹುತೇಕ ಅಸಂಘಟಿತ ಕಾರ್ಮಿಕರು ಕಾನೂನುಬಾಹಿರವಾದ ವಸತಿ ಸಮುಚ್ಚಯಗಳಲ್ಲಿ ಅಥವಾ ಸ್ಲಂಗಳಲ್ಲಿ ನೆಲೆಸುತ್ತಾರೆ. ಮೊದಲಬಾರಿ ನಗರಗಳಿಗೆ ವಲಸೆ ಬರುವವರಿಗೆ ಸ್ಲಂಗಳಲ್ಲಿಯೂ ಜಾಗವಿರುವುದಿಲ್ಲ. ಇಂತಹವರು ತಮ್ಮ ಸಂಬಂಧಿಕರು, ಸ್ನೇಹಿತರ ಮನೆಗಳಲ್ಲಿ ವಾಸವಿರುತ್ತಾರೆ.

ಸ್ವಲ್ಪ ಹೆಚ್ಚಿಗೆ ಸಂಬಳ ಪಡೆಯುವವರು ರೂಂಗಳನ್ನು ಬಾಡಿಗೆಗೆ ಪಡೆಯುತ್ತಾರೆ. ಆದರೆ ಇದಕ್ಕೆ ಮನೆಯ ಮಾಲೀಕ ಯಾವುದೇ ರಸೀದಿ ಕೊಡುವುದಿಲ್ಲ. ಹೀಗಾಗಿ ವಲಸಿಗರು ತಮ್ಮ ವಾಸಸ್ಥಳಕ್ಕೆ ಪೂರಕವಾದ ಯಾವುದೇ ಪುರಾವೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಕಾರ್ಖಾನೆಯಲ್ಲಿ ಅಪಘಾತವಾದ ಪಕ್ಷದಲ್ಲಿ ಅಸಂಘಟಿತ ಕಾರ್ಮಿಕರು ಯಾವುದೇ ರೀತಿಯ ಪರಿಹಾರ ಪಡೆಯಲು ಅರ್ಹರಾಗುವುದಿಲ್ಲ.

ಬಹಳಷ್ಟು ವಲಸಿಗರು ಸಣ್ಣಪುಟ್ಟ ವ್ಯಾಪಾರ ನಡೆಸುವ ಪ್ರಯತ್ನವನ್ನು ಮಾಡುತ್ತಾರೆ. ಹೀಗೆ ಬೀದಿ ಬದಿಯಲ್ಲಿ ವ್ಯಾಪಾರ ಮಾಡುವವರನ್ನು ಮುನಿಸಿಪಾಲಿಟಿ ಅಧಿಕಾರಿಗಳು ಮತ್ತು ಪೊಲೀಸರು ಓಡಿಸುತ್ತಾರೆ. ಯಾಕೆಂದರೆ ಈ ವ್ಯಾಪಾರಿಗಳಿಗೆ ಯಾವುದೇ ಪರವಾನಗಿ ಇರುವುದಿಲ್ಲ. ಗುರುತಿನ ಚೀಟಿ ಇಲ್ಲದ ಕಾರಣ ಪರವಾನಗಿ ಪಡೆದು ಬೀದಿ ಬದಿಯಲ್ಲಿ ವ್ಯಾಪಾರ ಮಾಡುವ ಮೂಲಭೂತ ಹಕ್ಕಿನಿಂದ ಕೂಡ ಇವರು ವಂಚಿತರಾಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಬಹಳಷ್ಟು ಮಂದಿ ಕೃಷಿ ಕಾರ್ಮಿಕರು ಗುರುತಿನ ಚೀಟಿ ಪ್ರಸ್ತುತಪಡಿಸಲು ವಿಫಲರಾಗುತ್ತಾರೆ. ದೇಶದ ನಾಗರಿಕರಿಗೆ ಒಂದು ಐಡೆಂಟಿಟಿ ಒದಗಿಸಲು ಮತದಾರರ ಗುರುತಿನ ಚೀಟಿಯನ್ನು ಪರಿಚಯಿಸಲಾಯಿತು. ಆದರೆ ಹಲವಾರು ಕಾರಣಗಳಿಂದಾಗಿ ಇದರ ಉದ್ದೇಶ ಈಡೇರಲಿಲ್ಲ. ಮತದಾರರ ಗುರುತಿನ ಚೀಟಿಗಳಲ್ಲಿ ಹಲವಾರು ಲೋಪದೋಷಗಳು ಕಂಡು ಬಂದುದರಿಂದ ಚುನಾವಣಾ ಆಯೋಗ ಮತದಾನ ಚಲಾವಣೆಗೆ ಇತರ 20 ಗುರುತಿನ ಚೀಟಿಗಳನ್ನು ಕೂಡ ಮಾನ್ಯಮಾಡಿತು. ಆದರೆ ಪಡಿತರ ಚೀಟಿಯಲ್ಲಿ ಫೋಟೋ ಇಲ್ಲದಿರುವುದರಿಂದ ಮತದಾನ ಕೇಂದ್ರಗಳು -ಪಡಿತರ ಅಂಗಡಿಗಳಲ್ಲಿ ಹೊರತುಪಡಿಸಿ ಇನ್ನೆಲ್ಲೂ ಇವು ಕೆಲಸಕ್ಕೆ ಬರುವುದಿಲ್ಲ. ದೇಶದಲ್ಲಿ ಇದುವರೆಗೆ ಸರ್ಕಾರ ನೀಡಿರುವ ಯಾವುದೇ ಗುರುತಿನ ಚೀಟಿ ತಂತ್ರಜ್ಞಾನದ ಸಹಾಯದಿಂದ ಕ್ಷಣಾರ್ಧದಲ್ಲಿ ಪತ್ತೆಹಚ್ಚುವ ಮಟ್ಟದಲ್ಲಿಲ್ಲ.

ಕೆಳವರ್ಗದ ಜನ ಫೋಟೋ ಹೊಂದಿರುವ ಗುರುತಿನ ಚೀಟಿಯನ್ನು ಸಂರಕ್ಷಿಸಿ ಇಡುವುದು ಕೂಡ ಕಷ್ಟಕರವಾದ ಕೆಲಸ. ಕೆಳವರ್ಗದ ಜನರು ಯಾವುದೇ ರೀತಿಯ ಐಡೆಂಟಿಟಿ ಹೊಂದಿಲ್ಲದ ಕಾರಣ ಸರ್ಕಾರದಿಂದ ಇವರಿಗೆ ಸಿಗಬೇಕಾದ ಸವಲತ್ತುಗಳನ್ನು ಮೇಲ್ವರ್ಗದ ಜನರೇ ಪಡೆದುಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸಾರ್ವಜನಿಕ ಪಡಿತರ ವಿತರಣೆಯಂತಹ ಯೋಜನೆಗಳ ಲಾಭ ಕೂಡ ಇವರಿಗೆ ದಕ್ಕುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ರೆಡ್‌ಕಾರ್ಡ್ ಹೊಂದಿರುವ ಭೂಮಾಲೀಕರು ಟ್ರ್ಯಾಕ್ಟರ್ ಸಾಲ ಪಡೆಯಬಹುದು, ಸರ್ಕಾರದ ಸವಲತ್ತುಗಳನ್ನು ಕೂಡ ಪಡೆಯಬಹುದು.

ಹೀಗಾಗಿ ಕೆಳವರ್ಗದ ಮಂದಿ ಗುರುತಿನ ಚೀಟಿಗಾಗಿ ದಲ್ಲಾಳಿಗಳು ಮತ್ತು ಸ್ಥಳೀಯ ಅಧಿಕಾರಿಗಳನ್ನು ಅಂಗಲಾಚುತ್ತಾರೆ. ಇದಕ್ಕಾಗಿ ತಿಂಗಳುಗಟ್ಟಲೆ ಶ್ರಮವಹಿಸಿ, ಆತ್ಮಸಮ್ಮಾನ ಕಳೆದುಕೊಳ್ಳುವ ಹಂತಕ್ಕೆ ಬರುತ್ತಾರೆ.ಈ ಎಲ್ಲ ಕಾರಣಗಳಿಂದಾಗಿ ಭಾರತೀಯ ವಿಶೇಷ ಗುರುತು ಪ್ರಾಧಿಕಾರದ ಅಧ್ಯಕ್ಷರಾಗಿ ನಂದನ್ ನಿಲೇಕಣಿ ಈಗ ಕೈಗೊಂಡಿರುವ ಕಾರ್ಯವನ್ನು ಭಾರತ ಸ್ವತಂತ್ರ ಗೊಂಡ ಹೊಸತರಲ್ಲಿಯೇ ಕೈಗೊಳ್ಳಬೇಕಿತ್ತು ಎಂದು ಅನಿಸದಿರದು. ಸಮಾನ ಗುರುತಿನ ಕಾರ್ಡ್ ಒದಗಿಸುವ ಸಾಮಾಜಿಕ ಕ್ರಾಂತಿಯಲ್ಲಿ ನಿರತರಾಗಿರುವ ನಂದನ್ ನಿಲೇಕಣಿ ಮತ್ತು ಅವರ ತಂಡಕ್ಕೆ ನನ್ನ ಶುಭ ಕಾಮನೆಗಳು. □

ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಬಹಳಷ್ಟು ಮಂದಿ ಕೃಷಿ ಕಾರ್ಮಿಕರು ಗುರುತಿನ ಚೀಟಿ ಪ್ರಸ್ತುತಪಡಿಸಲು ವಿಫಲರಾಗುತ್ತಾರೆ. ದೇಶದ ನಾಗರಿಕರಿಗೆ ಒಂದು ಐಡೆಂಟಿಟಿ ಒದಗಿಸಲು ಮತ ದಾರರ ಗುರುತಿನ ಚೀಟಿಯನ್ನು ಪರಿಚಯಿಸಲಾಯಿತು. ಆದರೆ ಹಲವಾರು ಕಾರಣಗಳಿಂದಾಗಿ ಇದರ ಉದ್ದೇಶ ಈಡೇರಲಿಲ್ಲ. ಮತದಾರರ ಗುರುತಿನ ಚೀಟಿಗಳಲ್ಲಿ ಹಲವಾರು ಲೋಪ ದೋಷಗಳು ಕಂಡು ಬಂದುದರಿಂದ ಚುನಾವಣಾ ಆಯೋಗ ಮತದಾನ ಚಲಾವಣೆಗೆ ಇತರ 20 ಗುರುತಿನ ಚೀಟಿಗಳನ್ನು ಕೂಡ ಮಾನ್ಯ ಮಾಡಿತು. ಆದರೆ ಪಡಿತರ ಚೀಟಿಯಲ್ಲಿ ಫೋಟೋ ಇಲ್ಲದಿರುವುದರಿಂದ ಮತದಾನ ಕೇಂದ್ರಗಳು ಮತ್ತು ಪಡಿತರ ಅಂಗಡಿಗಳಲ್ಲಿ ಹೊರತುಪಡಿಸಿ ಇನ್ನೆಲ್ಲೂ ಇವು ಕೆಲಸಕ್ಕೆ ಬರುವುದಿಲ್ಲ. ದೇಶದಲ್ಲಿ ಇದುವರೆಗೆ ಸರ್ಕಾರ ನೀಡಿರುವ ಯಾವುದೇ ಗುರುತಿನ ಚೀಟಿ ತಂತ್ರಜ್ಞಾನದ ಸಹಾಯದಿಂದ ಕ್ಷಣಾರ್ಧದಲ್ಲಿ ಪತ್ತೆಹಚ್ಚುವ ಮಟ್ಟದಲ್ಲಿಲ್ಲ. ಕೆಳವರ್ಗದ ಜನ ಫೋಟೋ ಹೊಂದಿರುವ ಗುರುತಿನ ಚೀಟಿಯನ್ನು ಸಂರಕ್ಷಿಸಿ ಇಡುವುದು ಕೂಡ ಕಷ್ಟ ಕರವಾದ ಕೆಲಸ.ಕೆಳವರ್ಗದ ಜನರು ಯಾವುದೇ ರೀತಿಯ ಐಡೆಂಟಿಟಿ ಹೊಂದಿಲ್ಲದ ಕಾರಣ ಸರ್ಕಾರದಿಂದ ಇವರಿಗೆ ಸಿಗಬೇಕಾದ ಸವಲತ್ತುಗಳನ್ನು ಮೇಲ್ವರ್ಗದಜನರೇ ಪಡೆದು ಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸಾರ್ವಜನಿಕ ಪಡಿತರ ವಿತರಣೆಯಂತಹ ಯೋಜನೆಗಳ ಲಾಭ ಕೂಡ ಇವರಿಗೆ ದಕ್ಕುತ್ತಿಲ್ಲ.

ಹೊಸ ಭಾರತಕ್ಕೆ ಹೊಸ ಗುರುತು



ಬುದ್ಧಾಯಣ

೫೨

ಹೆಸರಿನಲ್ಲೇನಿದೆ ಕರ್ಮದಿಂದಲೇ ಸಿದ್ಧಿ

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತನ್ನ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಬಹುಕಾಲದ ಹಿಂದೆ ಬೋಧಿಸತ್ವರು ತಕ್ಷಶಿಲೆಯಲ್ಲಿ ಜನಿಸಿ ಶ್ರೇಷ್ಠನಾದ ಪಂಡಿತರಾಗಿದ್ದರು. ಐನೂರು ಶಿಷ್ಯರಿಗೆ ವಿದ್ಯೆ ಕಲಿಸುತ್ತಿದ್ದರು.ಅವರಲ್ಲಿ ಒಬ್ಬ ಶಿಷ್ಯನ ಹೆಸರು "ಪಾಪಕ" ಎಂದಿತ್ತು. ಬೋಧಿಸತ್ವರು ಮತ್ತು ಅವನ ಗೆಳೆಯರು ಆತನನ್ನು "ಪಾಪಕ ಬಾಇಲ್ಲಿ, ಪಾಪಕ ಅಲ್ಲಿಗೆಹೋಗು" ಎಂದು ಸಲಿಗೆಯಿಂದ ಕರೆಯುತ್ತಿದ್ದರು. ಇದರಿಂದ ಆತ ಜಿಗುಪ್ಸೆಗೆ ಒಳಗಾಗಿದೇ ಅಲ್ಲದೆ ಎಲ್ಲರೂ ನನ್ನನ್ನು ಅಲಕ್ಷ್ಯಮಾಡಿ ಕೀಳಾಗಿ ಕಾಣುತ್ತಿದ್ದಾರೆ ಎಂದು ಭಾವಿಸಿ ಮನನೊಂದ.

ಒಮ್ಮೆ ಬೋಧಿಸತ್ವರನ್ನು ಕಂಡು ಈ ವಿಷಯವನ್ನು ತಿಳಿಸಿ; "ಗುರುದೇವಾ, ಪಾಪಕ ಎಂಬುದು ಬದುಕಿನಲ್ಲಿ ಬಹಳ ಪಾಪ ಮಾಡಿದವನು ಎಂಬ ಅರ್ಥವನ್ನು ಪ್ರತಿಧ್ವನಿಸುತ್ತದೆ. ಆದುದರಿಂದ ಈ ಹೆಸರಿನಿಂದ ನನಗೆ ಕಳಂಕ ತಟ್ಟಿದೆ. ಈ ಹೆಸರಿಗೆ ಬದಲು ಮೇಲೀರಿಮೆಯನ್ನು ಸಂಕೇತಿಸುವ ಶುಭಕರ ಹೆಸರನ್ನು ಸೂಚಿಸಿ!" ಎಂದ. ನಸುನಕ್ಕ ಬೋಧಿಸತ್ವರು; "ಅಯ್ಯಾ, ಹೆಸರಿನ ಬಳಕೆ ಇರುವುದು ನೀನ್ನನ್ನು ಗುರುತಿಸಲು ಇದಿಯೇ ಹೊರೆತು · ಅದರಲ್ಲಿ ಮೇಲೀರಿಮೆ ಕೀಳಿರಿಮೆ ಅಥವಾ ಶುಭ ಇಲ್ಲವೆ ಅಶುಭದ ವಿಷಯ ಹೇಗೆ ಬರುತ್ತದೆ? ಅದೆನಿದ್ದರೂ ನಿನ್ನ ಕರ್ಮವನ್ನು ಅವಲಂಬಿಸಿರುತ್ತದೆಯೇ ಹೊರೆತು. ನಿನ್ನ ಹೆಸರನ್ನಲ್ಲ" ಎಂದರು. ಇದರಿಂದ ತಾತ್ಕಾಲಿಕವಾಗಿ ತೃಪ್ತನಾದನೇ ವಿನಃ ಶಾಶ್ವತವಾಗಿ ತೃಪ್ತನಾಗಲಿಲ್ಲ. ಮತ್ತೆ ಸ್ವಲ್ಪ ದಿನಗಳ ನಂತರ ಬಂದು ಇದೇ ವಿಷಯವನ್ನು ಪ್ರಸ್ತಾ ಪಿದ. ಇದರಿಂದ ವಿಧಿ ಇಲ್ಲದೆ ಬೋಧಿಸತ್ವರು;

"ಅಯ್ಯಾ, ಹಾಗಾದರೆ ಒಂದು ಕೆಲಸ ಮಾಡು ನೀನು ಜನಪದದಲ್ಲಿ ಸುತ್ತಾಡಿ ನಿನಗೆ ಮಂಗಳಕರವಾದ ಹೆಸರನ್ನು ಕೇಳಿ, ನೋಡಿ, ಆ ಬಗ್ಗೆ ಪರೀಶಿಲಿಸಿ, ಆ ಹೆಸರು ಮಾತ್ರದಿಂದಲೇ ನಿನಗೆ ಶುಭವಾಗುವುದಾದರೆ ಅಂಥಹ ಹೆಸರನ್ನು ಆಯ್ಕೆ ಮಾಡಿಕೊಂಡು ಬಾ. ಅದೇ ಹೆಸರನ್ನು ಇಡೋಣ ಎಂದರು". ಇದರಿಂದ ಸಂತೋಷಗೊಂಡ ಪಾಪಕರನು ಮರುದಿನ ಮುಂಜಾನೆ ದಾರಿಯಲು ತಿನ್ನಲು ಬುತ್ತಿ ಗಂಟನ್ನು ಕಟ್ಟಿಸಿಕೊಂಡು ಸಂಚಾರಕ್ಕೆ ತೊಡಗಿದ. ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಾ ಅಲೆಯುವಾಗ ಮಾರ್ಗ ಮದ್ಯೆ ಹತ್ತಾರು ಜನರು ಶ್ರವವೊಂದನ್ನು ಹೊತ್ತು ತರುತ್ತಿದರು. ಅವರಲ್ಲಿ ವಯಸ್ಸಾದ ಮುದುಕನೊಬ್ಬನನ್ನು ತಡೆದು;

" ಹಿರಿಯರೇ , ಸತ್ತ ಈ ಮನುಷ್ಯನ ಹೆಸರೇನು ?"

" ಅಯ್ಯಾ , ಆತನ ಹೆಸರು ಜೀವಕ"

"ಏನು, ಜೀವಕನೆಂಬ ಹೆಸರುಳ್ಳವನೂ ಸಾವಿಗೀಡಾಗುವನೇ?"

"ಅಯ್ಯಾ, ಹೆಸರಿರುವುದು ಕೇವಲ ಗುರುತಿಸಲು ಮಾತ್ರ. ಹೆಸರು ಸಕಲ ಸೌಭಾಗ್ಯ ಮತ್ತು ಶುಭಫಲವನ್ನು ತಂದುಕೊಡುವುದಿಲ್ಲ!" ಎಂದು ಹೇಳಿ ಮುಂದೆ ಸಾಗಿದ.

ಪಾಪಕನು ಔದಾಸೀನ್ಯ ತಾಳಿ ಮುಂದೆ ಸಾಗಿ ಒಂದು ನಗರವನ್ನು ತಲುಪಿದ ಅಲ್ಲೋಂದು ಮನೆಯ ಮುಂದೆ ದಾಸಿಯನ್ನು ಆತನ ಗಂಡ ಹೊಡೆಯುತ್ತಿದ್ದ. ಆತನ್ನು ಉದ್ದೇಶಿಸಿ; "ಮಿತ್ರ, ಈಕೆಯನ್ನೇಕೆ ಹೊಡೆಯುತ್ತಿರುವೆ?" ಎನ್ನಲು ಆತ; "ಈಕೆ ಒಡಯನ ಮನೆಯಿಂದ ತಂದ ಪೂರ ವೇತನವನ್ನು ನನಗೆ ಕೊಡುತ್ತಿಲ್ಲ ಹಾಗಾಗಿ!"

"ಇವಳ ಹೆಸರೇನು?"

"ಧನಪಾಲಿ ಎಂದು!" ಆಗ ಅವನು ಹೀಗೆ ಯೋಚಿಸಿದ, ಹೆಸರು ಧನಪಾಲಿ ಆದರೆ ಈಕೆ ಏಕೆ ದಾರಿದ್ರಳಾದಳು? ಆಕೆ ಹೆಸರಿಗೆ ತಕ್ಕಂತೆ ಏಕೆ ಸಿರಿವಂತಳಾಗಲಿಲ್ಲ? ಎಂದು ಯೋಚಿಸುತ್ತಾ ಮುಂದೆ ಸಾಗುತ್ತಿದ್ದಾಗ ಮಾರ್ಗ ಮದ್ಯೆ ಒಬ್ಬ ಗೊತ್ತು ಗುರಿ ಇಲ್ಲದೆ ಅತ್ತಿಂದ ಇತ್ತ ಇತ್ತಿಂದ ಅತ್ತ ಅಲೆಯುತ್ತಿದ್ದ ಆತನನ್ನು ಕಂಡು;

"ಅಯ್ಯಾ, ನೀನೇಕೆ ಹೀಗೆ ಅಲೆಯುತ್ತಿರುವೇ?"

"ಮಿತ್ರ, ನಾನು ಹೋಗಬೇಕಾದ ಮಾರ್ಗವನ್ನು ಮರೆತು ಹೀಗೆ ದಿಕ್ಕೆಟ್ಟು ಅಲೆಯುತ್ತಿದ್ದೇನೆ"

"ನಿನ್ನ ಹೆಸರೇನು?"

"ಪಂಥಕ ಎಂದು!"

ಆಗ ಆತ ಹೀಗೆ ಯೋಚಿಸಿದ, ಹೆಸರೇನೋ ಪಂಥಕ. ಆದರೆ ಆತ ತಾನು ಸಾಗಬೇಕಾದ ದಾರಿಯನ್ನೇ ಏಕೆ ಮರೆತಾ? ಅಂದರೆ ಈ ಎಲ್ಲವೂ ಏನನ್ನು ಸಂಕೇತಿಸುತ್ತದೆ? ಜೀವಕನೂ ಸಾಯುತ್ತಾನೆ. ಅಜೀವಕನೂ ಸಾಯುತ್ತಾನೆ. ಧನಪಾಲಿಯೂ ದರಿದ್ರಳಾಗಿರುತ್ತಾಳೆ.ಅಧನಪಾಲಿಯೂ ದರಿದ್ರಳಾಗಿರುತ್ತಾಳೆ, ಪಂಥಕನೂ ದಾರಿ ತಪ್ಪುತ್ತಾನೆ. ಆಪಂಥಕನೂ ದಾರಿ ತಪ್ಪುತ್ತಾನೆ ಅಲ್ಲವೆ? ಅಂದರೆ ಹೆಸರಿನಲ್ಲಿ ಕೀಳಿರಿಮೆಯಾಗಲ್ಲೀ ಮೇಲೀರಿಮೆಯಾಗಲ್ಲಿ ಹೇಗಿರಲು ಸಾಧ್ಯ? ಬರೀ ಹೆಸರಿನಲ್ಲಿ ಶುಭವಾಗಲ್ಲಿ ಅಶುಭವಾಗಲ್ಲಿ ಹೇಗಿರಲು ಸಾಧ್ಯ?

ಹೌದು, ಹೆಸರಿರುವುದು ಕೇವಲ ಕರೆಯಲು ಮತ್ತು ಗುರುತಿ

(ಮುಂದಿನ ಪುಟಕ್ಕೆ)



ಒಮ್ಮೆ ಬೋಧಿಸತ್ವರನ್ನು ಕಂಡು ಈ ವಿಷಯವನ್ನು ತಿಳಿಸಿ; "ಗುರುದೇವಾ, ಪಾಪಕ ಎಂಬುದು ಬದುಕಿನಲ್ಲಿ ಬಹಳ ಪಾಪ ಮಾಡಿದವನು ಎಂಬ ಅರ್ಥವನ್ನು ಪ್ರತಿಧ್ವನಿಸುತ್ತದೆ. ಆದುದರಿಂದ ಈ ಹೆಸರಿನಿಂದ ನನಗೆ ಕಳಂಕ ತಟ್ಟಿದೆ. ಈ ಹೆಸರಿಗೆ ಬದಲು ಮೇಲೀರಿಮೆಯನ್ನು ಸಂಕೇತಿಸುವ ಶುಭಕರ ಹೆಸರನ್ನು ಸೂಚಿಸಿ!" ಎಂದ. ನಸುನಕ್ಕ ಬೋಧಿಸತ್ವರು; "ಅಯ್ಯಾ, ಹೆಸರಿನ ಬಳಕೆ ಇರುವುದು ನೀನ್ನನ್ನು ಗುರುತಿಸಲು ಇದಿಯೇ ಹೊರೆತು ಅದರಲ್ಲಿ ಮೇಲೀರಿಮೆ ಕೀಳಿರಿಮೆ ಅಥವಾ ಶುಭ ಇಲ್ಲವೆ ಅಶುಭದ ವಿಷಯ ಹೇಗೆ ಬರುತ್ತದೆ.?

ದರ್ಭೆ ಹುಲ್ಲೆಂದು ದರ್ಪ ಮಾಡದಿರಿ

ಅಂದಿನ ದಿನಗಳಲ್ಲಿ ವಾರಾಣಾಸಿ ರಾಜ್ಯವನ್ನು ಬ್ರಹ್ಮದತ್ತನೆಂಬ ರಾಜನು ಆಳುತ್ತಿದ್ದನು. ಅದೇ ಸಂದರ್ಭದಲ್ಲಿ ಬೋಧಿಸತ್ವರು ರಾಜನ ಉದ್ಯಾನದಲ್ಲಿ ದರ್ಭೆ ಹುಲ್ಲುಗಳಿಗೆ ರಾಜನಾಗಿ ಜನಿಸಿದ್ದರು. ಆ ವನದ ಮತ್ತೊಂದು ಕೊನೆಯಲ್ಲಿ "ಮುಕ್ಖಕ" ಎಂಬ ಬೆಲೆಬಾಳುವ ಭಾರಿ ವೃಕ್ಷವೊಂದು ಆಕಾಶದೆತ್ತರಕ್ಕೆ ಬೆಳೆದು ನಿಂತಿತ್ತು. ಆ ವೃಕ್ಷವು ಅದೇ ಮರವನ್ನು ತನ್ನ ತನ್ನನಿವಾಸ ಸ್ಥಾನವನ್ನಾಗಿ ಮಾಡಿಕೊಂಡು ಅಸಂಖ್ಯಾತ ಮಕ್ಕಳು ಮರಿಗಳೊಂದಿಗೆ ಸಂತೋಷದಿಂದ ವಾಸಿಸುತ್ತಿತು. ತಾನು ಇತರೆ ಎಲ್ಲಾ ವನಸಿರಿಗಿಂತ ಶ್ರೇಷ್ಠ ಎಂಬ ದುರಾಂಕಾರದ ಲವಲೇಶವು ಇಲ್ಲದೆ ಅದು ಎಲ್ಲರೊಂದಿಗೆ ಉತ್ತಮ ಗೆಳೆತನವನ್ನು ಹೊಂದಿತ್ತು. ಅದೇ ರೀತಿ ಬೋಧಿಸತ್ವರಾದ ದರ್ಭೆಯ ಹುಲ್ಲು ಕೂಡ ಮುಕ್ಖಕ ವೃಕ್ಷದೊಂದಿಗೆ ಸ್ನೇಹ ಮತ್ತು ಮೈತ್ರಿ ಭಾವನೆಯನ್ನು ಹೊಂದಿತ್ತು. ದಿನವು ತಪ್ಪದೆ ಬಂದು ಆ ವೃಕ್ಷದ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ಹೋಗುತ್ತಿತ್ತು.

ಹೀಗಿರಲು ಒಂದು ದಿನ ರಾಜನು ವಾಸಿಸುತ್ತಿದ್ದ ಅರಮನೆಯ ಕಂಬವೊಂದು ಸೀಳಿ ಬಿರುಕು ಬಿಟ್ಟಿತು. ಈ ವಿಷಯವನ್ನು ಸೇವಕರು ರಾಜನ ಗಮನಕ್ಕೆ ತಂದರು. ರಾಜನು ಕೂಡಲೆ ಬಡಗಿಯನ್ನು ಕರೆಸಿ;

"ಅಯ್ಯಾ, ಬಡಗಿ ನನ್ನ ಅರಮನೆಯ ಕಂಬವೊಂದು ಸೀಳಿ ಹೋಗಿದೆ. ನೀನು ಈಗಲೇ ಕಾಡಿಗೆ ಹೋಗಿ ನೇರವಾಗಿರುವ ಮುಕ್ಖಕವೃಕ್ಷವೊಂದನ್ನು ಕಡಿದು ಕಂಬಮಾಡಿ ತಂದು ಈ ಸೀಳು ಕಂಬವನ್ನು ಬದಲಿಸು!" ಎನ್ನಲು ಬಡಗಿಯು ಮರು ದಿನವೇ ತನ್ನ ಸಹಾಯಕರೊಂದಿಗೆ ಕಾಡು ಪ್ರವೇಶಿಸಿದ. ಅರಣ್ಯವನ್ನೆಲ್ಲ ಅಲೆದರೂ ಕೂಡ ಒಂದೇ ಒಂದು ನೇರವಾದ ಮರವು ಸಿಗಲ್ಲಿಲ್ಲ. ಅಲೆಯುತ್ತಾ ರಾಜನ ಉದ್ಯಾನಕ್ಕೆ ಬರಲು ಅಲ್ಲಿ ನೇರವೂ, ಎತ್ತರವೂ ಮತ್ತು ದೃಢಕಾಯವಾಗಿ ಬೆಳೆದು ನಿಂತಿದ್ದ ಮುಕ್ಖಕ ವೃಕ್ಷನನ್ನು ಕಂಡು ಸಂತೋಷಗೊಂಡ. ಆ ಮರವನ್ನು ಕಡಿದು ಕಂಬ ಮಾಡಲು ನಿರ್ಧರಿಸಿದ. ಆದರೆ ಕಾವಲುಪಡೆಯ ಮುಖ್ಯಸ್ಥ ಬಡಗಿಯನ್ನು ಉದ್ದೇಶಿಸಿ;

"ಅಯ್ಯಾ, ಈ ವೃಕ್ಷವು ನಮ್ಮ ರಾಜನಿಗೆ ಪ್ರಿಯವಾದ ವೃಕ್ಷ. ಭವಿಷ್ಯ ರಾಜನು ಈ ಮರವನ್ನು ಕಡಿಯಲು ಒಪ್ಪಿಗೆ ಕೊಡಲಾರ. ಹೇಗಾದರು ಆಗಲಿ ಈ ವಿಷಯವನ್ನು ರಾಜನ ಗಮನಕ್ಕೆ ತಾರದೆ ಕಡಿದು ದುರಂತಕ್ಕೆ ತುತ್ತಾಗಬೇಡ!" ಎಂದು ಎಚ್ಚರಿಸಿದ. ಹಾಗಾಗಿ ಮರುದಿನ ಬಡಗಿಯು ರಾಜನನ್ನು ಕಂಡು ಈ ವಿಷಯವನ್ನು ತಿಳಿಸಿ ಒಪ್ಪಿಗೆಗಾಗಿ ಕಾದು ನಿಂತ. ಈ ವಿಷಯವನ್ನು ತಿಳಿದು ರಾಜನು ಒಂದು ಕ್ಷಣ ಚಿಂತೆಗೆ ಈಡಾದ ಮರುಕ್ಷಣವೇ;

"ಅಯ್ಯಾ, ಬಡಗಿ ಆ ವೃಕ್ಷವು ನನ್ನ ಅರಮನೆಗಿಂತ ಮುಖ್ಯವಲ್ಲ. ಆದುದರಿಂದ ಆ ವೃಕ್ಷವನ್ನು ಕಡಿದು ಕಂಬ ಮಾಡಿತ್ತಾ! "ಎಂದು ಆಜ್ಞೆ ಇತ್ತ. ಈ ವಿಷಯವು ಮುಕ್ಖಕ ವೃಕ್ಷಕ್ಕೆ ತಿಳಿಯಲು ಅದುಬಲು ನೊಂದಿತು. ತನ್ನ ಮಕ್ಕಳು ಮರಿಗಳನ್ನು ತಬ್ಬಿಕೊಂಡು "ಅದೆಷ್ಟೋ ವರ್ಷಗಳಿಂದ ಈ ಮಹಾನ್ ವೃಕ್ಷದಲ್ಲಿ ನೆಮ್ಮದಿಯಿಂದ ತನ್ನ ಮಕ್ಕಳು ಮರಿಗ ಳೊಂದಿಗೆ ಕೂಡಿ ಸುಖವಾಗಿ ಜೀವಿಸುತ್ತಿದ್ದೆ, ಈಗ ನಾನೆಲ್ಲಿ ಹೋಗಿ ಆಶ್ರಯ ಪಡೆಯಲ್ಲಿ?" ಎಂದು ದುಃಖಿಸಿತು. ಈ ವಿಷಯವನ್ನು ತಿಳಿದ ಉದ್ಯಾನವನದ ಎಲ್ಲ ಮರಗಿಡ ಬಳ್ಳಿ ಮತ್ತು ಪ್ರಾಣಿ ಸಂಕುಲವೆಲ್ಲ ಆ ಮಹಾ ವೃಕ್ಷದ ಎದುರು ನಿಂತು ಅದಕ್ಕೆ ಸಮಾದಾನವನ್ನು ಹೇಳುತ್ತಿದ್ದರೂ ಅದರ ದುಃಖವು ಶಮನವಾಗಲ್ಲಿಲ್ಲ .



ಈ ವಿಷಯವು ಬೋಧಿಸತ್ವರಾದ ದರ್ಭೆ ಹುಲ್ಲಿಗೆ ತಿಳಿಯಿತು. ಅದು ಓಡೋಡಿ ಬಂದು ಆ ವೃಕ್ಷ ದೇವತೆಯ ಮುಂದೆ ನಿಂತು: "ಗೆಳೆತಿ, ವಿಷಯ ಇಷ್ಟೇ ತಾನೆ? ಆ ಬಡಗಿಯು ನಿನ್ನನು ನಾಳೆ ಬಂದು ಕಡಿಯದಂತೆ ತಡೆಯುವುದು ನನಗೆ ಸೇರಿದ್ದು. ನಾನು ಆತನಿಗೆ ಹೇಗೆ ಮೋಡಿಮಾಡಿ ಓಡಿಸುತ್ತೇನೆ ಅದನ್ನು ನೀವೆಲ್ಲಾ ನೋಡುವಿರಂತೆ" ಎಂದು ಸಮಾಧಾನ ಮಾಡಿತು. ಬಳಿಕ ಆ ದರ್ಭೆ ಹುಲ್ಲು ತನ್ನ ಮಿತ್ರನಾದ ಮರಕುಟ್ಟಿಕ ಹಕ್ಕಿಯನ್ನು ಸಂದಿಸಿ ಮುಕ್ಖಕ ವೃಕ್ಷಕ್ಕೆ ಒದಗಿರುವ ಆಪತ್ತನ್ನು ವಿವರಿಸಿ;

"ಮಿತ್ರ, ನಿನ್ನ ಕೊಕ್ಕಿನ ಕೈಚಳಕದಿಂದ ಮುಕ್ಖಕ ವೃಕ್ಷದ ತಳಭಾಗದಿಂದ ಮಧ್ಯ ಭಾಗದ ತನಕ ಸುರಂಗದ ಥರಹ ಒಂದು ರಂಧ್ರವನ್ನು ಕೊರೆದು ಕೊಡು!" ಎಂದಿತು. ಮರು ಮಾತನಾಡದೆ ಒಪ್ಪಿಕೊಂಡ ಅದುಂದು ಸರಿ ರಾತ್ರಿ ತನ್ನ ಮಿತ್ರ ಒಪ್ಪಿಸಿದ ಕಾರ್ಯವನ್ನು ಮುಗಿ ಸಿತು.ನಂತರ ಆ ದರ್ಭೆಹುಲ್ಲು ತನ್ನ ಇನ್ನೊಬ್ಬ ಮಿತ್ರನಾದ ಓತಿಕ್ಯಾತನನ್ನು ಸಂಧಿಸಿ ವಿಷಯತಿಳಿಸಿ: "ಮಿತ್ರ, ಇಂದು ಮುಂಜಾನೆ ಬಡಗಿಯು ಮುಕ್ಖಕ ವೃಕ್ಷವನ್ನು ಪೂಜೆಮಾಡಿ ಮರಕ್ಕೆ ಪ್ರಾಣಿ ಬಲಿಯನ್ನು ಲರ್ಪಿಸಿದ ಬಳಿಕ ಆ ಮರವನ್ನು ಕಡಿಯಲು ತೊಡಗುತ್ತಾನೆ.ಅದೇ ಸಮಯಕ್ಕೆ ಸರಿಯಾಗಿ ನೀನು ನಿಧಾನವಾಗಿ ಮರದಬುಡದ ಬಳಿಬಂದು ಮರ ಕುಟ್ಟಿಕಪಕ್ಷಿಯು ಮಾಡಿರುವ ರಂಧ್ರದ ಒಳಹೊಕ್ಕು ಮದ್ಯೆ ಇರುವ ತೂತಿನಿಂದ ನಿನ್ನ ಕುತಿಗೆಯನ್ನು ಹೊರಕ್ಕೆಹಾಕಿ ಆತ್ತಿತ್ತತಿರುಗಿಸು ಎಂದಿತು." ಅದು ಸರಿಯಾದ ಸಮಯಕ್ಕೆ ಬಂದು ದರ್ಭೆಹುಲ್ಲು ಹೇಳಿದಂತೆಯೇ ಮಾಡಿತು. ಇದನ್ನು ಕಂಡ ಬಡಗಿಯು ಆ ಮರವನ್ನು ಕಡಿಯುವುದನ್ನು ಬಿಟ್ಟು;

"ಇದೆಂಥಹ ಅತಾಚೂರ್ಯವಾಯಿತು? ಈ ಮರವು ಊನವಿಲ್ಲದ ಬಲಿಷ್ಠ ಮರವೆಂದು ತಿಳಿದಿದ್ದೆ? ಈಗ ಈ ಓತಿಕ್ಯಾತವು ಬಡ್ಡೆಯಿಂದ ಮಧ್ಯದ ತನಕ ಸಾರಾಗವಾಗಿ ನುಸುಳಿ ಹೊರ ಬಂದುದ್ದನ್ನು ನೋಡಿದರೆ ಇದು ಟೊಳ್ಳು ಮರವೇಸರಿ" ಎನ್ನುತ್ತಾ ಒಂದು ಬಲವಾದ ಮರದ ಬಡಗಿ ಯನ್ನು ತೆಗೆದುಕೊಂಡು ಓತಿಕ್ಯಾತ ನುಗ್ಗಿ ಹೊರಬಂದ ಜಾಗದ ಮೇಲೆ ಬಡ್ಡಿಯುತ್ತಾ ಪರೀಕ್ಷಿಸಲು ಅದರಲ್ಲಿ ಊನದ ಶಬ್ದವು ಹೊರಹೊಮ್ಮಿತು. ಆಗ ಆ ಬಡಗಿಯು ತನ್ನ ತಂಡವನ್ನು ಉದ್ದೇಶಿಸಿ ಹೀಗೆ ನುಡಿದ; "ನಿಮ್ಮ ನಿಮ್ಮ ಆಯುಧವನ್ನು ತೆಗೆದುಕೊಳ್ಳಿ. ಈ ಮರವು ನಮ್ಮ ಉಪಯೋಗಕ್ಕೆ ಬರುವುದಿಲ್ಲ! ಎಂದವನೇ ತನ್ನ ಸಹಾಯಕರೊಡನೆ ಮುಂದಿನ ಅನ್ವೇಷಣೆಗಾಗಿ ಸಾಗಿದ.

ಇದರಿಂದ ಆ ಉದ್ಯಾನದ ನಿವಾಸಿಗಳೆಲ್ಲ ಹರ್ಷಗೊಂಡರು. ಮುಕ್ಖಕ ವೃಕ್ಷವು ಮುಂದೆ ಬಂದು ಬೋಧಿಸತ್ವರನ್ನು ಉದ್ದೇಶಿಸಿ

"ನಿನ್ನಿಂದಾಗಿ ನಾನು ಮತ್ತು ನನ್ನ ಮಕ್ಕಳು ಮರಿಗಳು ಬದುಕಿ ಉಳಿದೆವು. ನಿನಗೆ ಕೃತಜ್ಞತೆ" ಎನ್ನಲು; ಆ ಬೋಧಿಸತ್ವ ದರ್ಭೆ ಹುಲ್ಲು:

"ನನಗೆ ನೀನು ಕೃತಜ್ಞತೆಯನ್ನು ಅರ್ಪಿಸುವ ಬದಲಿಗೆ ನಿನಗೆ ನಾವುಗಳು ಕೃತಜ್ಞತೆಯನ್ನು ಅರ್ಪಿಸಬೇಕು. ಏಕೆಂದರೆ, ನೀನು ಇಷ್ಟು ದೊಡ್ಡ ವೃಕ್ಷವಾಗಿದ್ದರೂ ಕೂಡ ಬೇಧಭಾವವಿಲ್ಲದೆ ನಿನಗಿಂತ ಶ್ರೇಷ್ಠರಲ್ಲದ ನಮ್ಮಂತಹ ಕಿರಿಯರನ್ನೂ ಪ್ರೀತಿ ವಿಶ್ವಾಸ ಮತ್ತು ಮೈತ್ರಿಯಿಂದ ಕಂಡು ಗೆಳೆತನ ಮಾಡಿದ್ದರ ಫಲವೇ ನಿನ್ನ ದುಖಃದ ಅಂತ್ಯಕ್ಕೆ ಕಾರಣ!" ಎನ್ನಲು ಆ ವೃಕ್ಷವು ಮತ್ತೊಮ್ಮೆ ಎಲ್ಲರಿಗೂ ತಲೆಬಾಗಿ;

"ಹೌದು, ಸಮಾನತೆಯೇ ಸಹಕಾರ. ಅಸಮಾನತೆಯೇ ಅಸಹಕಾರ!" ಎಂದಿತು. □

(ಹಿಂದಿನ ಪುಟದಿಂದ)

ಸಲು ಮಾತ್ರ, ಶುಭ-ಅಶುಭ ಕರ್ಮಫಲಗಳು ಲಭಿಸುವುದು ನಮ್ಮ ಕರ್ಮಸಿದ್ಧಿಯಿಂದ ಮಾತ್ರ. ವಾಸ್ತವ ಸತ್ಯವು ಹೀಗಿರು ವಾಗ ನನಗೇಕೆ ಬೇಕು ಹೊಸ ಹೆಸರಿನ ಹುಚ್ಚು? ಎಂಬ ತೀರ್ಮಾನಕ್ಕೆ ಬಂದ ಅವನು ಮರಳಿ ತಕ್ಷಶಿಲೆಗೆ ಬಂದು ತನ್ನ ಗುರುವನ್ನು ಕಂಡು: "ಗುರುದೇವಾ, ನನಗೆ ಬೇರೆ ಹೆಸರಿನ ಗೊಡವೆ ಬೇಡ. ನನ್ನಹೆಸರೆ ನನಗೆಸಾಕು. ಇನ್ನೂ ಮುಂದೆ ನನ್ನ ಕುಶಲ ಕರ್ಮಫಲದಿಂದಲೇ ಮಂಗಳವನ್ನು ಕಂಡು ಕೊಳ್ಳುತ್ತೇನೆ. ಹೌದು, ಬರೀ ಹೆಸರಿನಲ್ಲಿ ಏನಿದೆ? ನಮ್ಮಸಿದ್ಧಿ ಸಾಧನೆಯಲ್ಲಿ ಮಾತ್ರ ಎಲ್ಲವೂ ಇದೆ!" ಎಂದು ವಂದಿಸಿದ. □

Office of Posting: Mail Business Center, Bangalore GPO, Date of Posting: 1st & 7th of Every Month

ಕೈಗಾರಿಕಾ ರಂಗದಲ್ಲಿ ಸಾಧನೆಗಳ ಸರಮಾಲೆ



ಸಮೃದ್ಧ ಕರ್ನಾಟಕದ ಸೌಹಾರ್ದಯುತ ಕೈಗಾರಿಕಾ ಬೆಳವಣಿಗೆ

ರಾಜ್ಯದ ಒಟ್ಟಾರೆ ಪ್ರಗತಿಗೆ ಕೈಗಾರಿಕಾ ರಂಗದ ಕೊಡುಗೆ ಅತ್ಯಂತ ಮಹತ್ವದ್ದು. ಉತ್ಪಾದನೆ, ಉದ್ಯೋಗಾವಕಾಶ ಸೃಷ್ಟಿ, ಜೀವನ ಮಟ್ಟ ಸುಧಾರಣೆಯಿಂದ ಒಟ್ಟಾರೆ ಆರ್ಥಿಕತೆಗೆ ಚೈತನ್ಯ ನೀಡುವ ಕೈಗಾರಿಕಾ ರಂಗಕ್ಕೆ ಸರ್ಕಾರವು ಹಲವು ಉತ್ತೇಜನಗಳನ್ನು ನೀಡಿ ಪ್ರೋತ್ಸಾಹಿಸಿದೆ. ರಾಜ್ಯಕ್ಕೆ ಹರಿದು ಬರುತ್ತಿರುವ ಬಂಡವಾಳ, ಸ್ಥಾಪನೆಯಾಗುತ್ತಿರುವ ಹೊಸ ಉದ್ಯಮಗಳು ಹಾಗೂ ರಫ್ತಿನ ಹೆಚ್ಚಳ ಈ ಸಾಧನೆಗೆ ಕನ್ನಡಿ ಹಿಡಿಯುತ್ತವೆ.

ಸಾಧನೆಯ ಪಕ್ಷಿನೋಟ

ಕ್ರಮ ಸಂಖ್ಯೆ	ಯೋಜನೆಗಳ ವಿವರ	ಆರ್ಥಿಕ ಸಾಧನೆ (ರೂ. ಲಕ್ಷಗಳಲ್ಲಿ)
1	ಏಕಗವಾಕ್ಷಿ ಹಾಗೂ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮಂಜೂರಾದ - 354 ಯೋಜನೆಗಳು	11044782
2	ಹೊಸ ಕೈಗಾರಿಕಾ ಸಮೂಹಗಳ ಸ್ಥಾಪನೆ (ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ) 3669 ಫಲಾನುಭವಿಗಳು	1135.93
3	ಕೈಗಾರಿಕಾ ವಿಕಾಸ ಯೋಜನೆ - 385 ಫಲಾನುಭವಿಗಳು	370.00
4	ಖಾದಿ ಗ್ರಾಮೋದ್ಯೋಗ ಸಂಘಗಳ ಉತ್ಪಾದನೆಯ ಮೇಲಿನ ರಿಯಾಯಿತಿ - 107 ಸಂಘಗಳು	300.00
5	ಎಸ್. ಎಸ್. ಐ. ಕೈಗಾರಿಕೆಗಳ ನೋಂದಣಿ - 15705 ಘಟಕಗಳು	101617
6	ಬಂಡವಾಳ ಸಹಾಯಧನ ಬಿಡುಗಡೆ - 5203 ಘಟಕಗಳು	9999.07
7	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂ ಹಂಚಿಕೆ - 693 ಘಟಕಗಳು	1713 (ಎಕರೆಗಳು)
8	ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ - 940 ಫಲಾನುಭವಿಗಳು	864.00

ಕ್ಷಿಪ್ರ ಪ್ರಗತಿಯ ಹಾದಿಯಲ್ಲಿ

- ವಿಶೇಷ ಆರ್ಥಿಕ ವಲಯ - ರಾಜ್ಯ ನೀತಿಯನ್ನು ಜಾರಿಗೊಳಿಸಿದೆ
- ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿ - 2009 ಅನ್ನು ಜಾರಿಗೊಳಿಸಿರುತ್ತದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕೈಗಾರಿಕಾ ಭೂಮಿಯ ಬ್ಯಾಂಕ್ ಸ್ಥಾಪನೆಗೆ ಅನುದಾನವನ್ನು ಒದಗಿಸಲಾಗಿದೆ
- ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ವೈಜ್ಞಾನಿಕವಾಗಿ ಮತ್ತು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಪಡಿಸುವ ಮೂಲಕ ಭವ್ಯ ಕರ್ನಾಟಕವನ್ನು ನಿರ್ಮಿಸುವುದು.
- 2014 ಒಳಗಾಗಿ ರೂ. 300000 ಕೋಟಿ ಬಂಡವಾಳ ಹೂಡಿಕೆಯ ಹೊಸ ಉದ್ಯಮಗಳ ಸ್ಥಾಪನೆಯ ಮುಖೇನ 10 ಲಕ್ಷ ಮಂದಿಗೆ ಹೆಚ್ಚುವರಿ ಉದ್ಯೋಗಸೃಜನೆ
- ಕೈಗಾರಿಕೆಗಳ ಬಿರುಸಿನ ಬೆಳವಣಿಗೆಗೆ ಬೇಕಾದ ಅನುಕೂಲಕರ ಸನ್ನಿವೇಶ ಕಲ್ಪಿಸುವುದು.
- ರಾಜ್ಯದ ಒಟ್ಟು ಜಿ.ಡಿ.ಪಿ.ಯಲ್ಲಿ ಉತ್ಪಾದನಾ ಕ್ಷೇತ್ರದ ಪಾಲನ್ನು ಶೇಕಡ 20ಕ್ಕೆ ಹೆಚ್ಚಿಸುವುದು.
- ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಲಹೆಗಳನ್ನು ನೀಡಲು "ವಿಷನ್ ಗ್ರೂಪ್" ಅನ್ನು ರಚಿಸಲಾಗಿದ್ದು, ವಿಷನ್ ಗ್ರೂಪ್ ಕಾರ್ಯ ಪ್ರವೃತ್ತವಾಗಿದೆ.
- ರಾಜ್ಯದಲ್ಲಿನ ನೈಸರ್ಗಿಕ ಸಂಪನ್ಮೂಲ ಆಧಾರದ ಮೇಲೆ ಉಕ್ಕು, ಸಿಮೆಂಟು, ಜವಳಿ, ಆಹಾರ, ಆಟೋಮೊಬೈಲ್, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ವಲಯಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮಗಳ ಅನುಷ್ಠಾನ - ಪ್ರತಿ ವಲಯಕ್ಕೆ ವಿಶೇಷ ಕಾರ್ಯಪಡೆ ಕಾರ್ಯಪ್ರವೃತ್ತವಾಗಿದೆ.
- ರಾಜ್ಯದ ವಿವಿಧ ಭಾಗಗಳ ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ಅಲ್ಲಿಯೇ ಬಗೆ ಹರಿಸಲು ಬೃಹತ್ ಕೈಗಾರಿಕಾ ಅದಾಲತ್ ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತದೆ
- ರಫ್ತು - ವ್ಯಾಪಾರ ಉತ್ತೇಜನ ಚಟುವಟಿಕೆಗೆ ವಿಭಾಗೀಯ ಅಧೀನ ಕಚೇರಿಯನ್ನು ಧಾರವಾಡದಲ್ಲಿ ಸ್ಥಾಪಿಸಿದೆ.
- 4 ಹೊರ ರಾಜ್ಯಗಳಲ್ಲಿ ಇಲಾಖೆಯ 4 ಹಿರಿಯ ಅಧಿಕಾರಿಗಳ ಪ್ರತ್ಯೇಕ ತಂಡಗಳು ಪ್ರವಾಸ ಕೈಗೊಂಡು ಅಲ್ಲಿನ ಅಭಿವೃದ್ಧಿ ಕುರಿತು ಅಧ್ಯಯನ ನಡೆಸಿದ್ದಾರೆ.



ಶ್ರೀ ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಮುರುಗೇಶ್ ರು. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ವೆಂಕಟರಮಣಪ್ಪ
ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು

ಕೈಗಾರಿಕಾ ಅದಾಲತ್

ಮೈಸೂರು ಮತ್ತು ಗುಲ್ಬರ್ಗ ವಿಭಾಗಗಳ ಕೈಗಾರಿಕಾ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ

ಈಗಾಗಲೆ ಬೆಳಗಾಂ ವಿಭಾಗದಲ್ಲಿ ಕೈಗಾರಿಕಾ ಅದಾಲತ್‌ನ್ನು 10ನೇ ಫೆಬ್ರವರಿ 2009 ರಂದು ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ನಡೆಸಿದ್ದು, 207 ಅಹವಾಲುಗಳನ್ನು ಸ್ವೀಕರಿಸಿದ್ದು 90 ಅಹವಾಲುಗಳನ್ನು ವಿಲೇವಾರಿ ಮಾಡಲಾಗಿದೆ.

ಕರ್ನಾಟಕದಲ್ಲಿ ಬೃಹತ್ ಕೈಗಾರಿಕಾ ಅದಾಲತ್‌ನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾದ ಶ್ರೀ ಮುರುಗೇಶ್ ರು. ನಿರಾಣಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಮೈಸೂರು ವಿಭಾಗದ 8 ಜಿಲ್ಲೆಗಳಾದ ಮಂಗಳೂರು, ಮಡಿಕೇರಿ, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಮಂಡ್ಯ ಮತ್ತು ಉಡುಪಿ ಹಾಗೂ ಗುಲ್ಬರ್ಗ ವಿಭಾಗದ 5 ಜಿಲ್ಲೆಗಳಾದ ಬೀದರ್, ರಾಯಚೂರು, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ ಉದ್ಯಮಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ನಡುವಿನ ಈ ಮುಖಾಮುಖಿಯು ಉದ್ಯಮಶೀಲರ ಹಾದಿಯನ್ನು ಸುಗಮಗೊಳಿಸಲು ನೆರವಾಗುವುದು.

ಮೈಸೂರು ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ತ್ವರಿತಗೊಳಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಕೈಗಾರಿಕೋದ್ಯಮಿಗಳು ತಮ್ಮ ಸಮಸ್ಯೆ / ಅಹವಾಲನ್ನು ಸಂಬಂಧಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಲಿಖಿತ ರೂಪದಲ್ಲಿ ನೀಡಲು ವಿನಂತಿಸಲಾಗಿದೆ.

ಪ್ರಮುಖಾಂಶಗಳು

- ಉದ್ಯಮಿಗಳು ಹಾಗೂ ಅಧಿಕಾರಿಗಳ ನೇರ ಮುಖಾಮುಖಿ
- ಕಾಲಮಿತಿ ಚೌಕಟ್ಟಿನಲ್ಲಿ ಪರಿಹಾರ
- ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಒತ್ತು
- ಏಕಗವಾಕ್ಷಿ ಪದ್ಧತಿ ಪರಿಣಾಮಕಾರಿ ಜಾರಿಗೆ ಚಿಂತನ
- ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಎಫ್.ಕೆ.ಸಿ.ಸಿ.ಐ., ಕಾಸಿಯಾ, ಚೇಂಬರ್ ಆಫ್ ಕಾಮರ್ಸ್, ಸಿ.ಐ.ಐ. ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಕೈಗಾರಿಕಾ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ

ಅದಾಲತ್‌ನ ಕಾರ್ಯಸೂಚಿ

- ಭೂಮಿ, ವಿದ್ಯುತ್, ಹಣಕಾಸು, ನೀರು, ಕಾರ್ಮಿಕ ಸಮಸ್ಯೆಗಳು ಇತ್ಯಾದಿ
- ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ವಾಣಿಜ್ಯ ತೆರಿಗೆ ಮತ್ತು ಇತರೆ ಸಹಾಯ ಸವಲತ್ತುಗಳ ಬಗ್ಗೆ ಪರಿಹಾರ

ಮೈಸೂರು ವಿಭಾಗ

ದಿನಾಂಕ : 10.06.2009
ಸಮಯ : ಬೆಳಿಗ್ಗೆ 10.30 ಗಂಟೆಗೆ
ಸ್ಥಳ : ಡಾ|| ಟಿ. ಎಂ. ಎ. ಪೈ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್, ಎಂ. ಜಿ. ರಸ್ತೆ, ಮಂಗಳೂರು
ಅಹವಾಲುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 03.06.2009

ಗುಲ್ಬರ್ಗ ವಿಭಾಗ

ದಿನಾಂಕ : 17.06.2009
ಸಮಯ : ಬೆಳಿಗ್ಗೆ 10.30 ಗಂಟೆಗೆ
ಸ್ಥಳ : ವಿನಾಯಕ್ತಿ ಹೆರಿಟೇಜ್ ವಿಲೇಜ್ ಪ್ರೈವೇಟ್ ಲಿಮಿಟೆಡ್, ವಿ. ಆರ್. ಭಂಡಾರ್ ನಗರ, ಹಂಪಿ ರಸ್ತೆ ಹೊಸಪೇಟೆ
ಅಹವಾಲುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 10.06.2009

ಕರ್ನಾಟಕ ವಾರ್ತೆ